# ನೇಮಿಕಥೆ – ಹರಿವಂಶದ ಕಥೆ– ಕುರುವಂಶದ ಕಥೆ

## ಅನ್ಯೋನ್ಯ ಸಂಬಂಧ

ನೇಮಿಚಂದ್ರನ ನೇಮಿನಾಥ ಪುರಾಣದ ವಸ್ತು ಬಹುಮಟ್ಟಿಗೆ ಗುಣಭದ್ರಾಚಾರ್ಯರ 'ಉತ್ತರಪುರಾಣದ ಕಥಾವಸ್ತುವಿನ ಮೇಲೆ ಆಧಾರಪಟ್ಟಿರುವಂತೆ ತೋರುತ್ತದೆ. ಇಲ್ಲಿ ನೇಮಿನಾಥನು ಹುಟ್ಟಿದ ಹರಿವಂಶದ ಮೂಲವನ್ನು ಹ್ರಸ್ವವಾದ ಹಿನ್ನೆಲೆಯೊಂದಿಗೆ ಈ ರೀತಿ ಹೇಳಿದೆ :

ಕಶಾರ್ಥ ವಿಷಯದ ಶೌರ್ಯಪುರದ ಅರಸು ಶೂರಸೇನ ಮಹಾರಾಜ ಆತನ ಪುತ್ರ ಶೂರವೀರ. ಇವನ ಹೆಂಡತಿ ಧಾರಣಿ . ಈ ದಂಪತಿಗಳಿಗೆ ಅಂಧಕವೃಷ್ಣಿ ಮತ್ತು ನರಪತಿವೃಷ್ಣಿ ಎಂಬವರು ಮಕ್ಕಳು.

ಈ ವೃಷ್ಣಿಸೋದರರಲ್ಲಿ ಹಿರಿಯವನಾದ ಅಂಧಕವೃಷ್ಣಿಗೆ ಪತ್ನಿ ಸುಭದ್ರೆಯಲ್ಲಿ ಸಮುದ್ರವಿಜಯ ಅಕ್ಷೋಭ್ಯ, ಸ್ತಿಮಿತಸಾಗರ, ಹಿಮವಾನ್, ವಿಜಯ, ಅಚಲ , ಧರಣ, ಪೂರಣ, ಅಭಿನಂದನ, ವಸುದೇವ ಎಂಬ ಹತ್ತು ಜನ ಗಂಡುಮಕ್ಕಳೂ ಕುಂತಿ ಮದ್ರಿಯರೆಂಬ ಇಬ್ಬರು ಹೆಣ್ಣುಮಕ್ಕಳೂ ಜನಿಸಿದರು. ಸಮುದವಿಜಯಾದಿಗಳಿಗೆ ಕ್ರಮವಾಗಿ ಶಿವದೇವಿ, ಧೃತೀಶ್ವರಾ, ಸ್ವಯಂಪ್ರಭಾ, ಸುನೀತಾ ಸೀತಾ ಪ್ರಿಯವಾಕ್, ಪ್ರಭಾವತೀ, ಕಾಲೀಂಗೀ, ಸುಪ್ರಭಾ ಎಂಬ ಹೆಸರಿನ ಪತ್ನಿಯರಾದರು. ಹಿರಿಯವನಾದ ಸಮುದ್ರವಿಜಯನಿಗೆ ಅವನ ಪತ್ನಿ ಶಿವದೇವಿಯಲ್ಲಿ ನೇಮಿನಾಥನು ಪುತ್ರನಾಗಿ ಜನಿಸಿದನು. ವಸುದೇವನಿಗೆ ಮುಖ್ಯವಾಗಿ ಇಬ್ಬರು. ಪತ್ನಿಯರು. ಅರಿಷ್ಟನಗರಧಿಪತಿ ಹಿರಣ್ಯವರ್ಮ ರಾಜನಿಗೆ ಆತನ ಪತ್ನಿ ಪದ್ಮಾವತಿಯಲ್ಲಿ ಜನಿಸಿದ ರೋಹಿಣಿ ಎಂಬುವಳು ಅವರಲ್ಲಿ ಹಿರಿಯಳು, ಕಂಸನ ಚಿಕ್ಕಪ್ಪನಾದ ದೇವಸೇನನ ಮಗಳು ದೇವಕಿ ಕಿರಿಯುಳು. ವಸುದೇವನಿಗೆ ರೋಹಿಣಿಯಿಂದ ಪದ್ಮನೆಂಬ ೯ ನೆಯ ಬಲದೇವನೂ ದೇವಕಿಯಿಂದ ೬ ಜನ ಅವಳಿಮಕ್ಕಳೂ ಕೃಷ್ಣನೆಂಬ ೯ ನೆಯ ವಾಸುದೇವನೂ ಮಕ್ಕಳಾಗಿ ಜನಿಸಿದರು.

ವೃಷ್ಣಿಸೋದರರಲ್ಲಿ , ಕಿರಿಯವನಾದ ನರಪತಿವೃಷ್ಣಿಗೆ ಪತ್ನಿ ಪದ್ಮಾರತಿಯಲ್ಲಿ ಉಗ್ರಸೇನ, ದೇವಸೇನ, ಮಹಾಸೇನ ಎಂಬ ಮೂರು ಮಂದಿ ಗಂಡುಮಕ್ಕಳೂ ಗಾಂಧಾರಿಯೆಂಬ ಒಬ್ಬ ಹೆಣ್ಣುಮಕ್ಕಳೂ ಮಕ್ಕಳಾಗಿ ಜನಿಸಿದರು.

ಇವೆರಲ್ಲ ಹರಿವಂಶಸಂಭವರು. ಇವರಂತೆಯೇ ಕುರುವಂಶಜರ ಮೂಲವನ್ನೂ 'ಉತ್ತರಪುರಾಣದಲ್ಲಿ ಹೇಳಿದ್ದು ಅದು ಸಹ ಹ್ರಸ್ವವಿವರದಲ್ಲಿ ಹೀಗಿದೆ :

ಹಸ್ತಿನಪುರದ ಅರಸು ಶಕ್ತಿಯೆಂಬವನು. ಇವನ ಪತ್ನಿ ಶತಕಿಯೆಂಬವಳು. ಈ ದಂಪತಿಗಳ ಮಗನೇ ಪರಾಶರ. ಇವನಿಗೆ ಮತ್ಸ್ಯಕುಲೋತ್ಪನ್ನ ರಾಜಪುತ್ರಿಯಾದ ಸತ್ಯವತಿಯೆಂಬ ಪತ್ನಿಯಿಂದ ಪಾಜ್ಞನಾದ ವಾಸನೆಂಬವನು ಮಗನದನು. ಈ ವ್ಯಾಸನ ಪತ್ನಿ ಸುಭದ್ರೆ . ಈ ವ್ಯಾಸ ಸುಭದ್ರೆಯರಿಗೆ ಧೃತರಾಷ್ಟ್ರ, ಪಾಂಡು ಮತ್ತು ವಿದುರರೆಂಬವರು ಮಕ್ಕಳು.

ಮುಂದಿನ ಘಟ್ಟದಲ್ಲಿ ಈ ಹರಿವಂಶ- ಕುರುವಂಶಗಳ ನಡುವೆ ಏರ್ಪಟ್ಟ ವೈವಾಹಿಕ ಸಂಬಂಧವನ್ನು ನಾವು ಗಮನಿಸಬಹುದು. ಹರಿವಂಶದ ನರಪತಿವೃಷ್ಣಿಯ ಪುತ್ರಿ ಗಾಂಧಾರಿಯನ್ನು ಕುರುವಂಶದ ವ್ಯಾಸ-ಸುಭದ್ರೆಯರ ಜ್ಯೇಷ್ಠಪುತ್ರ ಧೃತರಾಷ್ಟ್ರನಿಗೆ ಕೊಟ್ಟು ಮದುವೆಯಾಯಿತು. ಹರಿವಂಶದ ಅಂಧಕವೃಷ್ಣಿಯ ಪುತ್ರಿಯರು ಕುಂತಿ ಮಾದ್ರಿಯರನ್ನು ಕುರುವಂಶದ ವ್ಯಾಸ-ಸುಭದ್ರೆಯರ ಎರಡನೆಯ ಮಗನಾದ ಪಾಂಡುವಿಗೆ ಕೊಟ್ಟು ಮದುವೆಯಾಯಿತು. ಹೀಗೆ ಈ ಎರಡೂ ವಂಶಗಳ ನಡುವೆ ವೈವಹಿಕಸಂಬಂಧವೇರ್ಪಟ್ಟು, ಈ ಸಂಬಂಧ ಮುಂದಿನ ಸಂತತಿಯಲ್ಲೂ ಮುಂದುವರಿದಂತೆ ಕಥಾಗತಿಯಿಂದ ತಿಳಿದುಬರುತ್ತದೆ.

ನೇಮಿಚಂದ್ರನು ಈ ಸಂಬಂಧವನ್ನು ಕುರಿತಾಗ, " ಅಂತು ಹರಿವಂಶಮುಂ ಕುರುವಂಶಮುಂ ಸಿಂಧುಯುಗಳಸಂಭೇದದಂತೆ ಭೇದಿಸಲ್ಬಾರದಂತು ಕೂಡಿ ಕೊರ್ವುವಡೆದು..... ( ೪-೧೧೭ ವ) ಎಂಬುದಾಗಿ ಹೇಳಿರುವುದನ್ನಿಲ್ಲಿ ನೆನೆಯಬಹುದು.

ಈಗ ಈ ವಿವರಣೆಯ ಬೆಳಕಿನಲ್ಲಿ ನೇಮಿಕೃಷ್ಣರ ಹಾಗೂ ಕೌರವಪಾಂಡವರ ಸ್ಥಾನಗಳನ್ನೂ ಗುರುತಿಸಬಹುದು ! ನೇಮಿಕೃಷ್ಣರು ಒಂದೇ ಕುಟುಂಬದಲ್ಲಿ ದೊಡ್ಡಪ್ಪ (= ಸಮುದ್ರವಿಜಯ) ಚಿಕ್ಕಪ್ಪನ (= ವಸುದೇವ) ಮಕ್ಕಳು. ನೇಮಿನಾಥನೌ ಕೃಷ್ಣನಿಗೆ ಹಿರಿಯ ದೊಡ್ಡಪ್ಪನ ಮಗನಾದರೂ

ವಯಸ್ಸಿನಲ್ಲಿ ಆತನಿಗಿಂತ ಕಿರಿಯ (ಜಿನಸೇನಾಚಾರ್ಯರು ಬಲದೇವನ ರೇವತಿಯೆಂಬ ಕನ್ಯೆಯನ್ನೂ ಕೃಷ್ಣನು ಸತ್ಯಭಾಮೆಯನ್ನೂ ವರಿಸಿದ ಕಥಾಸಂದರ್ಭಗಳನ್ನು ನಿರೂಪಿಸಿದ ಬಳಿಕ ನೇಮಿನಾಥ್ಯನ ಜನನವನ್ನು ಕುರಿತಿರುತ್ತಾರೆ.) ಧೃರ್ತರಾಷ್ಟ್ರರೂ ಪಾಂಡವರೂ ನೇಮಿಗೆ ಎಷ್ಟರ ಮಟಿಗೆ ಹಿರಿಕಿರಿಯರೆಂಬದನ್ನು ನಿರ್ಣಯಿಸುವುದು ಕಷ್ಟ. ಅವರು ವಯಸ್ಸಿನಲ್ಲಿ ನೇಮಿಗೆ ಹಿರಿಯರಾಗಿದ್ದು, ಕೃಷ್ಣನ ಜತೆಯವರೋ ಆತನಿಗೆ ಸ್ವಲ್ಪ ಕಿರಿಯರೋ ಆಗಿದ್ದಿರಬಹುದು. ಇಲ್ಲಿಯೇ ಜರಾಸಂಧ– ಕಂಸರು ಹರಿವಂಶ–ಕುರುವಂಶಗಳೊಡನೆ ಎಷ್ಟರಮಟ್ಟಿಗೆ ಸಂಬಂಧವುಳ್ಳವರೆಂಬುದನ್ನು ಕೂಡ ನೋಡಬಹುದು ಇದು ಗುಣಭದ್ರಾಚಾರ್ಯರ 'ಉತ್ತರ ಪುರಾಣದ ನಿರೂಪಣೆಯಿಂದಲೇ ನಮಗೆ ಸ್ಪಷ್ಟವಾಗುವಂತೆ ತೋರುವುದಿಲ್ಲ . 'ಹರಿವಂಶ ಪುರಾಣ ಮತ್ತು ಆ ಕಥಾಮಾರ್ಗದ ಕರ್ಣಪಾರ್ಯ್ಯನ 'ನೇಮಿನಾಥ ಪುರಾಣ ಸ್ವಲ್ಪ ಭಿನ್ನವಾದ ನಿರೂಪಣೆಗಳಿಂದ ಅದನ್ನು ವಿಶದಪಡಿಸಿಕೊಳ್ಳಬೇಕಾಗುತ್ತದೆ.

ಕರ್ಣಪಾರ್ಯಾನ ಕೃತಿಯ ಪ್ರಕಾರ ಹರಿವಂಶದ ಸಂತತಿಯಲ್ಲಿ ಹಲವರು ಸಂದ ಮೇಲೆ ವಸುವೆಂಬವನ ಮಗ ಸುವಸುವಿನ ಸಂತತಿಯಲ್ಲಿ ಬೃಹದ್ರಥನಿಗೆ ಜರಾಸಂಧ ಮೊದಲ ಮಗನಾಗಿ ಹುಟ್ಟಿದನು; ವಸುವಿನ ಇನ್ನೊಬ್ಬ ಮಗ ಬೃಹದಸುವಿನ ಸಂತತಿಯಲ್ಲಿ ನರಪತಿಯ ಜ್ಯೇಷ್ಠಪುತ್ರ ಸೂರನ ಮಗ ಅಂಧಕವೃಷ್ಣಿಯ ಮಕ್ಕಳಾಗಿ ಸಮುದ್ರವಿಜಯಾದಿಗಳು ಹುಟ್ಟಿದರು. ಹೀಗೆ ಜರಾಸಂಧನೂ ಹರಿವಂಶಸಂಭವನೇ ಆದನು ; ಸಮುದ್ರವಿಜಯಾದಿಗಳಿಗೆ ದಾಯದ್ಯ ಸಂತತಿಯವನೇ ಆದನು ಈ ಜರಾಸಂಧನ ಸೋದರಿ ಪದ್ಮಾವತಿಯಲ್ಲಿ ಉಗ್ರಸೇನನಿಗೆ ಕಂಸನು ಮಗನಾಗಿ ಜನಿಸಿದನೇಂದೂ ಜರಾಸಂಧನು ತನ್ನ ಸೋದರಳಿಯನಾದ ಈ ಕಂಸನಿಗೆ ತನ್ನ ಮಗಳು ಜೀವದ್ಯಶೆ (ಜೀವಂಜಸೆ)ಯನ್ನು ಮದುವೆಮಾಡಿ ಕೊಟ್ಟಿದ್ದನೆಂದೂ ತಿಳಿಯುವುದು ಉಗ್ರಸೇನಾನ ಕಿರಿಯ ಸೋದರ ದೇವಸೇನನ ಪುತ್ರಿ ದೇವಕೀಯ ಕೃಷ್ಣನ ತಾಯಿ ; ಕಂಸನಿಗೆ ಚಿಕ್ಕಪ್ಪನ ಮಗಳು , ಸೋದರಿಯ ಲೆಕ್ಕ.

ಇದನ್ನು ಗಮನಿಸಿದಾಗ, ಬಲದೇವ ಕೃಷ್ಣರೂ ನೇಮಿನಾಥನೂ ಜರಾಸಂಧ ಕಂಸರೂ ಒಂದೇ ಹರಿವಂಶಮಹಾವೃಕ್ಷದ ಕುಡಿಗಳು, ರಕ್ತಸಂಬಂಧಿಗಳು ಅಂಧಕವೃಷ್ಣಿಯ ಪೌತ್ರರಾದ ಬಲದೇವ ಕೃಷ್ಣರೂ ನೇಮಿನಾಥನೂ ಒಂದು ಪಕ್ಷವಾಗಿ, ನರಪತಿವೃಷ್ಣಿಯ ಪೌತ್ರನಾದ ಕಂಸನೂ ( ಉಗ್ರಸೇನ– ಪದ್ಮಾವತಿಯರ ಮಗ ) ಆತನ ಮಾವನಾದ ಜರಾಸಾಂಧನೂ ಒಂದು ಪಕ್ಷವಾಗಿ ಅಂಧಕ ವೃಷ್ಣಿಯ

ದೌಹಿತ್ರರಾದ ಪಾಂಡವರು ಮೊದಲನೆಯ ಪಕ್ಷವನ್ನೂ ನರಪತಿವೃಷ್ಣಿಯ ದೌಹಿತರಾದ ಕೌರವರು ಎರಡನೆಯ ಪಕ್ಷವನ್ನೂ ಕೂಡಿಕೊಂಡು ನಡಸಿದ ಸಂಘರ್ಷವೇ ಹರಿವಂಶ ಕಥೆಯನ್ನಬಹುದು. ಹರಿವಂಶದ ಕಥೆಯ ಮಹೋದರದಲ್ಲಿ ಕುರುವಂಶದ ಕಥೆ ಲೀನವಾಗಿ ಹೋಗಿದೆ.

ಹರಿವಂಶ ಕುರುವಂಶದರಸರ ಪ್ರಮುಖಘಟನೆಗಳಲ್ಲಿ ನೇಮಿನಾಥ ಒಂದು ಪ್ರಚೋದನಶಕ್ತಿ. ದ್ವಾರಾವತೀನಿರ್ಮಾಣ, ಯಾದವ ಮಾಗಧ ಪಕ್ಷಗಳ ಮಹಾಸಂಗ್ರಾಮ, ಸಂಗ್ರಾಮವೀರರ ಶಕ್ತಿ ಪರೀಕ್ಷೆ, ನೇಮಿಯ ನಾಗಶಯ್ಯಾರೋಹ ಮೊದಲದ ಅಲೌಕಿಕ ಕರ್ಯಗಳ ಸಾಧನೆ ಆತನ ವೈರಾಗ್ಯೋದಯ , ಹರಿವಂಶ ಕುರುವಂಶದವರಸರಿಗೆ ಅವರ ಭವಾಂತರಗಳನ್ನೂ ಭವಿಷ್ಯಸಂಘಟನೆಯನ್ನೂ ನಿರೂಪಿಸಿ ಅವರಿಗೆ ಆತನು ದೀಕ್ಷಗುರುವಾದುದು ಈ ಪ್ರಕರಣಾಗಳಾನ್ನು ಪರಿಶೀಲಸಿದರೆ ಇದು ತಿಳಿಯುತ್ತದೆ. ಹರಿವಂಶ ಪುರಾಣಗಳು ಕೂಡ ವಸ್ತುತ ನೇಮಿಚರಿತ್ರೆಗಳೆಂಬುದನ್ನು ಇಂತಹ ಪ್ರಕರಣಗಳು ನಿದರ್ಶಿಸುತ್ತವೆ.

ಈ ಮುಂದೆ ನೇಮಿಚಂದ್ರನ ನೇಮಿನಾಥ ಪುರಾಣದಲ್ಲಿ ಕಂಡುಬರುವಂತೆ ಹರಿವಂಶ ಕುರುವಂಶಗಳ ವಂಶವೃಕ್ಷಗಳನ್ನೂ ನೇಮಿನಾಥನ ಭವಾವಳಿಪಟ್ಟಿಕೆಯನ್ನೂ ಸೌಲಭ್ಯಕ್ಕಾಗಿ ತೋರಿಸಿದೆ.

ಹರಿವಂಶದ ವಂಶವೃಕ್ಷ

ಶೂರಸೇನ

ಶೂರವೀರ

+ಧಾರಿಣಿ

ಅಂಧಕವೃಷ್ಣಿ    ನರಪತಿವೃಷ್ಣಿ

+ಸುಭದ್ರೆ    +ಪದ್ಮಾವತಿ

ಸಮುದ್ರವಿಜಯ    ಅಕ್ಷೋಭ    ಸ್ತಿಮಿತಸಾಗರ    ಹಿಮವಂತ    ವಿಜಯ ಅಚಳ

ಧಾರಣ

+ಶಿವದೇವಿ    +ದೃತೀಶ್ವರಾದೇವಿ    +ಸ್ವಯಂಪ್ರಭೆ    +ಸುನೀತೆ    +ಸೀತೆ    ಪ್ರಿಯಂವದೆ

+ಪ್ರಭಾವತಿ

ನೇಮಿನಾಥ ಮಾದ್ರಿ ಕುಂತಿ ವಸುದೇವ ಅಭಿನಂದನ ಪೂರಣ

+ಸುಪ್ರಭೆ + ಕಾಳಿಂದಿ

+ಪತ್ನಿ ರೋಹಿಣಿಯಿಂದ +ಪತ್ನಿ ದೇವಕಿಯಿಂದ ಬಲದೇವ

ಅಮಳರು ಅಮಳರು ಅವಾಳರು ಕೃಷ್ಣ

ಉಗ್ರಸೇನ ದೇವಸೇನ ಮಹಾಸೇನ ಗಾಂಧಾರಿ

+ಪದ್ಮಾವತಿ + ವನದೇವಿ

ಕಂಸ

+ಜೀವಜಸೆ (ಜರಾಸಂಧಪುತ್ರಿ) ಅತಿಮುಕ್ತಕ ದೇವಕಿ

ಕುರುವಂಶದ ವಂಶವೃಕ್ಷ

ಶಕ್ತಿ

+ಸವಕೆ

ಪರಾಶರ

+ ಸತ್ಯಪರಾ(ಸತ್ಯವತಿ)

ವ್ಯಾಸ

+ಸುಭದ್ರೆ

ದೃತರಾಷ್ಟ್ರ ಪಾಂಡು ವಿದುರ

ದುರ್ಯೋಧನ ದುಶ್ಯಾಸನ ದುರ್ಧರ್ಷಣ ದುರ್ಮರ್ಷಣ ಇ. + ಪತ್ನಿ

ಕುಂತಿಯಿಂದ +ಪತ್ನಿ ಮಾದ್ರಿಯಿಂದ

ಕರ್ಣ ಧರ್ಮಾತ್ಮಜ ಭೀಮ ಅರ್ಜುನ ನಕುಳ ಸಹದೇವ (ಕುಂತಿಯಕನ್ಯಾವಸ್ಥೇಯಲ್ಲಿ)

೩. ನೇಮಿನಾಥನ ಭವಾವಳಿ

ಭವದ ಜೀವ ಪತ್ನಿ ತಂದೆ ತಾಯಿ ತಂದೆ ತಾಯಿ ತಂದೆ ತಾಯಿ ಸ್ಥಳ ಸ್ಥಳ ಸ್ಥಳ

೧. ವಿಂಧ್ಯಕ ವಾಗುರೆ ಮಗಧಮಂಡಲದ ಮಗಧಮಂಡಲದ

(ಬೇಡ) (ಬೇಡಿತಿ) ಅರಣ್ಯ ಅರಣ್ಯ

೨. ಇಭ್ಯಕೇತು ದೀವರ ನಾಯಕ ಕಮಳ ಪ್ರಭೆ ವೃಷಭದತ್ತ ಎಂಬ ಜಿತಶತ್ರುರಾಜ ರಾಜಗೃಹರಾಜ ನಗರ ರಾಜಗೃಹ ನಗರ ರಾಜಗೃಹ ನಗರ

ವೈಶ್ಯಪುತ್ರ (ಬೆಸ್ತ) (ರಾಜಪುತ್ರಿ) ವೈಶ್ಯೋತ್ತಮ +ಸುಪ್ರಭೇ

+ಪದ್ಮಶ್ರೀ

೩.ಶ್ರೀದೇವ ಶ್ರುತಪ್ರಬಾಂಕ ವಿಮಲಪ್ರಭ (ಸೌಧರ್ಮಕಲ್ಪದ) (ಸೌಧರ್ಮಕಲ್ಪದ) (ಸೌಧರ್ಮಕಲ್ಪದ) (ದೇವ) (ದೇವ) (ದೇವ) ಶ್ರೀನಿಳಯವಿಮಾನ ವಿದ್ಯುತ್ಪ್ರಭವಿಮಾನ ಸುಪ್ರಭವಿಮಾನ

೪.ಚಿಂತಾಗತಿ ಚಪಳಾಗತಿ ಮನೋಗತಿ ಸೂರ್ಯಪ್ರಭ ಸೂರ್ಯಪ್ರಭ ಸೂರ್ಯಪ್ರಭ ಪುಷ್ಕರಾರ್ಧದ ಅಪರವಿದೇಹದ ಗಂಧಿಲವಿಷಯದ ನಟ್ಟನಡುವಿನ

(ಖಚರ) (ಖಚರ) (ಖಚರ) +ಧಾರಿಣಿ +ಧಾರಿಣಿ +ಧಾರಿಣಿ ವಿಜಯರ್ಧಪರ್ವತದ ಉತ್ತರಶ್ರೇಣಿಯ ಸೂರ್ಯಪ್ರಭನಗರ

೫.ಸಾಮಾನಿಕದೇವ ಸಾಮಾನಿಕದೇವ ಸಾಮಾನಿಕದೇವ ಗಗನಚಂದ್ರ ಮಹೇಂದ್ರಕಲ್ಪ ಮಹೇಂದ್ರಕಲ್ಪ ಮಹೇಂದ್ರಕಲ್ಪ

೬. ಅಪರಾಜಿತ ಅಮಿತಗತಿ ಅಮಿತ(ತೇ)ಜ ಅರ್ಹದ್ದಾಸರಾಜ ಗಗನಚಂದ್ರ +ಗಗನಸೌಂದರಿ ಜಂಬೂದ್ವೀಪದ ಅಪರವಿದೇಹದ ಜಂಬೂದ್ವೀಪದ ವಿದೇಹದ (ರಾಜ ಪುತ್ರ) (ಚಾರಣಮುನಿ) (ಚಾರಣಮುನಿ) +ಜಿನದತ್ತೆ +ಗಗನಸೌಂದರಿ (ಖೇಚರರು) ಸೀತೋದಯ ಬಡಗಣತಡಿಯ ಪುಷ್ಕಳಾವತಿ ವಿಷಯದ ವಿಜಯರ್ಧದ

(ಖೇಚರರು) ಗಂಧಿಲವಿಷಯದ ಸಿಂಹಪುರನಗರ ಉತ್ತರ ಶ್ರೇಢಿಯ ಗಗನವಲ್ಲ ಭನಗರ

೭. ಅಚ್ಯುತೇಂದ್ರ ಅಚ್ಯುತಕಲ್ಪದ

(ದೇವ) ಸಾಂತಕರ ವಿಮಾನ

೮.ಸುಪ್ರತಿಷ್ಠ ಶ್ರೀಚಂದ್ರ ಜಂಬೂದ್ವೀಪದ ಭರತಕ್ಷೇತ್ರದ

(ರಾಜಪುತ್ರ) +ಶ್ರೀಮತಿ ಕರುಜಾಂಗಣ ದೇಶದ ಹಸ್ತಿನಾಪುರ

೯. ಅಹಮಿಂದ್ರ  ಉತ್ತರ ವೈಜಯಂತಿ

(ದೇವ) ವಿಮಾನ

೧೦. ನೇಮಿನಾಥ

ಕಥಾಸಾರ

ಪ್ರಥಮಾಶ್ವಾಸ

ಲೋಕತ್ರಯದಲ್ಲಿ ನರಲೋಕದ ಮಧ್ಯಪ್ರದೇಶದಲ್ಲಿ, ಲವಣ ಸಮುದ್ರವು ಸುತ್ತುವರಿದ ಜಂಬೂದ್ವೀಪದ ನಟ್ಟನಡುವೆ ಮಂದರಪರ್ವತವುಂಟು. ಆ ದಿವ್ಯೋನ್ನತಗಿರಿಯ ಪೂರ್ವಾಪರ ದಿಗ್ಭಾಗಗಳಾಲ್ಲಿ ಎರಡು ವಿದೇಹಗಳಿದ್ದು ಅವುಗಳಲ್ಲಿ ಒಂದೊಂದರಲ್ಲಿಯೂ ಚಂದ್ರನ ಹದಿನಾರು ಕಳೆಗಳಂತೆ ಕಂಗೋಳಿಸುವ ಹದಿನಾರು ನಾಡಿಗಳು. ಪುಣ್ಯಭೂಮಿಯೂ ಧರ್ಮಕ್ಷೇತ್ರವೂ ಆಗಿದ್ದ ಇವುಗಳಲ್ಲಿ ಒಂದು ಭಾಗವಾದ ಅಪರವಿದೇಹದ ನೆಲದಲ್ಲಿ ಶೀತೋದಯವೆಂಬ ನದಿ ರಮಣೀಯವಾಗಿ ತುಂಬಿ ಹರಿಯುತ್ತದೆ. ಈ ತೊರೆಯ ಚೆಲುವಾದ ದಕ್ಷಿಣೋತ್ತರ ತಟಪ್ರದೇಶಗಳಲ್ಲಿ ಉತ್ತರದ ದಡದ ಮೇಲಿರುವ ವಪ್ರೆ ಸುವಪ್ರೆ ಮಹಾವಪ್ರೆ ವತ್ಸಕವತಿ ಗಂಧೆ ಸುಗಂಧೆ ಗಂಧಿಳೆ ಗಂಧಮಳಿನಿ ಎಂಬ ಹೆಸರಿನ ನಾಡ ಗುಂಪಿನಲ್ಲಿ ಗಂಧಿಳವಿಷಯವೇ ಸುಪ್ರಸಿದ್ಧವಾದುದು. ಈ ಗಂಧಿಳ ವಿಷಯವನ್ನು  ಸಾರವಸ್ತುಸಮೃದ್ಧವೂ ಅತ್ಯಂತ ಮೋಹನಾಸ್ಪದವೂ ವಿವಿಧ ಮೃಗಪಕ್ಷಿ ವಿಹಾರಿಯೂ ಸ್ವರ್ಗದ ನಂದನವನಕ್ಕೆ ಸರಿಸಾಟಿಯೂ ಆದ ಬಗೆಬಗೆಯ ಉದ್ಯಾನವನಗಳು ವ್ಯಾಪಿಸಿವೆ. ಇಂತಹ ಗಂಧಿಳ ವಿಷಯಕ್ಕೆ ಭೂಷಣಪ್ರಾಯವಾಗಿ ಭವ್ಯ ಸುಂದರವಾದ ಸಿಂಹಪುರವೆಂಬ ರಾಜಧಾನಿ. ಅಲ್ಲಿ ಪರಮಪುರುಷೋತ್ತಮವತಾರನೂ ಅತಿಶಯ ಕೀರ್ತಿಶಾಲಿಯೂ ಆದ ಅರ್ಹದ್ದಾಸನೆಂಬ ಅರಸು ರಾಜ್ಯವಾಳುತ್ತಿದ್ದನು.

ಅರ್ಹದ್ದಾಸನುರೂಪಬಂತನೆಂತೂ ಅಂತು ಪುಣ್ಯಭಾಗಿ ; ತೇಜಶ್ಯಾಲಿಯೆಂತೂ ಅಂತು ಯಶೋಭಾಗಿ ; ವೀರ್ಯವಂತನೆಂತೋ ಅಂತು ವಿಜಿಗೀಷು. ಇಂಥ ಪ್ರಭಾವಶಾಲಿಯಾದ ಅರಸನಿಗೆ ಹಲವು ರಾಜರು ತಾವೇ ಬಯಸಿ ಸೇವಾತತ್ಪರರಾದುದು ಸಹಜ. ಆತನ ಈ ಮಹಿತ ಮಹಿಮಾಸ್ಪದದ ಮೂಲಶಕ್ತಿ ಎಂದರೆ ಆತನ ಅನನ್ಯ ಜಿನಭಕ್ತಿ. ಅರ್ಹಂತನ ಅಂಘ್ರಿದ್ವಯಪರಿಚಯದಿಂದ ಸಂಪೂತವಾದ ದಿವ್ಯಗಂಧವನ್ನೆ ಹಚ್ಚಿಕೊಳ್ಳುವುದು , ಗಂಧಶಾಲ್ಯಕ್ಷವನ್ನೆ ಸಿದ್ಧಸೀಸೆಯಾಗಿ ಸ್ವೀಕರಿರುವುದು, ಜಿನಪೂಜೋಪಹರವಾದ ಪುಷ್ಪಹರವನ್ನೆ ಮುಡಿಗಿಕ್ಕಿವುದು– ಇವು ಆತನ ನಿತ್ಯವಿಧಿ; ಕುಲಕ್ರಮಾಗತವಾಗಿ ಬಂದ ದಾಸತ್ವದ ನಡೆವಳಿಕೆ; ಸಕಲಪೃಥ್ವೀಪತಿಗಳೂ ಕೋರುವಂತ ಅತಿಶಯ ಜಿನನು ಉಂಡು ಒಲ್ಲದೆ ಬಿಸುಟ ಸಾಮ್ರಾಜ್ಯಸುಖವನ್ನು ಜಿನಪ್ರಸಾದವೆಂದು ಸ್ವೀಕರಿಸಿ ಆಳುವ ಅರ್ಹದ್ದಾಸನೇದಿಟ್ಟವಾಗಿ ದಾಸನೆನ್ನಬೇಕು. ಈತನ ಅರ್ಹದ್ದಾಸನೆಂತೋ ಅಂತು ಸದಾ ಯುದ್ಧೋದ್ಯೋಗಿಯಾಗಿ ಶತ್ರುವಿದ್ವಂಸಕನೂ ಆಗಿದ್ದನು.

ಅರ್ಹದ್ದಾಸರಾಜನಿಗೆ ಸಿರಿಯಲ್ಲಿಯೂ ರೂಪಿನಲ್ಲಿಯೂ ಒಪ್ಪುವಂತಹ, ಜಿನನೇ ಅಕ್ಕರೆಯಿಂದ ಅನುಗ್ರಹಿಸಿದ ಪುಣ್ಯಲಕ್ಷ್ಮಿ ಎಂಬಂತಿರುವ ಜಿನದತ್ತಾದೇವಿಯು ಕುಲವಧುವಾದಳು ಈಕೆ ಪರಮಸುಂದರಿ ಗುಣಸಂಪನ್ನೆ . ದೊರೆ ಹಿಡಿದ ಏಕಪತ್ನೀವ್ರತದಿಂದಾಗಿ ಈ ಸೌಂದರ್ಯಾತಿಶಯ ಗಣಾತಿಶಯ ಸೊಬಗೇರುವಂತಾದವು. ಮುಂದಾರವು ಹುಟ್ಟುವ ಮಂದರವೂ ವಾರ್ದಿವೇಲೆಯೂ ಮಾಣಿಕ್ಯವು ಹುಟ್ಟುವ ರೋಹಣಾದ್ರಿಯೂ ಧರೆಯೂ ಅನ್ಯೋನ್ಯವಾಗಿರುವಂತೆ ಈ ಸತಿಪತಿಯರು ಅನ್ಯೋನ್ಯವಾಗಿದ್ದು. ಇಷ್ಟವಿಷಯಕಾಮಭೋಗಗಳನ್ನು ಅನುಭವಿಸುತ್ತಿದ್ದರು.

ಹೀಗಿರಲು ಒಂದು ದಿನ ಎಂದಿನಂತೆ ಮಧ್ಯಹ್ನಸಮಯದಲ್ಲಿ ಶಂಖದ್ವನಿಯಾಗಿ ಅದು ಮುನಿಚರ್ಯಾಕಾಲವೆಂಬುದನ್ನು ಶ್ರಾವಕವೃಂದಕ್ಕೆ ನೆನಪುಮಾಡಿತು. ಧಾರ್ಮಿಕಜನರ ಗೃಹಗಳಿಗೆ ಪುಣ್ಯಾಗಮನವಾಗುವಂತೆ ಮುನಿಗಳು ಚರಿಗೆಗಾಗಿ ಬರುವ ಆ ಮಧ್ಯಾಹ್ನದ ವೇಳೆ ಪಾತ್ರದಾನದ ಸುಸಂಧಿ. ಅಂದಮೇಲೆ ಎಂದಿನಂತೆ ಜಿನದತ್ತಾದೇವಿ ಸಂತೋಷ ಸಂಭ್ರಮಗಳಿಂದ ಸಡಗರಿಸಿ ಯತಿಗಳ ಪಾವನಪದಪದ್ಮಗಳು ಅರಮನೆಯಂಗಳಾವನ್ನು ಮೆಟ್ಟಿ ಪವಿತ್ರವಾಗಿ ಮಡುವ ಹೊತ್ತಯಿತೆಂದು ತಿಳಿದು ಶೀಘ್ರವಾಗಿ ಅಬ್ಬೆಗಳನ್ನು ವಂದಿಸಿ ಬಸದಿಯನ್ನು ದಾಟಿ ಅರಮನೆಯ

ಬಾಗಿಲುವಾಡದಲ್ಲಿ ಬಂದು  ಸಕಲವೈಭಬಸಮಾಯುಕ್ತಳಾಗಿ ದಾರಿ ಕಾಯುತ್ತ ನಿಂತಳು. ಆ ವೇಳೆಗೆ ಸರಿಯಾಗಿ ಅಲ್ಲಿಗೆ ನಗರದಲ್ಲಿ ಚರಿಗೆಗೆಂದು ಅರಣ್ಯದ ಕಡಿಯಿಂದ ಯತಿಶ್ರೇಷ್ಠನೊಬ್ಬನು ಚಂದ್ರಗತಿಯಿಂದ ನಡೆದುಬಂದನು. ಆತನ ತಪಪ್ರಭಾವದ ಸಾತ್ವಿಕ ಪರಿಣಾಮದಿಂದಾಗಿ ಪರಸ್ಪರವೈರವರ್ಗದ  ಕಾಡುಪ್ರಾಣಿಗಳೂ ಅವನ ಬೆನ್ನಿಗೆ ಬಂದವು ! ಆತನ ಒಂದು ಕಯ್ಯಲ್ಲಿ ಗುಂಡಿಗೆ. ಒಂದು ಕೈಯಲ್ಲಿ ಹೀಲಿಯ ಕುಂಚ. ಆತನೇ ಪರಮವೈರಾಗ್ಯಪರನೂ ಕುಕ್ಕುಟಾಸನದೇವನೂ ಆದ ಮಲಧಾರಿದೇವ ಮುನಿ.

ಜಿನದತ್ತಾದೇವಿಯ ಪುಣ್ಯವೇ ಪುರುಷರೂಪವಾಗಿ  ಬಂದಂತೆ ಬಂದ  ಆ ಪರಮರ್ಷಿಯರನ್ನು ಸಂದರ್ಶಿಸಿ, ಹರ್ಷಿಸಿ ನಡೆದು ಬರುವ ನಿಧಾನವನ್ನು ಕಂಡತೆ ಕೃತಾರ್ಥೆಯಾಗಿ ಆಕೆ ಸಕಲವೈಭವಪುರಸ್ಪರವಾಗಿ ಸಕಲ ಅರ್ಚನಾದ್ರವ್ಯಗಳೊಂದಿಗೆ ಆತನನ್ನು ಚರಿಗೆಗೆ ನಿಲ್ಲಿಸಲೆಂದು ಮುಂದೆ ನಡೆದಳು. ಮಲಧಾರಿಮುನಿಪನ ಘೋರದುರ್ಧರ ತಪಶ್ಚರಣೆಯನ್ನೂ ಯೋಗನಿಯೋಗ ಭಾವನೆಯನ್ನೂ ಉಗ್ಗಡಿಸುವ ಮಂಗಳಪಾಠಕರಿಗೆ ಮಂಗಳಭೂಷಣಗಳನ್ನು ಮೆಚ್ಚಿಗೆ ಕೊಟ್ಟು ಮುನಿಯ ಚರಣಕಮಲಗಳತ್ತಲೇ ಭಕ್ತಿಭಾವದಿಂದ ವೀಕ್ಷಿಸುತ್ತ ನಿಧಾನಕ್ಕೆರಗುವ ದೀಪವರ್ತಿಯಂತಿರಗಿದಳು; ತುರುಗಿದರ್ಚನೆಗಳಿಂದ ಅರ್ಚಿಸಿದಳು ಗುರುಭಕ್ತಿಪೂರ್ವಕವಾಗಿ ವಂದಿಸಿದಳು . ಹಾಗೆಯೇ  ಅರಮನೆಗೆ ದಯಮಾಡಿಸುವಂತೆ ಬೇಡಿಕೊಂಡಳು. ಆಗ ಮಲಧಾರಿದೇವ ಮುನಿಷರು ಆಕೆಯನ್ನು ಕುರಿತು “ (ಚರಿಗೆಗೆ) ನಮ್ಮ ನ್ನು ನಿಲ್ಲಿಸುವುದಾದರೆ ನಿನ್ನ ಪತಿ ನಿಲ್ಲಿ ಸಲಿ ಇಲ್ಲ ನಿನ್ನ ಪುತ್ರರಿದ್ದರೆ ಅವರು ನಿಲ್ಲಿಸಲಿ; ಹೆಂಗಸರು ಕೋರಿದರೆ ನಮ್ಮಂತಹ ಗಂಡವಿಮುಕ್ತರು ನಿಲ್ಲುವುದು ಸರಿಯೆ, ಹೇಳಿ ತಾಯಿ – ಎಂದು ಇಷ್ಟು ಮಾತ್ರ ಹೇಳಿ  ಹರಸಿ ಹೋರಟುಹೋದರು. ಇದರಿಂದ ಆ ಮಹಾಭಾಗ್ಯೆಗೆ ಒಂದು ಕಡೆ ಬೋಗಾಂತರಾಯವನ್ನು ಮಾಡಿದ ನೋವು ಒಂದು ಕಡೆ ಮಕ್ಕಳನ್ನು ಪಡೆಯದ ನೋವು ಸೇರಿ ದುಃಖವುಕ್ಕುವಂತೆ ಮಾಡಿತು. ಭಾರವಾದ ಎದೆಯಿಂದ ಆಕೆ ಹಿಂದಕ್ಕೆ ಮುರಳುವಾಗ ಪೂರ್ವಪರಿಚಯದಿಂದ ತನ್ನತ್ತ  ಸುಳಿದುಬಂದ ಹುಲ್ಲೆಯ ಮರಿಗಳನ್ನು ಎತ್ತಿ ಮುದ್ದಾಡುತ್ತ, ಹಂಸದ ಮರಿಗಳನ್ನು ಪ್ರೀತಿಯಿಂದ ನೋಡಿ ಸರಸವಾಡುತ್ತ, ಸೋಗೆಯಮರಿಗಳನ್ನು ಮುದ್ದುಮಾಡಿ ಅಪ್ಪಿನಲಿದಾಡುತ್ತ  ನಡೆದು ಬಂದು, ಮುನಿಯಾಡಿದ ಮಾಗಿನಿಂದ ಮೊಳಿಯಿತೆಂಬ

ಪುತ್ರದೋಹಳದಿಂದ ಉಂಟಾದ ‘ಉದ್ದೀಪನಭಾವವೆಂಬಮರ್ದಿನ ಮಜ್ಜೆಯಿಮ್ಮಡಲ್ತು ನನೆಕೊನೆವೋಗೆ , ರಾಜಾಂಗಣದ ಬಳಿಯ ಕುಲಚೈತ್ಯಲಯವನ್ನು ಬಳಸಿದ ಉದ್ಯಾನದೊಳಗಿನ ಮಲ್ಲಿಗೆಯ ಮಂಟಪದ ಮುಂದಿನ ಮುತ್ತಿನ ಕೈಸಾಲಿಯಲ್ಲಿ ಕುಳಿತು ತನ್ನ ಕೆಳದಿ ಕಲಾಧರೆಯೊದನೆ ಅಂತರಂಗದ ವ್ಯಥೆಯನ್ನು ತೋಡಿಕೊಂಡಳು :

“ಕೆಳದಿಯೇ ಕೇಳು, ಚಕ್ರವಾಕದ ಜೊತೆಯಲ್ಲಿರುವ ಚಕ್ರವಾಕಿ ಹೊಸ ಬಾಣಂತಿ ; ಮಕ್ಕಳನ್ನು ಪಡೆಯಿತು; ಗೊರವಂಕದ ಮೊದಲ ಮರಿ ಕಲಿಸಿದ್ದನ್ನು ಹೇಳುತ್ತಿದ್ದೆ ; ಹಂಸದ ಮರಿ ತಾಯಿಯನ್ನು ಹಿಂಬಾಲಿಸಿ ತಪ್ಪು ಹೆಜ್ಜೆಯನ್ನಿಡುತ್ತಿದೆ. ನನ್ನ ಓರಗೆಯ ಹೆಂಗಸರು ಹೊನ್ನ ಸಸಿಯಂತೆ ರನ್ನದ ಮೊಳಕೆಯಂತೆ ಕಳಕಳಿಸುವ ತಮ್ಮ ಮುದ್ದುಮಕ್ಕಳ ಮೊಗವನ್ನು ತಮ್ಮ ಚೆಲುವಿಗೆ ತಾವೆ ಕನ್ನಡಿ ಹಿಡಿದು ನೋಡುವಂತೆ , ನೋಡಿ ನೋಡಿ ಸಂತೋಷಪಡುತ್ತಾರೆ. ದಟ್ಟವಾಗಿ ಕತ್ತಲು ಚಂದ್ರೋದಯವು ತಡವಾದ ಶಾರ್ವರಿಯಂತೆ ಲೋಕವನ್ನು ಕಾಪಿಡುವ ಸಸ್ಯಸಮುದ್ಭವು ವಿಳಂಬವಾದ ಉರ್ವರೆಯಂತೆ , ಮೌಕ್ತಿಕೋದಯವು ವ್ಯವಧಾನಗೊಂಡ ಶುಕ್ತಿಯಂತೆ ನಾನೊಬ್ಬಳೇ ಕಾಲದಲ್ಲಿ ಫಲಕ್ಕೆ ಬಾರದ ಬಳ್ಳಿಯಾಗಿದ್ದೇನೆ. ನಾನು ಪುಷ್ಪವತಿಯಗಿಯೂ ಗರ್ಭವತಿಯಾಗದಿರಲು ನನ್ನ ತನುಲತೆಯೇನು ಸುರಗಿಯೊ ಸಂಪಗೆಯೊ ಮೊಲ್ಲೆಯೊ ಮಲ್ಲಿಗೆಯೊ ತಿಳಿಯದಾಗಿದೆ. ನಾನು ಗರ್ಭವತಿಯಾದ ಮೇಲೆ ಇಂಥ ಅಂಗಸೌಷ್ಠವವಿದ್ದು ತಾನೆ ಏನು? ನನ್ನ ಮಗನ ನಗೆಮೊಗವನ್ನು ನಾನು ಕಾಣುವುದು ಎಂದು ? ಆ ಚಿನ್ನಾಟದ ಮಗುವಿಗೆ ಮೊಲೆಯೂಡಿಸುವ ಸುಖಪ್ರಾಪ್ತಿ ಎಂದು? ಗೆಜ್ಜೆಯ ದನಿಯೊಂದಿಗೆ ಬಳೆಯ ದನಿ ಬೆರೆತು ನನ್ನತ್ತ ಸಾರಿ ಬರುವ ಮಗುವನ್ನು ನಾಗು ಅಪ್ಪುವುದು ಎಂದು? ನನ್ನ ಕುಮಾರನು ಓದಲು ಮೊದಲಿಟ್ಟ ದಿನವೇ ತನ್ನ ಕುಶಲಮತಿಯನ್ನು ನಮಗೆಲ್ಲ ತೋರಿಸಲೆಂದು ‘ಸಿದ್ಧಂ ನಮಃ ಎಂದು ಬಾರಿಬಾರಿಗೆ ನನ್ನ ಮುಂದೆ ಬರೆದೋದುವುದು ಎಂದು? ಹೊಲೆವೆಣ್ಣಾದ ನಾನು ಚರಿಗೆಗೆ ನಿಲ್ಲಿಸಲು ನಿಲ್ಲಲೊಪ್ಪದೆ ತೆರಳುವ ಗಂಡವಿಮುಕ್ತರಾದ ಮಲಧಾರಿಸ್ವಾಮಿಗಳನ್ನು ನಿರಂತರಾಯವಾಗಿ ನಿಲ್ಲಿಸುವಂಥ ಸತ್ಪುತ್ರನು ನನಗೆ ಹುಟ್ಟುವುದು ಎಂದು ? ಗರ್ಭವತಿಯಾದ ಮೇಲೆ ಪಡುವ ಬಯಕೆಗಳಿರಲಿ, ಗರ್ಭಬನ್ನೇ ಬಯಸುವಂತಾಗಿದೆ ನನ್ನ ಸ್ಥಿತಿ.

ಇದನ್ನೆಲ್ಲ ಕೇಳುತ್ತಿದ್ದ ಕಳಾಧರೆ ಜಿನದತ್ತೆಯನ್ನು ಸಮಾದಾನ ಪಡಿಸುತ್ತ " ಹರಯದ ಹೆಂಗುಸರಿಗೆಲ್ಲ ಮಕ್ಕಳಾದರು ; ನನಗೆ ಆಗಲಿಲ್ಲವಲ್ಲ ಎಂದು ಕೊರಗಬೇಡಿ; ಸ್ವಲ್ಪತಡವಾಗಿ ಆದೀತು ಅಷ್ಟೆ. ಹೋಗಿ ಆಚಾರ್ಯರನ್ನು ಪ್ರಶ್ನಿಸೋಣ , ನಡೆಯಿರಿ. ಎಂದಳು. ಅಲ್ಲಿಂದ ಇಬ್ಬರೂ ಬಸದಿಗೆ ಹೊರಟರು. ಜಿನದತ್ತೆಯು ದೇವರನ್ನೂ ಆಚಾರ್ಯರನ್ನೂ ವಂದಿಸಿ ಬಳಿಕ ನಿಮಿತ್ತಜ್ಯೋತಿಗಳಿಗೆ ಕೈಮುಗಿದು , 'ಮುನೀಶ್ವರಾ ನಮ್ಮ ಕುಲಕ್ಕೆ ವೀರವೃಜಿನನಾದ ಜಿನರಾಜನೇ ದೈವವಾಗಿದ್ದು, ನಿಮ್ಮಂಥವರು ಗುರುಗಳಾಗಿದ್ದು, ಉತ್ತಮ ಪಾತ್ರದಾನದಲ್ಲಿ ಸಮ್ಮದಶೀಲನೂ ಜಿನಶಾಸನದೀಪಕನೂ ಸಿರಿಸೌಭಾಗ್ಯಶಾಲಿಯೂ ಆದ ಪುತ್ರನು ನನಗಾಗದಿರುವ ಕಾರಣವೇನು? ಎಂದು ಪ್ರಶ್ನಿಸಿದಳು. ಆಗ ನಿಮಿತ್ತಜ್ಯೋತಿಗಳು ಮುಗುಳ್ನಗೆ ನಗುತ್ತ ಅವಳನ್ನು ಕುರಿತು " ಹೇ ಪುತ್ರವತೀ, ಲೋಕದಲ್ಲಿ ತಪಸ್ಸು ಮಾಡಿ ಸದಾಚಾರದಿಂದ ನಡೆದು ಪುಣ್ಯವನ್ನು ಗಳಿಸುವಂಥವರು ಹಲವರಾದರು. ಅವರಿಗಲ್ಲವೆ ಇಂಥ ರಾಜೇಂದ್ರರ ದಿವ್ಯ ಭವನಗಲಿಟುವುದು? ಇಲ್ಲಿ ಹುಟ್ಟಿದೆ ಅವರು ಇನ್ನೆಲ್ಲಿ ತಾನೆ ಹುಟ್ಟುತ್ತಾರೆ? ಇಷ್ಟೇಕೆ ನೀವು ಪರಿತಪಿಸಬೇಕು; ನಿನಗೆ ಮಗನಾಗಲೆಂದು ತಪಸ್ಸು ಮಡುತ್ತಿರುವಾತನ ಪರಿತಾಪವೇ ಸಾಲದೇ? ಸೂರ್ಯನು ಉದಯಿಸಲೆಂದು ಪೂರ್ವದಿಕ್ಕು ಬಯಸಿ ನೋಯುವುದೇ? (ಅದಕ್ಕಾಗಿ ಲೋಕವೇ ಬಯಸಿ ನೋಯುವುದಿಲ್ಲವೆ? ) ಈಗ ನಿನ್ನ ಪತಿ ಅರ್ಹದ್ದಸನೂ ಇದೇ ವಿಷಯವಾಗಿ ಪ್ರಶ್ನಿಸಿದಾಗ ಆತನಿಗೂ ಹೀಗೆಯೇ ಹೇಳಿದೇವು; ಹೋಗಿ ಕೇಳು – ಎಂದರು ಅದಕ್ಕೆ ಜಿನದತ್ತೆಯ 'ಮಹಾಪ್ರಸಾದ ಎಂದು ಹೆಳಿ ನಮಸ್ಕರಿಸಿ ಅರಮನೆಗೆ ತೆರಳಿದಳು. ಹೋಗುತ್ತಲೇ ಕಳಾಧರೆಗೆ ಪತಿಯನ್ನು ಕರೆತರಲು ಹೇಳಿಕಳಿಸಿ, ತಾನು ಅಂತಃಪುರಕ್ಕೆ ನಡೆದು ಅಲ್ಲಿ ವಿಳಾಸನಿಳಯದೊಳಗೆ ಮಣಿಮಂಚದ ಬಳಿಯ ಕಾಂಚನಪೀಠದಲ್ಲಿ ಕುಳಿತು ಪತಿಯ ನಿರೀಕ್ಷೆ ಮಾಡುತ್ತಿದ್ದಳು. ನಿರೀಕ್ಷಿಸಿದಂತೆ ಅರ್ಹದ್ದಾಸರಾಜನು ಅಂತಃಪುರಕ್ಕೆ ಬಂದನ. ಇನಿಯಳ ಮುಖದತ್ತಲೇ ಕಣ್ಣಾಗಿ ಬರುತ್ತ ಇದ್ದವನಿಗೆ ಅಂದು ಅವಳ ಮುಖಭಾವ ಹೊಸಪರಿಯಾಗಿ ಕಂಡಿತು. ಕೊಂಚ ಅನುರಾಗ, ಕೊಂಚ ದುಗುಡ; ಇಷ್ಟು ನಗೆ, ಎಷ್ಟು ಅಳುಮೊಗ; ಸ್ವಲ್ಪಸಂತೋಷ , ಸ್ವಲ್ಪಖೇದ. ಅದೇ ತಾನೆ ಹಗಲು ಹುಟ್ಟುತ್ತಿದೆ. ಕತ್ತಕೆಯ ಮಬ್ಬೂ ಅದೇ ಹರಿಯುತ್ತಿದೆ ಎನ್ನವಾಗಿನ ತಾವರೆಯ ರೀತಿ ಇದು ; ಇದೇಕೆ ಹೀಗೆ – ಎನ್ನಿಸಿತು ಆತನಿಗೆ. ದೊರೆ ಮಂಚದ ಮೇಲೆ ಕುಳಿತನು. ರಾಣಿಯ ಸಖಿ ಕಳಾಧರೆಯ

ಮಣಿಮಯಪಾದಪೀಠವು ದೊರೆಯ ಪಾದಪಲ್ಲವಗಳಿಗೆ ಕಾಠಿನವೆಂದು ತನ್ನ ತೊಡೆಗಳ ಮೇಲೆಯೇ ಅವುಗಳನ್ನು ಅಂಕೆಗೊಂಡು ತನ್ನ ಪಾಣಿಪಲ್ಲವಗಳಿಂದ ಒತ್ತುತ್ತಿದ್ದಳು. ಅರಸನು ಮಥಿಗೆ ಮೊದಲಿಟ್ಟನು. ಅರಸನ ಮಾತೆಂದರೆ ಮೊದಲೇ ಕರ್ಣರಸಾಯನ ; ಇನ್ನು ಅದರ ಮೇಲೆ ಆಡಲಿರುವ ಮಾತು , ಸುತಲಾಭ ಕಥಾಂತರವನ್ನು ಕುರಿತದ್ದು; ಅಂದಮೇಲೆ ಜಿನದತ್ತೆಗೆ ಮುರುಗವು ಹೂದಳೆದಂತೆ , ಕಬ್ಬು ಹಣ್ಣಾದಂತೆ ಆಯಿತು.

ಆದರೆ ರಾಣಿಯ ಮೈಮನಗಳು ದುಗುಡಗೊಂಡಿರುವುದರ ಕಾರಣವನ್ನು ಮೊದಲು ತಿಳಿದಲ್ಲದೆ ರಾಜನಿಗೆ  ಸಮಧಾನವಿಲ್ಲ. ಕೆಳದಿಯನ್ನು ಕುರಿತು ಪ್ರಶ್ನಿಸಿದನು. "ಕಳಾಧರೇ ಅರಸಿಯ ಮುಖಪದ್ಮವು ಮಾಗಿಯ ಪದ್ಮದಂತೆ ಇಷ್ಟೇಕೆ ಸೊರಗಿದೆ? ಮಧುವನ್ನು ಕಾರಿದ ನೈದಿಲೆಯಂತೆ ಕಣ್ಣುಗಳು ಹೀಗೆಕೆ ಕಾಂತಿಹೀನವಾಗಿವೆ? ಹವಳಾದಂತೆ ಹೊಳೆದೊಪ್ಪುವ ಕೆಂದುಟಿಗಳು ಇದೇಕೆ ತಂಬುಲನ್ನೊಲ್ಲದೆ ಬಿನ್ನಗಾಗಿವೆ? ಮುನ್ನೇಸರಿನಲ್ಲಿ ತಾನು ಬಾಡಿ ಬಸವಳಿದು ಉತ್ಪಲವು ಚಂದ್ರನನ್ನೂ  ಬಾಡಿಸುವಂತೆ ಬಾಡಿದ ದೇವಿಯ ತನುಲತೆಯು ನೋಡುತ್ತಿರುವ ನನ್ನ ಮುಖವನ್ನೂ ಬಾಡಿಸುತ್ತಿದೆ. ಹೀಗೆ ನೊಂದು ನುಡಿದ ಅರಸನಿಗೆ ಕಳಾಧರೆಯ ಹಿಂದೆ ನಡೆದುದನ್ನು ವಿವರಿಸಿದಳು. "ದೇವಿಯರು ಮಲಧಾರಿಸ್ವಾಮಿಗಳಾನ್ನು ಚರಿಗೆಗಾಗಿ ನಿಲ್ಲಿಸಲು ಹೋದಾಗ, ಅವರು ದೇವಿಗೆ 'ನಿನ್ನ ಪತಿ ನಮ್ಮನು ನಿಲ್ಲಿಸಲಿ, ಇಲ್ಲವೆ ನಿನಗೆ ಪುತ್ರರಿದ್ದರೆ ಅವರು ನಿಲ್ಲಿಸಲಿ, ಹಾಗಾದರೆ ಮಾತ್ರ ನಾವು ನಿಲ್ಲುವುದಾಗುತ್ತದೆ. ಎಂದು ತಿಳಿಸಿದರು. ಆ ಮುನೀಂದ್ರರ ಈ ಮಾತಿನಿಂದಾಗಿ ಉಂಟಾದ ಪುತ್ರದೊಹಳಾದಾಹವು ಆಕೆಯ ಶರೀರವನ್ನೆ ಸುಡುತ್ತಿದೆ. ಆಕೆ ತುಂಬ ನೊಂದು ಅತ್ತುಕರೆದು ಉಣ್ಣದೆ ಕುಡಿಯದೆ ಯಾರು ಸಂತೈಸಿದರೂ ಸಮಾಧಾನಕ್ಕೆ ಬಾರದ ಇದ್ದಾಳೆ. ಈಗ ನೀನು ಅವಳನ್ನು ಸಮಾಧಾನ ಪಡಿಸಿದರೆ ಮಾತ್ರ ಅವಳ ಅಳಲು ತಗ್ಗಲು ಸಾಧ್ಯ.  ಇಷ್ಟು ಹೇಳಿದ ಮೇಲೆ ಅರಸನು ಅರಸಿಯನ್ನು ಕುರಿತು ತನಗಾದರೂ ಈ ವ್ಯಥೆಯೇ ಕೋರೆಯುತ್ತಿದೆಯೆಂದೂ ಅದರೆ ಇದಕ್ಕೆ ಈಗ ಪರಿಹಾರವೂ ದೊರೆತಿಯೊಂದು ಆಕೆಗೆ ಮನವರಿಕೆ ಮಾಡುತ್ತಾನೆ. ಆಕೆಯ ದುಃಖವನ್ನು ಕಳೆದು ಸಂತೋಷಗೊಳಿಸುತ್ತಾನೆ; "ಮನಪ್ರಿಯೇ ಹಾಗೆ  ನೋಡಿದರೆ ಇದು  ನನ್ನ ವ್ಯಥೆಯಲ್ಲ ಏಕೆನ್ನುವೆಯೊ ? ಈ ರಾಜ್ಯನಿರ್ವಾಹದ ಹೊರೆಯನ್ನು ಹೊತ್ತು ಹೊತ್ತು ನನ್ನ ಭುಜ ಕುಸಿದು

ಬೀಳುತ್ತಿದೆ. ನಿನಗೊಬ್ಬ ಮಗನಾದನೆಂದರೆ ಈ ಹೊರೆಯನ್ನು ಅವನಿಗೆ ವಹಿಸಿಕೊಟ್ಟು ನಾನು ಸದ್ಯ ಬದುಕಿದೆ ಎಂದು ತೋಳನ್ನು ಬಿಡುಬೀಸಾಗಿ ಚಾಚಿ ವಿರಮಿಸುತ್ತೇನೆ ಈಗ ಹೇಳು ಈ ದುಃಖ ನನ್ನದೇ, ಇಲ್ಲ ನಿನ್ನದೇ? ಸಾಗರಪರಿವೃತ ಭೂಭಾರವನ್ನು ನಿರ್ವಹಿಸುವ ಪುತ್ರನಿಲ್ಲದೆ ದೊರೆಗಳು ಗತಿಕಣದೆ ಹೋಗುವುದರಿಂದ ' ಅಪುತ್ರಸ್ಯ ಗತಿರ್ನಾಸ್ತಿ ಇಂಬ ವಾಕ್ಯವಾಯಿತು . ಉಭಯವ ಹಿತಕರಗಳಾದ ಸಾದ್ಧರ್ಮಲಾಭವೂ ಸತ್ಪುತ್ರಲಾಭವೂ ಎರಡೂ ನನಗಾಗದೆ ಇಹಪರಗಳೆರಡೂ ನಷ್ಟವಯಿತು. ಎಂದು ಒಂದೇ ಚಿಂತೆಯಾಗಿ ನಾನು ಕೊನೆಗೆ 'ಸೋಡರಿದ್ದಂತೆ ಕತ್ತಲೆಯಲ್ಲಿ ಯಾವ ಮೂರ್ಖ ತಾನೆ ಇದ್ದಾನು ಎಂದು ಆಲೋಚಿಸಿ ನಮ್ಮ ಕುಲಗುರುಗಳಾದ ನಿಮಿತ್ತಜ್ಯೋತಿಗಳಲ್ಲಿಗೆ ಹೋದ. ಈ ದುಃಖಾಂಧಕಾರವನ್ನು ದೂರಮಾಡಿ ಎಂದು ಪಾದಾಭಿ ವಂದನೆ ಮಾಡಿ , ಅಪ್ಪಣೆ ಕೊಡಿ ಎಂದು ಪ್ರಶ್ನಿಸಿದೆ. ಅವರು ದತ್ತಾವಧಾನರಾಗಿ ನಿಮಿತ್ತವನ್ನು ನಿಶ್ಚಿಯಿಸಿ ನೋಡಿ 'ಹರಿವಂಶೋದಿತವಿಕ್ರಮನೂ, ವಿವಿಧ ವಿದ್ಯಾತೀರ್ಥಹಂಸನೂ ಸುಧಾಕರಶೀಲನೂ ವಸುದೇವ ಕೇಳಿನಿಲಯನೂ ನಾನಾ ನಯೋಪಾಯಭಾಸುರಭಾಗ್ಯೋದಯ ಪದ್ಮನಾಭರಾಮಾಕಾರಮಂತ್ರನೂ, ನೇಮಿನಾಥಚರಿತನೂ, ಸೌಜನ್ಯಜನ್ಮವೃತ್ತನೂ ಶ್ರೀರಮಣೀಪ್ರಿಯನೂ, ಅತಿಗಂಭೀರನೂ, ಭುವನೈಕದನಿಯೂ ಧೂರೋದಾತ್ತನೂ ಸಾರಸ್ವತಪಾರನೂ, ಶೃಂಗಾರಾಮೃತಸೇತುವು, ಸುಕವಿಕಂಠಾಭರಣನೂ, ವಿನಯನಿಧಿಯೂ, ಭಾಗ್ಯವಂತನೂ ಜಿನಶಾಸನದೀಪಕನೂ, ಪ್ರತಾಪಿಯೂ, ಸುವಿಜ್ಞಾತನಯನೂ, ಉದತ್ತನೂ ಆದ ಮಗನೊಬ್ಬನು ತಪ್ಪದೆ ನಿನಗೆ ಹುಟ್ಟುತ್ತಾನೆ ಎಂದು ಅವರು ನನಗೆ ಅಪ್ಪಣೆ ಕೊಡಿಸಿದರು.

ದ್ವಿತೀಯಾಶ್ವಾಸ

" ಆ ಮುನಿಪರು ಅಷ್ಟಾಂಗನಿಮಿತ್ತಗಳನ್ನೂ ಅಂಗಯ್ಯ ಮೇಲಿನ ಮುತ್ತಿನಂತೆ ಸ್ಪಷ್ಟವಾಗಿ ಬಲ್ಲವರು. ಅಲ್ಲದೆ ಅದಕ್ಕೊಂದು ಕುರುಹನ್ನೂ ಹೇಳಿದರು. ನಿನ್ನ ಸ್ತನದೆಡೆಯಲಿ ಚಿನ್ನದ ಗಲದ ಹೊನ್ನ ಬಣ್ಣದ ಮಚ್ಚೆಯು ಅವರು ಹೇಳಿದಂತೆಯೇ ಹುಟ್ಟಿರಬೇಕಲ್ಲವೇ, ಎಲ್ಲಿ ನೋಡೋಣ. ಎಂದನು. ಅದರಂತೆ ಜಿನದತ್ತೆಯ ವಕ್ಷಸ್ಥಲದೆಡೆಗೆ ನೋಡಿಕೊಂಡಾಗ ಹೊಮ್ಮಚ್ಚೆಯ ಅಂಕುರಿಸ್ದು ಮೊಳೆತ ಜರಗಿನಂತೆ

ಮಿರುಗುತ್ತಿತ್ತು. ಅದನ್ನು ನೋಡಿದ ಕೊಡಲೇ ಆ ಸತಿಗೆ ಅದೇ ಕ್ಷಣವೇ ತನಗೆ ಮಗನಾದಂತೆ ಹರ್ಷವಾಯಿತು. “ ಪಡೆಯ ಲಶಕ್ಯವಾದ ಧರ್ಮವನ್ನು ಸಂಪಾದಿಸಿದನು ಜಿನನೆಂಬ ಭವ್ಯಚಿಂತಾಮಣಿಯನ್ನು ಪಡೆದವನಾಗುವನು. ಮಗನನ್ನು ಪಡೆಯುವುದು ಯಾವ ದೊಡ್ಡ ವಿಷಯ? ನಾವು ಪಡೆಯದದು ಬೇರೇನಿದೇ? ನೆಲಕ್ಕೆ ನೆರ ಬಡಿದ ಕೈ ಬೇಕಾದರೆ ತಪ್ಪಿತು ; ಆಚಾರ್ಯರ ವಚನ ತಪ್ಪದು. ಧರ್ಮಪರೆಯಾಗಿರು ಎಂದು ಅರಸ್ನು ಅರಸಿಗೆ ನಿಡಿದು , ತಾನು ಆ ಮೊದಲುಗೊಂಡು ಅಷ್ಟಾಹ್ನಿಕ ಮಹಾಪೂಜೆಗೆ ತೊಡಗಿ ಮಹೇಂದ್ರನಿಗಿಂತ ಅತಿಶಯವಾಗಿ ಅದನ್ನು ಆಚರಿಸ ತೊಡಗಿದನು. ಜಿನದತ್ತಾದೇವಿಯ ಕಲಶ ಕನ್ನಡಿಗಳೇ ಮೊದಲಾದ ಉತ್ಸವೋಚಿತ ಅಲಂಕಾರ ವಿಶೇಷಗಳಿಂದ ಗಂಧಪುಷ್ಪಾದಿ ಅರ್ಚನೋಚಿತ ಉಪಚಾರವಿಶೇಷಗಳಿಂದಲೂ ಚಂದ್ರಪ್ರಭದೇವನನ್ನು ಅರ್ಚಿಸಿದಳು. ಆಕೆ ಪುತ್ರಕಾಮ್ಯಳಾಗಿ ಜಿನಾಭಿಷೇಕವಾದ ಗೋಕ್ಷೀರದಲ್ಲಿ ಮಿಂದಳು. ಚಂದ್ರಪ್ರಭನ ಪಾದಪದ್ಮಗಳಿಗೆ ಎರಗಿ , “ಕುಲಾಪಾಲಕ ಚಂದ್ರನಾಥಾ, ನನ್ನ ಬಿನ್ನಪವನ್ನು ಸಲ್ಲಿಸು ನಿನ್ನ ಸುಧಾನಿರ್ಮಲವಿನ್ನಿಸಿದ ದೇಹದ್ಯುತಿಯ ನನ್ನ ಮಗುವಿಗೆ ಮೊಲೆಹಾಲಾಗಲಿ ಎಂದು ಪ್ರಾರ್ಥಿಸಿದಳು. ಇದೇ ಪ್ರಕಾರ ದಿನದಿನವೂ ಪುತ್ರೋತ್ಸವ ನಿಮಿತ್ತವಾಗಿ ಜಿನಪೂಜೋತ್ಸವಗಳನ್ನು ನಡೆಸೊಕೊಂಡು ಬಂದಳು.

ಹೀಗಿರಲು ಆಕೆಯ ಪೂಜಾಫಲವು ಕೈಗೂಡುವ ಸುಯೋಗವು ಸನ್ನಿಹಿತವಾಗಿ ಆಕೆಯ ಗರ್ಭಮಾನಸಕ್ಕೆ ಚಿಂತಾಗತಿ ಜಿನಹಂಸನು ಸಂಕ್ರಮಿಸಿದನು. ಅದೇ ದಿನ ಕತ್ತು ಕಳೆದು ಬೆಳಕು ಹರಿಯುವ ವೇಳೆಗೆ ಆಕೆಗೆ ಕನಸಾಗಿ ಸೂರ್ಯನನ್ನು , ಕ್ಷೀರಸಾಗರವನ್ನು , ಮದದಾನೆಯನ್ನು ಎದುರಿಸಿರುವ ಒಂದು ಸಿಂಹವನ್ನು, ಸಂತಾನದ ಹೂವಿನ ಹಾರವನ್ನು , ಸ್ನಾನ ಮಾಡುತ್ತಿರುವ ಲಕ್ಷ್ಮಿಯನ್ನು ಆ ಕನಸಿನಲ್ಲಿ ಕಂಡು ನಿದ್ರೆಯಿಂದೆಚ್ಚತ್ತಳು. ಉದಯಕಾಲದ ಮಂಗಳಗೇಯವಾಗುತ್ತಿದ್ದಂತೆ ಸಜ್ಜೆಯಿಂದ ಎದ್ದು ಅಲಂಕಾರಗೃಹದಲ್ಲಿ ಶೃಂಗಾರ ಮಾಡಿಕೊಳ್ಳುತ್ತಿರುವ ವೇಳೆಗೆ ಎರಡು ಕೈಗಳಲ್ಲಿಯೂ ಆಶೀರ್ವಾದ ಸಹಾಯಕಗಳಾದ ಮಂಗಳದ್ರವ್ಯಗಳಾನ್ನು ಹಿಡಿದುಕೊಂಡು ಪುರೋಹಿತಶ್ರೇಷ್ಠನೊಬ್ಬನು ಅಲ್ಲಿಗೆ ಪ್ರವೇಶಿಸಿದನು. ಜಿನ್ದತ್ತೆಯು ಕೂಡಲೇ ದೇವಾಗಮನವಾದಂತೆ ಆದ ಆತನ ಆಗಮನವನ್ನು ಕಂಡು ಹರ್ಷಿಸಿ ಭಕ್ತಿಭಾವದಿಂದ ಕೈ ಮುಗಿದಳು. ಆ ಪುರೋಹಿತನು ಆ ರಜವಲ್ಲಭೆಯನ್ನು ಆಶೀರ್ವದಿಸಿ

ಗಂಧೋದಕವನ್ನೂ ಸಿದ್ದಶ್ರೇಷಯನ್ನೂ ಅನುಗ್ರಹಿಸಿ ಕುಳ್ಳಿರಲು ಹೇಳಿದಾಗ, ಆಕೆ ತನ್ನ ಕಂಡ ಕನಸುಗಳನ್ನೆಲ್ಲ ಅನುಕ್ರಮವಾಗಿ ಹೇಳಿದಳು. ಅದನ್ನು ಕೇಳಿ ಪುರೋಹಿತನು ತಾಯಿ ನಿನಗೆ ಸೂರ್ಯನಂತೆ ತೇಜಶ್ಯಾಲಿಯೂ ಸಮುದ್ರದಂತೆ ಗಂಭೀರನೂ ಆನೆಯಂತೆ ಆನತಲೋಕದಾನಪತಿಯೂ ಸಿಂಹದಂತೆ ಪರಾಕ್ರಮಾರ್ಥಿ ಯೂ ಸಂತಾನಪುಷ್ಪದಂತೆ ಲಲಿತನೂ ಲಕ್ಷ್ಮಿಯಂತೆ ಸಮಗ್ರಭಾಗ್ಯಭಾಜನನ್ನೂ ಉತ್ತಾನಯಶೋತ್ತಮನೂ ಆದ  ಸುಪುತ್ರನು ಕುಲರತ್ನಭೂಷಣನಾಗಿ ಜನಿಸುತ್ತಾನೆ. ಎಂದು ಸ್ವಪ್ನಫಲವನ್ನು ಜಿನಾದತ್ತೆಗೆ ಶ್ರುತಪಡಿಸಿದನು. ಪುರೋಹಿತನು ನೀಡಿದ ಶುಭವಾರ್ತೆಗೆ ಹರ್ಷಿಸಿ ಜಿನದತ್ತೆಯು ಆತನನ್ನು ಮಣಿಕಂಡಲಾದಿಗಳಿಂದ  ಸತ್ಕರಿಸಿ ಬೀಳ್ಕೊಟ್ಟು ಎಂದಿನಂತೆ ಪಂಚಪರಮೇಶ್ವರಪೂಜಾಪ್ರಭಾವತತ್ಪಯಾಗಿ ಕೆಲವು ದಿನಗಳನ್ನು ಕಳೆದಳು. ಆಕೆಗೆ ಗರ್ಭಚಿಹ್ನೆಗಳು ಸ್ಪುಟವಾದವು. ಗರ್ಭದ  ಬಯಕೆಗಳು ಬೆಳೆದವು ಜಿನಮಜ್ಜನಗಳಾನ್ನು ಮಡುವ , ಜಿನೇ,ಂದ್ರಪೂಜೆಯನ್ನು ಮಾಡುವ ಜಿನಾಲಯಸಂಕುಲಗಳನ್ನು ನಿರ್ಮಿಸುವ ಜಿನಪ್ರತಿಷ್ಠೆಯನ್ನು ಮಾಡುವ ಚತುರ್ವಿಧವಾದ ದಾನವನ್ನು ನೀಡುವ ಬಯಕೆಗಳು ಉಂಟಾಡವು. ಜಿನತೀರ್ಥಾತಿಶಯವನ್ನು ಜಿನಜನನಿಗರ್ಭದೋಹಳಾತಿಶಯವನ್ನು, ಜಿನಧರ್ಮಾತಿಶಯವನ್ನು ಕೇಳಲು ಅಪೇಕ್ಷೆಯಾಯಿತು. ಹೀಗೆ ಬಯಸಲು ತಕ್ಕವಾದ ಬಯಕೆಗಳು ಬೆಳೆಯುತ್ತಿಟುವಂತೆಯೇ ಆಕೆಗೆ ನವಮಾಸಗಳೂ ತುಂಬಿಬಂತು.

ಮಣಿಮಯಪುತ್ರಿಕೆ ಚಿಂತಾಮಣಿಯನ್ನು ಪಡೆಯುವಂತೆ ಲತೆಯ ಪಾರಿಜಾತವನ್ನು ಪಡೆಯುವಂತೆ ಜಿನದತ್ತೆ ಮಗನನ್ನು ಹಡೆದಳು. ಆ ಜಯಪತಿಯ  ಹುಟ್ಟಿದೊಡನೆಯೇ, ತಮ್ಮ ತೇಜವುಡುಗಿ ಬಂದು ಗೌರವದಿಂದೆರಗಿ, ಶತ್ರುರಾಜಕವು  ಆತನಿಗೆ 'ಅಪರಾಜಿತ ಎಂಬ ಅಮೃತದಂಥ ಹೆಸರನ್ನು ಕೊಟ್ಟರು. ಭಂಗಾರದ ಭರಣಿಯಲ್ಲಿ ಮಾಣಿಕ್ಯವು ಮಿರುಗಿವಂತೆ ಆ ಅಭಿಮಾನಮೆರುವು ತೊಟ್ಟಿಲಲ್ಲಿ ಶೋಭಿಸಿದನು. ಆ ತೊಟ್ಟಿಲನ್ನು ತೂಗುವಾಗ ಅತ್ತಿಂದಿತ್ತ ಉಯ್ಯಲಾಡುವುದು "ಇಕೋ ಹೊಳೆದು ಹಾರಿ  ದೂರವಾದೆ ನಾನು ಚಿಂತಾಗತಿಖಚರನು ಎಂದು ಸಹಜಗಗನಮನವನ್ನು ಗಗನದಲ್ಲಿ ಆಡಿ ತೋರಿಸುವಂತಿತ್ತು. ನೃಪಕುಮಾರ ತಾನು ನಡೆಗಲಿಯುವಂದೆ ನೆಲಕ್ಕೆ ತಳರ್ನಡೆಗಲಿಡಿದನು. ನುಡಿಗಲಿಯುವಂದೆ ತನಗೊಲಿದೆ ವಾಕ್ಕನ್ನಿಕೆಗೆ ತೊದಲ್ನುಡಿಗಲಿಡಿದನು. ಇನ್ನು ವಿದ್ಯಾಪರಿಣತಿಯೂ

ಎಂದರೆ, ಛಂದಸ್ಸಿನಲ್ಲಿ ಷಟ್ಪ್ರತ್ಯಯನಿರ್ವಾಹ, ಗಾಂಧರ್ವದಲ್ಲಿ ಸ್ವರಜ್ಞಾನ, ಆಯುವೇದದಲ್ಲಿ ಅನುರ್ಭವಚರತ್ವ ಇವು ಆತನಿಗುಂಟ್ಟಾದವು. ಆತನ ನಿಡುದೋಳು ಕೈದುಗಲಿತು ವೀರಶ್ರೀಯನ್ನು ತನಗೊಲಿಸಿಕೊಂಡಿತು; ಆತನ ಗಜಾರೂಢಪ್ರೌಢಿ ಯಶೋಲಕ್ಷ್ಮಿಯನ್ನು ದಿಗ್ಗಜವೇರಿಸಿತು. ಲಿಪಿಗಳು, ವ್ಯಾಕರಣ, ಅಲಂಕಾರ, ತರ್ಕ, ಆಗಮ, ಸಕಲಭಷೆಯಲ್ಲಿಯೂ ಕವಿತ್ವಶಕ್ತಿ ಈಯೆಲ್ಲದರಲ್ಲಿಯೂ ಆತನಿಗಿದ್ದ ಕೌಶಲ ಪಾಂಡಿತ್ಯ ತಜ್ಞರಂಜನೆಯನ್ನುಂಟುಮಾಡುತ್ತಿತ್ತು.

ಹೀಗೆ ಅಪರಾಜಿತನು ಸಕಲ ಶಸ್ತ್ರವಿದ್ಯೆಗಳಲ್ಲಿಯೂ ಪ್ರಗಲ್ಭನಾದಮೇಲೆ ವಿವಾಹೋಚ್ಛಿತವಯಸ್ಕನಾದ ಮಗನನ್ನು ಕಂಡು ಅರ್ಹದ್ದಾಸನು ಅನುರೂಪಕನ್ಯೆಯೊಡನೆ ಆತನ ವಿವಾಹಾನ್ನು ಮಾಡಲು ಆಲೋಚಿಸಿದನು. ಅದೇ ಪ್ರಕಾರದಲ್ಲಿ ಪೂರ್ವಭವ ಪ್ರೇಮ ಪ್ರೇರಿತಮತಿಯಾದ ಪ್ರೀತಿಮತಿಯೆಂಬ ರಾಜಕುಮಾರಿಯೊಡನೆ ಮಹೋತ್ಸವದಿಂದ ಮಗನ ಮದುವೆಯನ್ನು ಜರುಗಿಸಿದನು.

ಅಪರಾಜಿತ–ಪ್ರೀತಿಮತಿಯರು ದಾಂಪತ್ಯಸುಖಾಸಾಕ್ತರಾಗಿರಲು ಅರ್ಹದ್ದಾಸನು ಕಾಮದೇವನಿಗೆ ಪಟ್ಟಗಟ್ಟಿ ಕೊಟ್ಟ ರಾಗರಾಜ್ಯಕ್ಕೆ ಉಡುಗೊರೆಯಾಗಿ ಮಗ ಅಪರಾಜಿತನಿಗೆ ಯುವರಾಜಪಟ್ಟವನ್ನು ಕೊಟ್ಟನು.ಇಲ್ಲಿಗೆ ಸಿರಿಯ ಅರ್ಹದ್ದಾಸನೃಪನತ್ತಣಿಂದ ಏರುಜವ್ವನದ ಅಪರಾಜಿತ ರಾಜಕುಮಾರನ ಕಡೆಗೆ ಒಂದಡಿಯಿಟ್ಟಂತಾಯಿತು ! ಹೀಗೆ ರಾಜ್ಯಭರವನ್ನು ಮಗನಿಗೆ ಹಂಚಿಕೊಟ್ಟು ರಾಜ್ಯವ್ಯವಹರದಲ್ಲಿ ಇದ್ದೂ ಇಲ್ಲದವನಂತೆ , ಪಂಜರದಿಂದರೆನುಸುಳುವ ಶಕುಂತದಂತೆ ಕಾಲಹಾಕುತ್ತಿದ್ದನು. ಹೀಗಿರಲು ಒಮ್ಮೆ ವಿಮಲವಾಹನ ಜಿನಪತಿಯ ಸಮವಸೃತಿಯ ಆಯೆಡೆಗೆ ಬಂದಿತು. ಆ ಸಮವಸರಣಕ್ಕೆ ಅರ್ಹದ್ದಾಸನೂ ವಂದನಾಭಕ್ತಿ ನಿಮಿತ್ತವಾಗಿ ಪುತ್ರಮಿತ್ರಸಮೇತನಾಗಿ ಹೋಗಿ ವಿಮಲವಾಹನ ಜಿನಪತಿಯ ಬಲಗೊಂಡು ನಮಾಸ್ಕರಿಸಿ ಧರ್ಮೋಪದೇಶವನ್ನು ಕೇಳಿ ಸಂಸಾರಶರೀರ ನಿರ್ವೇಗದಿಂದ ಅಪರಾಜಿತನಿಗೆ ರಾಜ್ಯವನ್ನು ಪೂರ್ತಿವಹಿಸಿಕೊಟ್ಟು ಐನೂರ್ವರು ರಾಜಪುತ್ರರೊಂದಿಗೆ ಕೋಡಿಕೊಂಡು ತಪಸ್ಸಿನಲ್ಲಿ ನಿಂತನು. ಅದಕ್ಕೆ ಹುರುಡಿಸಿಹಂತೆ ಜಿನದತ್ತೆಯೂ ಸಂಯಮದತ್ತಚಿತ್ತೆಯಾದಳು. ಅಪರಾಜಿತ ನೂ ಸಮ್ಯಗ್ದರ್ಶನಾದಿ ಶ್ರಾವಕವ್ರತಗಳಿಂದ ಆಲಂಕೃತನಾಗಿ ಪಟ್ಟಣಕ್ಕೆ ಬಂದು ಪೃಥ್ವೀಪಾಲನವನ್ನು ಕೈಗೊಂಡನು. ಅಮೋಘವಾದ ಅಜ್ಞೆಯ ಬಲಾದಿಂದ

ದಕ್ಷಆಳ್ವಿಕೆಯನ್ನು ನಡಸಿದನು ಎನ್ನುವ ಮಿಗಿಲಾದ ಹೊಗಳಿಕೆಗೆ ನೆಲೆಯಾಗಿ, ಪ್ರೀತಿಮಾತಿಯ ಪ್ರೀತಿಗೆ ಪಾತ್ರನಾಗಿ, ರಾಜ್ಯಲಕ್ಷ್ಮೀವಿರಾಜಿತನಾಗಿ ಇರುತ್ತಿದ್ದನು. ವಿಮಲವಾಃನನೂ ಅರ್ಹದ್ದಾಸನೂ ನಿರ್ಮೂಲಿತಕರ್ಮರಾಗಿ ಮುಕ್ತಿಗೆ ಸಂದರು.

ಆ ಪ್ರಸ್ತಾವದಲ್ಲಿ ಅಪರಾಜಿತಪ್ರಭುವು ಆ ಯಜನಕ್ಕೆ ಹೋಗುವ ಸುರಭೇರಿನಾದವನ್ನು ಕೇಳಿ ಸಮೀಪಸ್ಥರನ್ನು ಅದೇನೆಂದು ಪ್ರಶ್ನಿಸಿದಾಗ, "ಅರ್ಹಂತನಾದ ವಿಮಲವಾಹನನೊಡನೆ ನಿಮ್ಮ ತಂದೆ ಅರ್ಹದ್ದಾಸನೂ ಮುಕ್ತಿಗೆ ಸಂದನಲ್ಲವೇ? ಆಗೋ, ಆ ದನಿಯನ್ನು ಆಲಿಸಿ ಎಂದರು , ಅವರು ಆ ದನಿ ಕಿವಿದಾಗುವ ಮೊದಲೇ ಆ ಗುರುಪಾದವನ್ನು ನಂಬಿ ಅದನ್ನು ಹಿಂಬಲಿಸಿದನೆಂಬಂತೆ ಕೂಡಲೇ ಮೂರ್ಛೆಹೋದನು. ಅಂಥ ವ್ಯಾಮೊಹವು ಏನು ತಾನೆ ಮಾಡದು? ಬೇಗನೆ ಮೂರ್ಛೆಯಿಂದೆಚ್ಚತ್ತರೂ ಮೋಹಮೂರ್ಛೆಯಿಂದ ಎಚ್ಚರಾಗದೆ ಕಳವಳಿಸಿದನು; ಏಣಿಯನ್ನೇರಿ ಹೋಗಿ ನೆಲೆಮಾಡಗಳನ್ನು ಸೇರಿ ನೋಡುವ ಹಾಗೆ , ತನ್ನಲ್ಲಿ ತಾನೇ ಮೆರುಪರ್ವತವೇರಿ ಸ್ವರ್ಗವನ್ನು ಸೇರಿ, ಗ್ರೈವೇಯಕಕ್ಕೆ ಹತ್ತಿ, ಅನುತ್ತರೆಗಳಿಗೆ ಹೋಗಿ, ಸರ್ವಾರ್ಥಸಿದ್ದಿಗೆ ಮುಟ್ಟಿ, ಅಲ್ಲಿಂದತ್ತ ಮೋಕ್ಷದ ನೆಲೆಯಲ್ಲಿಯೆ ನನ್ನ ಸದ್ಗುರುಗಳಾನ್ನು ಕಂಡು ಬಲಗೊಳ್ಳುತ್ತೇನೆ ಎಂದು ಉತ್ಸಾಹಿಸಿದಾಗ, ಇದು ನಿನಗೆ ಇನ್ನು ಏಳನೆಯ ಭವಕ್ಕೆ ಆಗುವುದು ಎಂಬ ಆಕಾಶವಚನವೊಂದು ಕೇಳಿಬಂತು. ಅದನ್ನು ಕೇಳಿಯೂ ಅವನ ಉದ್ವೇಗ ವ್ಯಾಮೋಹಗಳು ತಗ್ಗಲಿಲ್ಲ. ತಂದೆ ತಪಸ್ಸಿಗೆ ಹೋದರೆ ನನ್ನ ಮನಸೆಳೆಯುತ್ತಿದ್ದ ಅವನ ದಿವ್ಯವಚನಗಳೆಂಬ ಚಂದನಲೇಪನವೂ ಅವನ ಪಾದಸೇವನೆಯೆಂಬ ಚಂದನಲೇಪನವೂ ನನ್ನ ಒಳಹೊರಗನ್ನು ಸುಡುತ್ತಿದ್ದ ತಪವನ್ನು ಆರಿಸುತ್ತಿತ್ತು. ಈಗ ಇನ್ನು ನನಗೆ ಸಾಯದೆ ಸೈರಿಸಿಕೊಂಡಿರಲು ಬದುಕಿನಲ್ಲಿ ಆಸೆ ಯಾವುದಿದೆ? ಪೂಜ್ಯಾರು ಏಕೆ ಹೀಗೆ ಕ್ರಮತಪ್ಪುತ್ತಾರೆ? ಆ ಪುರುಷಾರ್ಥಸಂಗ್ರಹವು ಪ್ರಜಾಸಂಬಂಧಾವಾದ್ದು ಎಂದು ಭಾವಿಸದೆ, ನಾನು ಎಷ್ಟು ಒಲ್ಲೆನೆಂದು ಒಪ್ಪಿಸಿ ಬೇಡಿಕೊಂಡರೂ ಕೇಳದೆ ನನಗೆ ಸಾಮ್ರಾಜ್ಯವನ್ನು ವಹಿಸಿಕೊಟ್ಟು ಹಾಗೆ, ತನ್ನ ಜಗತ್ರಯಪೂಜ್ಯವಾದ ತಪೋರಾಜ್ಯವನ್ನು ನಾನು ಬಯಸುತ್ತಿರುವುದನ್ನು ನನ್ನ ತಂದೆಯ ನನಗೆ ಕೊಡದೆ ಹೀಗೆ ಹೊರಟುಹೋಗುವುದು ಸರಿಯೇ? ಎಲ್ಲಿ , ಚತುರಂಗಬಲವೆಲ್ಲವನ್ನೂ ಬರಮಾಡು, ಭೇರೀಧ್ವನಿಯಾಗಲಿ ; ಇಂದೇ ಪ್ರಯಣಮಾಡಿ ದೇವಾಚಳಪ್ರಸ್ಥಭೊಮಿಯಲ್ಲಿ ಬೀಡುಬಿಡಿತ್ತೇನೆ–

ಎಂದವನೇ ಆಸ್ಥಾನದಿಂದೆದ್ದು ತಂದೆಯನ್ನೂ ಅರ್ಹಂತನನ್ನೂ ಕಂಡು ಹರಕೆಯನ್ನು ಪಡೆದಲ್ಲದೆ ಆಹಾರವನ್ನು ಸ್ವೀಕರಿಸುವುದಿಲ್ಲ ಎಂದು ಸಂಕಲ್ಪಿಸಿ, ಅಪರಾಜಿತನು ಅಮರಗಿರಿಗೆ ಸೈನ್ಯಸಮೇತನಾಗಿ ಪ್ರಯಣಮಾಡಿದನು.

ಸೈನ್ಯದ ಪದಘಟ್ಟಣೆಯ ಪಾದಧೂಳಿಯು ಕಣ್ಣಲ್ಲಿ ಬಿದ್ದಾಗ ಕಣ್ದೆರೆದು ಬೆಚ್ಚಿ ಬೆಗಡುಗೊಂಡ ಪುರಂದರನು ಇದೇನೆಂದು ಚಿಂತಿಸಿ ನೋಡಿ ವಿಷಯವು ಮನವರಿಕೆಯಾದ  ಮೇಲೆ ನಸುನಕ್ಕು ಕುಬೇರನನ್ನು ಕರಸಿ ಸೂಕ್ತ ಸೂಚನೆಯನ್ನು ನೀಡಿದನು. ಅವನ ಆಶಯದಂತೆ ಇಂದ್ರಜಾಲಿಕನ ಹಾಗೆ ಕುಬೇರನು ವಿಕಳನಾದ ಅಪರಾಜಿತ ರಾಜಶೇಖರನಿಗೆ ಆಕಾಶದಲ್ಲಿ ಸಭಾಸಹಿತನಾದ ಜಿನರಾಜನನ್ನೂ ಮಹರ್ಷಿರಾಜ ಅರ್ಹದ್ದಾಸನನ್ನೂ ' ಮಹಾಮಾಯಾವಿ ಶಂಬರನಂತೆ ಮಾಯಾಪ್ರಭಾವದಿಂದ ಸೃಜಿಸಿ ತೋರಿದನು. ಅಪರಾಜಿತನು ಅದನ್ನು ನೋಡಿ ನಿಜವೆಂದೇ ಭಾವಿಸಿ  ಕೃತಾರ್ಥನದೆನೆಂದು ವಂದಿಸಿದ ಅಲ್ಲಿಂದ ಹಿಂದಿರಿಗಿ ಬಂದು ಪಾರಣೆಯನ್ನು ಮಾಡಿ  ತನ್ನ ಗುರುಗಳ ರೂಪವನ್ನೆ ಕರುವಿಡಿಸುವ ಕಡೆಯಿಸುವ ಕಂಡರಿಸುವ ಉದ್ಯೋಗವೇ ಹವ್ಯಾಸವಾಗಿ ಜಿನನ ಮತ, ಆಕೃತಿ ನುಡಿ, ಅಡಿಗಳು ಇವುಗಳಾಲ್ಲಿಯೇ ತನ್ನ ಅಂತಃಕರಣ ಬಹಿಃಕರಣಗಳು ವ್ಯಾಪೃತವಾಗಿ, ತನ್ನತನವೆಂಬುದು ಜಿನನ ಮನೋರೂಪಗಳಲ್ಲಿ ಕರಗಿಹೋಗಿ  ಸುಖದಿಂದಿರುತ್ತಿದ್ದನು.

ಹೀಗಿರಲು ಫಲ್ಗುನ ನಂದೀಶ್ವರ ಮಹಾಮಹಿಮೆಯ ದಿವಸಗಳು ಬಂದವು. ಅಪೂರ್ವ ಪುರಂದರನೆನಿಸಿದ ಅಪರಾಜಿತನು ಪ್ರೀತಿಮತಿ ಮೊದಲಾದ ಅಂತಃಪುರಸ್ತ್ರೀ ಪರವೃತನಾಗಿ ಅಮರಗಿರಿಗೆ ಹೋಗಿ ಮನೋಹರೋದ್ಯಾನದೊಳಗೆ ತನ್ನ ತಂದೆ ಮಾಡಿಸಿದ ತ್ರಿಭುವನತಿಳಕವೆಂಬ ಹೊನ್ನ ಬಸದಿಯನ್ನು ಇಂದ್ರನು ಮೇರುವನ್ನು ಬಲಗೋಳ್ಳುವಂತೆ ಬಲಗೊಳ್ಳುತ್ತಿರುವಾಗ ಚಾರುರೂಪರಾದ ಚಾರಣರಿಬ್ಬರು ಗಗನಮಾರ್ಗದಿಂದ ಬಂದಿಳಿದರು. ತಮ್ಮ ವಿಯೋಗದಿಂದ ಅರಸನಿಗಾದ ಆಳಲನ್ನು ಆರಿಸುವುದಕ್ಕಾಗಿ ಮೋಕ್ಷದ ನೆಲೆಯಿಂದ ಸಂದ ಅರ್ಹದ್ದಾಸ ಪಿತನೂ ವಿಮಲವಾಹನ ಜಿನನೂ ಕೂಡಿ  ಇಳಿದು ಬಂದರೋ ಎನ್ನುವಂತೆನಭೋಮಾರ್ಗದಿಂದ ಇಳಿದು ಬಂದ ಚಾರಣಯುಗಗಳವನ್ನು ಸ್ವಾಗತಿಸಿ ವಂದಿಸಿ  ಆಸನದಲ್ಲಿ  ಕುಳ್ಳಿರಿಸಿದನು. ಎಲೆ ಮುಚ್ಚಿಹೋದ ಮಲ್ಲಿಗೆ ಹೋವನ್ನು ಅದರ ಕಂಪಿಂದಲೇ ದುಂಬಿಯು ತಿಳಿದುಕೊಳ್ಳುವಂತೆ ಆತನ ಕಣ್ಣುಗಳು

ಮೋಹವಶದಿಂದಾಗಿ ತಿಳಿಯದೆ ಹೋದರೂ ಮನಸ್ಸು ತಪ್ಪದೆ ಆ ಚಾರಣರು ತನಗೆ ಆತ್ಮೀಯರೆಂಬುದನ್ನು ಅರಿಯಿತು. ಕತ್ತಲೆಯಲ್ಲಿ ಕಣ್ಣರಿಯದೆ ಹೋದರೂ ಸ್ಪರ್ಶದಿಂದಲೇ ಇನಿಯರು ಪರಸ್ಪರರನ್ನು ತಿಳಿದುಕೊಳ್ಳುವಂತೆ ಮೋಹವರಿಯಿಸಿದ 'ಮನದ ಬಚ್ಚಬಚಿ್ಯಚಿ್ವು ಬಚಿ್ಯ ಬೆಚಿಗನೆ ನೋಟದೊಳ್ ನಾಟಿಸೆ , ಸ್ವಲ್ಪ ಹೊತ್ತು ಅದೇ ಬೆರೆಗಿನಲ್ಲಿದ್ದು ಹಾಗೆಯೇ ಇರಲು ಸಾಧ್ಯವಾಗದೆ ಅವರಿಗೆ ಕೈಮುಗಿದು ನಿಮ್ಮನ್ನು ಕಂಡಕೂಡಲೇ ನನ್ನ ,ಮನ್ಬಸ್ಸಿಗುಂಟಾದ ಚೌತ್ಸುಕ್ಯವೂ ಆದರವೂ ನಿಮ್ಮನ್ನು ಎಲ್ಲಿಯಾದರೂ ಈ ಮೊದಲು ಕಂಡರೀತಿರಬೇಕೆಂಬ ಭಾವನೆಯನ್ನೇ ನನಗೆ ಉಂಟುಮಾಡುತ್ತಿದೆ; ನಿಮ್ಮನ್ನು ಎಲ್ಲಿ ಕಂಡ ಅಪ್ಪಣೆಕೊಡಬೇಕು – ಎಂದು ಕೋರಿದಾಗ, ಅದನ್ನು ಮನಸ್ಸಿಗೆ ತಂದುಕೊಂಡು ಆ ಮುನಿಗಳಲ್ಲಿ ಮುಖ್ಯರಾದ ಒಬ್ಬರು ವೃತ್ತಾಂತವೊಂದನ್ನು ನಿರೂಪಿಸಲು ಉದ್ಯುಕ್ತರಾದರು : ಪುಷ್ಪರಾರ್ಧದ (ಪುಷ್ಕರವರ ದ್ವೀಪಾರ್ಧದ ) ಮಂದರಶೈಲದ ಪಶ್ಚಿಮದಲ್ಲಿ ವಸುಧಾಸುಂದರಿಯ ಸುದೇಹವೆನ್ನಿಸಿದ ಅಪರವಿದೇಹದಲ್ಲಿ ಸೀತೋದಾ ನದಿಯ ರಮಣೀಯವಾಗಿ ಹಬ್ಬಿ ಹರಿಯುತ್ತಿದೆ. ಆ ತೊರೆಯ ಬಡಗ ದಿಕ್ಕಿನ ತಡಿಯಲ್ಲಿ ಸಿರಿಯೊಲಿದ ಗಂಧಿಲಾವಿಷಯವುಂಟು. ಆ ವಿಷಯವು ವಿಷಯಾಸಕ್ತತೆಯನ್ನುಂಟು ಮಾಡುವಂತೆ ರಮ್ಯಾಕರ್ಷಕವಾಗಿದ್ದು ಜೈನಮತದ ಪ್ರಾಚುರ್ಯವನ್ನು ಸಾರುವಂತಿತ್ತು. ಈ ನಾಡಿನ ನಟ್ಟನಡುವೆ ವಿಜಯಾರ್ಧಪರ್ವತವು ಶೋಭಿಸುತ್ತಿತ್ತು . ಆ ತಾರಾಚಲಪ್ರದೇಶದಲ್ಲಿ ತಟಾಕಗಳು, ಹೊಲಗಳು ವನಗಳು ಅತ್ಯಂತ ರಮಣೀಯವಾಗಿ ಖೇಚರ ಖೇಚರಿಯರ ವಾಸಸ್ಥಾನವೂ ಆಗಿತ್ತು. ಒಂದು ಕಡೆ ಖಚರಯರ ಕಣ್ ನೋಟದ ಮೋಹಕತೆ, ಇನ್ನೊಂದೆಡೆ ಜಿನಪೂಜಾಲೋಕನದ ಆನಂದ – ಇಂಥ ಪುಣ್ಯವನ್ನು ಪಡೆದು ತಾರಾದ್ರಿಯ ಇಕ್ಕೆಲಗಳಲ್ಲಿಯೂ ಎರಡು ವಿದ್ಯಾಧರಶ್ರೇಣಿಗಳು ಇರುತ್ತಿದ್ದವು. ಈ ಎರಡರಲ್ಲಿ ಉತ್ತರಶ್ರೇಣಿಗೆ ಅಲಂಕಾರವಾಗಿ ಸೂರ್ಯಪ್ರಭ ಎಂಬ ಒಂದು ಹೊಳಲುಂಟು. ಅದನ್ನು ಬಳಸಿದ್ದ ಚಿನ್ನದ ಕೋಟೆ ಸೂರ್ಯಬಿಂಬದ ಪರಿವೇಷವೆಂಬಂತೆ ಶೋಭಾಯಮನವಾಗಿತ್ತು. ಕೋಟೆಯೊಳಗೆ ರಜತಾಚಳವಿಕ್ಕದಾ ತತ್ತಿಗಳೆಂಬಂತಿರುವ ಸೌಧಸದನಗಳು. ಈ ಹೊಳಲನ್ನಾಳುವ ದೊರೆ ಸೂರ್ಯಪ್ರಭನು ಅತ್ಯಂತ ವಿಖ್ಯಾತನು. ಅವನ ಶಕ್ತಿ ಸಾಮರ್ಥ್ಯಗಳ ಮುಂದೆ ಉಳಿದ ಖೇಚರರ, ಖೇಚರೇಶ್ವರರ ಆಟಗಳೇನೂ ನಡೆಯುವ ಹಾಗಿರಲಿಲ್ಲ . ಅವರೆಲ್ಲ ಅಡಗಿ ಉಡುಗಿ ಇರಬೇಕಾಗಿತ್ತು.

ಸೂರ್ಯಪ್ರಭನಿಗೆ ಧಾರಿಣಿ ಎಂಬವಳು ರಾಣಿ. ಇವರಿಗೆ ಮಗ ಚಿಂತಾಗತಿ. ಈತ ಗುಣಸಂಪನ್ನ, ಸಕಲ ವಿದ್ಯಾಸಂಪನ್ನ, ತೇಜಶ್ಶಾಲಿ, ಭುಜಬಲಿ. ಈತನ ತೇಜಸ್ಸಿಗೆ ಸೂರ್ಯ ಚಂದ್ರರೇ ಅನುಚರರಾದರು. ಅಮರರಿಗೂ ನಾಗರಿಗೂ ನರರಿಗೂ ಸಂತಸವನ್ನೂ ಕೀರ್ತಿಯನ್ನೂ ತೃಪ್ತಿಯನ್ನೂ ಕೊಡುವಂಥ ಚಿಂತಾಗತಿಯೇ ಜಗತ್ರಯ ಚಿಂತಾಮಣಿಯೆನ್ನದೆ ಬೇರೇನು ಹೇಳಲಾದೀತು? ಆತನ ಅಪೂರ್ವ ರೂಪಲಾವಣ್ಯಕಾಂತಿಯೂ ನವಾರೂಢಯೌವನವೂ ಮುಗ್ಧ ಖಚರಿಯರ ಕಣ್ಮನಗಳನ್ನು ಸೆಳೆಯುತ್ತಿದ್ದವು. ಒಮ್ಮೆ ವಿನೋದವಿಲಾಸಿಯಗಿ ಖೇಚರೀವೃಂದಪರಿವೃತನಾಗಿ ನಭೋರಂಗದಲ್ಲಿ ಓಲಗಮನ್ನು ನಡಸಿದರೆ , ಮತ್ತೊಮ್ಮೆ ಇಂದ್ರನಾಗಿ ಆನಂದದಿಂದ ಜಿನನ ಅಷ್ಟಾಹ್ನಿಕಾರ್ಚಾ ಮಹೋತ್ಸವವನ್ನು ಆತನು ನಡಸುತ್ತಾನೆ.

ತೃತೀಯಾಶ್ವಾಸ

ಚಿಂತಾಗತಿ ತನ್ನ ಅಪಾರಮಹಿಮೆಯಿಂದಲೂ ವಿದ್ಯಾಪ್ರಭಾವದಿಂದಲೂ ತಾನಿದ್ದ ತಾರಾದ್ರಿಯನ್ನು ಕಾಂಚನಾಚಲವನ್ನಾಗಿ ಮಾಡಿದ ; ಸಹಜಕಾಂಚನಾಲವೂ ಆತನ ಕೀರ್ತ ಕೌಮುದಿ ವ್ಯಾಪಿಸಿ ತಾರಾದ್ರಿಯಾಯಿತು. ರಾಗಕ್ಕೆ ಬೋಗವೂ ಉಪಭೋಗವೂ ಒಡಹುಟ್ಟುವ ಹಾಗೆ ಪುಣ್ಯಪ್ರಭಾವದಿಂದಾಗಿ ಚಿಂತಾಗತಿಗೆ ಮನೋಗತಿ, ಚಪಳಗತಿ ಎಂಬ ಇಬ್ಬರು ತಮ್ಮಂದಿರು ಹುಟ್ಟಿದರು. ಅತಿಶಯ ಸಂಪ್ತ್ತನ್ನು ಒಬ್ಬನೇ ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಾಗದೆ ತನೇ ಬಹುರೂಪಿಣಿವಿದ್ಯೆಯಿಂದ ಮತ್ತೆರಡು ರೂಪಾದಂತೆ ಇಬ್ಬರು ತಮ್ಮಂದಿರನ್ನು ಕೂಡಿಕೊಂಡು ಚಿಂತಾಗತಿಯ ಖೇಚರರಾಜ್ಯವನ್ನು ಅನುಭವಿಸುತ್ತಿದ್ದನು.

ಅದೇ ಉತ್ತರಶ್ರೇಣಿಯ ಅರಿಂದಮಪುರವನ್ನು ಅರಿಂಜಯನೆಂಬ ಖಚರಪತಿ ಆಳುತ್ತಿದನು. ಆತನ ಸತಿ ಅಜಿತಸೇನಾದೇವಿ . ಇವರ ಮಗಳ ವಿಳಾಸವತಿ. ಈಕೆ ಅತಿಶಯ ರೂಪಲಾವಣ್ಯವತಿ, ವಿದ್ಯಾವಿಭವಸಂಪನ್ನೆ; ಮಿಗಿಲಾಗಿ ಗಗನಗಮಾನವಿದ್ಯೆಯಲ್ಲಿ ಅತಿಕುಶಲೆ; ಇದರಲ್ಲಿ ಆ ಆಕಾಶಪಥಗಾಮಿಯಾದ ಸೂರ್ಯನನ್ನೇ ಹುರುಡಿಸುವ ಹೂಜೆಗಾರ್ತಿ ! ಅಂದಮೆಲೆ ಖಚರರು ಅವಳಿಗೆ ಯಾವ ಲೆಕ್ಕ ! ಗಗನಗತಿಯಲ್ಲಿ ತನಗೆ ಮೇಲಾದವರು ಯಾರೂ ಇಲ್ಲ ಎಂಬುದೊಂದೇ ಗರ್ವಬಲ್ಲ,

ವಿದ್ಯೆ ಪ್ರಾಯ ಕುಲ ಚಲ ಕಲಾಪ್ರೌಢಿಮೆ ಸರಿ ರೂಪ ಮೊದಲದ ಗರ್ವಗಳೂ ಆ ವಿದ್ಯಾಧರಿಯಲ್ಲಿ ಮನೆಮಾಡಿದ್ದವು. ಚೆಲುವಿಗೆ ಮರುಳಾಗಿ ತನ್ನನ್ನ ವರಿಸಲು ಬಂದ ಖೇಚರರನ್ನು ಗಗನಮನಕೌಶಲದಲ್ಲಿ ಕೀಳ್ಮಾಡಿ ಅಪಹಸ್ಯ ಮಾಡುವುದೊಂದು ವಿನೋದವುಷಯ, ಅವಳಿಗೆ! ಅಮರಗಿರಿಯ ಶಿಖರದಿಂದ ಪುಷ್ಪಮಾಲೆಯನ್ನು ಕೆಳಕ್ಕೆ ಹಾಕಿ , ಆ ಶೈಲವನ್ನು ಮೂರು ಬಾರಿ ಪ್ರದಕ್ಷಣೆ ಬಂದು ಹಾರವು ನೆಲಮುಟ್ಟ್ಟುವುದರೋಳಗೆ ಅದನ್ನು ಹಿಡಿದುಬಿಡುತ್ತಿದ್ದಳು ಎಂದರೆ ಆ ವೇಗ ಅನೂನ್ಯವಾದುದು.

ಹೀಗೆ ಖಚರಲೋಕಕೋಲಾಹಲವಾದ ವಿಳಾಸವತಿಯ ಗಗನಗಮನವೇಗಾತಿಶಯವನ್ನೂ ಅಭಿನವಯೌವನಾತಿಶಯವನ್ನೂ ಎಂಥವರನ್ನೂ ಮೆಚ್ಚಿದ ರೂಪತಿಶಯವನ್ನೂ ಆಕೆಯ ತಂದೆ ಅರಿಂಜಯನು ಕಂಡು ಕುಂದಣಿಸದ ರತ್ನವೂ ಮದುವೆಮಾಡಿಕೊಡದ ಕನ್ಯೆಯೂ ಹಾಗೆಯೇ ಇದ್ದೇನು ಫಲ? ನಾಲಗೆಗಲ್ಲದ ಹಣ್ಣ ಸವಿಯಿದೇನು, ನಲ್ಲನಿಗಲ್ಲದ ಹೆಣ್ಣು ರೂಪಿಂದೇನು? ಸಹಜಸೌಂದರ್ಯದಿಂದ ಕೂಡಿದ್ದರೂ ವಸಂತಮಾಳಿ ನೆರೆಯದ ಚೂತಲತೆಯೂ , ಕಾಂತನಲ್ಲಿ ನೆರೆಯದ ನೀರೆಯ ತನುಲತೆಯೂ ಹೇಗೆ ತಾನೆ ಶೋಭಿಸಬಲ್ಲವು? ಎಂದು ಆಲೋಚಿಸಿ ಅರಿಂಜಯನು ಸ್ವಯಂವರವನ್ನು ಏರ್ಪಡಿಸಲು ಮನಸ್ಸುಮಾಡಿ ವುಜಯಾರ್ಧ ಪವರ್ತಾಗ್ರವನದೊಳಗೆ ಜಸಿರುವಾಣಿಯ ಹೊಸದಾದ ಸ್ವಯಂವರಮಂಟಪವನ್ನೂ ವಿವಾಹವೇದಿಕೆಯನ್ನೂ ಮಾಡಿಸಿದನು 'ಆಸಕ್ತರಾದ ಖಚರಕುಮಾರರೆಲ್ಲ ವಿಳಾಸವತಿಯ ಸ್ವಯಂವರಕ್ಕೆ ಹೂವಿನ ಮಾಲೆಯನ್ನು ಹಿಡಿದು ಶೀಘ್ರವಾಗು ಬರಲಿ ಎಂದು ಉಭಯ ಶ್ರೇಣಿಯಲ್ಲುಯೂ ಘೋಷಣೆಹೊರಡಿಸಿದನು. ಛಲಗಾರ್ತಿಯೂ ವಿಖ್ಯಾತೆಯೂ ಆದ ವಿದ್ಯಾಧರಿಯ ಮನಸ್ಸನ್ನು ಗೆಲ್ಲಲೆಂದು ಒಂಟೊಂಟಿಯಗಿ ಚಂದ್ರನಾಗಲಿ ಸ್ಮರನಾಗಲಿ ಚೈತ್ರನಗಲಿ ಬಂದರೇನೂ ಆಗದೆ, ಅವರೆಲ್ಲ ಸೈನ್ಯಸಮೇತರಾಗಿ ಬಂದರೋ ಎನ್ನುವಂತೆ ಸಾಲಂಕೃತರೂ ಮಾಲಾಹಸ್ತರೂ ಆದ ವಿದ್ಯಧರರ ದೊಡ್ಡಗುಂಪು ಧಾವಿಸಿ ಬಂದಿತು. ಅಲ್ಲಿಗೆ ಚಿಂತಾಗತಿಯೂ ತನ್ನ ಇಬ್ಬರು ತಮ್ಮಂದಿರೊಡಗೂಡಿ ಬಂದನು.

ವಿದ್ಯಾಧರಿ ವಿಳಾಸವತಿಯ ನೆರೆದ ವಿದ್ಯಾಧರರಿಗೆ ಬಹುರೂಪಿಣೀವಿದ್ಯೆಯನ್ನು ಮೆರೆದಂತೆ ಚೆಲುವೆಯರಾದ ಸಾವಿರ ಸಖಿಯರು ಸುತ್ತುವರಿದು ಬರುತ್ತಿರಲು ಆಕೆ 'ಕಳಕ್ಕೆ ವರ್ಷ ದರ್ಪದ ಕುಸುಮಾಸ್ತ್ರನಂಕಮೆನೆ ಸೊಬಗನ್ನು ಸೂಸುತ್ತ ಸ್ವಯಂವರಮಂಟಪಕ್ಕೆ ಬಂದಳು. ಹಾಗೆ ಬಂದು ಅರ್ಚಿಸಿದ್ದ ಗತಿಯುದ್ದ ಶಿಲಾಪಟ್ಟವನ್ನು ಮೆಟ್ಟಿ ಮುಟ್ಟವಾಗಿ ಹೂಮಾಲೆಯನ್ನು ಹಿಡಿದು, ಆಲೀಢಸ್ಥಾನವನ್ನು ಕೈಕೊಂಡು, ಸ್ಪರ್ಧೆಗೆ ಸಿದ್ಧಳಾದಳು. ಆಕೆಯ ಕೆಳಾದಿ ಚಂದ್ರಲೇಖೆ ಖೇಚರಕುಮಾರರನ್ನು ಕುರಿತು ಹೀಗೆ ಹೇಳಿದಳು. " ಈ ಕುಮರಿಯೊಡನೆ ವಿಜಯಾರ್ಧಪರ್ವತದಿಂದ ಮಂದರಪಾರ್ವತಕ್ಕೆ ಹಾರಿಹೋಗಿ, ಅಲ್ಲಿಯ ಪಾಂಡುಕವನವನ್ನು ಬಲಗೊಂಡು ಅದರಲ್ಲಿಯ ಜಿನಪ್ರತಿಮೆಯ ಪಾದಪದ್ಮಗಳಾನ್ನು ಎರಡೂ ಕಯ್ಯಲ್ಲಿ ಹಿಡಿದಿದ್ದ ಪುಷ್ಪಹಾರದಿಂದ ಅರ್ಚಿಸಿ, ಆ ಮೊದಲೆ ಅರ್ಚಿಸಿದ್ದ ಮಂದಾರಮಾಲೆಯನ್ನು ತಗೆದುಕೊಂಡು, ಈಕೆಯನ್ನು ಮೀರಿಸಿ ಇವಳಿಗಿಂತ ಮೊದಲು ಈಯೆಡೆಗೆ ಬಂದು ತಲುಪುವ ಮಹಾಭಾಗನು ಈಕೆಯನ್ನು ವಿವಾಹವಾಗಲು ಅರ್ಹನಾಗುತ್ತಾನೆ. ಈ ಮಾತು ಹೇಳಿ ಮುಗಿಸುತ್ತಿದ್ದಂತೆ ನಾನು ತಾನೆಂದು ಹಲವರು ವಿದ್ಯಾಧರರು ಸ್ಪರ್ಧೆಗೆ ಸಿದ್ಧಾರಾಗಿ ಆಗ ಚಿ,ಂತಾಗತಿ ಆ ಎಲ್ಲರನ್ನು ಸ್ವಲ್ಪಕಾಲ ಸುಮ್ಮನಿರುವಂತೆ ತಿಳಿಸಿ, ಗತಿಸ್ಪರ್ಧೆಯಲ್ಲಿ ತನ್ನ ತಮ್ಮಂದಿರು ಭಾಗವಹಿಸಿ ಪಡೆದ ಪರಿಭವವನ್ನು ಪರಿಭಾವಿಸಿ ಸ್ವತಃ ಗತ್ಜಿಯುದ್ದ ಶಿಲಾತಲದಲ್ಲಿ ಪ್ರತ್ಯಾಲೀಢಸ್ಥಾನವನ್ನು ಹಿಡಿದು ಸ್ಪರ್ಧೆಗೆ ನಿಂತನು. ಆ ನಿಂತ ನಿಲವಿಗೆ ಚಲಿವಿಗೆ ಖೇಚರಿಯ ಕಣ್ಮನಗಳು ಸೋತವು ನಡೆಯಲಿರುವ ಗತಿಸ್ಪರ್ಧೆಯಲ್ಲಿ ಆಕೆಯ ಸೋಲಿಗೆ ಅದು ಮುನ್ಸೂಚನೆಯೆಂಬಂತಾಯಿತು . ಆ ವೀಕ್ಷಣವಿವೇಕವಿದ್ಯಾಧರಿಯ ಕಣ್ಣುಗಳು ಆ ವಿವೇಕವಿದ್ಯಾಧರನನ್ನು ಕಂಡಮೇಲೆ ಅನ್ಯರನ್ನು ಕಾಣಲು ಬಯಸಲಿಲ್ಲ ಉಭಯರೂ ಗತಿಯುದ್ದಕ್ಕೆ ಸನ್ನದ್ಧರಾಗಿ ಸ್ಪರ್ಧಾಭೂಮಿಕೆಯಾನ್ನೇರಿ ನಿಲ್ಲುತ್ತಲೂ ಉಭಯಪಕ್ಷಗಳಲ್ಲಿಯೂ ರನವಾದ್ಯಗಳು ಧ್ವನಿಸಿದವು. ಖೇಚರಖೇಚರಿಯರು ಕೋಲಾಹಲಿಸಿದರು. ವಿಳಾಸವತಿಯ ಮನದೊಳ್ಮಾಚ್ಚರಿಸಿ ಪಾಱುವಂತೆ ನುಸುಳಂ ನೊಪ್ಪುಮನಪ್ಪುಕೆಯ್ದು ಮಿಂಚಿನ ಬೊಂಬೆಯನ್ನುವಂತೆ ಗಿರಿಶಿಖರದಿಂದ ಹಾರಿದಳು. ಆ ಓಟದ ರಭಸಕ್ಕೆ ಮುಗಿಲೊಡ್ಡು ಚೆದುರಿತು. ಚಿಂತಾಗತಿಯೂ ತನ್ನ ಹೆಸರು ಅನ್ವರ್ಥವಾಗುವಂತೆ ಆಕೆಯ ಹಿಂದೆಯೆ ಹಾರಿಹೋಗಿ ಬೆರಳ ಚಿಟಿಕೆಯ ಹೊತ್ತಿನೊಳಗೆ

ಮಂದರಪರ್ವತವನ್ನು ಸೇರಿ , ಪಾಂಡುಕ ಶಿಲಾತಲವನ್ನು ಮೂರು ಬಾರಿ ಬಲಗೊಂಡು ಅಲ್ಲಿಯ ಜಿನಪ್ರತಿಮೆಯ ಪಾದಗಳಿಗೆ ಕಯ್ಯಲ್ಲಿದ್ದ ಹೂಹಾರವನ್ನೇರಿಸಿ , ನಮಸ್ಕರಿಸಿ ಸ್ತುತಿಸಿ ಪಂಚಗುರುಭಕ್ತಿ ಪೂರ್ವಕವಾಗಿ ಸಾವಕಶವಾಗಿ ದೇವರನ್ನು ಸಂದರ್ಶಿಸಿ , ದೇವತೆಗಳು ಅರ್ಹಂತನಿಗೆ ವಿಪುಲವಾಗಿ ಅರ್ಚಿಸಿದ್ದು ದಟ್ಟವಾಗಿ ಒಟ್ಟೆಸಿದ್ದ ಮಂದಾರಮಾಲೆಯನ್ನೂ ಚಂದನಕರ್ದವವನ್ನೂ ಕಳಮಕ್ಷತೆಗಳಾನ್ನೂ ತಗೆದುಕೊಡು ತಿಲಕವಿಕ್ಕಿಕೊಂಡು, ತನ್ನ ಗೆಲವಿಗೆ ಸೇಸಗೊಳ್ಳವಂತೆ ಸಿದ್ದಾಸೇಸೆಯನ್ನೂ ಕೊಂಡು , ಹರ್ಷಿಸಿ ಪುಲಕಿತ, ಬಳಿಕ ಸಹಜಚೈತ್ಯಾಲಯಗಳನ್ನೆಲ್ಲ ವಂದಿಸಿ ದೇವಗಿರಿವಿಜಯಾರ್ಧಪರ್ವತದತ್ತ ಹಿಂದಿರುಗಿದನು.

ಆಗ ಆತನು ತನಲ್ಲಿ ತಾನೆ ಹೀಗೆಂದು ಕೊಂಡನು. ಅಮೃತವನ್ನು ಔಷಧವಾಗಿ ಹೇಳಿದಂತಾಯಿತು ! ಹೂವಿನ ಮೇಲೆ ದುಂಬಿಗೆ ದಾಳಿಯಿಡಲು ಹೇಳಿದಂತಾಯಿತು ! ಇಲ್ಲಿಯ ವರೆಗೆ ನನ್ನ ಹುರುಳುಗೆಟ್ಟು ಇದ್ದ ದುರಾಗ್ರಹ ಈಗ ದುರಿತಹರವಾಯಿತು. ಬಳ್ಳಿಯ ಎಷ್ಟು ಗಟ್ಟಿಯಾದುದಾಗಿದ್ದರೂ ಮರಕ್ಕಿಂತ ಗಟ್ಟಿಯದುದಲ್ಲ. ಹೂಮಾಲೆಗೂ ಪಾಶಕ್ಕೂ ಅಜಗಜಾಂತರ! (ಹಾಗೆಯೇ ತನಗೂ ವಿಳಾಸವತಿಗೂ ಸಮಸಮವಾಗಿ ಹುರುಡಿಸುವ ಸರಿಕತನವಿಲ್ಲದಾಗ ಬಹುಬಲನೂ ಕುಶಲಿಯೂ ಆದ ತಾನು ಅಲ್ಪಬಲಳೂ ಸಾಮಾನ್ಯ ಕುಶಲಿಯೂ ಆದ ವಿಳಾಸವತಿಯೊಂದಿಗೆ ಸ್ಪರ್ದಿಸಿ ಗೆಲ್ಲುವ ಛಲವೇಕೆ ಗೆದ್ದೆನೆಂಬ ಹೆಮ್ಮೆಯೇಕೆ? –ಎಂದು ಆತನ ಎಣಿಕೆ "ಚಪಲಪ್ರಕೃತಿಯುಳ್ಳ ಹೆಂಗಸರಿಗೆ ಎಲ್ಲಿಯಾದರೂ ಒಂದು ರವೆಯಾಷ್ಟಾದರೂ ಗುಣವಿದ್ದರೆ ಸಾಕು, ಅದನ್ನು ದೊಡ್ಡದು ಮಾಡಿಕೊಂಡು , ಕೊಂಡು ಕೊನೆದು ಕೊಣಕಿಟ್ಟು ಕೋಣನನ್ನೇರಿದ ಭಗವತಿಯಂತೆ ಬಿರ್ರೆಂದು ಬೀಗಿ ಅದನ್ನೇ ಮರೆಯತ್ತಿರುತ್ತಾರೆ . ಹೀಗೆ ಯೋಚಿಸುತ್ತ ನಸುನಗುತ್ತ, ಮೆಲ್ಲಮೆಲ್ಲನೆ ಖಚರಗಿರಿಗೆ ಬಂದು ಗತಿಯುದ್ಧಶಿಲಾತಲವನ್ನು ತಾನೇ ಮೊದಲು ಏರಿದನು. ದೇವತೆಗಳು ಪುಷ್ಪವೃಷ್ಟಿಮಾಡಿದರು ; ದೇವದುಂದುಭಿಯು ಮೊಳಗಿತು. ಆ ವಿವೇಕವಿದ್ಯಾಧರನ ಗಱುವೇಗವನ್ನು ಖಚರರೆಲ್ಲ ಹೊಗಳಿದರು. ವ್ಯೋಮಯಾನ್ನೋನ್ನತಿವಿತರಣವಿದ್ಯಾಧರನಿಗೆ ಈ ಪುಣ್ಯಪ್ರಾಪ್ತಿ ಅಸಾಧ್ಯವಾದುದೇನೂ ಆಗಿರಲಿಲ್ಲ ಎಂದು ಮೊದಲಾಗಿ ದೇವತೆಗಳು ಹೊಗಳುತ್ತಿರಲು, ಅಷ್ಟರಲ್ಲಿ ಅರ್ಧದಾರಿಯಲ್ಲಿಯೇ ವಿಳಾಸವತಿಯು ಹಿಂತಿರುಗಿ ಬಂದುಬಿಟ್ಟಳು. ಆಕೆಯ ಹೃದಯ

ಚಿಂತಾಗತಿಗೆ ಸೂರೆಹೋಗಿತ್ತು. ಆಕೆಗೆ ಒಂದು ಕಡೆ ವ್ಯೋಮಪ್ರಯಾಣದ ಕ್ಲೇಶ ಇನ್ನೊಂದು ಕಡೆ ಪ್ರಿಯಸಮಾಗಮದ ಹರ್ಷ . ಈ ಮನಃಸ್ಥಿತಿಯಲ್ಲಿ ಆಕೆ ಚಿಂತಾಗತಿಗೆ ಪೂರ್ತಿಯಾಗಿ ಮನಸೋತು ಜಿನಪೂಜೆಗೆಂದು ಹಿಡಿದು ಹೋದ ಹೂಮಾಲೆಯನ್ನು 'ಇದಕ್ಕೆ ಮತ್ತಾವನೂ ಯೋಗ್ಯನಲ್ಲ . ಭಾವಿಜಿನನಾದ ನೀನೇ ಯೋಗ್ಯನೆಂಬಂತೆ ಚಿಂತಾಗತಿಗೆ ಅಲಂಕರಿಸಲು ಮೇಲೆತ್ತಿದಳು. ಆದರೆ ಚಿತಾಗತಿಯ ಹೂವನ್ನೇ ಕೊರಳಿಗೆ ಹಾಕುತ್ತಿರುವಳೆಂಬಂತೆ ಹೆದರಿ ಹಾರಿ ಹಿಮ್ಮೆಟ್ಟಿದನು. ಅದನ್ನು ಕಂಡಾಗ ಖೇಚರಿಗೆ ಸ್ವಲ್ಪ ಕೋಪವೇ ಬಂದಿತು. ಅವಳ ನಸುಮುನಿದ ಕಡೆಗಣ್ಣ ನೋಟವೂ ಅವನ ವಜ್ರನಿಷ್ಠುರವಾದ ಮನಸ್ಸನ್ನು ಚಲಿಸಲಾರದಾತು. ಆಕೆಯ ನೋಟಕ್ಕೆ ನಸುನಗುತ್ತ ಆತನು "ಈ ಗೆಲವು ನನ್ನ ತಮ್ಮಂದಿರ ಸೋಲಲ್ಲದೆ ನನ್ನ ಗೆಲವಲ್ಲ ; ಈ ಇಬ್ಬರಲ್ಲಿ ನಿನಗೆ ಇಷ್ಟ್ರವಾಗುವ ಒಬ್ಬನಿಗೆ ಮಾಲೆಯನ್ನು ಹಾಕು– ಎಂದನು. ಇದನ್ನು ಕೇಳಿ ನಾಚಿದ ವಿಳಾಸವತಿಯ " ಕಮಲಿನಿಯು ಎಷ್ಟು ಅರಳಿದರೆ ತಾನೆ ಏನು, ಸೂರ್ಯನು ಆಕೆಯ ಬಳಿಗೆ ಬಾರದೆ ಹೋದನು. ಹಾಗೆಯೇ ನನಗೂ ನೀನು ದೂರಪ್ರಿಯನಾದೆ. ನನ್ನ ಬದುಕು ವ್ಯರ್ಥವಾಯಿತು ಎಂದು ನಿಟ್ಟಿಸಿರಬಿಟ್ಟಳು. "ನಿನ್ನನ್ನು ನೋಡಿ ಒಲಿದ ಮೇಲೆ ನಿನಗಿಂತ ಉತ್ತಮನಾದವನನ್ನು ಮದುವೆಯಗಲು ನಾನು ಒಪ್ಪಿದರೆ ಒಲುಮೆಯೇಂಬುದು ಸುಳ್ಳಾದೀತು. ನಿನ್ನ ಮೇಲೆ ಕೋಪಿಸಿ ತಾನೆ ಏನು? ಹಸೆಯ ಮೇಲೆ ಹಾವು ಕಚ್ಚಿತು ಎಂಬಂತೆ ನಿನ್ನಂತಹ ಪುರುಷನನ್ನು ದೊರಕಿಸಿಕೊಟ್ಟು, ಅನಂತರ ವಂಚಿಸಿದ ದುರ್ವಿದಗ್ಧನಾದ ವಿಧಿಯ ಮೇಲೆ ನಾನು ಕೋಪಿಸಬೇಕು; ಅರ್ಹದ್ದೇವನ ಒಂದು ಪಾದಕ್ಕೆ ಹೂವಿಟ್ಟು ಇನ್ನೊಂದಲ್ಲೆ ಇಡುವುದು ಮರೆತಿರಬೇಕು, ನಾನು.

ಹೀಗೆ ಹೇಳಿದವಳು ಅದೇ ನಿರ್ವೇಗಕ್ಕೆ ಕಾರಣವಾಗಿ , ಆಕೆ ವೈರಾಗ್ಯಪರೆಯಾಗಿ, ಮೊದಲು ತನ್ನ ಮದುವೆಗೆಂದು ನಿರ್ಮಿಸಿದ ಹೂವಿನ ಹಂದರದಲ್ಲಿಯೇ ತಪಸ್ಸೆಂಬ ಮದುವಣಿಗನೊಂದಿಗೆ ಮದುವೆಯಾಗಲು ಬಗೆದು ಹಾಸಿದ ಹಸೆಯ ಮೇಲೆ ನಡುಕಟ್ಟು ಬಿಗಿದು ಕುಳಿತು ಕಯ್ಯಿಕ್ಕಿಕೊಂಡು, ಕಯಕ್ಲೇಶಕರವಾದ ಲೋಚುಮಾಡಿಕೊಂಡು ಒಡನೆಯ ಸಾವಿರ ಸಖಿಯರೊಂದಿಗೆ ತಪಸ್ಸಿಗೆ ಕುಳಿತಳು. ತನ್ನ ರೂಪಲಾವಣ್ಯಗಳಿಗೆ ಮನಸೋಲದಿದ್ದ ಚಿಂತಾಗತಿಯನ್ನು ತಪಸ್ಸು ವೈರಾಗ್ಯ ಇವುಗಳಿಗೆ ಮನಸೋಲುವಂತೆ ಮಾಡಿದಳು. ಆ ಗುಣವತಿಯ ತಪಸ್ಸು ತನ್ನ ನಿರ್ವೇಗಕ್ಕೆ ನಿಮಿತ್ತವಾಗಲು

ನಿಶ್ಚಿಂತೆಯಿಂದ ಚಿಂತಾಗತಿಯು ತನ್ನ ತಮ್ಮಂದಿರೊಂದಿಗೆ ಭೋಗವನ್ನು ಬಿಟ್ಟು ತಾನೂ ದೀಕ್ಷೆಯನ್ನು ಕೈಕೊಂಡನು. ಚಿತಾಗತಿಯ ಒಲ್ಲದಿರಲು ವಿಳಾಸವತಿಯು ತಪಸ್ಸಿಗೆ ನಿಂತ ಹಗೆಯೇ ಅವನೂ ಅವನ ತಮ್ಮಂದಿರೂ ದೂರೀಕರಿಸಿದ ರಾಜಲಕ್ಷ್ಮಿ ಸಹ ಅವನಿದ್ದ ತಪೋವನಕ್ಕೆ ಬಂದು ವೈರಾಗ್ಯಭಾವದಿಂದ ಅಸಿಧಾರಾವ್ರತವನ್ನು ಆಚರಿಸಲು ತಾನೂ ಕ್ಷಮಾರೂಪವನ್ನು ತಳೆದಳು ಹುರುಡಿನಲ್ಲಿ ಪಾಂಡಿತ್ಯವನ್ನು ಹೆಂಗಸರಿಗೆ ಕಲಿಸಬೇಕೆ? ಆ ಚಿಂತಾಗತಿಯೂ ಸೋದರರೂ ನಿಜಾಯುರವಸ್ನದಲ್ಲಿ ಮಹೇಂದ್ರಕಲ್ಪದಲ್ಲಿ ಸಾಮಾನಿಕದೇವರಾದರು.

ಚಾರಣರಲ್ಲಿ ಮುಖ್ಯರಾದ ಮುನಿಗಳು ಅಪರಾಜಿತನಿಗೆ  ಇಲ್ಲಿಯ ವರೆಗೆ ನಿರೂಪಿಸುತ್ತಿದ್ದ ಋಣಾನುಬಂಧಸಂಬಂಧಿಯಾದ ಕಥನವನ್ನು ಪೂರೈಸಿ ಹೀಗೆ ಹೇಳಿದರು :

“ಎಲೈ ಅಪರಾಜಿತನೇ, ನೀನೇ ಆ ಚಿಂತಗತಿ, ಈಗ ಚಾರಣೈಲಕನಗಿರುವ ಈತನೇ ಆ ಅಂದಿನ ಚಪಳಗತಿ ; ನಾನು ಆಗಿನ ಮನೋಗತಿ. ಆ ಮಹೇಂದ್ರಕಲ್ಪದಲ್ಲಿ ಸಪ್ತ ಸಾಗರೋಪಮಯುಷ್ಯಸ್ಥಿತಿಯು ಸಂದಮೇಲೆ ಭೂಮಿಗೆ ಬಂದು ಗಂಧಿಳವಿಷಯದ ಸಿಂಹಪುರದಲ್ಲಿ ನೀನು ಅಪರಾಜಿತನಾದೆ. ( ಮಿದಲು ಚಿಂತಾಗತಿ, ಈಗ ಅಪರಾಜಿತ) ನಾವಿಬ್ಬರೂ ಅದಕ್ಕೂ ಮೊದಲೇ ಬಂದು ಜಂನೂದ್ವೀಪದ ಪೂರ್ವವಿದೇಹದ ಪುಷ್ಪಳಾವತೀವಿಷಯದ ವಿಜಯಾರ್ಧಪರ್ವದ ಉತ್ತರಶ್ರೇಣಿಯ ಗಗನವಲ್ಲಭ ನಗರವನ್ನು ಆಳುವ ಗಗನ ಚಂದ್ರನೆಂಬ ಖಚರೇಂದ್ರನಿಗೂ ಗಗನಸೈಂದರಿಯೆಂಬ ಅವನ ಪತ್ನಿಗೂ ಅಮಿತಿಗತಿ ಮತ್ತು ಅಮಿತತೇಜ ಎಂಬ ಪುತ್ರರಾಗಿ ಹುಟ್ಟಿದೆವು. ಪುಂಡರೀಕಿಣಿಯಲ್ಲಿ ಸ್ವಯಂಪ್ರಭಜಿನ ಪ್ರಭುವನ್ನು ಪೂಜಿಸಲು ಹೋಗುದ್ದಾಗ ನಿನ್ನ ಭವತ್ರಯಗಳಾನ್ನು ಆ ಜಿನನಾಥನ್ಮ ಪಕ್ಕದಲ್ಲಿದ್ದು ಕೇಳಿ ಸರ್ವಸಂಗಪರಿತ್ಯಕ್ತರಾಗಿ, ಸಂಯಮಿಗಳಾಗಿ, ಸದಾಚರಣೆಯಿಂದ ನಡೆದು ಗಗನಚಾರಣಋದ್ಧಿಸಂಪನ್ನರಾಗಿ ಈಗ ನಿನ್ನನ್ನು ನೋಡುವುದಕ್ಕೆಂದು ಬಂದೆವು. ಇಷ್ಟಲ್ಲದೆ ನಮ್ಮ ಅನ್ಯೋನ್ಯ ಪ್ರೀತಿನಿಮಿತ್ತವಾದ ಪೂರ್ವಭವಪ್ರಪಂಚವನ್ನು ಹೇಳುತ್ತೇನೆ ಕೇಳು:

ಸಮೃದ್ಧವಾದ ಮಗಧಮಂಡಲ್ದಲ್ಲಿ ಒಂದು ಘೋರಾರಣ್ಯ ಅದರಲ್ಲಿ ದುಷ್ಟದಾನವಶಿಬಿರವಿದ್ದಂತೆ ಒಂದು ಶಬರಶಿಬಿರವಿತ್ತು. ಆ ಶಬರಶಿಬಿರದ ಬೇಡವಳ್ಳಿಯ ಒಡೆಯ ವಿಂಧ್ಯಕನೆಂಬವನು . ಆತನಿಗೆ

ಬೇಟೆಯಲ್ಲಿ ವಿಶೇಷ ಆಸಕ್ತಿ ; ಅದರಲ್ಲಿ ಅವನ ಕೌಶಲವೂ ಅದ್ಭುತ ಆತನ ಮನಃಪ್ರೀಯ ವಾಗುರೆಯೆಂಬವಳು. ಈಕೆ ತುಂಬ ಚಲುವೆ. ವಿಂಧ್ಯಕನೂ ಅವಳಲ್ಲಿ ತುಂಬ ಅನುರಕ್ತನಾಗಿದ್ದನು. ಇವರಿಬ್ಬರೂ, ಶಬರವೇಷದ ಶಂಕರನೂ ವನಚರೀವೇಷದ ಭಾವಾನಿಯೂ ಇದ್ದಂತೆ ಅನ್ಯೋನ್ಯಾಸಕ್ತರೂ ಅವಿಯುಕ್ತರೂ ಅವಿಯುಕ್ತರೂ ಆಗಿ ಸಂತೋಷದಿಂದಿರುತ್ತಿದ್ದರು. ಹೀಗಿರಲು ವಸಂತಮಾಸ ಉದಿಸಿತು. ಆಗ ಒಂದು ದಿನ ವಿಂಧ್ಯಕನು ಧನುರ್ಬಾಣಧಾರಿಯಾಗಿ ಮೃಗಯಾವಿನೋದಾರ್ಥವಾಗಿ ಹೊರಹೊರಟನು. ಅವನ ಪತ್ನಿಯೂ ಹಿಂಬಾಲಿಸಿದಳು. ಬೇಟೆನಾಯಿಯೂ ಬೆನ್ನಿಗೆ ಬಂದಿತು. ಆದರೆ ಅಂದಿನ ಬೇಟೆಯಲ್ಲಿ ವಿಂಧ್ಯಕನ ಮನಸ್ಸು ಏಕೋ ಏನೋ ಆಸಕ್ತಿಯನ್ನೂ ಉತ್ಸುಕತೆಯನ್ನೂ ತೊರೆದೆ ಹೋಯಿತು. ಬೆಚ್ಚಿ ನೋಡುವ ಹುಲ್ಲೆಗಳ ಕಣ್ಣನೋಟದಲ್ಲಿ , ಕಾಡಾನೆಯ ಕುಂಭಸ್ಥಳಗಳಲ್ಲಿ, ಸೋಗೆನವಿಲುಗಳ ಸೋಗೆಯಲ್ಲಿ ಪತ್ನಿಯಾದ ವಾಗಿರೆಯ ಚಲುವನ್ನೇ ಕಾಣುತ್ತಿರುವಂತಾಗಿ, ಅವುಗಳನ್ನು ಸ್ವಲ್ಪವೂ ಘಾತಿಸಲ್ಲೊಲ್ಲದೆ ಮುಂದೆ ನಡೆದು ಬರುವಾಗ ಒಂದೆಡೆಯಲ್ಲಿ ಒಂದು ಪರ್ವತಾಗ್ರದಲ್ಲಿ ಎರಡು ಗಿರಿಶಿಖರಗಳಿದ್ದಂತೆ ಪ್ರತಿಮಾಯೋಗದಲ್ಲಿ ನಿಂತಿದ್ದ ಇಬ್ಬರು ಮುನಿವರ್ಯರನ್ನು ದೂರಾಂತರದಲ್ಲಿ ಕಂಡನು. ಅವರು ವಿಮಳಬುದ್ದಿ ಮತ್ತುಛಿಮಳಬುದ್ದಿ ಎಂಬ ಹೆಸರಿದ್ದ ಮುನಿಗಳು,ಆಗ ವಿಂಧ್ಯಕನು ವಾಗುರೆಯನ್ನು ಕುರಿತು, “ ಇಕೋ ಅಲ್ಲಿ ಕಾಣುತ್ತಿರುವ ಆ ಎರಡು ಪುರುಷಮೃಗಗಳನ್ನೂ ಒಂದೇ ಬಾಣವನ್ನು ಬಿಟ್ಟು ಕೆಳಕ್ಕೆ ಕೆಡಹುತ್ತೇನೆ – ಎಂದನು ಆಗ ಆಕೆಯ ಕೆಲಹೊತ್ತು ಹಾಗೆಯೇ ನೋಡಿ ಗಡಗಡನೆ ನಡುಗಿ, “ ಇವರ ಮೇಲೆ ಬಾಣವನ್ನು ಬಿಡುವೇಯಾದರೆ ನನ್ನ ಓಕೆಭಾಗ್ಯವು ನಿನಗೆ ಇಷ್ಟವಿಲ್ಲ. ಎಂದಂತಾಗುವುದು– ಎಂದು ಹೇಳಿದವಳೇ ಶಬರನ ಬಾಣಹೂಡಿ ನಿಂತ ಕೈಯನ್ನು ತಟ್ಟನೆ ಹಿಡಿದುಬಿಟ್ಟಳು. “ ಅಲ್ಲಿ ಕಾಣುವುದು ಪುರುಷಮೃಗಗಳಲ್ಲ; ದಿವ್ಯಮುನೀಂದ್ರರು. ನೀನು ಒಂದು ಪಕ್ಷ ಬಾಣವನ್ನು ಬಿಟ್ಟರೂ ಅದು ಅವರನ್ನು ತಾಗಲು ಸಮರ್ಥವಗದು. ಸೂರ್ಯರಶ್ಮಿಯೇ ಇವರನ್ನು ಚಚ್ಚಲು ಒಲ್ಲದೆ ಓಸರಿಸಿ ಹೋಗುತ್ತಿದೆ. ಅಲ್ಲದೆ ಉಗ್ರಮೃಗಗಳಾದ ಸಿಂಹಾಶರಭಗಳೇ ಕೂಡಿ ಅವರ ಪಾದಕಮಲಗಳಾನ್ನು ಒಲಿದು ಒತ್ತುತ್ತಿವೆಯಿಂದಮೇಲೆ ನಿನ್ನ ಬಾಣವು ಅವಕ್ಕಿಂತ ಹೆಚ್ಚು ಬಲವಂತವಾದುದೆ? ನಿನ್ನ ಬಾಣದೇಟಿಗೆ ಬಿರಿದು ಕರಿಕುಂಭಸ್ಥಳಗಳಿಂದ ಸೂಸಿದ ಮುತ್ತುಗಳನ್ನು

ರಾಜಗೃಹನಗರದಲ್ಲಿ ಮಾರಲೆಂದು ನಾನು ಹೋಗಿದ್ದಾಗ ತನ್ನ ಗೃಹದ್ವಾರದಲ್ಲಿ ವೃಷಭದತ್ತನು ಭಕ್ತಿಯಿಂದ ಈ ಮುನೀಶ್ವರರನ್ನು ಕಂಡು ಇದಿರ್ಗೊಂಡು ಕಲಿಗೆರಗಿ ರತ್ನಗಳಿಂದ ಅರ್ಚಿಡಿದ್ದನ್ನು ಪ್ರತ್ಯಕ್ಷವಾಗಿ ಕಂಡದ್ದೇನೆ ಎಂದು ಆಡಿದ ವಾಗುರೆಯ ಮಾತಿಗೆ ವಿಂಧ್ಯಕನ ಮನಸ್ಸು ಮಾರ್ಪಟ್ಟು, ಪಾಪವನ್ನು ತೋಳೆದುಕೊಂಡು ಪವಿತ್ರನಾಗಲು ಬಗೆದು, ಕಾರ್ಮೋಡವು ಮಿಂಚನ್ನೂ ಕಾಮನಬಿಲ್ಲನ್ನೂ ಈಡಾಡುವಂತೆ ಬಿಲ್ಲುಬಾಣಗಳನ್ನು ಈಡಾಡಿದನು. ಅಭ್ಯುದಯಪಥವನ್ನೇರುವಂತೆ ನಗಾಗ್ರಕ್ಕೆ ಏರಿಹೋಗಿ ಆ ಯೋಗಿದ್ವಯರ ಪಾದಗಳ ಮುಂದೆ ಮಣಿದಿರಲು , ಆ ವೇಳೆಗೆ ಮುನಿಕುಮಾರರು ಬಹಿಃಪ್ರಜ್ಞರಾಗಿ ಆ ಲುಬ್ಧಕನ ಕಾಲಲಬ್ಧಿಕ್ಷಯೋಪಶಮನವನ್ನು ಕಂಡು ದಯೆತೋರಿ ಪಾತ್ಕಿಯನ್ನು ಪವಿತ್ರನನ್ನಾಗಿ ಮಾಡಿದರು. ಅವರಲ್ಲಿ ವಿಮಳಮತಿಮುನಿ ಅವನಿಗೆ ಪಂಚಾಣುವ್ರ್ತವನ್ನು ಅನುಗ್ರಹಿಸಿದನು. ಅದನ್ನು ವಿಂಧ್ಯಕನು ಆದರಭಾವದಿಂದ ಮಹಾಪ್ರಸಾದವೆಂದು ಸ್ವೀಕರಿಸಿದನು. ಈ ಸಾತ್ವಿಕಗುಣದ ಅಣುವ್ರತವೆಂದರೇನು? ಮನಚರನಾದ ವಿಂಧ್ಯಕನೆಮಂದರೇನು ? ಇದು ಪರಸ್ಪರ ವಿರುದ್ಧವಲ್ಲವೇ ಎಂದೂ ತೋರಹದು. ಆದರೆ ಸಿದ್ಧರಸ ಎಂಬುದು ಕಬ್ಬಿಣವನ್ನೇ ಅಲ್ಲವೆ ಹೊನ್ನು ಮಾಡುವುದು! ಹೀಗೆ ಮೇರುಪರ್ವತವನ್ನು ಸಾರಿದ ಕಾಗೆ ಹೊಂಬಣ್ಣವಾದಂತೆ ಆ ಜಾತರೂಪಧರರನ್ನು ಸಮೀಪಿಸಿದ ಶಬರನು ಸುವ್ರತಸ್ವೀಕಾರಭಾಸುರನಾದನು. ಆತನ ಪತ್ನಿ ವಾಗುರೆಯೂ ಮಾಸ್ಸಿಲ್ಲದ ಮನಸ್ಸಿಂದ ' ನಾನೂ ಈ ವ್ರತವನ್ನು ಕೈಗೊಂಡೆನು ಎಂದಳು; ಮುನಿಗಳಿಗೆ ನಮಸ್ಕರಿಸಿ ಅವರ ಆಶೀರ್ವಾದವನ್ನು ಪಡೆದಳು. ಆಮೇಲೆ ವಿಂಧ್ಯಕನು ಮುನಿಗಳನ್ನು ಸ್ವಲ್ಪದೂರದ ವರೆಗೆ ಕಳಿಸಿಕೊಟ್ಟು ಹಿಂದಿರುಗಿ ಬಂದು, ತನ್ನ ಪೂರ್ವಕೃತ ವಧಬೀಭತ್ಸ ಸ್ಮರಣವೇ ಕಂದಮೂಲಫಲಾಸ್ವಾದನದಲ್ಲಿ ತೊಡಗುವಂತೆ ಮಾಡಿತು. ಅದರೆ ಅದನ್ನು ನೆನೆಯದೆ ಮುನಿಗಳ ಪಾದಪದ್ಮಗಳನ್ನೇ ಧ್ಯಾನಿಸುತ್ತ ಇರಲು ಅತನಿಗೆ ಸ್ವಗೃಹೀತವಾದ ವ್ರತಪಾಲನೆಯಲ್ಲಿ ಪ್ರಗಲ್ಭಮತಿಯುಂಟಾಯಿತು. ಬೇಡರಿಲ್ಲದೆಡೆಯಲ್ಲಿ , ಪಶುಪಕ್ಷಗಳ ಬೇಟೆಯ ಹಿಂಸೆಯಿಲ್ಲದೆಡೆಯಲ್ಲಿ ದೂರವಾಗಿದ್ದು ನಿರ್ಮಲವಾದ ಚಿತ್ತದಿಂದ ಕೂಡಿ ಸುಖವಾಗಿರುತ್ತಿದ್ದನು. ಗಿಳಿ ತಿನ್ನದ ತೊಂಡೆಯ ಹಣ್ಣುಗಳು, ಕೋಗಿಲೆಯು ಕಡಿಯದ ಇಮ್ಮಾವಿನ ಹಣ್ಣುಗಳು. ಅನ್ಯಪಕ್ಷಿಗಳು ರುಚಿನೋಡದ

ಹೀಚುಗಾಯಿಗಳನ್ನು ಮತ್ರ ಆಯ್ದಾಯ್ದು ತಿನ್ನುತ್ತಿದ್ದನು. ಪರ್ವತಗ್ರದಿಂದ ಇಳಿದು ಹರಿಯುವ ನಿರ್ಝರೋದಕವನ್ನು ಮಾತ್ರ ಕುಡಿಯುತ್ತಿದ್ದನು.

ಆಗೊಮ್ಮೆ ವಾಗುರೆಯ ಸಹಚರಿಯರಾದ ಬೇಡಿತಿಯರು ಅವಳಿದ್ದೆಡೆಗೇ ಹುಡುಕಿಕೊಂಡು ಹೋಗಿ ಕಂಡು "ನೀನೂ ನಿನ್ನ ಗಂಡನೂ ಹುಲಿಯ ಹಾಗೆ ಇದ್ದವರು ಈಗೇಕೆ ನರಿಯ ಹಾಗೆ ಆಗಿದ್ದೀರಿ ಎಂದು ಪ್ರಶ್ನಿಸಿದರು . ಆಗ ಕಣ್ಣೀರು ತುಂಬಿ ವಾಗುರೆಯ ಮೆಲ್ಲಗೆ ಹೀಗೆ ಹೇಳಿದಳು : ನನ್ನ ಪತಿಯ ಮುನಿಗಳಿಗೆ ಬಾಣವನ್ನು ಗಿರಿಯಿಡುವಲ್ಲಿ ನಾನು ಆತನ ಕೈತಡೆದೆ . ಅದರ ಫಲವನ್ನು ಈಗ ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇನೆ. ಆ ದಡಿಗರು ಏನೋ ಮಂತ್ರಮಾಡಿ ಕಲಿಯ ಬೇಟೆಯುಡುವ ಕಯ್ಯನ್ನೂ ಬೇಟೆಯ  ಬದುಕನ್ನುಂಬ ಬಾಯನ್ನೂ ಕಟ್ಟಿ ಹಾಕಿಬಿಟ್ಟರು. ನಾನು ಕೆಟ್ಟ ಈಗ ಆತನು ಅಕ್ಕಿಗಳಾನ್ನು ಬಲೆ ಬೀಸಿ ಹಿಡಿಯುವುದಿಲ್ಲ . ಮೃಗಗಳಾನ್ನು ತುಡುಕಲು ನಾಯಿಗಳಾನ್ನು ಅಟ್ಟುವುದಿಲ್ಲ; ಜೇನಿಗಾಗಿ ಜೇನುಹುಟ್ಟಿಗಳಾನ್ನು ಬಡಿಯಲೊಲ್ಲ. ಹೀಗೆ ಇನಿಯನು ತನ್ನ ಬದುಕನ್ನೂ ಬಾಳನ್ನೂ ಕೈ ಬಿಟ್ಟಾಂತಾಯಿತು. ಇದನ್ನು ಕೇಳಿದ  ಆ ಸಹಚರಿಯರು "ಹೀಗೆಕೆ ಇರಬೇಕು; ನೀನು ನಮ್ಮ ಮನೆಯಲ್ಲಿ ಬಾಯಿಗೆ ರುಚಿಯಾದ್ದನ್ನು ತಿಂದುಕೊಂಡು  ಮೈಗೆ ಮೆಚ್ಚಿದ ಹಾಗೆ ಇದ್ದಕೋ ಅಲ್ಲಿಗೇ ಬಾ ಹೋಗೋಣ  –ಎಂದರು ವಾಗುರೆ ತಲೆಯಲ್ಲಾಡಿಸಿ ಬೆರಳುಮಿಡುದು ಮನಸ್ಸಿನಲ್ಲಿ  ಇದ್ದದನ್ನು ಮಾತಿನಲ್ಲಿ ಆಡಿ ಮುಗಿಸಿದೆ. ಹಾಗಲ್ಲದೆ ನಾನು ಬೇರೋಂದನ್ನು ಚಿಂತಿಸಿದವಳಲ್ಲ. ಇನ್ನು ನನ್ನ ಗಂಡನಾದುದನ್ನೆ ನನೂ ಆಗುತ್ತೇನೆ. ಅದು ಲೇಸಾಗಲಿ ಹೊಲ್ಲಾಗಲಿ ಅದೇ ನನ್ನ ಪುಣ್ಯ  ಎಂದು ತನ್ನ ಸಂಕಲ್ಪವನ್ನು ತಿಳಿಸಿದಳು.

ಒಂದು ದಿನ ವಿಂಧ್ಯಕನು ಎಲ್ಲಿಯೂ ಒಳ್ಳೆಯ ಹಣ್ಣುಗಳನ್ನು ತಿನ್ನಲು ಪಡೆಯದೆ ಅದಕ್ಕಾಗಿ ಅರಸುತ್ತಾ ಬಂದು ಒಂದು ಕುಳ್ಳ ಮಾವಿನ ಮರದ ಬೀಳ್ಕೊಂಬಿನ ಹಸುರೆಲೆಯ ದಟ್ಟೆಡೆಯಲ್ಲಿ ರಸಾಯನದ ಕುಪ್ಪಿಗೆಯಂತೆ ತೋರುತ್ತಿದ್ದ ಒಂದು ತನಿಹಣ್ಣನ್ನು ಕಿತ್ತನು. ಆದರೆ ಆ ಹಣ್ಣು ಕೀಳುವಾಗ ಕೈಜಾರಿ ಆ ಮರದ ಪೊದರೆಯಲ್ಲಿ ಬಿದ್ದುಹೋಯಿತು. ಬಿದ್ದ ಹಣ್ಣನ್ನು ಹುಡುಕುವಾಸೆಯಿಂದ ಆ ಪೊಟರೆಯೊಳಗೆ ಕೈಚಾಚಿದನು. ಕೂಡಲೇ ಅಲ್ಲಿದ್ದ ಹಾವು ಕೋಪದಿಂದ ಕಡಿಯಿತು. ಫಲಾಮೃತರಸವನ್ನು ಕೈಯಲ್ಲಿ ಕೊಳ್ಳಲು ಹೊದರೆ ಬೇಡನ ಪಾಲಿಗೆ ಅದು ವಿಷವಾಗಿ ಪರಿಣಮಿಸಿತು. ನಿಷ್ಠುರನಾದ ಮೃತ್ಯುವಿನ

ಕಯ್ಯಡಕವನ್ನು ತಿಳಿಯಬಲ್ಲೆನೆಂಬುದು ದೇವನಿಗೂ ಸಾಧ್ಯವಿಲ್ಲ! ವಾಗಿರೆಯು ಜತೆಯ ಗಂಡುಹಕ್ಕಿಯನ್ನು ಕಳೆದುಕೊಂಡು ಗೋಳಿಡುವ ಹೆಣ್ಣು ಹಕ್ಕಿಯಂತೆ ವಿಂಧ್ಯಕನ ಮೃತಿಗೆ ಸಂಕಟಪಟ್ಟಳು. ಆತನಿಗಾದ ಗತಿಯೇ, ಲೋಕವೇ ತನಗೂ ಆಗಲಿ – ಎಂದು ನಿರ್ಧರಿಸಿ ಹಾವಿನ ಬಾವಿನ ಕೈಗೊಟ್ಟು ಕಡಿಯಲ್ಪಟ್ಟು ತನ್ನ ಪತಿ ಸತ್ತು ಹುಟ್ಟಿದ ಪಟ್ಟಣದಲ್ಲಿಯೇ ಅಲ್ಲಿಗೆ ಮುಖ್ಯನಾದ ದೀವರನಾಗಿ  ಹುಟ್ಟಿದಳು. ಸರ್ಪದಷ್ಟನಾಗಿ ಮೃತನಗಿ ವ್ಯಾಧ ವಿಂಧ್ಯಕನು ರಾಜಗೃಹನಗರದ ವೈಶ್ಯೋತ್ತಮನಾದ ವೃಷಭದತ್ತ ಎಂಬವನಿಗೆ ಇಭ್ಯಕೇತುವೆಂಬ ಮಗನಾಗಿ ಹುಟ್ಟಿದನು.

ಆ ವೃಷಭದತ್ತುನು ರಾಜಗೃಹದಲ್ಲಿ ಸುಪ್ರಸಿದ್ದಾನಾದ ಶ್ರೀಮಂತನಾಗಿದ್ದನು. ಆತನ ಮನೆಯಂಗಣದಲ್ಲಿ ಯಾವಾಗಲೂ ಹಸ್ತ್ಯಶ್ವಗಳ ಕೋಲಾಹಲವಿರುತ್ತಿತ್ತು.  ಕರ್ಪೂರವಾಗಲಿ ಕಸ್ತೂರಿಯಗಲಿ ರಾಶಿರಾಶಿಯಾಗಿ ಒಟ್ಟಿರುತ್ತಿತ್ತು. ವೃಷಭದತ್ತನಿಗೂ ಪದ್ಮಶ್ರೀಗೂ ಸುತನಾದ ಇಭ್ಯಕೇತುವು ಚಂದ್ರನಂತೆ ಅಭಿವೃದ್ಧಿಸಿದನು. ಮನ್ಮಥನ ಸತಿ ರತಿಯನ್ನೇ ಆಕರ್ಷಿಸುವಂಥ ಸುಂದರಾಂಗನಾಗಿ ವರ್ಧಿಸಿದನು. ಶ್ರುತವಧು ಒಲಿದು ಅನುಗ್ರಹಿಸಿದ ರೀತಿಯಿಂದ ನಾಟಕಪ್ರವೀಣತೆ, ಕೃತಿಭಾವಕೋವಿದತೆ, ಶಬ್ದಸಮಗ್ರತೆ, ತರ್ಕರೀತ್ಯಭಿಜ್ಞತೆ, ವಾಗ್ವಿಚಕ್ಷಣಾತೆ, ವಾದ್ಯವಿದಗ್ಧತೆ, ನರ್ತನ ರಸಗಾನಮಗ್ನತೆ, ವಿಳಾಸರಸಜ್ಞತೆ – ಇವು ಆತನಲ್ಲಿ ಪರಿಶೋಭಿಸುತ್ತಿದ್ದುವು. ಪೂರ್ವದ ವ್ಯಾಧಜನ್ಮವನ್ನು ನೆನಪಿಸುವಂತೆ ತನ್ನ ಅತಶಯ ರೂಪಲಾವಣ್ಯದಿಂದಲೇ ಸ್ತ್ರೀಯರನ್ನು ಬೇಟೆಯಾಡಿ ಸೆಳೆಯುವನೆಂಬಂತೆ ತೋರುತ್ತಿತ್ತು.

ರಾಜಗೃಹನಗರದ ಪ್ರಭು ಜಿತಶತ್ರು. ಆತನ ರಾಣಿ ಸುಪ್ರಭೆ. ಇವರ ಮಗಳು ಕಮಳ ಪ್ರಭೆ ಈಕೆ ತುಂಬ ಚಲುವೆ ಕಮಳಪ್ರಭೆಯು ಯೌವನಕ್ಕೆ ಬಂದು ವಿವಾಹಯೋಗ್ಯಳಾದುದನ್ನು ಕಂಡು ಜಿತಶತ್ರುವು ಭೂಮಂಡಲದ ಸಮಸ್ತ ರಾಜಪುತ್ರರಿಗೂ ಆಹ್ವಾನವನ್ನು ಕಳಿಸಿ ಸ್ವಯಂ ವರವನ್ನು ಅತ್ಯಂತ ವೈಭವದಿಂದ ಏರ್ಪಡಿಸಿದನು. ಅಲ್ಲಿಯ ವರೆಗೆ ನೆಲವೂ ನೇಸರೂ ಕಾಣದಂತೆ ಮನೆಯೊಳಗೆ ಸುಖವಾಗಿ ಬೇಳೆಯುತ್ತಿದ್ದ , ಅತ್ಯಂತ ಸುಂದರನೂ ಸುಕುಮರನೂ ಆದ ಇಭ್ಯಕೇತುವು ತನ್ನ ತಂದೆಯೊದನೆ, ಆತನು ಬೇಡಬೇಡವೆಂದು ತಡೆಯುತ್ತಿದ್ದರೂ ಬಿಡದೆ ಸ್ವಯಂವರಭೂಮಿಗೆ ಹೊರಟುಬಂದನು. ಇತರ ರಾಜಪುತ್ರರೊಂದಿಗೆ ತಾನೂ ಒಬ್ಬನಾಗಿ ಭಾಗವಹಿಸಿದನು. ಎಷ್ಟೇ

ಹೂವುಗಳು ಅರಳಿದ್ದರೂ ದುಂಬಿಯು ಜಾಜಿಯ ಹೂವನ್ನೇ ಬಯಸಿ ಮುತ್ತುವಂತೆ ಸುಂದರಪುರುಷರಾದ ಹಲವು ರಾಜಪುತ್ರರಿದ್ದರೂ ಕಮಳಪ್ರಭೆಯ ಕಣ್ಣುಗಳು ಇಭ್ಯಕೇತುವನ್ನೇ ಮೆಚ್ಚಿದವು. ಆಕೆ ಪುಷ್ಪಮಾಲೆಯನ್ನು ಆತನಿಗೆ ಸೂಡಿದಳು. ಉಳಿದ ರಾಜಪುತ್ರರೆಲ್ಲ ಸಿಗ್ಗಾದರು.

ಈ ಸಂದರ್ಭದಲ್ಲಿ ಜಿತಶತ್ರು ಪ್ರಭುವಿನ ಕಿರಿಯರಸಿ ವಂಸಂತಸೇನೆಯೆಂಬಾಕೆಯ ಮಗಳು ಮಗಧಸೌಂದರಿಯ ವಿಚಿತ್ರನೃತ್ಯ ವಿದ್ಯಾವಿಳಾಸವನ್ನೂ ಆದ್ವಿತಿಯ ಸಾಹಿತ್ಯಪರಿಜ್ಞಾನವನ್ನೂ ಬಲ್ಲವನಾಗಿದ್ದ ಜಿತಶತ್ರುವು ಸಿಂಥ ಕಲಾಪ್ರೌಢಿಮೆಯನ್ನು ಕಂಡು ಸಂತೋಷಿಸಿ ಮೆಚ್ಚಬಲ್ಲವನೆಂದರೆ ಇಭ್ಯಕೇತು ಕುಮಾರನೊಬ್ಬನೇ ಸರಿ, ಆತನಲ್ಲದೆ ಶಿವನೂ ತಿಳಿಯನು ಎಂದು ಹರ್ಷಿಸಿ, ಸುಸಜ್ಜಿತವಾದ ಮಣಿಮಯನೃತ್ಯಮಂಟಪಕ್ಕೆ ಆತನನ್ನು ಬರಮಾಡಿ ಕೊಂಡನು; ಲಲಿತಾಲಂಕರಣ ಭೊಷಿತನಾಗಿ ಬಂದ ಕುಮಾರನನ್ನು ಕಾಂಚನಪೀಠದಲ್ಲಿ ಕುಳ್ಳಿರಿಸಿ ಮಗಳಿಗೆ ಕೇಳಿಕೆ ಮಾಡುವಂತೆ ತಿಳಿಸಿದನು. ಮಗಧಸೌಂದರಿಯು ಅತ್ಯಂತ ಮನೋಹರವೂ ಕೌತುಕಕರವೂ ಅದ ಸಮವಿಷಗಳೆಂಬ ಎರಡು ರೀತಿಯ ನೃತ್ಯಗಳನ್ನೂ ಸಾವಧಾನವಾಗಿ ಅಭಿನಯಿಸಿದಳು. ನೃತ್ಯಕಲೆಯ ಸಕಲ ಸೂಕ್ಷ್ಮ ಸಂಗತುಗಳನ್ನೂ ಅಪೂರ್ವವಾಗಿ ಪ್ರದರ್ಶಿಸಿ ತನ್ನ ಪ್ರೌಢಿಮೆಯನ್ನು ಮೆರೆದಳು ಪ್ರದರ್ಶಿದ ಸೂಚೀನೃತ್ಯದಂಥ ವಿಷಮವಿದ್ಯಾಸಾಧನೆ ಆ ಸಾಕ್ಷಾತ್ ಸರಸ್ವತಿಗೂ ಸಾಧ್ಯವಿಲ್ಲ ಎಂದು ಇಭ್ಯಕೇತು ಕುಮಾರನು ಮನಃಪೂರ್ವಕವಾಗಿ ಮೆಚ್ಚುಕೊಂಡನು ಆಗ ಮೆಚ್ಚಿಗೆ ಮೆಚ್ಚುಗೊಡುವಂತೆ ಜಿತಶತ್ರುವು ಇಭ್ಯಕೇತುವಿಗೆ ತನ್ನ ಕಿರಿಯರಸಿಯ ಕುಮಾರಿ ಮಗಧಸೌಂದರಿಯನ್ನೂ ಮಹವಿಭೂತಿಯಿಂದ ಮದುವೆಮಾಡಿ ಕೊಟ್ಟನು. ಕಮಳಪ್ರಭೆಗೂ ಮಗಧಸೌಂದರಿಗೂ ಪತಿಯಾಗಿ ಇಭ್ಯಕೆತುವು ಅಭ್ಯುದಯವನ್ನು ಹೊಂದಿದನು.

ಮಗಧಸೌಂದರಿಗೂ ನೃತ್ಯವಿದ್ಯಾಕೌಶಲಕ್ಕಿಂತ ಕಮಳಪ್ರಭೆಯ ರೂಪಲವಣ್ಯವು ಅವನಿಗೆ ಮೊದಲ ಆಕರ್ಷಣೆಯಯಿತು. ಹೆಣ್ಣಿನ ಸೊಬಗು ಮನವೊಲಿಸಿವಂತೆ ಅವಳ ವಿದ್ಯಾ ಒಲಿಸುವುದೇ? ದುಂಬಿಯು ಮಲ್ಲಿಗೆಗೆ ಒಲಿಯುವಂತೆ ವಿಚಿತ್ರ ಬಂಧಕೌಶಲದಿಂದ ಗ್ರಥನಮಾಡಿ ತಂದ ನಿರ್ಗಂಧಕುಸುಮಮಾಲೆಗೆ ಒಲಿಯುವುದೇ? ಇಭ್ಯಕೇತವು ಮಗಧ ಸೌಂದರಿಯನ್ನು ವರಿಸಿ ತನ್ನನ್ನು ಮರೆತುಬಿಡುವನೇನೋ ಎಂದು ದೀನಮಾನಸೆಯಗಿದ್ದ ಕಮಳಪ್ರಭೆಯನ್ನು ಸಂತೈಸಿ ಒಡಗೂಡಿದನು.

ಇತ್ತಕಡೆ ಮಗಧಸೌಂದರಿಯು ತನ್ನ ಪಳೆಯದಲ್ಲಿವಾಸವಸಜ್ಜಿಕೆಯಾಗಿ ಪತಿಯ ಸಮಾಗಮನಿರೀಕ್ಷೆಯಲ್ಲಿ ನಿದ್ರಾವಿರಹಿತೆಯಾಗಿ ಇರುಳೆಲ್ಲವನ್ನೂ ಕಾತರೆಯಾಗಿ ಕಾಯುತ್ತಿದ್ದಳು. ನಿದ್ದೆಗೆಟ್ಟು ಆಕೆಯ ಕೆಂಪು ಕೆಂಪಡರಿದ್ದವು. ಪತಿಯಆಗಮನದಲ್ಲಿಯೇ ಕಣ್ಣುನಟ್ಟು ಕಳವಳಿಸುತ್ತಿದ್ದ ಮಗಳ ಕತ್ತಲಿಡಿದ ಮುಝುವನ್ನು ಮುಂಕುಕವಿದ ಮುಖವನ್ನು , ಕೆಂಪಡರಿದ ಕಣ್ಣುಗಳನ್ನು ನೋಡಿ ತಂದೆ ಜಿತಶತ್ರುವು ತುಂಬ ನೊಂದುಕೊಂಡನು. ನೃತ್ಯಕಲಾ ಕೋವಿದೆಯಗಿದ್ದೂ ಆಕೆಗೆ ದುಃಖವೂ ದೌರ್ಭಾಗ್ಯವೂ ತಪ್ಪಲಿಲ್ಲ . ಆಕೆಯ ಅಭಿಲಾಷೆಯು ಪೂರೈಸುವುದರಲ್ಲಿ ಆ ವಿದ್ಯೆಯೇ ಆಕೆಗೆ ಅಡ್ಡಿ ಬಂದತಾಯಿತು– ಎಂದು ಪರಿಭಾವಿಸಿದ್ದಾಗ ಅದೇ ಆತನ ನಿರ್ವೇಗಕ್ಕೆ ನಿಮಿತ್ತವಾಯಿತು. ವೈರಾಗ್ಯದಲ್ಲಿ ಮನಸ್ಸು ನಟ್ಟು, ರಾಜ್ಯವನ್ನು ಇಭ್ಯಕೇತುಕುಮರನಿಗೆ ಕೊಟ್ಟು ನಿಯಮಸ್ಥಯತಿಯ ಪಾದದ ಬಳಿಯಲ್ಲಿ ತಪ್ಪಸಿಗೆ ನಿಂತನು. ಜಿತಶತ್ರುವಿನ ಬೀಗನೂ ಇಭ್ಯಕೇತು ಕುಮಾರನ ತಂದೆಯೂ ಅದ ವೃಷಭದತ್ತ ವೈಶ್ಯೋತ್ತಮನೂ ಮಂದರಸ್ಥವಿರರೆಂಬ ಮುನೀಂದ್ರರ ಪಕ್ಕದಲ್ಲಿ ತಪ್ಪಸ್ಸನ್ನು ಕೈಗೊಂಡನು. ಲಕ್ಷ್ಮಿಗೆ ಕುಲಗೃಹವೂ ಕಳಧಿದೇವತೆಗೆ ಕೆಳಿಗೃಹವೂ ಆಡ ರಾಹಗೃಹಕ್ಕೆ ಅಧಿರಾಜನಾಗಿ ಇಭ್ಯಕೇತುವು ರಾಜ್ಯಭಾರಸಮಾಸಕ್ತನದನು.

ಚತುರ್ಥಾಶ್ವಾಸ

ಹೀಗೆ ವಾಣಿಯ ದಯೆಯಿಂದ ವೈಶ್ಯನಾದ ಇಭ್ಯಕೇತು ರಾಜಗೃಹಕ್ಕೆ ಅರಸನಾಗಿ ರಾಜ್ಯವಾಳುತ್ತಿದ್ದನು. ಲೋಕದಲ್ಲಿ ಪುಣ್ಯಕ್ಕೆ ಅಲಭ್ಯವಾದ್ದು ಏನಿದೆ? ಒಂದು ದಿವಸ ಈ ಪ್ರತಾಪ ಮಾರ್ತಾಂಡನು ಪ್ರಾತಃಕಾಲದಲ್ಲಿ ಒಡ್ಡೋಲಗವನ್ನು ಸೇರಿಸಿರುವ ಆ ಪಟ್ಟಣದ ಬೆಸ್ತರೊಡೆಯನು ಬಂದು ದೊರೆಗೆ ಕಾಣಿಸಿಕೊಂಡು ಕರಿಕುಂಭದ ಮುತ್ತನ್ನೂ ಕಸ್ತೂರೀವೃಗವನ್ನೂ ಸಿಂಹದ ಮರಿಯನ್ನೂ ಕಾಣಿಕೆಯಗಿ ಒಪ್ಪಿಸಿದನು. ಅವನನ್ನು ಕಾಣುತ್ತಲೇ ಆ ವರೆಗೆ ಯರ ವಿಚಾರದಲ್ಲಿಯೂ ತೋರಿರದ ಅತ್ಯಾದರವನ್ನು ತೋರಿ ಅವನಿಗೆ ಸೇನಾಪತಿಪದವಿಯನ್ನು ಕೊಟ್ಟು ಆತನನ್ನೇ ತನಗೆನಂಬಿಕಸ್ತನನ್ನಾಗಿ , ಪ್ರೀತಿಪಾತ್ರನನ್ನಾಗಿ ಮಡಿಕೊಂಡು ರಾಜ್ಯವಾಳುತ್ತಿದ್ದನು. ಹೀಗಿರಲು ಒಂದು ಮಂದರಸ್ಥವಿರ ಭಟ್ಟಾರಕರ ಸಮೀಪದಲ್ಲಿ ತನಗೆ ಸ್ವಲ್ಪದೂರದಲ್ಲಿ ಧರ್ಮಶ್ರವಣ ಮಾಡುತ್ತಿದ್ದ ಆಧೀವರಾಖ್ಯನಲ್ಲಿಗೆ

ಸಾರಿಬಂದು, ಧರ್ಮಶ್ರವಣದಲ್ಲಿ ತನ್ಮಯನಾಗಿದ್ದ ಆತನನ್ನು ನೋಡಿ ಆ ಭಟ್ಟಾರಕನು ಕುರಿತು ಹೀಗೆ ಪ್ರಶ್ನಿಸುತ್ತಾನೆ : ಸ್ವಾಮಿ ನನಗೆ ಈ ಮೀಗುಲಿಗನ ಮೇಲೆ ಮುದ್ದಿನ ಮಗನ ಮೇಲೆಯೂ ಒಲುಮೆಯ ಹೆಂಡತಿಯ ಮೆಲೆಯೂ ಆಗಂದಂತಹ ಅನಿಮಿತ್ತಪ್ರೇಮವು ಏಕುಂಟಾಯಿತು? ಆಗ ಅದಕ್ಕೆ ಅವರು ಅಯ್ಯಾ ನೀನು ಹೋದ ಜನ್ಮದಲ್ಲಿ ವಿಂಧ್ಯಕನೆಂಬ ಬೇಡನಾಗಿದ್ದಾಗ ಈತನು ವಾಗುರೆ ಎಂಬ ನಿನ್ನ ಸತಿಯಾದಿದ್ದನು ಎಂದರು.

ಹೀಗೆಂದಾಗ ಇಭ್ಯಕೇತುವು ತಟಕ್ಕನೆ ತನ್ನ ಪೂರ್ವಜನ್ಮವನ್ನು ಸ್ಮರಿಸಿಕೊಂಡನು. ಈಗ ಏನಾಗಿದ್ದವರು ಮುಂದೆ ಏನಾಗುತ್ತಾರೆ ಎಂಬುದನ್ನು ತಿಳಿಯಬಲ್ಲರು ಯಾರು? ಸಂಸಾರಿಯ ಪಾಪವೆಂಬ ಸೂತ್ರಧಾರನ ಪ್ರೇರಣೆಯಿಂದ ಜಗತ್ತಿನಲ್ಲಿ ರೂಪವಿಶೇಷಗಳನ್ನು ಮಾನವರು ಧರಿಸಿ, ಹಲವಿಧದಿ,ಂದ ಸುತ್ತಿ ಸುಳುದು ಸ್ವೇಚ್ಛೆಯಿಂದ ನಡೆಯುತ್ತಾರೆ. ಹೀಗೆ ಭಾವಿಸಿ ಕೂಡಲೇ ವೈರಾಗ್ಯಗೊಂಡು ತನ್ನ ಮಗ ಸುಕೆತುವಿಗೆ ರಾಜ್ಯಭಾರವನೊಪ್ಪಿಸಿ, ತಾನು ತಪೋರಾಜ್ಯಭಾರವನ್ನು ಕೈಗಿಳ್ಳುತ್ತಾನೆ. ಇವನ ಪತ್ನಿ ಕಮಳಪ್ರಭೆಯೂ ಆತ್ಮವಲ್ಲಭನಲ್ಲಿ ತನಗಿದ್ದ ಪ್ರೆತಪೋರಾಜ್ಯಭಾರವನ್ನು ಕೈಗಿಳ್ಳುತ್ತಾನೆ. ಇವನ ಪತ್ನಿ ಕಮಳಪ್ರಭೆಯೂ ಆತ್ಮವಲ್ಲಭನಲ್ಲಿ ತನಗಿದ್ದ ಪ್ರೇಮದಿಂದಾಗಿ ತಾನೂ ತಪ್ಪಸನ್ನು ಹಿಡಿಯುತ್ತಾಳೆ. ಹಾಗೆಯೇ ಸೇನಪತಿ ಧೀರವನೂ ಆ ವ್ರತಿವತಿ ಮಂದರಸ್ಥವಿರ ಭಟ್ಟಾರಕರಲ್ಲಿಯ ಪಾಪರಹಿತನಾಗಿ ಅಣುವ್ರತಾದಿ ಗುಣವ್ರತ ದೀಕ್ಷಾವ್ರತಗಳನ್ನು ಕೈಗೊಂಡನು. ತಪ್ಪಸ್ಸಿಯಾದ ಇಭ್ಯಕೇತುವು ಮುಂದೆ ಸೌಧರ್ಮಕಲ್ಪದ ಶ್ರೀನಿಳಯವಿಮನದಲ್ಲಿ ಶ್ರೀದೇವನೆಂಬ ದೇವನಾಗಿ ಹುಟ್ಟಿದನು. ತಪಸ್ವಿನಿಯಾದ ಕಮಳಪ್ರಭೆ ಸುಪ್ರಭವಿಮಾನದಲ್ಲಿ ವಿಮಲಪ್ರಭನೆಂಬ ದೇವನದಳು. ಹಾಗೆಯೇ ಧೀವರನೂ ವಿದ್ಯುತ್ಪ್ರಭವಿಮನದಲ್ಲಿ ಶ್ರುತಪ್ರಭಾಂಕನೆಂಬ ದೇವನಾದನು . ಈ ಮೂವರು ಸುರಲೋಕಸೌಖ್ಯವನ್ನನುಭವಿಸಿ ಮತ್ತೆ ಭೂಮಿಗೆ ಬಂದು ಆ ಇಭ್ಯಕೇತುಚರನಾದ ಶ್ರೀದೇವನು ಚಿಂತಗತಿಯಾಗಿಯೂ ಕಮಳಪ್ರಭೆಯಾಗಿದ್ದ ವಿಮಲಪ್ರಭನು ಮನೋಗತಿಯಾಗಿಯೂ ಧೀವರಚರನಾದ ಶ್ರುತಪ್ರಭಾಂಕನು ಚಪಳಗತಿಯಗಿಯೂ ಹುಟ್ಟಿದರು. ಇದು ನಮ್ಮ ಹಳಬರಾದ ಮೂವರ ಭವಪಂಚಕ. ಹೀಗೆ ಆತ್ಮೀಯಭಾಂಧವ್ಯದ ಪ್ರೀತಿ ನಿಮಿತ್ತವಾಗಿ ನಾವು ಒಂದು ಹಿತದ ಮಾತನ್ನು ನಿನಗೆ ಹೇಳಲಿಚ್ಚ್ಚಿಸುತ್ತೇವೆ. : ಈ ವಿಲಕ್ಷಣದೇಹದಲ್ಲಿ ಪ್ರಾಣವು ಹೀಗೆ ಇರುವುದೇ ಒಂದು

ಚೋದ್ಯ ಭವಭವಾಂತರಗಳಲ್ಲಿ ತೊಳಲುವ ಜೀವಿಯಲ್ಲಿ ನಿಲ್ಲದೆ ಹಾರಿ ಹೋಗುತ್ತಿರುವುದೇ ಅದಕ್ಕೆ ಸಾಮಾನ್ಯ. ಉಸಿರೆಳೆಯು ಕಡಿಯುತ್ತಲೂ ಹತಕಾಯವು ಹಾಗೊಮ್ಮೆ ಹೀಗೊಮ್ಮೆ ಬಾಗಿ ಬಳಕುತ್ತಿದ್ದು ಬಿದ್ದು ಹೋಗುವ ಬಿದಿರ ಕಾಂಡದಂತೆ ಬೀಳುವುದೊಂದು ಕಾಣುವುದಿಲ್ಲದೆ ಆಯುಷ್ಯವು ಮುಗಿದುಹೋಗುವುದನ್ನು ತಿಳಿಯಲೂ ಸಾಧ್ಯವಿಲ್ಲ. ಇನ್ನು ನಿನಗೆ ಒಂದು ತಿಂಗಳ ಆಯುಷ್ಯ ಮಾತ್ರ ಉಂಟು. ಆದ್ದರಿಂದ ಐಹಿಕಸುಖದಲ್ಲಿ ಪರವಶನಾಗಿರದೆ ಪರಲೋಕಹಿತವನ್ನು ಲಕ್ಷಿಸು– ಎಂದು ಉಪದೇಶಮಾಡಲು ಅಪರಾಜಿತನು ಹೀಗೆಂದನು ಚಂದ್ರಸ್ಯೂರ್ಯರಿಗೂ ಮೋಡಗಳಿಗೂ ಹಣ್ಣಿನ ರೆಂಬೆಗೂ ಮೇದಿನಿಗೂ ಮೆಲ್ಗಾಳಿಗೂ ನಿಮ್ಮಂಥವರಿಗೂ ಪರೋಪಕಾರವೇ ಶೀಲ. ಗುಣಕ್ಕಿಂತ ಒಡಹುಟ್ಟಿ ಬಂದ ಕಾಂಕ್ಷೆ, ಅಪೇಕ್ಷೆ ಎಂಬುದರ ಋಣವೇ ಬಲವತ್ತರವಾದುದು. ಈ ಬಲಿಷ್ಠವಾದ ಗುಣದ –ಪರಿಣಾಮವಾಗಿಯೇ ಅಲ್ಲಿ ಅಮರತ್ವವನ್ನು ಬಿಡಬೇಕಾಗಿ ಬಂದರೂ ನಮ್ಮ ಮೇಲಿನ ನಿಮ್ಮ ಮಮತ್ವ ಬಿಟ್ಟುಹೋಗದೆ ಇದೆ. ಋಣಾನುಬಂಧ ಇಷ್ಟು ಗಟ್ಟಿಯಾದುದು. ಇಷ್ಟು ಹೇಳಿ ಚಾರಣರಿಬ್ಬರಿಗೂ ನಮಸ್ಕರಿಸಿದಾಗ ಅವರು ಅವನಿಗೆ ಅಭ್ಯುದಯಪರಂಪಾರೆಯುಂಟಾಗಲೆಂದು ಹರಸಿ ಅಲ್ಲಿಂದ ಹೊರಟುಹೋದರು.

ಇತ್ತ ಅಪರಾಜಿತನು ಮೊದಲಿನಂತೆ ನಿರೀಕ್ಷಣವಿಕಾರವೂ ಅಹಂಕಾರವೂ ಇಲ್ಲದೆ ಪರಮವ್ರತಿಯು ಪುರಪ್ರವೇಶಮಾಡುವಂತೆ ಸ್ವಕೀಯಪುರವನ್ನು ನಿರ್ಮಮಭಾವದಿಂದ ಪ್ರವೇಶಮಾಡಿ , ನೆರೆಮನೆಗೆ ಬರುವಂತೆ ತನ್ನ ಅರಮನೆಗೆ ಬಂದು, ಧರ್ಮಸಾಧನೆಯಲ್ಲಿ ನಿಶ್ಚಲಮಾನಸ್ಕನಾದನು. ಮೋಹವನ್ನು ಧರ್ಮದಿಂದ, ಶರೀರಸುಖಲಾಲಸೆಯನ್ನು ವೈರಾಗ್ಯದಿಂದ, ನಿಧಿಯಸೆಯನ್ನು ಪಾತ್ರದಾನದಿಂದ, ಗೆದ್ದು ನಿರಂತರವಾಗಿ ಧರ್ಮ ವೈರಾಗ್ಯ ತ್ಯಾಗ ಇವುಗಳಲ್ಲಿ ಆಸಕ್ತನದನು . ಸಂಸಾರಪರಿತಾಪದ ಬೇಗೆ ಅಳಿಯಿತು. ಇನ್ನು ಛತ್ರದ ಹಂಗೇಕೆ? ಜ್ಞಾನೋದಯವುಂಯಾಯಿತು, ಇನ್ನು ಚಾಮರಸೇವೆಯ ಅಲ್ಪಸುಖವೇಕೆ? ದಮವೆಂಬ ಆನೆಯನ್ನೇರಿದ್ದಾಯಿತು,ಇನ್ನು ಸಿಂಹಾಸನವನ್ನೇರುವ ಚಪಲವೇಕೆ? ಎಂದುಕೊಂಡು ಆ ಕೂಡಲೇ ಅವನ್ನೆಲ್ಲ ಮಗನದ ಪ್ರೀತಿಂಕರನಿಗೆ ಕೊಟ್ಟುಬಿಟ್ಟನು. ಅತಿಶಯವಾದ ಅನಶ್ವರಾಸ್ಪದಕ್ಕೆ ಪ್ರಾಜ್ಞರು ಒಲಿಯುವ ಹಾಗೆ ಸಾಮಾನ್ಯಸಾಮ್ರಾಜ್ಯಕ್ಕೆ ಒಲಿಯುತ್ತಾರೆಯೆ?

ಆ ಬಳಿಕೆ  ಭಂಢಾರದ ಹೊನ್ನೇಲ್ಲವನ್ನು ತೆಗೆಸಿ ಅದನ್ನು ವ್ಯಯಿಸಿ ತ್ರಿಭುವನಾಭರಣ ಎಂಬ ಜಿನಮಂದಿರದ ಮುಂದೆ ಮುಂದರವನ್ನು ಮಾಡಿಸಿ, ಪಂಚರತ್ನಸಂಚಯದಿಂದ ಅದಕ್ಕೆ ಕಲ್ಪಕುಜಗಳನ್ನೂ ಕಲ್ಪಿಸಿ, ನಕ್ಷತ್ರಮಾಲೆಯೆಂಬ ಹಾರವನ್ನೂ ಚಂದ್ರಾದಿತ್ಯರೆಂಬ ಮಣಿದರ್ಪಗಳಾನ್ನೂ ಬಲವರಿಸಿ ಮಾತನೇ ಮಾಹೇಂದ್ರನಾಗಿ ಜಿನೇಂದ್ರನಿಗೆ ಮಜ್ಜನಮಾಡಿ, ಅಷ್ಟಾಹ್ನಿಕ  ಮಹಾಮಹವನ್ನು ಮಾಡಿ, ಸರ್ವಸ್ವವನ್ನೂ ಅರ್ಥಿಗಳಿಗೆ ದಾನವಾಗಿ ಕೊಟ್ಟನು . ಕಾಮಿನಿಯರ ರೂಪಲವಣ್ಯಗಳ ಕಡೆಗೆ ಮೋಹಾವಿಷ್ಟವಾಗಿ ಹೊರಳುತ್ತಿದ್ದ ಮನಸ್ಸು ಈಗ ಸಮತ್ವದಿಂದ ಪರಿಶುದ್ಧಿಗೊಂಡು, ಸಂಯಾಮದಿಂದ ಸ್ಥಿರಗೊಂಡು, ಜಿನನ ಪಾದಗಳನ್ನೇ ನೆನೆಯುವಂತಾಯಿತು . ಅನಂತರ ಬಾಂಧವಬಂಧವನ್ನು ಕಳೆದುಕೊಂಡು, ಪಂಚಮುಷ್ಟಿಯಿಂದ ಕೇಶಪಾಶವನ್ನು ಕಳೆದುಕೊಂಡು ಆಯುಷ್ಯಭಾಗದ ಇಪತ್ತೆರಡು ದಿನಗಳನ್ನು ಪ್ರಾಯೋಪಯೋಗ ಸಂನ್ಯಸನದಿಂದ  ಕಳೆದು ಇಪತ್ತೆರಡು ಸಾಗರೋಪಮಾಯುಷ್ಯ ಸ್ಥಿತಿಗೊಡೆಯನಾಗಿ ಅಚ್ಯುತಕಲ್ಪದ ಸಾಂತಕರ ವಿಮಾನದಲ್ಲಿ ಸ್ಚ್ಯುತೇಂದ್ರನಾಗಿ ಹುಟ್ಟಿದನು. ಅಲ್ಲಿಯೂ ಹಲಗಾಲ ಬೋಗಾನುಭವ ಮಾಡಿ, ಆಯುರಬ್ಧಿಯ ಅವಸನದಲ್ಲಿ ಅಚ್ಯುತೇಂದ್ರನಾಗಿಯೂ  ಚ್ಯುತನಾಗುವುದು ತಪ್ಪಲಿಲ್ಲ ಎಂದ ಮೇಲೆ ಆ ಯುಮಹಕನು ಯಾರನ್ನೇ ಆಗಲಿ ಸುಸ್ಥಿತರಾಗಿರಲು ಬಿಡುವುದಿಲ್ಲ. ಎಂದೂ ಕಾಲಕ್ಕೆ ಛಲ ಎಂಬುದು ಸಹಜಗುಣ. ಅದು ಮೂರು ಲೋಕದಲ್ಲಿಯೂ ಅಚಲ ಎಂದುಕೊಳ್ಳುವುದನ್ನು ಲೀಲೆಯಿಂದ ಚಲಿಸುವಂತೆ ಮಾಡುತ್ತದೆ ; ಅಚ್ಯುತಎಂದುಕೊಳ್ಳುವುದನ್ನು ಕೆಡವಿ ಹಾಕುತ್ತದೆ ; ಅಮರ ಎಂಬುವನನ್ನು ಕೊಲ್ಲುತ್ತದೆ.

ಹೀಗೆ ಅಚ್ಯುತೇಂದ್ರನೂ ಕಾಲಾವಶನಾಗಿ ಭೂಮಿಯ ಮೇಲೆ ಮತ್ತೆ ಹುಟ್ಟುವುದಾಯಿತು. ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಕುರುಜಾಂಗಣ ಜನಪದವು ಅದರ ಸಸ್ಯಸಂಪತ್ತಗಿಯೂ ಅದರಲ್ಲಿ ಹಸ್ತಿನಾಪುರವು ಹೊಸತನೆಯಗಿಯೂ ಶೋಭಿಸುತ್ತಿತ್ತು. ಆ ಹಸ್ತಿನಾಪುರವನ್ನು ಅಮೃತಾಲಾಪನೂ ಯಮಕೋಪನ ಅತ್ಯುದಾರನೂ ಧೀರನೂ ರೂಪೇಕ್ಷುಚಾಪನೂ ಅನ್ವಯದೀಪನೂ ಅನವತಾರಿನರೇಂದ್ರನೂ ಆದ ಶ್ರೀಚಂದ್ರನು ಆಳುತ್ತಿದ್ದನು. ಈತನ ಮನಃಪ್ರೀಯೆಯೂ ಅಗ್ರಮಹಿಷಿಯೂ ಆದ ಶ್ರೀಮತಿಯು ದಾನಗುಣಸಂಪನ್ನೇ ಈಕೆಯೂ  ಸದಾ ರತ್ನಭೂಷಣಗಳಿಂದ ಅಲಂಕೃತೆಯಗಿ ಶೋಭಿಸುತ್ತಿದ್ದಳು . ಈ ಶ್ರೀಚಂದ್ರನಿಗೂ ಶ್ರೀಮತಿ ದೇವಿಗೂ ಆ ನಾಕಲೋಕಜನೂ

ಪುಣ್ಯಶಾಲಿಯೂ ಆದ ಅಪರಾಜಿತಚರನದ ಅಚ್ಯುತೇಂದ್ರನು ತಾಯಿತಂದೆಗಳಿಗೆ ಉತ್ಸವೋದಯವಾದಂತೆ ಉದಯಿಸಿ ಸುಪ್ರತಿಷ್ಠನೆಂಬ ಹೆಸರನ್ನು ಪಡೆದುಕೊಂಡನು. ಆ ರಾಜಪುತ್ರನು ಬಾಲ್ಯಕಲದಲಿ ವಿಶೇಷವ್ಯಾಸಂಗಮಾಡಿ ವಿದ್ಯಾವಿಧಿಯದನು. ತನ್ನ ಯೌವನದಲ್ಲಿ ಸನ್ನುತಳಾದ ಸುನಂದಾದೇವಿಯನ್ನು ಮದುವೆಯಾದನು. ಕುಲೋಚಿತವಾದ ರಾಜನೀತಿಯನ್ನು ಕಲಿತವನಾದ ಮೇಲೆ ವೀರ ಲಕ್ಷ್ಮೀವಲ್ಲಭನಾದನು. ಕೇವಲ ವಿನೋದಕ್ಕಾಗಿ ಕಾಡಾನೆಗಳ ಕೊಂಬನ್ನೂ ಸಿಂಹದ ದಾಡೆಯನ್ನೂ ಕಿತ್ತು ಕಾಡುವನಲ್ಲದೆ ನಿಷ್ಕರುಣೆಯಿಂದ ಅವುಗಳನ್ನು ಕೋಲ್ಲುತ್ತಿರಲಿಲ್ಲ ಹೀಗೆ ಇರಿವ ಮೆರೆವ ಪ್ರಾಯದ ಮಗನನ್ನು ಕಂಡು ತಾನು ಸಂಸಾರದ ಫಲವುಂಡಂತೆ ಸಂತೋಷಗೊಂಡು ಶ್ರೀಚಂದ್ರನು ತನ್ನ ಮಗ ಸುಪ್ರತಿಷ್ಠನಿಗೆ ರಾಜ್ಯವನ್ನು ವಹಿಸಿ ತಾನು ತಪಸ್ಸಿಗೆ ತೆರಳಿದನು. ಮಂದರಾಚಲಸದೃಶರಾದ ಸುಮಂದಿರಗುರುಗಳ ಪಾದಸೇವೇಯನ್ನು ಮಾಡುತ್ತ ಸೇವೆಯಲ್ಲಿಯೂ ತಪಸ್ಸಿನಲ್ಲಿಯೂ ಕೃಶಕಾಯನಾಗುತ್ತ ಬಂದನು. ಜಾತರೂಪಧರನೂ ಗುಣವಂತನೂ ಉಪಶಾಂತಮೋಹನೂ ಆದ ಶ್ರೀಚಂದ್ರನು ಹಗಲ ಹೊತ್ತಿನ ಚಂದ್ರನೆಂಬಂತೆ ಇದ್ದನು.

ಇತ್ತ ಕಡೆ ಪಿತೃದತ್ತವಾದ ರಾಜ್ಯವನ್ನು ದಕ್ಷನಾಗಿ ವಹಿಸಿಕೊಂಡು , ವಿರೋಧಿಗಾಳನ್ನು ತನ್ನ ಆಜ್ಞೆಗೆ ಒಳಪಿಸಿಕೊಂಡು ಅಯನಯನಿಷ್ಠನಾದ ಸಿಪ್ರತಿಷ್ಠನು ರಾಜ್ಯಭಾರಮಾಡುತ್ತಿದ್ದನು. ವಿಜಿಗೀಷುವೂ ಬಾಹುಬಲಿಯೂ ಆದ ಸುಪ್ರತಿಷ್ಠನಲ್ಲಿ ಪೃಥ್ವೀಪಲನವೆಂಬುದು ನಿಶ್ಚಿಂತೆಯಗಿ ಸುಪ್ರತಿಷ್ಠಿತವಾಯಿತು. ಅವನ ಮಹಿಮಶಾಲಿತ್ವವು ಸುರಗಿರಿಗೆ ಕೂಡ ದೀಕ್ಷಾಗುರುವಾಯಿತು; ತನ್ನ ದಾನಶೀಲವಾದ ಕಿಡುಗೆ ಆ ಕಲ್ಪವೃಕ್ಷಕ್ಕೆ ಕೂಡ ದಾನೋಪಾಧ್ಯಾಯನಾಯಿತು ; ರಮಣೀವೃಂದಕ್ಕೆ ಆಕರ್ಷಕವಾಗಿದ್ದ ಆತ್ಮಾಕೃತಿಯು ಮದನನಿಗೆ ಬಿಲ್ವಿದ್ಯಾಗುರುವಾಯಿತು . ಓಜಃಪ್ರಸಾದಾಧೀನವಾದ ತನ್ನುಕ್ತಿಯು ಆ ವಾಗ್ನರ್ತಕಿಗೆ ನಾಟ್ಯಕಲಾಚಾರ್ಯನಯಿತು. ಇವುಗಳಿಂದಾಗಿ ಸುಪ್ರತಿಷ್ಠನು ಲೋಕವಂದ್ಯನಾಗಿದ್ದನು ಸುಪ್ರತಿಷ್ಠ ಧರಾದಯಿತನಿಗೆ ಮೂರನೆಯ ಕಣ್ಣೊಂದು ಮೂಡಿತೆಂಬಂತೆ , ಮೇದಿನಿಯ ಭಾಗ್ಯೋದಯವನ್ನು ಪಡೆದುಕೊಂಡು ಸುನಂದಾದೇವಿಯಿಂದ ಸುದೃಷ್ಟನೆಂಬ ಮಗನದನು ಪ್ರಭೆಯಿಂದ ಚಿಂತಾಮಣಿ , ಪುಷ್ಪಮಂಜರುಯಿಂದ ಕಲ್ಪವೃಕ್ಷವು ಶೋಭಿಸುವಂತೆ ತಿಭುವನಭೂಷಣನಾದ ಸುದೃಷ್ಟನು ಸುನಂದೆಯೊಂದಿಗೆ ಶೋಭಿಸಿದನು. ಹೀಗೆ ಸಪುತ್ರಕನಾಗಿ

ಸುಪ್ರತಿಷ್ಠನು ಒಮ್ಮೆ ಯಶೋಧರ ಯತಿಪತಿಗೆ ಎರಗಿ, ಅವರಿಗೆ ಆಹಾರದಾನವನ್ನು ನೀಡದಾಗ ಪಂಚಶ್ಚರ್ಯಗಳು ಉಂಟಾದವು. ಸತ್ಪಾತ್ರದಾನಿ ಪಡೆಯದ್ದೇನಿದೆ? ಯತಿಜನಗಳಿಗೆ ಮಾಡುವ ಪಾತ್ರದನದ ಅತಿಶಯವನ್ನೂ ಅದರಿಂದ ದೊರೆಯುವ ಪುಣ್ಯಲಾಭವನ್ನೂ ಧರ್ಮೋಪಾಧ್ಯಾಯರು ವಿವರಿಸುತ್ತಿರಲಾಗಿ ವಚನಾಮೃತದಿಂದ ಅತಿಶಯಗೊಂಡ ಸುಪ್ರತಿಷ್ಠನ ದನಬುದ್ದಿಯು ಸತ್ಪಾತ್ರದಾನದಲ್ಲಿ ಪರಿಣಮಿಸಲು ಧರ್ಮವಿಜಯಯಾಗಿ ಅವನು ರಾಜ್ಯಭಾರಮಾಡುತ್ತಿದ್ದನು.

ಹೀಗಿರಲು ವಿವಿಧ ಪುಷ್ಪಪರಿಮಳಮಿಶ್ರತವೂ ಮಲಯಜಾಮೊದಸಂಸಕ್ತವೂ ಆದ ಮಲಯಾನಿಲವು ಬೀಸಿಬಂತು. ಹಾಗೆ ಬೀಸಿಬಂದ ಮಂದಮಲಯಾನಿಲವನ್ನು ಎದುರುಗೊಳ್ಳಲು ಒಂದು ರಾತಿ ಸುಪ್ರತಿಷ್ಠನು ಉಪ್ಪರಿಗೆಯನ್ನೇರಿ ಅಂಗಣದ ಹಿಂಭಾಗದಲ್ಲಿ ಹಾಸಿದ್ದ ಹಂಸತೂಲ್ಪದಲ್ಲಿ ಸುನಂದಾದೇವಿಯೊಂದಿಗೆ ಮಂಡಿಸಿ ಲೀಲೆಯೊಂದಿರಲು, ತಮವೆಂಬ ನೀಲಗಿರಿಯನ್ನು ಸೀಳುವಂತೆ ತಾರ್ ಆಸಹಸ್ರಾಕ್ಷನಾದ ಅಂಬರಗೋತ್ರಾಂತಕನು ಬೀಸೆಸೆದ ವಜ್ರಾಯುಧದ ಹಾಗೆ ಮಹತ್ತರವಾದ ಉಲ್ಕಾಪಾತವಾಯಿತು. ಸುಪ್ರತಿಷ್ಠನಿಗೆ ಅದು ನಿರ್ವೇಗನಿಮಿತ್ತವಾಯಿತು. ‘ ಕೆರಳುವ ಕೊಳ್ಳಿಯಂತೆ ಉಲ್ಕೆಯ ಕೊಳ್ಳಿ ಕೆರಳು ಬಿದ್ದುದನ್ನು ಕಂಡು ಬಲುಬೆದರಿದಂತಾಗಿ ಕೊಳ್ಳಿಯಿಂದ ತಾನ್ನನ್ನು ಕುತ್ತಿದಂತೆ ಅರಸನ ಮನಸ್ಸು ಕುದಿಗೊಳ್ಳುವುದು ಸಾಮಾನ್ಯ ; ಆದರೆ ಉಲ್ಕಾಪಾತವನ್ನು ಲೋಕವು ಕೆಟ್ಟದ್ದೆಂದು ಏಕೆ ಹೇಳುವುದೋ ತಿಳಿಯದು ; ನನ್ನ ಮನಸ್ಸಿನ ಮೋಹಾಂಧಕಾರವನ್ನು ಇದು ಕಳೆಯಿತು. ಈ ಉಲ್ಕೆಯು ಹೀಗೆ ಉರಿದು, ನಾನು ಕಂಡಿದ್ದು ಪ್ರಯೋಜನವೇ ಆಯಿತು. ಬಹುಕಾಲ ಬಾಳಬೇಕೆಂಬ ಆಸೆಯಿಂದ ಮೋಹಗ್ರಸ್ತರಾದ ಮಹಾರಾಜರು ಉಜ್ಜಲವಾಗಿ ಉರಿಯುವ ಅಗ್ನಿಯನ್ನು ಕಂಡು ಉಜ್ಜ್ವಲವಾಗಿ ಬೆಳಗಿ ಅಸ್ತಮಿಸುವ ಸೂರ್ಯನನ್ನು ಕಂಡು, ಉಜ್ವಲವಾಗಿ ಉರಿದು ಬೀಳುವ ಉಲ್ಕೆಯನ್ನು ಕಂಡು ಇವೆಲ್ಲ ತಮ್ಮ ತೇಜಸನು ಕುಗ್ಗಿಸುವ ರೇಖೆಯೋ ಏನೋ ಎಂದು ಭ್ರಮಿಸುತ್ತಾರೆ. ಭಯಗೋಳ್ಳುತ್ತಾರೆ. ಕಣ್ಣಿರುವವನು ನಿಚ್ಚಟವಾಗಿ ದಾರಿಯನ್ನು ಕಾಣಲಾಗುವಂತೆ ಹುಟ್ಟುಗುರುಡನು ಕಾಣುವನೆ? ಸಂಯಗ್ದೃಷ್ಟಿಯುಳ್ಳವನು ಧರ್ಮದ ಹೊಲಬನ್ನು ಕಾಣಲಾಗುವಂತೆ ಮದಾ,ಂಧನು ಕಾಣುವನೆ ?

ಹೀಗೆ ಸುಪ್ರತಿಷ್ಠನು ವಿಚಾರಮಾಡುತ್ತಿರುವಾಗ ಆ ವೇಳೆಗೆ ನಗರಕ್ಕೆ ಸುಮಂದಿರ ಜಿನಪತುಯ ಸಮವರಣ ಸಾರಿಬಂತು. ಸುಪ್ರತಿಷ್ಠನು, ಮೊಳಗನ್ನು ಕೇಳಿ ಮಳೆಗಾಲ ಬಂತೆಂದು ಹರ್ಷಿಸುವ ಜಾತಕದಂತೆ, ದೇವದುಂದುಭಿ ಧ್ವನಿಯನ್ನು ಕೇಳಿ , “ ಬಾಯಾರಿದವನ ಮೇಲೆ ತೊರೆ ನುಗ್ಗಿ ಬಂದಂತೆ ಎಂದು ಸಂತೋಷಪಟ್ಟು, ಪಾಪಪ್ರತಿವ್ಯೂಹಭೀತಿಯಿಂದ ಸಮವಸರಣಭೂಮಿಯನ್ನು ಹೊಕ್ಕು, ದೇವಾದಿದೇವನನ್ನು ಸ್ತುತಿಡಿ, ಮುಂದೆ ಅರ್ಹಂತ್ಯ ಮಹಾಫಲವನ್ನು ಪಡೆಯಲು ಈಗ ಅದಕ್ಕೆ ಬೀಜವನ್ನು ಕೊಳ್ಳುವಂತೆ, ಆ ಜಿನನ ಪಾದಗಳೆಡೆಯಲ್ಲಿ ದೀಕ್ಷೆಗೊಂಡನು ರಾಜ್ಯಸುಖದ ಭೋಗೋಪಭೋಗಗಳಾನ್ನು ತ್ಯಿಜಿಸಿ, ಉಪಶಾಂತಭಾವದಲ್ಲಿ ತನ್ಮಯನಾಗಿರುತ್ತಿದ್ದನು.

ಹೀಗಿರಲು ಪಶ್ಚಿಮಾನಿಲವು ತೀಡಿಬಂದು ಮಳೆಗಾಲದ ಆಗಮನವನ್ನು ಸೂಚಿಸಿತು. ಆ ಘನಾಗಮದಲ್ಲಿ ಸಿಡಿಲು ಗುಡುಗುಗಳ ಆಕ್ರೋಶಕಾಲದಲ್ಲಿ, ಸುಪ್ರತಿಷ್ಠತಪಸ್ವಿಯು ಬೆಟ್ಟದಂತೆ ನಿಚಲನಾಗಿ ಮರದ ಬುಡದಲ್ಲಿ ತಪೋಮಗ್ನನಾಗಿರುತ್ತಿದ್ದನು. ಮಳೆಗಾಲವು ಕಳೆದು ಮೂಡಣದ ಗಾಳಿ ಬೀಸಿಬಂದು ಚಳಿಗಾಲದ ಪ್ರವೇಶವನ್ನು ಸೂಚಿಸಿತು. ಆ ಕಾಲದಲ್ಲಿ ಈತನ್ನು ಚಳಿಗೆ ಕೊರೆಯುವ ನೀರಿನಲ್ಲಿ ನಿಂತು ತಪಸ್ಸು ಮಾಡಿದನು. ಹೀಗಿರಲು ಉಗ್ರತಾಪದ ಬಿಸಿಲುಗಾಲವೂ ಕಾಲಿಟ್ಟಿತು. ಆಗ ಕರಣ ಕರಬಿ ಉರೊಯೇಳುವಂಥ ಸೂರ್ಯಕಾಂತಶಿಲೆಯ ಮೇಲೆ ಅಕ್ಷುಬ್ಬನಾಗಿ ಪ್ರತಿಮಯೋಗದಲ್ಲಿ ನಿಂತನು. ಹೀಗೆ ತಪಸ್ಸುಮಾಡಿ ಪರಮಜ್ಞಾನಿಯಾಗಿ ಆ ಸುಪ್ರತಿಷ್ಠ ವ್ರತಿಪತಿಯು ಅನುಕ್ರಮದಿಂದ ಏಕಾದಶಾಂಗಧರನಾಗಿ ಪೋಡಶಭಾವನೆಗಳನ್ನು ಪರಿಭಾವಿಸಿ, ಸ್ವದ್ಗುಣಸಮಾಯುಕ್ತನಾಗಿ ತೀರ್ಥಕರಪುಣ್ಯವನ್ನಾರ್ಜಿಸಿ ಒಂದು ತಿಂಗಳ ಕಾಲ ಸಂನ್ಯಸನದಲ್ಲಿದ್ದು ಶರೀರತ್ಯಗಮಾಡಿ ಉತ್ತರ ವೈಜಾಯಂತಿವಿಮಾನದಲ್ಲಿ ಅಹಮಿಂದ್ರನಾಗಿ ಹುಟ್ಟಿ, ತ್ರಯಸ್ತ್ರಿಂಶತ್ಸಾಗರೋಪಮಾಯುಷ್ಯನಾಗಿ ಮಹಾಮಹಿಮೆಯಲ್ಲಿ ಮೇಲುಮೇಲಿನದನ್ನು ಸಾಧಿಸುತ್ತ ದಿವ್ಯಸುಖವನ್ನು ಕೆಲಕಾಲ ಅನುಭವಿಸಿದನು.

ವನವರ್ಣನೆಯಲ್ಲಿ ವಸಂತವರ್ಣನೆಯು ಸ್ವಾದುವಾಗುವಂತೆ ಈ ಪ್ರಸಿದ್ದ ಕೃತಿಯಲ್ಲಿ ಕೃತಿನಾಥನಾಥ ನೇಮಿನಾಥನ ವಸ್ತುವರ್ಣನೆಯೇ ಮುಖ್ಯ. ಆದ್ದರಿಂದ ಮೊದಲಲ್ಲಿ ಆತನ ಪ್ರಸಿದ್ಧ ವಂಶವರ್ಣನೆಯನ್ನು ಕವಿ ಈ ಪ್ರಕಾರ ಮಾಡುತ್ತಾನೆ. ವಿಧವಿಧವಾದ ಪಶುಪಕ್ಷಿಗಳು , ತರುಲತೆಗಳು , ಪುಷ್ಪಫಲಾದಿಗಳು – ಈ ಮೊದಲಾದ ರಸಿಕರಸಾಹ್ಲಾದಕರಿಯಾದ ರಮಣೀಯದೃಶ್ಯಾವಳಿಗಳಿಂದ

ಭರತಕ್ಷೇತ್ರವು ಅತಿಶಯವಾಗಿ ಶೋಭಿಸುತ್ತಿತ್ತು. ಅಂದರಲ್ಲಿ ಕೃತಾರ್ಥವೆಂಬ ವಿಷಯಕ್ಕೆ ಸೇರಿದ ಶೌರ್ಯಪುರುಷವೆಂಬ ಸುರೇ,ದ್ರಪುರಸದೃಶವಾದ ಪುರವುಂಟು. ಅದನ್ನು ಶೂರನೂ ಗುಣವಂತನೂ ಆದ ಶೂರಸೇನ ಮಹಾರಾಜನು ದಕ್ಷನಾಗಿ ಆಳುತ್ತಿದ್ದನು. ದೇವಸನ್ನಿಭನಾದ ಈ ಶೂರಸೇನನ ಮಗನೇ ಸ್ಮರಸನ್ನಿಭನಾದ ಶೂರವೀರ ಮಹಾರಾಜ . ಈತನ ಪತ್ನಿ ಧಾರಣಿ . ಶೂರವೀರನಿಗೂ ಧಾರಿಣಿಗೂ  ಅಂಧಕವೃಷ್ಣಿ ಎಂಬ  ಇಬ್ಬರು ಮಕ್ಕಳಾದರು. ವಿಷ್ಣುವಿಗೆ ಲಕ್ಷ್ಮಿಯ ಹಾಗೆ ಅಂಧಕವೃಷ್ಟಿ ಸುಭದ್ರೆಯೆಂಬ ಶುಭಲಕ್ಷಿತೆಯಾದ ಕನ್ಯೆಯೊಬ್ಬಳು ಪತ್ನಿಯಾದಳು ; ಶಿವನಿಗೆ ಪಾರ್ವತಿಯ ಹಾಗೆ ನರಪತಿವೃಷ್ಣಿಗೆ ಪದ್ಮಾವತಿ ಎಂಬವಳು ಸತಿಯಾದಳು. ಇವರಲ್ಲಿ ಅಂಧಕವೃಷ್ಣಿಗೂ ಸುಭದ್ರೆಗೂ ಸಮುದ್ರವಿಜಯನೇ ಮೊದಲಾಗಿ ಹತ್ತು ಜನ ಮಕ್ಕಳಾದರು. ಅವರು ಸಮುದ್ರವಿಜಯ, ಧರಾಕ್ಷೋಭ ಉತ್ಕ, ಸ್ತಿಮಿತಸಾಗರ ಹಿಮವಂತ, ವಿಜಯಾಚಳ ಧಾರಣ (ವಿಜಯಾಚಳ) ಪೂರಣ ಶ್ರೀಭವನ, ಅಭಿನಂದನ, ವಸುದೇವ- ಎಂಬವರು, ಧರಾಭಾರವನ್ನು ನಿತ್ತರಿಸುವ  ಕೂರ್ಮ ಶೇಷರೂ ಅಷ್ಟದಿಗ್ಗಜಗಳೇ ದಶಭೂಭುಜರಾದವು ಎನ್ನುವಂತೆ ಪರೆಮಪ್ರತಪಿಗಳಾಗಿದ್ದ ನಾಭಿಸನ್ನಿಭ ಸಮುದ್ರ ವಿಜಯದಿಗಳೇ ಅಲ್ಲದೆ ಇವರಿಗೆ ನೇರ್ಗಿಯುರಾಗಿ ಅಂಧಕವೃಷ್ಣಿಗೆ ಕೊಂತಿ ಮತ್ತು ಮಾದ್ರಿಯರು ಪುತ್ರಿಯರಾದರು. ಹಾಗೇಯೇ ನರಪತಿವೃಷ್ಣಿಗೂ ಪದ್ಮವತಿಗೂ ಉಗ್ರಸೇನದೆವಸೇನ, ಮಹಾಸೇನ ಮತ್ತು ಗಾಂಧಾರಿ ಎಂಬ ಮಕ್ಕಳಾದರು, ಅಂಧಕವೃಷ್ಣಿಯ ಮಕ್ಕಳಾದ ಸಮುದ್ರವಿಜಯಾದಿಗಳಲ್ಲಿ ವಸುದೇವನೊಬ್ಬನ ಹೊರತಾಗಿ, ಉಳಿದ ರಾಜಪುತ್ರರಿಗೆ ಅತ್ಯಂತ ರೂಪಲಾವಣ್ಯವತಿಯಾದ ಶಿವದೇವಿ, ನವಧೃತೇಶ್ವರಾದೇವಿ, ಸ್ವಾಯಂಪ್ರಭೆ , ಸುನೀತೆ, ಸೀತೆ , ಪ್ರಿಯಂವದೆ ಪ್ರಭಾವತಿ ಕಾಳಿಂದಿ, ಸುಪ್ರಭೆ -ಎಂಬವರು ಕ್ರಮವಾಗಿ ಪತ್ನಿಯರಾದರು. ಹೀಗೆ ಶೂರಸೇನನಿಂದ ಬೀಜಾವಾಪಗೊಂಡು, ಅವನ  ಮಗ ಶೂರವೀರನಿಂದ ಅಂಕುರಗೊಂಡು, ಮಕ್ಕಳಾದ ಅಂಧಕವೃಷ್ಣಿ-ನರಪತ್ತಿವೃಷ್ಣಿಗಳಿಂದ ದಳಗೊಂಡು, ಒಂದು ಕಡೆ ಸಮುದ್ರವಿಜಯಾದಿಗಳಿಂದಲೂ ಒಂದು ಕಡೆ ಉಗ್ರಸೇನದಿಗಳಿಂದಲೂ ಬಳ್ಳಿಯಾಗಿ ಹಬ್ಬಿತು, ಹರಿವಂಶವಲ್ಲರಿ. ಶೂರವೀರಮಹಾರಾಜನು ಹೀಗೆ ಹಬ್ಬಿದ ಹರಿವಂಶದ ಹಿರಿಮೆಗೆ ಹಿರಿಯನಾಗಿ ಖ್ಯಾತನಾಗಿ ರಾಜ್ಯವಾಳುತ್ತಿದ್ದನು.

ಇತ್ತ ಕಡೆ ಹಸ್ತಿನಾಪುರದಲ್ಲಿ ಕುರುವಂಶದ ಅರುಸು ಶಕ್ತಿಗೆ ಸವಕೆಯೆಂಬವಳಲ್ಲಿ ಪರಾಶರನು ಪ್ರತಾಪಿಯಾಗಿ ಹುಟ್ಟಿದನು. ಈ ಪರಾಶರನಿಗೆ ಮತ್ಸರಾಜಾನ್ವಯದ ಸತ್ಯಪರಾ ಎಂಬ ಸತಿಯಲ್ಲಿ (ಸತ್ಯಪರಾಖ್ಯ ಸತ್ಯವತಿಗೆ) ಜಿತವ್ಯಸನನೂ ಯಶೋವಲ್ಲಭನೂ ಅದ ವ್ಯಾಸನೆಂಬವನು ಸುತನಾಗಿ ಹುಟ್ಟಿದನು. ಈ ಪರಾಶರಸುತನಾದ ವ್ಯಾಸನಿಗೂ ಆತನ ಸತಿ ಸುಭದ್ರೆಗೂ ಧೃತರಾಷ್ಟ್ರ , ಪಾಂಡು ಮತ್ತು ವಿದುರ ಎಂಬ ಮೂವರು ಮಕ್ಕಳಾದರು ಈ ವೇಳೆಗೆ ಅತ್ಯಂತ ರೂಪವತಿಯಾದ ಕುಂತಿಯ ರೂಪ ಲಾವಣ್ಯ ವರ್ಣನೆಯ ಮತು ಲೋಕದಲ್ಲೆಲ್ಲ ಕೇಳಿ ಬರುತ್ತಿದ್ದು. ಇದರ ಪರಿಣಾಮವಾಗಿ ಪಾಂಡುವಿನ ಮನಸ್ಸು ಕುಂತಿಯ ಕಡೆಗೆ ಆಕರ್ಷಿತವಾಗಿ ಬರುಬರುತ್ತ ಅತನ ಹೃದಯವನ್ನು ಆ ಕಾಂತೆಯ ಆಕೃತಿ ಕೆಂಡದ ಬೊಂಬೆಯೆನ್ನುವಂತೆ ಹೊಳೆದು ಹೊಕ್ಕಿತು. ಪಾಂಡು ಎನ್ನುವ ಹೆಸರು ಸಾರ್ಥಕ ನಾಮವಾಯಿತೆನ್ನುವಂತೆ ಆತನಲ್ಲಿ ಕಾಮಪಾಂಡುರತೆ ಕಾಣಿಸಿತು. ಹಾಗೆ ನೋಡಿದರೆ ವಿರಹಿ ಜನಗಳ ಮಟ್ಟಿಗೆ ಈ ಲೋಕಾವು ಪಾಂಚಭೌತಿಕವೆಂಬುದು ಅಸಂಗತ; ಏಕಬೌತಿಕವೆಂಬುದೇ ಸರಿ. ಹೇಗೆಂದರೆ ಸೂಸವ ಶೀತಜಲದ ರುಚಿಯಾಗಲಿ, ಸುರಭಿಸಮೀರಣನ ಗಂಧವಾಗಲಿ, ಸ್ಮಿತವನೋಲ್ಲಸಿತ ವಸುಧಾತಳದ ರಮ್ಯರೂಪವಾಗಲಿ, ಚಂದ್ರಿಕೆಯ ಸುಖಸ್ಪರ್ಶವಾಗಲಿ ಆ ಪಾಂಡುವೆನ ಪಾಲಿನ ಅಗ್ನಿಸಮವಾಯಿತು. ಹೀಗೆ ಕಂತುರಾಜನ ಕೊಂತದಂತೆ ಪಾಂದುವಿಗೆ ಕುಂತಿಯ ರೂಪವು ಹೃದಯಶಲ್ಯವಾಗಲು, ಅವನು ತುಂಬ ನೊಂದು ವಿರಹಾಪಾತದಿಂದ ಕೃಶನಾಗಿ ಮಮ್ಮಲ ಮರಗಿ , ಮನಸ್ಸನ್ನು ನಿಗ್ರಹಿಸಿಕೊಳ್ಳಲಾಗದೆ, ತಾನಿದ್ದ ವನವೇ ತನಗೆ ಭವನವಾಗಿ ಕಾಲಹಾಕುತ್ತಿದ್ದನು.ಒಂದು ದಿವಸ ಆ ವಸಂತವಾಸವೆಂಬ ಭವನದ ಮನೋಹರತೆ ಮನಸ್ಸನ್ನು ಸೆಳೆಯಲು ಮನೋಹರಿಯೆಂಬ ತನ್ನ ಮನಃಪ್ರಿಯೆಯೊಂದಿಗೆ ವಜ್ರಮಾಳಿಯೆಂಬ ವುದ್ಯಾಧರನು ಬಂದು, ಅಲ್ಲಿಯ ಒಂದು ಮನೋಹರವಾದ ಮಾಧವೀಮಂಟಪದಲ್ಲಿ ಸುಖಾನುಭವಮಾಡಿ ಅಯುವಸರದಲ್ಲಿ ತನ್ನ ಬೆರಲುಂಗರದ ಕೆಂಪುಹರಳು ಕಳಚಿಬೇಳಲು ಆಸೆಗೊಡು ಅದನ್ನೇ ದಾಳಿಂಬದ ನೀಜವೇಂದು ಹುಡುಕುತ್ತಿದ್ದ ಗಿಣಿಯ ಮರಿಗೆ ವಿನೋದಕ್ಕೆಂದು ತನ್ನ ಮಣಿಮುದ್ರಿಕೆಯನ್ನೇ ಬಿಚ್ಚಿಕೊಡುತ್ತ ಅದರೊಂದಿಗೆ ಸರಸವಾಡುತ್ತಿದ್ದು, ಕೊನೆಗೆ ಅದನ್ನಲ್ಲಿಯೇ ಮರೆತುಬಿಟ್ಟು ಪತ್ನಿಯೊಂದಿಗೆ ಹೊರಟು ಹೋದನು ಆ ಸಂದರ್ಭದಲ್ಲಿಯೇ ಪಾಂಡುರಾಜನು ಒಂದು

ಆ ಉಂಗುರುವನ್ನು ಅಲ್ಲಿ  ಕಂಡು ವಿಚಾರಮಡುತ್ತ ಅದನ್ನೇ ನೋಡುತ್ತಿರಬೇಕಾದರೆ, ಆ ವಜ್ರಮಳಿ ವಿದ್ಯಾಧರನು ತನ್ನ ಉಂಗುರವನ್ನು ಹುಡುಕುತ್ತ, ಪಾಂಡುವಿನ ಭಾಗ್ಯದೇವತೆಯೇ ಬರುವಂತೆ ತ್ವರೆಯಿಂದ  ಅಲ್ಲಿಗೆ ಬಂದನು. ಆತನು ಬಂದದ್ದದನ್ನು ಕಂಡು  ಪಾಂಡುರಾಜನು ದರ್ಶನೇಂಗಿತದಿಂದಾಲೇ ಅದು ಆತನ ಉಂಗುರವೆಂದು  ತಿಳಿದು ಹಿಂದಿರುಗಿಸಿದನು.  ಆಗ ಈತನ ವಿವೇಕವನ್ನು ಮೆಚ್ಚಿಕೊಂಡು ಆ ವಿಯಚ್ಚರನು. ಇದು ಕಮರುಪಸಾಧನವಾದದ್ದು. ನೀನು ಕೂಡ ನನ್ನ ಕಣ್ಣಿಗೆ ದುರ್ಲಭದಯಿತಾನುರಾಗರಾಶಿಯಾದ ರೀತಿಯಲ್ಲಿ ತೋರುತ್ತೀಯೆ. ಈ ನನ್ನ ಉಂಗುರವು ನಿನ್ನ ಕೈಯಲ್ಲಿ ಒಂದೆರಡು ದಿವಸಗಲಿದ್ದು ಸುರತಸಾರಥಿಯಗಲಿ ಎಂದು ಅದನ್ನು ಅವನಿಗೇ ಕೊಟ್ಟು ಹೊರ್ ಅಟುಹೋದನು.

ಪಾಂಡುರಾಜನು ಆ ಹೊತ್ತೇಹೊತ್ತಗಿ ಕುಂತಿಯಲ್ಲಿಗೆ ಪಯಣಿಗೆ ಸಮಾಗಮದ ಆಣಾತಿಗೆ ಮದನಮುದ್ರ ಐಕೆಯನ್ನು ಕೊಂಡು ತೆರಳುವಂತೆ ಮಣಿಮುದ್ರಿಕೆ ಧರಿಸಿ, ಹಸ್ತಿನಾಪುರದಿಂದ ಅದೃಶ್ಯ ರೂಪಿನಿಂದ ಅಲ್ಲಿ ಅತಿ ಎತ್ತರವದ ಕೆಂಬೊನ್ನ ಕನ್ನೇಮಾಡದ ಏಳಾನೆಯ ನೆಲೆಯಲ್ಲಿ ಕುಂತಿಯ ಕನ್ಯಾವ್ರತಭಂಗದ ಭಿತಿಯಿಂದ ಒಂದು ಗಂಡುನೊಣವೂ ಅಡ್ಡಹರದಂತೆ ಸುತ್ತಲೂ ಕಟಿದ ಕಟ್ಟಾನೆಗಳಿಂದ ಪರಿವೇಷ್ಟಿತವದ ಸ್ಥಳದಲ್ಲಿ ಸಮಾನ ವಯೋವಿಳಾಸದ ವಿಳಾಸಿನಿಯಾರಿಂದ ಪರಿವೃತಲಾಗಿ ಕಾಮದೇವನನ್ನು ಪೂಜಿಸಿ ನಮಸ್ಕರಿಸುತ್ತಿದ್ದ ಕುಂತಿಯನ್ನು ಪಾಂಡುವು ನೋಡಿದನು. ಆಗ ಅವಳನ್ನು ಒಡಗೂಡುವ ಬಯಕೆಯುಂಟಾಗಿ ತನ್ನಲಿಯೇ ಹೀಗೆ ಆಲೋಚಿಡಿದನು; ನನ್ನ ಈ ಕೂಟದಿಂದ ಆಕೆಯ ಕನ್ನುತನದ ಮೀಸಲಳಿಯಬರದು; ಮುಗ್ಧೆಗೆ ಯಾವ ರೀತಿಯ ಬೇಸರ ಬಲಾತ್ಕಾರಗಳನ್ನೂ ಉಂಟುಮಾಡಲಗದು,ತನ್ನ ನಿಜಸ್ವರೂಪವನ್ನೆ  ಕುಂತಿಗೆ ತೋರಿಸಲೆಂದು ಯೋಚಿಸಿ ಉಂಗುರವನ್ನು ಬೆರಳಿಂದ ತೆಗೆದ ಕೋಡಲೇ ಶರೀರಮಾಯೆಯು ಕುಂತಿಯ ಪೂಜೆಗೆ ಮೆಚ್ಚಿ ಕಾಮನೇ ಪ್ರತ್ಯಕ್ಷನಾದಂತೆ ಆಕೆಯ ಎದಿರಿನಲ್ಲಿ ನಿಜ ಶರೀರದಿಂದ ಕಾಣಿಸಿಕೊಂಡನು. ಆಗ ಕೃಷ್ಣವರ್ಣೆಯಾದ ಕುಂತಿಯ  ನಿಬ್ಬೆರಗಿನ ನೋಟದಿಂದ ಅತ್ಯುತ್ಸುಕಾಲಾಗಿ ಅವನತ್ತ ನೋಡತೊಡಗಿದಳು. ಆಕೆ ಲಜ್ಜೆಯಿಂದಲೂ ಭಿತಿಯಿಂದಲೂ ಬೆವೆತಳು . ಹೀಗೆ ಚಂದ್ರೊದಯದಲ್ಲಿ

ಬಿದುವಿಡುವ ಮಣಿಶಲಕೆಯಂತಿದ್ದ ಆಕೆಯನ್ನು ನೊಡಿ ಆಕಾಂಕ್ಷಿಗೊಂಡು ಆಗಲೇ ಪಂಡುವು ಕುಂತಿಯೊಡನೆ ಕೂಡಿದನು. ಅವಳಿಗೆ ಸುಖಸ್ವಪ್ನದಂತೆ ಕಾಣಿಸಿಕೊಂಡು ಪಾಂಡು ಅದೃಶನಾಗುತ್ತಲೂ ಯಥಾಕಾಲದಲ್ಲಿ ಕುಮಾರಿಯಾದ ಆಕೆಗೆ ಗರ್ಭಚಿನ್ನೆಗಳು ಕಾಣಿಸಿಕೊಂಡವು ಅವನ್ನು ಮರೆಸಲೆಂದು ಅವಳ ಕೆಳದಿಯರು ಆಕೆಯ ಬಿಳುಪೇರಿದ ಅಂಗಕ್ಕೆ ಮಲಯಜದ ಲೇಪನವನ್ನೂ ಸ್ತನಗ್ರಗಳಲ್ಲಿ ಕಸ್ತೂರಿಯ ಲೇಪವನ್ನೂ ಮಾಡಿದರು. ಕೆಲಕಾಲದಲ್ಲಿ ಕುಂತಿಗೆ ಒಂಡು ಗಂಡುಶಿಶು ಉದಿಸಿತು. ಆ ಮಗುವನ್ನು ಆಗಲೇ ಕುಂತಿಯ ಕೆಳಾದಿಯರು ಒಂದು ಹೊನ್ನಿನ ಕಿರುಪೆಟ್ಟಿಗೆಯಲ್ಲೊ ನಿಧಿಯನ್ನುಡುವಂತೆ ಇಟ್ಟು ಯಮುನೆಯ ಮಡುವಿನಲ್ಲಿ ತ್ಜೇಲಿಬಿಟ್ಟರು. ಇಂಥ ಸಮಯಕ್ಕೆ ಅನುಕೊಲೆಯರಾಧ ಇಂಥ ಕೆಳದಿಯರನ್ನು ಪಡೆದದ್ದು ಕುಂತಿಯ ಪುಣ್ಯವೆನ್ನಬೇಕು.

ಹೀಗೆ ತೇಲಿಬಿಟ್ಟ ಮಗುವನ್ನು ಸೌಂದರರಜಪುರದ ಆದಿತ್ಯನೆಂಬ ಅರಸ್ನು ಅದೇ ದಿನ ತನ್ನ ಅರಮನೆಯ ಉತ್ತುಂಗ ಪ್ರಾಸಾದವನ್ನೇರಿ ಯಮುನಾನದಿಯ ಬೆಡಗಿನೊಟದ ನೋಟವನ್ನು ವೀಕ್ಷಿಸುತ್ತ ಇರುವಾಗ, ಓಡುವ ಕರಿಯ ನಿಎಇಮುಗಿಲ ಮೆಲೆ ಓಡುತ್ತಿರುವ ರವಿಮಂಡಲದಂತೆ ತೆರೆಮಾಸಗಿ ಹರಿಯುವ ಯಮುನೆಯ ಪ್ರವಹದಲ್ಲಿ ಧಾವಿಸುತ್ತ ಬರುವ ಕಿರುಪೆತ್ತಿಗೆಯನ್ನು ಕಂಡನು. ಕುತೂಹಲಗೊಂಡು ಅದನ್ನು ತನ್ನಡೆಗೆ ತರಿಸಿಕೊಂಡನು ತವರೆಯ ಮೊಗ್ಗಿನ ದಳಗಳಾನ್ನು ಬಿಡಿಸುವಂತೆ ತನೇ ಅ ಪೆಟ್ಟಿ ಗೆಯನ್ನು ತೆಗೆದಾಗ ಅದರಲ್ಲಿ ತೇಜಸ್ಸು ತುಳುಕುವಂಥ ಶಿಸುವೊಂದನ್ನು ಕಂಡನು ; ಅಲ್ಲಿಯೇ ಪಕ್ಕದಲ್ಲಿ ಒಂದು ಮಾಣಿಕ್ಯರಾಶಿಯಿರುವುದನ್ನು ನೋಡಿದನು. ಲಕ್ಷ್ಮಿಯು ಹೊಂದವರೆಯಲ್ಲಿ ಮನ್ಮಥನನ್ನು ಹೆತ್ತು ಅಗಲಿ ಹೋಂದಂತೆ ಚಿನ್ನದ ಪೆಟ್ಟಿಗೆಯಲ್ಲಿ ಒಪ್ಪುತ್ತ್ತಿದ್ದ ಶಿಶುಕುಮಾರನನ್ನು ಆ ದೊರೆ ನೋಡಿ , ತನ್ನ ಅರಸಿಯರನ್ನು ಕುರಿತು ' ಈ ಬಾಲಕನು ನಿಮ್ಮಲಿ ಯಾರ ಕೈಗೆ ಸಂತೋಷದಿಂದ ಬರುವನೋ ಅವಳಿಗೆ ಅವನನ್ನು ಕೊಡುತ್ತೇನೆ. ಎಂದನು ಯಾರ ಅರಸಿಯರೆಲ್ಲ ನನಗೆ ತನಗೆಂದು ಸಂಭ್ರಮಿಸಿ ಕೈ ನೀಡಲು ಮಗುವು ಪೆಟ್ಟಿಗೆಯಲ್ಲಿಂದ ರಾಧೆಯೆಂಬ ರಣಿಯ ಕೈಗೆ ಬಂದು, ವಿಶಖಾನ್ಷತ್ರದಿಂದ ಅನೂರಾಧೆಗೆ ಬಂದ ಬಲಚಂದ್ರನಂತೆ ಮುಗುಳ್ನಗೆ ನಗುತ್ತಿರಲು, ರಾಧೆಯು ಪುತ್ರವಿಶೇಷದಿಂದಗೆ ತೆಲೆಯ ಮೇಲೆ ತನಗೆರಡು ಕೋಡು ಮೂಡಿದಂತೆ ಉಬ್ಬಿಮಗುವನ್ನು ಮುದ್ದಿನಿಂದ ಬೆಳೆಸಿದಳು. ಆ ಮಗುವು ಹುಟ್ಟಿದಾಗ ಕಿವಿ ಮೊದಲು ಕಾಣಿಸಿ

ಹುಟ್ಟಿದ್ದರಿಂದ ಕರ್ಣನೆಂದೂ, ಕನ್ನೆಗೆ ಹುಟ್ಟಿದರಿಂದ ಕಾನೀನನೆಂದೂ, ದಿವಾಕರನು ಎಂದರೆ ಆದಿತ್ಯನೆಂಬ ರಾಜನು ತನ್ನ ಪತ್ನಿವಿಹಿತವಲ್ಲದ್ದ ರೀತಿಯಲ್ಲಿ ಕರ್ಣನ ಜನ್ಮವೃತ್ತಾಂತವನ್ನು ರೂಪಿಸುವ ಕುಮತಕಥೆಯನ್ನು ಕೇಳಿದರೆ, ನೀರು ತುಂಬಿದ ಕಿವಿ ನೋಯುವಂತೆ ತಲೆಬೇಸರವಾಗುವುದು ತಪ್ಪದು. ಕಿವಿಯಲ್ಲಿ  ಕರ್ಣನು ಹುಟ್ಟಿದನು ಎಂದು ಮೊದಲಾಗಿ ಹೇಳುವುದಕ್ಕಿಂತ ಸುಳ್ಳಿನ ಕಂತೆ ಬೇರೆಯಿಲ್ಲಕಲಿಯು ಕೀರ್ತಿ ಬೆಳೆಯುವ ವಿಷಯದಲಿ ಅಂಜಿ ಹಿಂಜರಿಯುವನೆ ? ಅತಿಶಯವಾಗಿ ಕಾಪಾಡಿದ ಸ್ವಾಮಿಯು ಕಾರಕ್ಕೆ  ಹಿಂಜರುಯದೆ ಜೀವವಿತ್ತವನ ಬದುಕು ಸಾರ್ಥಕ ಎನ್ನುವುದು ಕರ್ಣನ ಮಾತು, ಅವನು ತನ್ನ ಭುಜಬಲದಿಂದ ಎದುರುಬಿದ್ದ ಶತ್ರುವಿಗೆ ಸಿಂಹಕ್ಕೆದುರಾದಆನೆಯ ಪಡನ್ನು ತರುತ್ತಿದ್ದನು.ಶತ್ರುಗಳಿಂದ ಸಾಧಿಸಿತ್ತಿದ್ದ ಸಂಪತ್ತನ್ನು ಹೆತ್ತ ಹೆಣ್ಣನ್ನು ಕನ್ಯಾದನವಾಗಿ ಅನ್ಯರಿಗೆ ಕೊಡುವಂತೆ ಕರ್ಣನು ಬೇಡಿದವರಿಗೆ ದಾನಮಡುತ್ತಿದ್ದನು.

ಕನ್ನೆಸಾಹಸದಿಂದಾದ ಕನ್ನೆವೇಟದಲ್ಲಿ ಕುಂತಿಯ ಮನಸ್ಸು ಅನಂಗತಾಪದಿಂದ ಅವೃತವಾಯಿತು. ಇದನ್ನರಿತು ಅಂಧಕವೃಷ್ಣಿಯ ಲೋಕವು ಮೆಚ್ಚುವಂತೆ ಕುಂತಿ ಮಾದ್ರಿಯರಿಬ್ಬರನ್ನೂ ಪಾಂಡುನೃಪನಿಗೆ ಮದುವೆಮಾಆಡಿಕೊಟ್ಟನು. ಪಾಂಡುರಾಜನಿಗೂ ಕುಂತಿ ಮಾದ್ರಿಯರಿಗೂ ಅನ್ಯೋನ್ಯ ದಾಂಪತ್ಯವುಂಟಾಗಿ ಧರ್ಮಾತ್ಮಜ , ಭೀಮಸೇನ ಅರ್ಜುನ ಮತ್ತು ವಿಖ್ಯಾತರಾದ ನಕುಲಸಹದೇವರು ಎಂಬೈವರು ಮಕ್ಕಳಾದರು. ಹಾಗೆಯೇ ನರಪತಿವೃಷ್ಣಿಯ ಕಡುಗಲಿಯದ ಧೃತರಾಷ್ಟ್ರನಿಗೆ ತನ್ನ ಮ ಗಳು ಗಾಂಧರಿಯನ್ನು ಮದುವೆಮಾಡಿಕೊಡಲಾಗಿ, ಆಕೆಗೆ ನೂರ್ವರು ಗಂಡುಮಕ್ಕಳಾದರು, ಅವರಲ್ಲಿ ದುರ್ಯೋಧನನ ಅಧಿಕತೆ, ದುಶ್ಯಾಸನನ  ದೃರ್ಢತೆ ದುರ್ಧರ್ಷಣಾನ ಉದ್ಧತ ಧೃತಿ, ದುಮ ರ್ಷಣನ ಅಪ್ರತಿಮತೆ ಇವು ಗಾಂಧಾರಿಗೆ ಅತಿಸಮ್ಮ ದವನುಂಟುಮಾಡಿದವು.

ಹೀಗೆ ಹರಿವಂಶವೂ ಕುರುವಂಶವೂ ಸಿಧುಯುಗಳ ಸಂಭೇದದಂತೆ ಭೇದಿಸಲ್ಬಾರದಂತೆ ಕೂಡಿ ಅಭ್ಯುದಯಗೊಂಡು ಪುಣ್ಯಫಲವನ್ನು ಹಲವು ಕಾಲ ಅನುಭವಿಸುತ್ತಿರಬೇಕಾದರೆ, ಒಂದು ದಿನ ಗಂಧಮಾದನೆಂಬ ಉದಯಗಿರಿಯಲ್ಲಿ  ಉದಿಸಿದ ಸುಪ್ರತಿಷ್ಠರೆಂಬ ಸೂರಿಸುಧಾಕರರ ಸಮೀಪದಲಿ ಶೂರವೀರ ಮಹಾರಾಜನು ಪುತ್ರಪೌತ್ರಾದಿಗಳೊಂದಿಗೆ ಕೂಡಿ, ಧರ್ಮ ಶ್ರವಣಮಾಡಿ, ವೈರಾಗ್ಯಗೊಂಡು, ಅಂಧಕವೃಷ್ಣಿಯನ್ನು ಬರಮಾಡಿಕೊಂಡು,  ಉತ್ತಮಸ್ವನಾದ ಆತನಿಗೆ ಅತ್ಯಂತ

ಉತ್ಸವದಿಂದ ರಾಜ್ಯಭಾರವನ್ನು ವಹಿಸಿದನು. ಹಾಗೆಯೇ ನರಪತಿವೃಷ್ಣಿಗೂ ಯುವರಾಜ್ಯಪದವಿಯನ್ನಿತ್ತು ತನು ತಪಿಸ್ಸಿಗೆ ತೆರಳಿದನು. ಅಲ್ಲಿಂದಾಚೆ ಹನ್ನೆರಡು ವರ್ಷಗಳ ಕಾಲವಾಗಲು ಮಹಾತೇಜಸ್ವಿಯದ ಸುಪ್ರತಿಷ್ಠಸೂರಿಯು ಆ ಉದಯಗಿರಿಯ ಪರ್ವತದಲ್ಲಿ ಪ್ರತಿಮಾಯೊಗದಲ್ಲಿ ನಿಷ್ಠನಾದನು. ಮೋಡಗಳು ಗುಡುಗಿ ಮೊತ್ತಗೊಂಡು ಬೆಟ್ಟವನ್ನು ಮುತ್ತುವ ಹಾಗೆ , ಸುದರ್ಶನ ದೆವನೆಂಬವನು ತಾಮಸಬುದ್ಧಿಯಿಂದ ಆ ಮುನಿಗೆ ಭಯಂಕರವಾದ ಉಪಸರ್ಗವನ್ನು ಒಡ್ಡಿದನು. ಆ ಶತ್ರುವಿನ ಉಪದ್ರವವನ್ನು ಸೈರಿಸಿದ ಕೆಲಕಲದಲ್ಲಿಯೇ ಆ ಯತಿಗೆ ಕೆವಲಬೋಧೆಯುಂಟಾಯಿತು. ಆಗ ಆ ಗಂಧಮಾದನ ಪರ್ವತಕ್ಕೆ ಕೆವಲಜ್ಞಾನಿಯ ಪೂಜೆಪರವೋತ್ಸವವನ್ನು ಮಾಡಲು ಬರುವ ದೇವನಿಕಾಯದ ದುಂದುಭಿಧ್ವನಿಯನ್ನು ಕೇಳಿ ಪುರುಹೂತನ ಪಿರಿಯರಸಿಯೊಂದಿಗೆ ಅಂಧಾಕವೃಷ್ಣಿಯೂ ಬಂದು, ಸಮಸ್ತದೆವಮಾನವಪರಿವೃಢನಾಗಿ ಕುಳಿತಿದ್ದ ಮಹಾಪುರುಷನನ್ನು ಕಂಡು ವಂದಿಸಿ ಮುಂದೆ ಕುಳಿತು ಮುಗಿದು "ಕೆವಲಿ ನನ್ನ ನಿನ್ನಹವನ್ನು ಲಾಲಿಸಬೇಕು ಇಗೋ, ಈ ದೇವತೆಗಳೆಲ್ಲ ಹೀಗೆ ನಿನ್ನನ್ನು ಅತ್ಯಾಂದರದಿಂದ ಷಪೂಜಿಸುತ್ತಿದ್ದಾರೆ. ಆದರೆ ಆ ಸುದಶರ್ನ ದೇವನೊಬ್ಬನು ನಿನಗೆ ಏಕೆ ಹಾಗೆ ಮಹೋಪದ್ರವನ್ನು ಕೊಟ್ಟನು, ಹೇಳಬೇಕು – ಎಂದು ಪ್ರಾರ್ಥಿಸಿದನು. ಅದಕ್ಕೆ ಜಿನನು " ಅಯ್ಯಾ ದೊರೆ ಕೇಳು ಆತನೇ ನನಗೆ ಮಹೋಪಕಾರಿ ಚಿನ್ನದ ರಜದಿಂದ ಕೊಡಿದ ಕಲ್ಲನ್ನು ಸಂಸ್ಕರಿಸಿದರೇ ಅಲ್ಲವೇ ಚಿನ್ನವನ್ನು ಕಲ್ಲಿಂದ ಹೊರತೆಗೆಯುವುದು ಸಾಧ್ಯ? ಇಂತಹುದು ಮಾಡುವವನನ್ನು ಕೆಟ್ಟಕೆಲಸ ಮಡುವವನು ಎನಲಾದೀತೆ? ಆ ಕಥೆಯನ್ನು ನಿನಗೆ ಹೇಳುತ್ತೇನೆ ಕೇಳು :

ಈ ಜಂಬೂ ದ್ವೀಪದ ಭರತಕ್ಷೇತ್ರದ ಚಂಪಾಪುರದಲ್ಲಿ ಸೂರದತ್ತ ಸುದತ್ತ ಎಂಬ ಇಬ್ಬರು ವ್ಯಾಪರಿಗಳಿದ್ದರು ಇವರು ವ್ಯಾಪರಾರ್ಥವಾಗಿ ಹೊರಹೊರಟು ವಿಶೇಷವಾಗಿ ಸಂಪತ್ತು ಸಂಪಾದಿಸಿಕೊಡು, ಹಿಂದಿರುಗಿ ಪಟ್ಟಣಕ್ಕೆ ಬರುವಾಗ ಸುಂಕದವರು ಕಂಡುಬಿಡುತ್ತಾರೆಂಬ ಶಂಕೆಯಿಂದ 'ಉಸಿರಂ ಹಿಡಲಾಱದಸುವಂ ಬಿಡುವಂತೆ ಆಪಟ್ಟಣದ ಹೇರಡವಿಯಲ್ಲಿ ಒಂದು ದಟ್ಟವಾದ ಪೊದೆಯ ಬುಡದಲ್ಲಿ ತಂದ ನಿಧಿಯನ್ನೆಲ್ಲ ಹೂತುಬಿಟ್ಟು ತೆರಳಿದರು. ' ಬೇಡಿದವರಿಗೆ ಅನುಗ್ರಹಿಸುವ ಪರಮಕವೀಶ್ವರರಿಗೆ ಕಯ್ಯೆತ್ತಿ ಕೊಡುವ ದಾನಿಗಳದೇನು ಹೆಚ್ಚುಗಾರಿಕೆ? ಆದರೆ ಬಂದು ನಿಂತು

ಏನನ್ನೂ ಬೇಡದ \ನೆಲಕ್ಕೂ ಕಾಡಿ ಪೀಡಿಸುವ ಅರಸನಿಗೂ ಧನವನ್ನು ಕೊಡುವ ಕೃಪಣನಲ್ಲವೇ ನಿಜವಾಗಿ ಆ ದಾನಿಗಿಂತ ದೊಡ್ಡ ಮನುಷ್ಯ !? ಎನ್ನುವ ಲೋಕನೀತಿಗೆ ಅನುಸಾರವಾಗಿಯೇ ಆ ಇಬ್ಬರು ನಡೆದುಕೊಂಡು.

ಇತ್ತ ಕಳ್ಳುಮಾಡುವವನೊಬ್ಬನು ಕಳ್ಳನು ಹುಳಿಯಿಸಿ ಉಬ್ಬಿಸಲು ಬೇಕಾದ ಬೇರುಬಿಕ್ಕೆಗಳಾನ್ನು ಬೆರಟುತ್ತ ಬಂದು ಆಪೊದೆಯ ಬುಡವನ್ನೆ ಅಗೆದು ಮಣ್ಣೆತ್ತುವಾಗ ಬಂಗಾರದ ಮುತ್ತುರತ್ನಗಳ ರಾಶಿಯನ್ನು ನೋಡಿ ಹಿಗ್ಗಿನಿಂದ ಅವನ್ನೆಲ್ಲ ದೋಚಿಕೊಂಡು ಹೊರಟು ಹೋದನು. ಕೆಲಕಾಲದ ಮೇಲೆ ಆ ವ್ಯಾಪಾರಿಗಳಿಬ್ಬರು ಆಯೆಡೆಗೆ ಬಂದು ಬಚ್ಚಿಟ್ಟ ಒಡವೆಯನ್ನು ಅಲ್ಲಿ ಕಾಣದೆ ಒಬ್ಬರ ಮೇಲೊಬ್ಬರು ಕಾಡುಕೋಣಗಳಂತೆ ಉಗ್ರವಾಗಿ ಕೋಪಿಸಿ, ಹಸಿಯ ಬಡಿಗೆಗಳನ್ನೇ ಕಿತ್ತೇತ್ತಿ, ತಲೆಗಳು ಒಡೆಯುವಂತೆ ಬಡಿದಾಡಿ, ಇಬ್ಬರು ಸತ್ತು ಮೊದಲ ನರಕಕ್ಕೆ ಇಳಿದರು. ಆ ನರಕದಿಂದ ಉದ್ಧಾರಗೊಂಡ ಮೇಲೆ ಮುಂದೆ ಇಬ್ಬರು ವಿಂದ್ಯಾಟವಿಯಲ್ಲಿ ಬಲಿಷ್ಠವಾಗಿ ಕೊಬ್ಬಿದ ಎರಡು ಟಗರುಗಳಾಗಿ ಹುಟ್ಟಿದರು. ಅವು ಒಮ್ಮೆ ಒಂದಕ್ಕೊಂದು ಇದಿರು ಬಂದಾಗ, ಭವಬದ್ಧ ಕ್ರೋಧದಿಂದ ಕೆರಳಿ, ರೌದ್ರದೃಷ್ಟಿಯಿಂದ ಒಂದನ್ನೊಂದು ನೋಡಿ, ಬೆಟ್ಟಕ್ಕೊಂದು ಬೆಟ್ಟ ಬಡಿದಂತೆ ಪರಸ್ಪರವಾಗಿ ಸಂಘಟ್ಟಿಸಲು, ತಲೆಗಳು ಸಿಡಿದು ಕುತ್ತಿಗೆಯಲ್ಲಿ ಅಮುಕಿಹೋಗಲಾಗಿ ಪ್ರಾಣಬಿಟ್ಟವು. ಮುಂದೆ ಇವೇ ಗಂಗಾತಟದ ಗೋಕುಲದಲ್ಲಿ ಗೂಳಿಗಳಾಗಿ ಹುಟ್ಟಿದುವು. ಉದ್ದವಾದ ಗಂಗೆದೊವಲು, ಕಂದುಗೆಂಪಿನ ಕಣ್ಣುಗಳು, ಹಳೆಬಿದಿರಿನ ಮೊಳೆಯಂತೆ ಕಠಿಣವಾದ ಕೊಂಬುಗಳು, ಗೃಧ್ರಪಕ್ಷದಂತಹ ನಿಮಿರಿದ ಕಿವಿಗಳು, ದುಂದುಭಿಧ್ವನಿಯನ್ನು ಹೊಮ್ಮಿಸಬಲ್ಲ ಭಾರವಾದ ಕುತ್ತಿಗೆ, ಉದ್ದವಾದ ನೈದಿಲೆಯ ಕಾವಿನಂತಿರುವ ಚಲಿಸುವ ಬಾಲ, ಭಯಂಕರವಾದ ಸ್ವಭಾವ ಇವುಗಳಿಂದ ಕೂಡಿ ದರ್ಪದಿಂದಲೂ ಸೊಕ್ಕಿನಿಂದಲೂ ತಾವಿದ್ದ ಕ್ಷೇತ್ರದಲ್ಲೆಲ್ಲ ವಿಹರಿಸುತ್ತಿದುವು. ಈ ವೃಷಭಗಳು ಒಂದು ದಿನ ಒಂದೊಂದರ ಗುಟುರನ್ನು ಕೇಳಿ ಕೆರಳಿ, ತಾವಿದ್ದ ಮೊದಲ ನರಕವನ್ನು ತೆರೆದು ತೋರುವಂತೆ, ನೆಲವನ್ನು ಗೋರಸಿನಿಂದ ಕೆರೆಯುತ್ತ, ಸೊಂಡಿಲು ಹೆಣೆದು ಕಾದುವ ಸೊಕ್ಕಾನೆಗಳಂತೆ ಎದುರೆದುರು ಬಂದು ರೋಷ ವುಕ್ಕಿ ಹೋರಡಿದವು. ಒಂದೊಂದರ ಕುತ್ತಿಗೆಯಲ್ಲಿ ನಡುಗೊಂಬಿನ ವರೆಗೆ ನಟ್ಟು ಹೋದ ಒಂದೊಂದರ ಕೊಂಬುಗಳನ್ನು ಹಗ್ಗಕಟ್ಟಿ ಗೋಪಾಲಕರು ಕಿತ್ತು ತೆಗೆಯಬೇಕಾಗಿ ಬಂದು,

ಹಾಗೆ ತೆಗೆದ ಕೂಡಲೇ ಅವು ಸತ್ತವು. ಸಂಮೇದಗಿರಿಯ ಕಾಡಿನಲ್ಲಿ ಕೋಡಗಗಳಾಗಿ ಹುಟ್ಟಿದುವು. ಹೀಗೆ ಸೂರದತ್ತ ಸುದತ್ತರು ತಮ್ಮ ಅವಿವೇಕದಿದಾಗಿ ಮೊದಲು ಟಗರುಗಳಾಗಿ, ವೈರ ಬುದ್ಧಿಯಿಂದ ಹೋರಾಡಿ ಸತ್ತು ಎತ್ತುಗಳಾಗಿ, ಅವೂ ತಮ್ಮ ಅತಿಚಂಚಲಪ್ರಕೃತಿ  ವಿಪಾಕದಿಂದಾಗಿ ಸತ್ತು ಕೋಡಗಗಳಾಗಿ ಹುಟ್ಟಿದುವು. ಹೀಗೆ ಶರೀರಗಳ ಪಾಪವೆನ್ನುವುದು ಅವರ ನಡೆವಳಿಕೆಗೆ ಅನುರೂಪವಾದ್ದು.

ಆಯೆರಡು ಕಪಿಗಳು ಸಂಮೇದಗಿರಿಯ ಅರಣ್ಯಪ್ರದೇಶಗಳಲ್ಲಿ ಹರಿಯುವ ನಿರ್ಝರಿಣಿಯ ಎಡೆಗಳಲ್ಲಿ ವಾಸ ಮಾಡುತ್ತಿದ್ದುವು. ಇವೂ ಭವಬದ್ಧವೈರದಿಂದ ಕೂಡಿ ಪುರಾಣಪುರುಷರಾದ ವಾಲಿ ಸುಗ್ರೀವರಂತೆ ಪರಸ್ಪರರನ್ನು ಕಂಡು ಕಿನಿಸಿ, ಹೆದರದೆ ಬೆದರದೆ ಹೋರಾಡಿದುವು. ಇವುಗಳಲ್ಲಿ ಒಂದು ಕಪಿ ಸತ್ತು ಇನ್ನೊಂದು ಸಾಯುವದರಲ್ಲಿತ್ತು.  ಆಗ ಅದರ ಅಜ್ಞಾನವನ್ನು ಕಳೆಯಲೆಂದು ಕನಿಕರಿಸಿ ಸುರಗುರು ದೇವಗುರು ಎಂಬ ಚಾರಣರು ಗಗನಪಥದಿಂದವತರಿಸಿ ಬಂದು ಮರಣಾಭಿಮುಖವಾಗಿದ್ದ ಅದರ ಮೇಲೆ ಕಾರುಣ್ಯಜಲವನ್ನೂ ಕಮಂಡಲ ಜಲವನ್ನೂ ತಳಿಯಲಾಗಿ ಶೈತ್ಯಸ್ಪರ್ಶದಿಂದ ಅದು ಕಣ್ತೆರೆದು ಆ ಮುನಿಯುಗಳಕ್ಕೆರಗಿತು. ಅವರು ಸ್ಪಷ್ಟೋಕ್ತಿಗಳಿಂದ ಧರ್ಮವನ್ನು ತಿಳಿಸಲು, ಪಂಚನಮಸ್ಕಾರಮಂತ್ರಗಳನ್ನು  ಹೇಳಲು, ಕೇಳಿದ ಆ ಕೋಡಗವು ಶುಭಸಂಸ್ಕಾರದಿಂದ ಸತ್ತು ಆ ಸಂಮೇದಗಿರಿಶಿಖರವನ್ನು ಬಿಟ್ಟು ಸೌಧರ್ಮಕಲ್ಪದಲ್ಲಿ ಚಿತ್ರಾಂಗದನೆಂಬ ದೇವನಾಗಿ ಹುಟ್ಟಿತು;ಆದೇವನು ಅಲ್ಲಿ ಕೆಲಕಾಲ ದಿವ್ಯ ಸುಖಾನುಭವ ಮಾಡುತ್ತಿದ್ದು. ಮತ್ತೆ ಭೂಮಿಗೆ ಬಂದು ಜಂಬೂದ್ವೀಪದ ಭರತಕ್ಷೇತ್ರದ ಸುರಮ್ಯವಿಷಯಧ ಪೌದನಪುರದ ರಾಜನಾದ ಸುಸ್ಥಿತನಿಗೂ ಸುಲಕ್ಷಣಾದೇವಿಗೂ ಸುಪ್ರತಿಷ್ಠನೆಂಬ ಮಗನಾಗಿ ಭೋಗೋಪಭೋಗಗಳನ್ನು ಉಪಭೋಗಿಸುತ್ತುದ್ದನು. ಹೀಗಿರಲು ಒಮ್ಮೆ ಮಳೆಗಾಲ ಬಂತು. ಸಿತಗಿರಿಯಲ್ಲಿ ಆಗ ಗುಡುಗಿನ ದನಿಗೆ ತಮ್ಮ ತಮ್ಮಲ್ಲಿ ರೇಗಿ ಮುಸುರಿಕೊಂಡು ಒಂದನ್ನೊಂದು  ಕಾಡುವ ಕೊಡಗಗಳನ್ನು ಕಂಡು ಜಿತಸ್ಮಯನೂ ಸಂಜಾತವಿಸ್ಮಯನೂ ಆದ ಸುಪ್ರತಿಷ್ಠನು ಜಾತಿಸ್ಮರನಗಿ ವೈರಾಗ್ಯಗೊಂಡು ಹೋಗಿ ಸುಧರ್ಮಚಾರ್ಯ್ಯರ ಪದಗಳೆಡೆಯಲ್ಲಿ ತಪಶ್ಚರಣಪರಾಯಣನಾದನು. ಆತನೇ ನಾನು ; ಸೂರದತ್ತಚರ ಸುಪ್ರತಿಷ್ಠನಾಘಿದ್ದೇನೆ.

ಇತ್ತಾ ಕಡೆ ಸುದತ್ತಚರ ಮರ್ಕಟನೂ ಚರಾಚರಸ್ವರೂಪವಾದ ಸಂಸಾರರಣ್ಯದಲ್ಲಿ ತೊಳಲಡಿ ಬಂದು ಸಿಂಷುತ್ತೀರದ ರುಸಿಪಳ್ಳಿಯಲ್ಲಿ ಮೃಗಾಯಣಣಾನೆಂಬ ಮುನಿಗೂ ವಿಶಾಖೆಯೆಂಬ ಗೊರವಿತಿಗೂ ಗೌತಮನೆಂಬ ಹೆಸರಿನ ಮಗನಾಗಿ ಹುಟ್ಟಿ ತಪಸ್ಸು ಹಿಡಿದು, ಒಂದು ಬೇಸಿಗೆಯ ಕಾಲದಲ್ಲಿ ಹಿರಿದಾದ ದಿವ್ಯಸುಖವನ್ನು ಬಯಸಿ ಪಂಚಾಗ್ನಿತಪಸ್ಸಿಗೆ ನಿಂತನು. ಕಾಡುಕಾಡಾಗಿ ಹಬ್ಬಿದ ಪಾಪವನ್ನು ಮಹತ್ತರವಾದ ತಪೋಗ್ನಿಯೊಂದೇ ಸುಟ್ಟುರುಹಲು ಸಾಧ್ಯ ! ಅತನು ತನ್ನ ತಪಫಲದಿಂದಾಗಿಜ್ಯೋತಿರ್ಗಣದೊಳಗೆ ಸುದರ್ಶನನೆಂಬ ದೆವನಾಗಿ ಹುಟ್ಟ್ಟಿ ಪೂರ್ವಜನ್ಮ ಜಿನಿತವಾದ ಷರುಷರೋಷಾವೇಶದಿಂದ ನಮಗೆ ಈ ಯಉಪಸರ್ಗವನ್ನುಂಟು ಮಾಡಿದನು.

ಹೀಗೆ ಸುಪ್ರತಿಷ್ಠಯತಿಯು ಅಂಧಕವೃಷ್ಣಿಯ ಪ್ರಶ್ನೆಗೆ ವಿವರವಗಿ ಉತ್ತರವನ್ನು ಕೊಡಲು ಅದೆಲ್ಲವನ್ನೂ ( ಅಲ್ಲಿಯೇ ಇದ್ದ) ಸುದರ್ಶನ ದೇವನು ಕೆಳಿ ಸದ್ದರ್ಶನವನ್ನು ಕೈಗೊಂಡನು. ಅಂಧಕವೃಷ್ಣಿಯೂ ವಿರಕ್ತನಾಗಿ ಸಮುದ್ರವಿಜಯನಿಗೆ ಪಟ್ಟಗಟ್ಟಿ ತಪಸ್ಸನ್ನಾಚರಿಸಿ ಮೋಕ್ಷಕ್ಕೆ ತೆರಳಿದನು.

ಈ ಕಡೆ ಸಮುದ್ರವಿಜೌಅನು ವಸುದೇವ್ನೊಬ್ಬ ಹೊರತಾಗಿ ಉಳಿದ ಎಂಟು ಜನ ತಮ್ಮಂದಿರೂ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಪ್ರತಿಪಲಿಸುತ್ತ , ಅಷ್ಟಲೋಕಪಾಲರಂತೆ ಅದರದಿಂದ ಒಡಗೂಡಿ ಅಣ್ಣನ ಅನುಜ್ಞಾಯಂತೆ ನಡೆಯುತ್ತ ಇರಬೇಕಾದರೆ, ಅತಿದಕ್ಷನಾಗಿ ಭೂಮಿಪಾ ಲವನ್ನು ಮಾಡುತ್ತಿದ್ದನು. ಈ ಹತ್ತು ಜನ ಅಣ್ಣ ತಮ್ಮಂದಿರಲಿ ವಸುಧೇಶನ ಅಣುಗದಮ್ಮನಾಗ್ಗಿದ್ದ ವಸುದೇವನು ತನ್ನ ಹೊಸ ಬೆಡಗು ಬಿನ್ನಣದಿಂದ ಉತ್ಸಾಹತುಂಬಿದ ಕಾರ್ಯಶೇಲತೆಯಿಂದ , ಅತಿಶಯವಾದ ಸೊಬಗಿನಿಂದ , ಪ್ರಸಿದ್ಧಿಯಿಂದ, ಲೋಕದ ಕಣ್ಣಿಗೆ ಮುಳ್ಳಾ ಗಿರುತ್ತಿದ್ದನು. ವಸುದೇವನ ರೂಪಾತಿಶಯದ ಅಂಗಯಷ್ಟಿಯನ್ನು ನವಯೌವನಲಕ್ಷ್ಮಿಯೂ ವಿಳಾಸಲಕ್ಷ್ಮಿಯೂ ಕಾಲಕ್ರಮದಲ್ಲಿ ಬಂದು ಆಲಿಂಗಿಸಿದರು. ಹಾಗೆ ಬಂದ ಯೌವನ ವಸಂತದಲ್ಲಿ ವಸುದೇವ ಕುಮರನು ತನ್ನ ಓರಗೆಯ ಚೆನ್ನಿಗರು ಚದುರರೂ ಆದ ರಾಜಕುಮಾರರನ್ನೂ ಮಂತ್ರಿಪುತ್ರರನ್ನೂ ಕೂಡಿಕೊಂಡು ವನಕ್ರೀಡೆ ವಾರಿಕ್ರೀಡೆಗಳಿಗೆ ಒಮ್ಮೆ ಹೊರಡುವನು. ಮನ್ಮಥನನ್ನು ಋತುಗಳು ಬಳಸಿ ಬರುವಂತೆ ಆತನೊಂದಿಗೆ ವಿಟ ಪಂಡಿತ ನಟ ಪರಿಹಾಸಕ ಈ ಮೊದಲದ ನರ್ಮಸಹಾಯರೂ ಹೊರಡುವರು.

ವಸುದೇವನಂತಹ ಗುಣೈಕಗ್ರಹಿಯಾದ ರಾಜಪುತ್ರನನ್ನು ಎಲ್ಲರೂ ವಿಶೇಷವಾಗಿ ಒಲಿಯುವುದು ಸಹಜವೇ ಮತ್ತೊಂದು ದಿನ ತಳಿತ ಕಾಯ್ತು ನಂದನವನವನ್ನು ಸಂಚರಿಸಲು ಸಂಕಲ್ಪಿಸಿ, ಒತ್ತಾಗಿ ಹಿಡಿದ ಹೀಲಿಯ ತುರುಗಲಲ್ಲಿ , ಮಾಣಿಕ್ಯಾಭರಣವಿಭೂಷಿತನಾಗಿ , ವೃತ್ತಪಾಠಕರನ್ನೂ ಮತ್ತಕಾಮಿನಿಯರನ್ನೂ ಒಡಗೊಂಡು ,ವಸಂತವಲ್ಲಭನಾಗಿ ಹೊರಡುತ್ತಿದ್ದನು. ಇನ್ನೊಮ್ಮೆ ಈ ನರೇಂದ್ರಚಂದ್ರಮನು ಚಂದ್ರನ ಹಾಗೆ ಕುಂಕುಮಾನುಲೇಪವನ್ನು ಬಿಟ್ಟು ಚಂದನನುಲೇಪನದಿಂದ ಸಿಂಗರಗೊಂಡು , ಒಡಗೂಡಿ ಬರುವ ಬಾಲಕೇಳಿಯಹುಲ್ಲೇಗಳನ್ನು ತಗೆದಪ್ಪುತ್ತ ಯುವತಿಯರ ನೇತ್ರಚಕೋರಗಳಿಗೆ ತನ್ನ ಅಂಗಕಾಂತಿಯೆಂಬ ಬೆಳ್ದಿಂಗಳನ್ನುಣಿಸುತ್ತ ಕ್ರೀಡಾಶೈಲದಲ್ಲಿ ವಿಹರಿಸುತ್ತಿದ್ದನು. ಮತ್ತೊಮ್ಮೆ ಸಾಕ್ಷತ್ತಾಗಿ ಮನ್ಮಥನಂತೆ ಅಲಂಕೃತನಾಗಿ ಕಸ್ತೂರಿಯ ಕೆಂದಳಿರ ಹಸ್ತಚ್ಛದ, ಕೆದಗೆಯ ಒತ್ತುಹೂವಿನಿಂದ ಎತ್ತಿದ ಮೀನಕೇತನ ಅಶೋಕೆಯ ಸೋರ್ಮುಡಿಗಟ್ಟು ಇವುಗಳಿಂದ ಸಿಗರಿಸಿಕೊಂಡು, ಅರಲಂಬನ್ನು ತೊಗುತ್ತ ಇಕ್ಷುಧನುವನ್ನು ಹೆದೆಯೇರಿಸಿಕೊಂಡು, ಆ ಪುರದಲ್ಲೆಲ್ಲ ಓಡಾಡುತ್ತ ಪುರವನಿತೆಯರ ಮನಸೆಳೆಯುತ್ತಿದ್ದನು.

ಹಾಗೆಯೇ ಇನ್ನೂ ದೇವೇಂದ್ರನಂತೆ ಆನೆಯನ್ನೇರಿ ಊರಿನಲ್ಲಿ ಬೇಕಾದರೆ ಐರಾವತವೇರಿದ ಇಂದ್ರನನ್ನು ಸುರರು ಅಭಿಮಾನಪೂರ್ವಕವಾಗಿ ನೋಡುವಂತೆ ಪೌರರು ನೋಡುತ್ತಿದ್ದರು. ಮತ್ತೊಮ್ಮೆ ಸಕ್ಷತ್ ವಿಷ್ಣುವಿನಂತೆ ಅಲಂಕರಿಸಿಕೊಂಡು ಗರುಡಪಕ್ಷಿಯನ್ನೇರಿ ಹೋಗುತ್ತಿರಬೇಕಾದರೆ. ವಿದಳಿತಪದ್ಮಲೋಚನ ನವೋ ಗರುಡಧ್ವಜ ಕಾವುದು ಏಂದುಲೋಕದ ಜನ ಒಲಿದು ಎರಗುತ್ತಿದ್ದರು. ಮಗುದೊಮ್ಮೆ ಕಿನ್ನರನ ಹಾಗೆ ಕೃತಕಾದ್ರೀಯಲ್ಲಿ ಕುಳಿತು ವೀಣೆಯನ್ನಾಂತು ಸಲಕ್ಷಣವಾಗಿ ಸೊಗಸಾಗಿ ನುಡಿಸುತ್ತಿದ್ದನು. ಹಾಗೆಯೇ ಇನ್ನೋಮ್ಮೆ ಕಿವಿಗೆ ಕಮಲದ ಅವಂತಂಸವಿರಿಸಿ ಕುದುರೆಗೆ ನವಿಲ ಸೋಗೆಯಿಂದ ಜೀನುಹಾಕಿ ನವಿಲೇರುವ ಷಣ್ಮುಖನ ಹಾಗೆ ಅದನ್ನೇರಿ ಹೊರಡುತ್ತಿದ್ದನು.

ಹೀಗೆ ಕಡುಚೆಲುವನಾದ ಆತನ ಬಗೆಬಗೆಯ ಅಲಂಕಾರವು ಮನ್ಮಥನ ಪುಷ್ಪಾಸ್ತ್ರ ಪುಷ್ಪಧನುಗಳಿದ್ದಂತೆ ಲೋಕವನ್ನೇ ಮರಳುಗೊಳಿಸಲು ತಕ್ಕುವಗಿದ್ದವು. ಹೀಗೆ ಅಂದವೇ ಅಚ್ಚುಗೊಂಡ ಹಾಗೆ ಶ್ರಿಂಗಾರವೇ ಒಲಿದಿದ್ದ ಹಾಗೆ ಇದ್ದಂತಹ ರತಿರತ್ನಮೇರುವಾದ ಆ ವಸುದೇವನಿಗೆ ಪುರವನಿತೆ ಯರುಮರುಳಾಗಿದ್ದರು ಸಾಕ್ಷಾತ್ತಾಗಿ ಮನ್ಮಥನೇ ಯಾವಳಮೇಲೇ ಬಾನವನ್ನು ಬಿಡಲಿ, ಕೆಡವಲಿ,

ಹೊರಳಿಸಲಿ, ಎಂದು ಇಕ್ಷುಧನುವನ್ನು ಸಂಧಾನಮಾಡಿ ಹೆಂಗಳೆಯರಮೇಲೆ ಯುದ್ಧಕ್ಕೇ ಕತ್ತಿ ಹಿರಿದಂತೆ, ವಸುದೇವನ ರೂಪಾತಿಶಯವುಆವೂ ರಿನ ಹೆಂಗಳೆಯರನ್ನು ಗಾರುಗಿಡಿಸುವಂತಾಯಿತು. ಪೌರನಾರೀನಿಕಾಯದ ಮೆಲೆ ಮನ್ಮಥನ ಕೋಲಾಹಲ ಮಿಕ್ಕು ಮಿಗಿಲಾಯಿತು. ಈ ವಾಸುದೇವನಿಗೆ ಶೃಂಗಾರಕಾರಾಗೃಹನಿಗೆ , ಕಣ್ಸೋತವರು, ಮನಸೋತವರು ಒಬ್ಬಿಬ್ಬರಲ್ಲ ಲಕ್ಷ ಕೋಟಿಗಳೆನ್ನಬೇಕು. ಕಾಮ ಸೈನ್ಯವು ಪುರವರವನಿತಾಸೈನ್ಯದ ಮೆಲೆ ದಾಳಿಟ್ಟಂತೆ ಇತ್ತ ವಸಂತೋದಯವೂ ಆಯಿತು.

ಪಂಚಮಾಸ್ವಾಸ

ಶ್ರೀಯನ್ನೂ ಸರಸ್ವತಿಯನ್ನೂ, ವೀರಲಕ್ಷ್ಮೀಯನ್ನೂ, ಯಶೋಲಕ್ಷ್ಮೀಯನ್ನೂ ತನಗೊಲಿಯುವಂತೆ ಮಾಡಿದ  ಚಲುವನೂ ಮಾನುಜಮನೋಜನೂ ಆದ ವಸುದೇವನಿಗೆ ಸಾಮಾನ್ಯ ಸ್ತ್ರೀಯರನ್ನು ಒಲಿಸಿಕೊಳ್ಳುವದು ಅಸಾಧ್ಯವೇನೂ ಆಗಿರಲಿಲ್ಲ. ಶೌರ್ಯಪುರದ ಪುರವನಿತೆಯರು ಸಂಪೂರ್ಣವಾಗಿ ಅವನಿಗೆ ಮನಸೋತು ಮರುಳಾಗಿದ್ದರು. ವಸುದೆವಕುಮಾರನು ಪುರಬಹಿಃಪುರದಲ್ಲಿ ಆಗಾಗ ಸಂಚರಿಸುತ್ತಿರಬೇಕಾದರೆ ಸೌಭಾಗ್ಯಕಾರ್ತಿಯರು, ಚಲ್ಲಕಾರ್ತಿಯರು, ಸೋಲಕಾರ್ತಿಯರು ತೇಪೇಕಾರ್ತಿಯರು, ತಿಯಕಾರ್ತಿಯರು,  ಕಟ್ಟೆಯಕಾರ್ತಿಯರು, ಪೋಸವೇಟಕಾರ್ತಿಯರು, ಕಡುವೇಟಗಾರ್ತಿಯರು, ತಮ್ಮ ತಮ್ಮ ಸ್ವಭಾವಾನುಸಾರವಾದ ಚೇಷ್ಟೇಗಲಿಂದ ಆವನನ್ನು ಬಯಸಿ ಬಯಸಿ ಹಂಬಲಿಸುತ್ತಿದ್ದರು. ಪ್ರೌಢೆಯರು, ಸತಿಯರು,  ಕುಂಟಿಣಿಯರು, ವೃದ್ಧೀಯರು, ಶ್ರೀಮಂತರ ಪತ್ನಿರು, ಜೀವ,ಮತಿಯ ಸತಿಯರು. ಲೋಭಗುಂಟಿಣಿಯರು, ಬಾಲೆಯರು, ಈ ಎಲ್ಲರೂ ಆತನ ರೂಪಲವಣ್ಯಾತಿಶಯದಿಂದ ಅಕೃಷ್ಟರಾಗಿ ಮದನಪರೀತಾಪಗೊಂಡತೆ ಮೋಹವಶವಾಗಿದ್ದರು. ಆವೂರಿನ ಒನಗಳು ಕೊಳಗಳು,ಮಡುಗಳು ತೋಪುಗಳು ಎಲ್ಲೆಲ್ಲಿಯೂ ವಿರಹಗೃಹಸ್ತೆಯರಾಗಿ ವಿವಶಗೊ,ಂಡ ಪೌರನಾರಿಯುರುಅಲೇದಾಡುತ್ತಿದ್ದರು. ತಮ್ಮ ಹೃದಯ ಸಂತಪದಿಂದಾಗಿ ಮುಂಗಾಣದೆ ತೊಳಲಾಡುತ್ತಿದ್ದರು. ಹೀಗೆ ಮತಿಗೆಟ್ಟು ಅಲೆದಾಡುವ ಪಟ್ಟಣದ ಬೆಲೆ ವೆಂಡಿಯರನ್ನೂ ಕುಲವೆಂಡಿಯರನ್ನೂ, ಕಂಡು ವಿಪ್ರರೆಲ್ಲರೂ ‘ಗತಿಯಿಲ್ಲದೆ ಗೃಹಮೆಲ್ಲಿತ್ತು . ಎಂದುಕೊಂಡು ಗಾರ್ಹಸ್ಥ್ಯಕ್ಕೆ ಎಳ್ಳುನೀರುಬಿಟ್ಟರು. ವ್ಯಾಪರಿಗಳು  ತಮ್ಮ ಪತ್ನಿಯರೂ ಜಾರೆಯರಾದರೆತಾವು

ನೆಮ್ಮದಿಯಾಗಿ ವ್ಯಾಪಾರ ಮಾಡಲಗದೆಂದು ಅಂಗಡಿಯ ಕದವನ್ನು ಮುಚ್ಚಿದರು. ಊರಜನರೆಲ್ಲ ಹಾಗೆಯೇ ಆತಂಕಗೊಂಡು ಆಲೋಚಿಸಿ ಗುಂಪಾಗಿ ಮಹಾರಾಜನಲ್ಲಿಗೆ ಹೋಗಿ ಮೊರೆ ಇಟ್ಟರು,ಅವನಿಗೆ ನಮಸ್ಕಾರಮಾಡಿ ತಂತಮ್ಮ ಮಕ್ಕಳನ್ನು ಅವನಮುಂದಿಟ್ಟರು, ರಾಜನು ಅವುಗಳನ್ನು ನೋಡಿ ಆಎಲ್ಲವವೂ ವಸುದೇವನ ಪಡೆಯಚ್ಚಿನಂತೆ, 'ವಸುದೇವನ ದೇಹಮನಗೆವೊಯ್ದಂತೆಯಂ ಪಱೆದು ಪತ್ತಿಸಿದಂತೆಯುಂ ಇರುವುದನ್ನು ನೋಡಿ ಆಶ್ಚರ್ಯಪಟ್ಟನು. ಆಗ ಅವನೊಂದಿಗೆ ಮಾತನಾಡಲು ಸಂದರ್ಭವೊದಗಿ ತಳವರ್ಗದವರು ಬಿನ್ನವಿಸಿಕೊಂಡರು. ' ಪ್ರಭುವನ್ನು ಬಳಸಿ ಸೇವಿಸುತ್ತಿರುವ ವಂದಿವೃಂದವು ಸೇವಕ ಸಮೂಹವು ನಮ್ಮ ನಮ್ಮ ಪುತ್ರಪೌತ್ರಾದಿಗಳೂ ಇಂಥವರೆಂದೇ ಪ್ರಭುಗಳುತ್ತಿಳಿಯಬೇಕು . ಈ ಪುರದ ಪಣ್ಯಾಂಗನೆಯರೂ ಮನಸಿಜನಂತೆ ವಸುದೇವನ ರೂಪವು ಗರ್ಭದಲ್ಲಿ ಬಿಂಬಿಸಿ ಬಿತ್ತಾದಂತೇಯೂ ಆಚ್ಚೋತ್ತಿದಂತೇಯೂ ಆತನಂತಹ ಪುತ್ರರನ್ನೇ ಪಡೆಯುತ್ತಾರೆ. ಹೊಳಲಲ್ಲಿ, ಹೊರವೊಳಲ್ಲಲ್ಲಿ, ಬೀದಿಯಲ್ಲಿ , ಅಂಗಡಿಯಲ್ಲಿ, ಕೇರಿಯಲ್ಲಿ, ಸೋಳೆಗೆರಿಯಲ್ಲಿ, ಎಲ್ಲಿನೋಡಿದರೂ ಕಾಮದೇವನೇ ವಿಹರಿಸುತ್ತ ಬಂದಂತೆ ಬರುವ ವಸುದೇವನನ್ನೇ ಕಾಣುವುದಾಗುತ್ತದೆ. ಇಲ್ಲಿಂದ ಮುಂದಿನದು ತಾವೇ ಬಲ್ಲಿರಿ.– ಎಂದು ಮಾತು ನಿಲ್ಲಿಸಿ ಸುಮ್ಮನಾಗಲು, ಆರಸನು ಅವರನ್ನು ಸಮಾಧಾನ ಪಡಿಸಿ ಕಳಿಸಿ, ವಡುದೇವನಿಗೆ ಕರೆಕಳುಹಿಸಿದನು.

ಸಮುದ್ರವಿಜಯ ಮಹಾರಾಜನ ಕರೆಗೆ ಮಸುದೇವನು ಬಂದಮೆಲೆ ದೊರೆಯು ಊರುಬ್ಬೆಯಾದ ತಮ್ಮನ ಕೋಲಾಹಲಕರ ವರ್ತನೆಗೆ ಉದ್ದೇಗಪಟ್ಟು , ಅತಿಶಯವಾದ ಸೊಬಗಿಗೆ ಸಂತೋಷಪ್ಟ್ಟ, ತೆಗೆದಪ್ಪಿ ಆಘ್ರಾಣಿಸಿ , ಪಕ್ಕದಲ್ಲಿ ಕುಳ್ಳಿರಿಸಿಕೊಂಡು. ಬಾಯ್ದಂಬುಲವಿತ್ತು ಮೆಲ್ಲಗೆ ನಯವಾಗಿ ನುಡಿದನು : 'ಇದಕ್ಕೆ ನಿನ್ನ ಹುಣ್ಣಿಮೆಯ ಚಂದ್ರನಂತಹ ಮುಖವು ಹಗಲುಚಂದ್ರನ ಕಳೆಯಂತೆ ಕಾಂತಿಗುಂದಿದೆ; ಚಿಗುರಿನಂತಹ ತುಟಿಗಳು ಬತ್ತಿ ಬಾಡಿವೆ; ನಿನ್ನ ಮೈ ಹೊಸೆದ ಹೂವಿನಂತೆ ನ್ಲುಗುಹೋಗಿದೆ. ಬಿಸಿಲಲ್ಲಿ ಓಡಾಡುವುದರಿಂದ ಹೀಗಾಗಿರಬೇಕು ಎಂದುಕೊಳ್ಳುತ್ತೇನೆ ಹೀಗೆ ಅಲೆದಡುತ್ತಿರುವುದೇಕೆ ? ಅಪ್ಪಾ,ನೀರು ನೆರಳು ಇರುವಲ್ಲಿ ಹಾಯಾಗಿ ಮನಸ್ಸಿಗೆ ಒಪ್ಪಿದಂತೆ ಉಟ್ಟು ತೊಟ್ಟು ಸಂತೋಷವಾಗಿ ಹೂವಿನಂತೆ ಸುಖವಾಗಿರಬಾರದೆ? ದೇವಕುಮಾರರೂ ರಜಕುಮಾರರೂ

‘ಯಾರು ಕಂಡರು? ಯಾರು  ಕೇಳಿದರು ? ಎನ್ನುವ ಹಾಗೆ,  ಕಣ್ಣಿಗೆ ಬೀಳದ ಹಾಗೆ ತಿಳಿಯದ ಹಾಗೆ ಇರಬೇಕು. ಸುಮ್ಮನೆ ಒಂದೇ ಸಮ ಸುತ್ತಾಡುತ್ತಿದ್ದರೆ ಮೈಬಣ್ಣವೂ ಪುಣ್ಯವೂ ಅರಿಸಿನದ ಪಿಂಜಿಯಂತೆ ಹೊರಟುಹೋರುತ್ತದೆ. ಲೋಕದ ಅಸೂಯೆಯೂ ದೃಷ್ಟಿಯೂ ನಿನಗೆ ತಟ್ಟುತ್ತದೆ. ಇನ್ನೇಂದು ಮನೆಯ ಹೊಸಿಲಾನ್ನು ದಾಪಿ ಹೋಗಬಾರದು ನಿನಗೆ ಏನಾದರೂ ಬೇಸರವಾದರೆ ಅರಮನೆಯ ಅವರಣದಲ್ಲಿಯೇ ಅರಮನೆಯಯಂಗಳದ ಕೊಳದಲ್ಲಿ  ಹಂಸದ ಹಾಗೆ ಮೆಟುವಿನಂತಿರುವ ಸುವರ್ಣಕೃತಕಾಚಳಾದಲ್ಲಿ ದೇವತೆಯ ಹಾಗೆ ನಿನ್ನ ವಿಹಾರ ವಿನೋದವನ್ನು ಧಾರಳವಾಗಿ ನಡೆಸಬಹುದು. ಹರಯದಲ್ಲಿ ಕ್ರೀಡಾಶೀಲವಾಗಿರುವುದು ಸಹಜವಲ್ಲವೇ? ಇಷ್ಟು ಹೇಳಿ, ಮೇಲೆ ಸಹಜಭ್ರಾತೃತ್ಸಲ್ಯವನ್ನು  ತೋರಿ ಅಂತರಂಗದ ಗುಟ್ಟಿನ್ನು ಬಿಟ್ಟಕೊಡದೆ, ತಮ್ಮನಿಗೆ ತಿಳಿದರೆ ಅವನು ನೋಯುವನೆಂದು ಅವನಿಗಾಗಲಿ ಬೇರೆ ಯಾರಿಗಾಗಲಿ ತಿಳಿಯದ ಹಾಗೆ ಸಕಲ ಸಖಪರಿಕರಗಳಾನ್ನೂ ಸಲಿಸಿ, ಮನಸ್ಸನ್ನು  ಸೆರೆಗೊಳಿಸುವಂತೆ ಸುಖದ ನಡುವೇಯೇ ವಸುದೇವನನ್ನು ಸೆರೆಹಾಕಿದನು. ಆತನೂ ಕೂಡ ಅಣ್ಣನಿಕ್ಕಿದ ಉಗುಳು ಸಹ ದಾಟಿದೆ ಅಲ್ಲಿಯೇ ಇದ್ದುಕೊಂಡನು; ಆದರೆ ಮೊಡದ ಮೆರೆಯಲ್ಲಿದ್ದೂ  ತಾವರೆಗೊಳವನ್ನು ಅರಳಿಸವ ಸೂರ್ಯನಂತೆ ತನ್ನ ಪ್ರಭಾವದಿದಲೇ ನೆನಪಿನಿಂದಲೇ ಪುರಸ್ತ್ರೀಯರ ಮನಸ್ಸು, ಹೃದಯ ಅರಳುವಂತೆ ಮಾಡುತ್ತಿದ್ದನು.

ಹೀಗಿರಲು ಒಂದು ದಿವಸ ಈಳೆಯ ಸಾದನ್ನೂ ಹಸಿಯ ಕತ್ತುರಿಯನ್ನೂ ಹೊನ್ನಡಕಿದ (ಮುತ್ತಿನ) ವ್ಹಿಪ್ಪನೂ ಗಾಳಿ ಸೋಕದ ಹಾಗೆ ಅಂಗ್ಯೆಯಿಂದ ಮುಚ್ಚಿಕೊಂಡು ನಗುತ್ತ ವಸುದೇವನೆದುರಿನಲ್ಲಿ ಅಂತಃಪುರದ ಕಡೆಗೆ ತೆರಲುತ್ತಿದ್ದ ಮಾತುಗಾತಿಯೂ ಚುರುಕುಗಾತಿಯೂ ಅದ ಚೆಟ್ಟಿಯೊಬ್ಬಳನ್ನು ವಸುದೆವನು ಕಂಡನು. ಹಾಗೆಕಂಡು ಅವಳೊಂದಿಗೆ ಚರುರೋಕ್ತಿಗಳನ್ನಾಡಲು, ಅವನನ್ನು  ಕುರಿತು ಚೇಟಿಕೆಯಿಂದಳು : “ ಸೆರೆಯಲ್ಲಿದ್ದೂ ನಿನ್ನ ವಿಕಾರತನ ಹಾಗೆಯೇ ಇದೆ. ಈ ವಿಕೃತ ಬುದ್ದಿ ‘ಒಂದು ಕೋಡಗನೊಳ್ ಕಂಡೆ ಒಂದಂ ನಿನ್ನೊಳ್ಕಂಡೆಂ ಎಂದಾಗ ವಸುದೆವನು ಎದೆಗೆ ಇರಿದಂತೆ ನೊಂದು “ ಹೇಳು ಇದೇನು ಹೀಗೆ ( ಈ ಪಾಡು) ಎಂದು ಆತ್ಮೀಯತೆಯಿಂದ ಪ್ರಶ್ನಿಸಿದನು. ಅವ್ವಳು ಹೇಳಲಿಲ್ಲ ಆಗ ವಸುದೇವನು ಕೋಪಗೊಂಡು ಅವಳ ಕೈಯಲ್ಲಿದ್ದ್ದ ಕಸ್ತೂರಿಯನ್ನು ಕಸಿದುಕೊಂಡು ಅವಳ ಮೊಲೆಮೊಗಗಳಿಗೆ ತೊಡೆದುಬಿಟ್ಟು “ ಇಕೋ ‘ನೀವು ರಾಣಿಗೆ ಕಳಿಸಿಕೊಟ್ಟ  ಕಸ್ತೂರಿಯನ್ನು ಇವಳು

ತನ್ನ ತೋಳು ತೊಡೆಗಳಿಗೇ ತೊಡಿದುಕೊಂಡು ಬಿಟ್ಟಳು. ಎಂದು ಅರಸರಿಗೆ ಹೇಳಿಬಿಡುತ್ತೇನೆ. ನೋಡು ಎಂದು ಹೆದರಿಸಿದನು.ಆಗ ಆ ಚೇಪಿಯ ಹೆದರಿ ನೀರಾಗಿ ಅವನ ಕಾಲುಹಿಡಿದು ನಾನು ಆಡಿದ್ದನ್ನು ಹೇಳಿ ಬಿಡುತ್ತೇನೆ. ನೀನು ಈ ಹೊಳಲ್ ಹೆಂಗಸರೆಲ್ಲ ನಿನಗೆ ಮನಸೋತು ಮೋಹವಶರಾಗುವಂತೆ , ಮುರುಳಾಗಿ ವಿರಹದಿಂದ ತಪಿಸುವಂತೆ, ನಿನ್ನನ್ನೇ ಮೆಚ್ಚುವಂತೆ ಮಾಡಿದುದನ್ನು ಕಂಡು ಪಾಟ್ಟಣಿಗರೆಲ್ಲ ಬೊಬ್ಬೆಯಿಟ್ಟು ಮೊರೆಯಿಟ್ಟು ನಿನ್ನ ಅಣ್ಣನಲ್ಲಿಗೆ ಬಂದು ನಿನ್ನ ಮೊರೆಗೆಟ್ಟ ನಡೆವಳಿಕೆಯನ್ನು ಆಕ್ಷೇಪಿಸಿದರು. ಆಗ ನಿಮ್ಮ ಅಣ್ಣನು ಮುನಿದು ನಿನ್ನನ್ನು ಈ ನೆಪದಿಂದ ಸೆರೆಹಾಕಿದ್ದಾನೆ – ಎಂದು ಹೇಳಿದಳು. ಅಲ್ಲದೆ " ಅಯ್ಯ ನಿಷ್ಕರುಣಿ ನಿನ್ನ ದೆಸೆಯಿಂದಾಗಿ ಪುರದ ಪ್ರೌಢಸ್ತ್ರೀಯರೆಲ್ಲ ಕಾಮಾಗ್ನಿಯಲ್ಲಿ ಬೆಂದುರಿದು ವಿರಹಪಾಂಡುರಿತರಾಗೀ ಅಗ್ನಿಶೋಭದ ವಸ್ತ್ರದಂತಾಗಿದ್ದಾರೆ. ಇದನ್ನು ನೀನು ತಿಳಿಯೆಯಾ? ಎಂದು ಆಕ್ಷೇಪಿಸಿದಳು.

ವಸುದೇವನಿಗೆ ಇದ್ನ್ನು ಕೇಳಿ ಎದೆ ಹವ್ವನೆ ಹಾರಿದ,ಂತಯಿತು. ಅವನು ಬೆರೆಗುಗೊಂಡು ಹಾಗೇನು ಎಲ್ಲಿ ನೋಡೋಣ ಎಂದು ಅರಮನೆಯಿಂದ ಹೊರಡಲು ಹೆಜ್ಜೆಯಿಡುತ್ತಲೂ, ಅಲ್ಲಿಂದಾಚೆಗೆ ಮಿಸುಕುವುದಕ್ಕೂ ಅವಕಶವಿಲ್ಲದಂತೆ ದೌವಾರಿಕರು ತಟಕ್ಕನೆ ಎಂದುರಿನಿಂತು, ಕಟಿಗೆಯನ್ನು ಅಡ್ಡಡಿದು ಅಡ್ಡಿಪಡಿಸಿದರು. ಆಗ ವಸುದೇವನು ನಾಚಿ, ಆ ಮೇಲೆ ಹೇಗೋ ನಸುಳಿಕೊಂಡು ವನಕ್ಕೆ ಬಂದು ತನ್ನಲ್ಲಿಯೇ ಹೀಗೆಂದುಕೊಂಡುನು. "ನಮ್ಮ ಅಣ್ಣ ನಿನ್ನ ಇತಿಮಿತಿಯಲ್ಲಿ ನೀನು ತಗ್ಗಿಕೊಂಡು ಇದ್ದುಕೋ? ಎಂದು ಒಳ್ಳೆಯ ರೀತಿಯಿಂದ ಸ್ಪಷ್ಟವಾಗಿ ಹೇಳಿದ್ದರೆ. ನಾನು ಇರುತ್ತಿರಲಿಲ್ಲವೆ? ಈ ಮುಚ್ಚುಮರೆಯೇಕೆ? ಶರ್ಕರೆ ನಾಲಗೆ ನೃಪರೆರ್ದೆ ಕರ್ತರಿ ಎಂಬುದನ್ನು ನಮ್ಮ ಅಣ್ಣನ ವರ್ತನೆಯಿಂದ ಸ್ಪಷ್ಟವಾಗಿ ಈಗ ತಿಳಿದೆ. ತಾನು ನನ್ನನ್ನು ಸೆರೆಗೆ ಹಾಕುತ್ತನೆ ; ನಾನು ಸೆರೆಯಲ್ಲಿ ಬಿದ್ದಿರುತ್ತೇನೆ ಅಲ್ಲವೆ ; ಹೌದು, ಹೌದು ; ನಾನು ತಪ್ಪಿ ನಡೆದುದನ್ನು ಇವನು ಕಂಡನಲ್ಲವೇ? ಅಂಥ ದೊಡ್ಡ ತಪ್ಪು ನಾನು ಮಾಡಿದ್ದಾದರೆ ತಾನು ಬುದ್ದಿ ಹೇಳುವುದು ತಪ್ಪೇನಲ್ಲ ಅಣ್ಣನಲ್ಲವೇನು? ಅದು ಬಿಟ್ಟು ಈ ಹುರುಳಿಲ್ಲದ ಪೌರರು ಬಾಯಿಗೆ ಬಂದುದನ್ನು ಬೋಗಳಿದರೆ ಅದನ್ನು ಕೇಳಿಕೊಂಡು ಕೋಪಮಾಡಿಕೊಂಡನು. ಕೋಪಿಸಿ ದಂಡಿಸಲು ತಾನು ಅಣ್ಣನಲ್ಲವೇ? ಖ' ತಪ್ಪೆಲ್ಲನೂ ನಮ್ಮದು , ಅದನ್ನೆಲ್ಲ ಸಹಿಸಿಕೊಳ್ಳುವ ತಾಳ್ಮೆ ತನ್ನದ್ದಲ್ಲವೇ? ತಮ್ಮನ ಮೇಲೆ ಇರಬೇಕಾದ ಪ್ರೀತಿಯನ್ನು ಬಿಟ್ಟು

ನಿರ್ದೋಷಿಯಲ್ಲಿ ಇಲ್ಲದ ದ್ಯೋಶವನ್ನಾರೋಪಿಸಿ , ಹೇಗೆ ಸರಹಾಕಿ, ಒಳ್ಳುಯತನ ಹಾಳಿಮಾಡಿಕೊಂ,ಡು ತನ್ನನು ಆಕ್ಷೆಪಿಸಿ ಯಾರೋ ಹೇಳಿದ್ದನ್ನು ಕೇಳಿ ನಡೆಯುವದು ಅಣ್ಣನಿಗೆ ನ್ಯಾಯವೇ? ನನ್ನನ್ನು ಸುಮ್ಮಸುಮ್ಮನೇ ಆಕ್ಷೇಪಿಸಿದನು. ತನ್ನ ಅಭ್ಯುದಯವು ಮಿಗಿಲಗಲೆಂದು ಅಸಹನೆಯಿಂದ ನಮ್ಮ ಅಣ್ಣನು ತಮ್ಮನ ಅಭ್ಯುದಯವನ್ನು ಬೆಳೆಯಲು ಅವಕಶ ಕೊಡದೆ ಹೋದನು. ತನ್ನ ಅರಸುತನವೆಂಬುದು ಅಸಮುದ್ರಾಂತಮಾತ್ರವೆಷ್ಟು ತಾನೆ? ಹೋಗಲಿ ನಾನು ನನಗೆ ತಕ್ಕ ರೀತಿಯಲ್ಲಿ ವಿದೇಶ ವಿಹರ ಮಾಡುತ್ತೆನೆ. ಮನ್ಮಥನಿಗೂ ಮಲಯಾನಿಲನಿಗೂ, ನಾನಗೂ ವಸಂತನಿಗೂ, ಲೋಕದಲ್ಲಿ ಸ್ವದೇಶ ಪರದೇಶವೆಂಬ ಭೆದಭಾವವೋನೂ ಇಲ್ಲ ದೋಷಕರ ದೂರನ್ನು ಕೇಳಿ ಈ ದುಡಿಕಬುದ್ದಿಯೂ ಸಾಹಸಿಯೂ ಆದ ಸಮುದ್ರವಿಜಯನು ನನ್ನ ಅಳವನ್ನು ತಿಳಿದು ತಿಳಿಯದೆಯ ವಿಶೇಷವಾಗಿ ಕಲುಷಾಂತಃಕರಣವುಂಟಾದರೆ ನನ್ನನ್ನು ಕೊಂದುರೂ ಕೊಂದುಹಾಕುವೆನು ಅದಕ್ಕೆ ಹೆಸುವವನಲ್ಲ, ಹೀಗೆ ಆಲೋಚಿಸುತ್ತಿರಲಾಗಿ ವಸುದೇವನಿಗೆ ಸಾಯುವಂಥದೇ ಕನಸಾಗಿ ಥಟ್ಟನೆ ಎದ್ದು ಕುಳಿತು, ಪ್ರಿಮಳವನ್ನು ನನ್ನನ್ನು ಸೆರೆಹಾಕುವ ಸಮರ್ಥರಾರು ? ಎಂದುಕೊಂಡು, ಆಸ್ಥಳವನ್ನು ಬಿಟ್ಟು ಬೇಕಾವುದಾದರೂ ಸ್ಥಳಕ್ಕೆ ಹೊಗಲು ನಿರ್ಧರಿಸಿದರು .

ಅಷ್ಟರಲ್ಲಿ ಸೂರ್ಯಸ್ಥವಾಯಿತು. ಕ್ರಮಕ್ರಮವಾಗಿ ಗಾಢಾಂದಕ್ಕಾರವೂ ವ್ಯಾಪಿಸಿತು. ಅಂಥ ಕಾಳರಾತ್ರಿಅಯಲ್ಲಿ ವಸುದೇವನು ವಿದ್ಯಾಧಾರಕರದಿಂದ ಮನೆಹೊಸಿಲನ್ನು ದಾಟುವಂತೆ ಅರಮನೆಯ ಪ್ರಾಕಾರವನ್ನು ಸುಲಭಾವಾಗಿ ದಾಟಿ ಹೋಗಿ ಪಟ್ಟಣವನ್ನು ಬಿಟ್ಟು ಹೊರವೂರಳಲು ಲ್ಲಿಯೇ ಸ್ವಲ್ಪದೂರ ನಡೆಯುತ್ತಿರಲು, ಆತನಿಗೆ ಘೋರವೂ ಭಯಂಕವೂ ಆದ ಸ್ಮಶಾನಭೂಮಿ ಎದುರಾಯಿತು. ಅಲ್ಲಿ ಹೃದಯಭೆದಕವಾದ ಅತೀ ಭಯಾನಕವು ಭಿಬತ್ಸವೂ ಆದ ಹಲವಾರು ಘೋರದೃಶ್ಯಗಳು ಕಣ್ಣಿಗೆ ಬಿದ್ದವು. ಇದನೆಲ್ಲ ಅಲ್ಲಲಿ ನಿಂತು ನೋಡುತ್ತ ಮುಂದುವರೆದು ಮುಂದೆ ಒಂದು ಕಡೆ ಶೂಲದ ಮೇಲಿನ ಹೆಣದ ಸೆರಗನ್ನು ಹರೆದುಕೊಂಡು ಅದನ ಬಾಯಿಂದ ಬಸಿಯುತ್ತಿದ್ದ ನೆತ್ತರಲ್ಲಿ ಮರುಳ ಕರುಳನ್ನು ಕಿತ್ತು ಹೊಸೆದು ಮಾಡಿದ ತೂಳಿಕೆಯನ್ನದಿಕೊಂಡು ಮರುಳಿನ ಕಯ್ಯಕೊಳ್ಳಿಯ ಬೆಳಕಿನಲ್ಲಿ ನೋಡಿಕೊಂಡು , ಏನನೋ ಬರೆದನು. ಬರೆದ ಆ ಬಿಳಿಯ ಪಟವನ್ನು ಹತ್ತಿರದ ಮರದ ಕೊಂಬಿಗೆ ಕಟ್ಟಿ, ಒಂದು ಉರಿಯುತ್ತಿದ್ದ ಚಿತೆಯ ಪಕ್ಕದಲ್ಲಿ ತನ್ನ ತೊಟ್ಟ

ತೊಡವುಗಳನ್ನು ಕಳಾಚಿಟ್ಟು, ಅಲ್ಲಿಂದ  ಮುನ್ನಡೆದನು . ಹೋಗುತ್ತಾ ಶೂಲವನ್ನೇ ಮೆಟ್ಟು ಬೆಂಕಿಯಲ್ಲಿಯೇ ನುಗ್ಗಿ ಕಿಂಕಿಣಿಯ ಬೇತಾಳನನ್ನು  ತನ್ನತ್ತ ಬಾಯೆಂದು ಕರೆದು ಪಕ್ಕಕೆ ಕೈನೀಡೆಂದು ಸೂಚಿಸಿ , ನಡುವನ್ನು ಹಿಡಿದು, ನೀಡಿದ ಕೈಯನ್ನು ಆಸರೆ ಮಾಡಿಕೊಂಡು ಹೆಗಲನ್ನೇರಿ ತನ್ನ ಹೆಜ್ಜೆಯನ್ನು ಹೆಜ್ಜೆಕಾರರು ಯಾರು  ಅರಿಯದ ಹಾಗೆ ಮಾಡಿ ವಸುದೇವನು ಆ ಪ್ರೇತವನದಿಂದ ಹೊರಟು ಹೋದನು .

ಇತ್ತಕಡೆ ನೆಸರು ಮೂಡತ್ತಲೂ ವಸುದೇವನ ಒಡನಾಡಿಗಳು ಕಾವಲವರು ಕಾವಲಕೊಟ್ಟಿಯಲ್ಲಿ ವಸುದೇವನನ್ನು ಕಾಣದೆ ಎಲ್ಲಾ ಕಡೆಗಳಲ್ಲಿಯೂ ಹುಡುಕಿ ಸಮುದ್ರವಿಜಯನಿಗೆ ಭಿನ್ನವಿಸುವುದು ಎಂದುಕೊಳ್ಳುವಹೊತ್ತಿಗೆ ಒಬ್ಬ ಪಡಿಯರನು ಬಂದು ದೊರೆಗೆ ನಮಸ್ಕಾರಿಸಿ ಶ್ಮಶಾನಭೊಮಿಯಲ್ಲಿ ಹೊಸ ಚಿತ್ತೆಯೊಂದರ ಪಕ್ಕದಲ್ಲಿ  ಯಾರೋ ಕಳಚಿ  ರಾಶಿಹಾಕಿದ್ದ ತೊಡವುಗಳೂ ಮಥದ ಕೊಂಬೆಯಲ್ಲಿ ಕಟ್ಟಿದ ಬರವಣಿಗೆಯರುವ ಒಂದು ಕಪ್ಪಡವು ಇದೇಯೆಂದು ಪಿತೃವನಪಾಲಕನಾದ ಕಪಾಳಕುಂಡಲನು  ಅರಮನೆಯ ಬಾಗಿಲ ಬಳಿಗೆ ಬಂದು ವಿಜ್ಞಾಪಿಸಿದನೆಂಬುದಾಗಿ ಶೃತಪಡಿಸಿದನು ಆಗ ದೊರೆಯು ಕೂಡಲೆ  ಓಡಿಹೋಗಿ ನೋಡಿ ಎಂದು ಸೇವಕರನ್ನು ಕಳಸಿಕೊಟ್ಟನು. ಅವರು ಶೇಘ್ರವಾಗಿ ಹೋಗಿ ಅವುಗಳನ್ನು ತಂದು ಮುಂದಿಡಲಾಗಿ , ಆಗಲೇ ಅವು ತನ್ನ ರತ್ನಾಭಾರಣಾಗಳೆಂದು ತಿಳಿದುಕೊಂಡು ಸ್ವಲ್ಪ ಅಸಂತುಷ್ಟಚಿತ್ತನೂ ಅಧೀರನೂ ಆಗಿ ಆ ಪಟದ ಬರೆವಣಿಗೆಯನ್ನು ಓದೌ ಸಧಿಗಿಟ್ರ್ಃಜಿಗೆ ಆಜ್ಞಾಪಿಸಿದನು ಅಲ್ಲಿಯ ವಿಷಯ ಹೇಗಿತ್ತು.

ಹಾದರಿಗನೆಂದು ಅವರಿವರು ದೊರೆಯಲ್ಲಿ ದೂರಿದರಲ್ಲೆವೇ? ಪರವನಿತೆಗೆ ನಾನು ಮರೆತದರೂ ಮನಸೋತಂಥವನಾಗಿದ್ದರೆ ನಿಮಗೆ ತಮ್ಮನಲ್ಲವೆಂದೇ ನನ್ನನ್ನು ತಿಳಿಯಿರಿ ಬಸದಿಯಲ್ಲಿ ನಮ್ಮೊಡನೆ ಕುಳಿತು ಓದು ಕಲಿತವನಲ್ಲ. ಎಂದು ತಿಳಿಯಿರಿ . ಈ ಅಪಪ್ರಥೆಯನ್ನು ಒರಸಿ ಹಾಕುವದೆಂದರೆ ಬಹುಪ್ರಯಾಸಕರವಾದ್ದು. ಏಕೆಂದರೆ ಇದು ಕೆಲವರಿಂದ ಮಾತ್ರ ಬಂದುದಲ್ಲ ಲೋಪವೇ ಎತ್ತಿ ಆಡುತ್ತಿರುವುದಾಗಿ. ಗಡಿಗೆಯ ಬಾಯಿ ಮುಚ್ಚುಬಹುದು, ಗರಸಿಯ ಬಾಯಿ ಮುಚ್ಚಲಾದಿತ್ತೇ? ಅನ್ಯರಿಂದ ಬಂದ ದೂರ ನಿಮ್ಮ ಮನಸ್ಸಿಗೆ ಹೌದೆಂದು ಕಂಡ ದಿನವೇ ನಾನು ತಪ್ಪು ಮಡಿದನೆನ್ನಬೇಕು. ಮೊಲೆಯ ಮೇಲೆ ಗಾಯವಾದರೂ ಸೈರಿಸಬಹುದು ಅಪವಾದದಿಂದಾಗಿ ಅಪಕೀರ್ತಿಯುಂಟಾಗುವ

ಪಕ್ಷಕ್ಕೆ ಬದುಕುವುದು ಗರುವಿಕೆಯ ಲಕ್ಷಣವಲ್ಲ ತಮ್ಮ ಕಾಲುಹಿಡಿದು ಬೇಡುತ್ತೇನೆ . ತಮ್ಮನ ಈ ಮಾತುಗಳ ಬಗೆಗೆ ಸ್ವಲ್ಪ ಸ್ಯೆರ್ರ್ಣೆಯಿರಲಿ ಓ ಮೊದಲು ನನು ನಿಮ್ಮನು ಅಕ್ಕರೆಯಿಂದ ಗಾಢವಾಗಿ ಅಪ್ಪಿದ್ದೇನೆ; ಉತ್ಸಾಹಿಸಿ ಬಾಯ್ದಂಬುಲವನ್ನು ಸೆಳೆದುಕೊಂಡಿದ್ದೇನೆ. ಕಾಯಿಸಿದ ಕಬ್ಬಿಣ್ದ ಬೊಂಬೆಯನ್ನು ತಬ್ಬುವುದು ಇಂಥ ತಪ್ಪಿಗೆ ಪ್ರಾಯಶ್ಚಿತ್ತವಲ್ಲವೇ? ಪರಸ್ತ್ರೀಯರನಲ್ಲರ ನೆಮ್ಮದಿಗಾಗಿ ನಾನು ಇಗೋ ಮಸಣದುರಿಯನ್ನು ಪ್ರವೇಶಿಸಿದೆ. ಈ ಹಗರಣ ನಿಮ್ಮಿಂದ ಅದುದಲ್ಲ. ಮನ್ಮಥನ ಮದವೇಶದಿಂದಾಯಿತು. ನನ್ನ ತುಪ್ಪದಲ್ಲಿ ನಾನೇ ಬೆಂದೆನಷ್ಟೇ ನನಗಾಗಿ ದುಃಖಿಸಬೇಡಿ ತನ್ನದೆಲ್ಲವನ್ನೂ ತಿಳಿದೇ ಮಸುದೇವನು ಮೃತನಾದನೆಂದು ತಿಳಿಯಿರಿ. ತಿಳಿಯದೇನು ಅಳಿಯಲಿಲ್ಲ.

ಈ ಪ್ರಕರವಾಗಿ ಓದಿ ಮುಗಿಸಿದಾಗ ಎಲ್ಲರಿಗೂ ಮೊದಲೂ ಸಮುದ್ರವಿಹಯನೂ ಅನಂತರ ಸಭಾಜನರ್ ಊ ದುಃಖದಿಂದಾಗಿ ಮೂರ್ಛೆಹೋದರು ನೃಪಕುಮಾರ ವಸುದೇವನ ಪಾತ್ರಶ್ರರಣವೆಂಬುದು ನಂಜಿನ ಗಾಳಿಯೋ ಸಮ್ಮೋಹನಾಸ್ತ್ರವೋ ಎನ್ನವಂತಾಯಿತು . ಹೀಗಿರಲು ಆಕಸ್ಮಿಕವಾಗಿ ಆ ಸಭೆಗೆ ಅರಿಂದಮ ಮುನಿಗಳು ದಯಮಾಡಿಸಿದರು. ಅವರ ಆಗಮನದ ಪುಣ್ಯಪ್ರಭಾವದಿಂದಾಗಿ ಅವರ ಶರೀರಸ್ಪರ್ಶವಾದ ಗಾಳಿಯ ಸುಳಿದುಬಂದು ದೊರೆಯೂ ಸಭಾಸದರೂ ಚೇತರಿಸಿಕೊಂಡರು . ಎಚ್ಚರಗೊಂಡ ಮೇಲೆ ಸಮುದ್ರವಿಜಯ ಹುದ್ದುಗಿದ್ದ ಭ್ರಾತೃವಿಯೋಗದ ದುಃಖವುಕ್ಕಿ ಶೋಕಪಟ್ಟನು : “ ಹಾ ವಸುದೇವ ಹಾ ಹರಿಕುಲಾಂತಕ, ಹ ಚಿರಂಜೀವಿ ನಿನ್ನನ್ನು ನಾನು ಮತ್ತೆಲ್ಲಿ ತಾನೆ ನೋಡುತ್ತೆನೆ? ಯವುದೇ ಕೆಲಸದಲ್ಲಾಗಲಿ ಅಣ್ಣನು ಮೊದಲು ಪ್ರವತಿ ೯ಸಿ ಆ ಹಾದಿಯಲ್ಲಿ ತಮ್ಮನು ನಡೆಯುವುದು ಯುಕ್ತಕ್ರಮ ಇದಕ್ಕೆ ವ್ಯತಿರೇಕವಾಗಬಾರದು . ಈ ಕ್ರಮವನ್ನು ನೀನು ಉಲ್ಲಂಗಿಸಿದ್ದು ಸರಿಯೇ? ವತ್ಸಾ, ನನಗಿಂತ ಮೊದಲು ನೀನು ಅಗ್ನಿಪ್ರವೇಶಮಾಡಿ ಆ ಮೇಲೆ ನನಗೆ ನೀನು ಈ ಶೋಕಾಗ್ನಿಯನ್ನು ಕೊಟ್ಟಿರುವೆಯಲ್ಲಾ. ಮನ್ಮಥನು ಶಿವನ ನೇತ್ರಾಗ್ನಿಯಿಂದ ಹಿಂದೆಂದೋ ಉರಿದುಯೋದನೆಂಬದು ನಿಜವಲ್ಲ ಇಂದು ಅವನು ಅಗ್ನಿಗೆ ತುತ್ತದನೆನ್ನಬೇಕು. ಏನು ಮಾಡಲಿ ? ನಮ್ಮ ಉಪವನಗಳು ಇಂದು ಹಳುಸರಿಯುತ್ತಿವೆ. ಎಳವೆಂಡಿರ ಸೊಂಪದ ಗೀತೆಯು ಇಂದು ಮೂಗವಟ್ಟಿದೆ. ಅಂಗನೆಯರು ಮುಂಕುಬಡಿದಂತೆ ಇದ್ದಾರೆ . ಚಂದ್ರನ ಮೊಗದಲ್ಲಿ ಮಬ್ಬು ಮುಸುಕಿದೆ, ವನುದೆವನೆಂಬ ಮುದ್ದಿನ

ಹೆಸರು ಇಂದು ಮುರುಕದಲ್ಲಿ ಅದ್ದಿದೆ ದುಃಖಗ್ನಿದಗ್ಧವಾದ  ನನ್ನ ರಾಜ್ಯವೇ ಭಣಾಗುಡುತ್ತಿದೆ ವಸುದೇವನು ಅಗ್ನಿಯಲ್ಲಿ ಬೇಯುವನೆಂಬುದು ಸುಳ್ಳು. ವಸುದೇವನ ರೂಪಿಗೆ ತನ್ನ ಇನಿಯೇ ಸ್ವಾಹವಧು ಮನಸೋಲುವಳೆಂಬ ಭಯದಿಂದ ಅಗ್ನಿಯೇ ಅವರಿಸಿದೆ ಒಳಗಿಳ್ಳುತ್ತಾನೆ.

ಹೀಗೆ ಶೋಕಿಸುತ್ತಿರಲು ಅರಿಂದಮಯತಿಗಳು ದೊರೆಯನ್ನು ಕುರಿತು  ನೀನು ಹೇಳಿದಂತೇಯೇ ಅಗ್ನಿದೇವನು   ವಸದೇವನನ್ನು ಸುಡುವುದು ಸಾಧ್ಯವಿಲ್ಲ,ಕೆಲವು ದಿವಸಗಳಿಗೆ ನಿನ್ನ ತಮ್ಮನು ಹಿಂದಿರುಗುತ್ತಾನೆ ಅದಕ್ಕಾಗಿ ಅಳವೂಉದಾಗಲಿ ಬಳಲುವುದಾಗಲಿ ಅನಾವಶ್ಯಕ ಎಂದು ಸಮಾಧಾನಪಡಿಸಿ ಹೊರಟು ಹೋದರು, ಮುನಿಯಸಮಾಧಾನ ವಾಕ್ಯದಿಂದಾಗಿ ಸಮುದ್ರವಿಜಯನ ಭ್ರಾತೃಪರಶೋಕಾಗ್ನಿಯೂ ಕೆಲಮಟ್ಟಿಗೆ ಶಮನಗೊಂಡಿತು.

ಇತ್ತ ಉನ್ಮತ್ತ ಮತಂಗಜದ ಹಾಗೆ ಸ್ವೇಚ್ಛಾವಿಹಾರಮಾಡುತ್ತ ವಸುದೇವನು ಅಂಗಜ ಸೌಖ್ಯವಾಟವೆನ್ನಿಸಿದ ಷಿಜಯಖೇಟಪುರವನ್ನು ಬಂದು ಸೇರಿದನು ಬಹಿಃಪುರದಲ್ಲಿ ನಂದನವನ್ನು ಪ್ರವೇಶಿಸಿ , ಅಲ್ಲಿ ಒಂದು ತವರೆಗೊಳದಲ್ಲಿ ಸುಖಮಜ್ಜನಮಾಡಿ ಬಂದು ಕೊಳದ ದಡದಲ್ಲಿ ಇಕ್ಕಿದ್ದ ಮೃಗಮದವನ್ನೂ ರೆಂಬೆಕೊಂಬೆ ಉಜ್ಜಿ ಸುರಿದಿದ್ದ ಚಂದನರಸವನ್ನೂ ಲೆಪಿಸಿಕೊಂಡು ಮುಡಿಗೆ ಹೂಮುಡಿದು , ಸುರಹೊನ್ನೆಯ ಬಾಸಿಗೆಯನ್ನು ತೆಲೆಗೆ ಸುತ್ತಿ ಕೇಶಾಗ್ರದಲ್ಲಿ ಕೇದಗೆಯ ಕಿರಿಯೆಸಳನ್ನು ಸಿಕ್ಕಿಸಿಕೊಂಡು ,ಕೆಸರದ ಕೆಂಪು ಹುಡಿಯನ್ನು ಕೆದರಿ , ತಿಲಕವೃಕ್ಷದಿದಾದ ತಿಲಕವಿಟ್ಟು ಕೆದಗೆಯಬಿಳಿಯೆಸಳ ಷುಳಪ ದೋಲೆಯಿಟ್ಟು ಹೂಗೊಂಚಲು ತೂಗಿ ತೊನೆವಂತೆ ಕನ್ನವುರವನ್ನು ಧರಿಸಿ, ಮೊಗ್ಗಿನ ಉಂಗುರವಿಟ್ಟು , ಕುಸುಮ ಕಂಕಣಾವನ್ನು ಹಾಕಿಕೊಂಡು  , ನಿರಿದಳಿರ ತೊಂಗಲನ್ನು ತೊಳಲ್ಲಿ ಸಿಂಗರಿಸಿಕೊಂಡು , ಸಂಪಗೆಯ ಹಾರವನ್ನು ಕೊರಳಲ್ಲಿ ಧರಿಸಿ ಕೊರಳ ಮಲ್ಲಿಗೆಯ ತಿಸರವನ್ನೂ ಧರಿಸಿ, ತಾವರೆನೂಲಿನ ಹೆದೆಯೇರಿಸಿದ ಬಕುಳದ ಸೆಳೆಯಸೆಳೆವಿಲ್ಲನ್ನೂ ಪುಷ್ಪಾಸ್ತ್ರಗಳನ್ನೂ ಕೈಗಳಲ್ಲಿ ಅಂತು ಕೊಂಡು ದಿಕ್ಕುತಪ್ಪಿದ ಕಾಮದೇವನಂತೆ ವಸುದೇವನು ಆ ವನದೊಳಾಗೆ ನಡೆದು ಬರುವಾಗ ತಿಳಿಗೊಳದ ದಡದಲ್ಲಿ ಒಂದು ಫಲಿತ ರಸಾಲವನ್ನು ನೋಡಿದನು. ಆಮಾವಿನ ಮರದಡಿಯಲ್ಲಿ ಹೂವಿನ ಹುಡಿಯ ವೇದಿಕೆಯನ್ನು ರಚಿಸಿಕೊಂಡು, ಅದರ ಮೇಲೆ ಹೊಸ ಚಿಗುರಿನ ಹಾಸಿಗೆಯನ್ನು ಹರಡಿ , ಹೂವಿನೆಸಳಿನಿಂದ ಮೇಲ್ವಸ್ತ್ರವನ್ನು ಹಾಸಿ, ಹೊಚ್ಚ ಹೊಸ ಹಸುರೆಲೆಯನ್ನು

ತೆಲಿದಿಂಬು ಮಾಡಿ ಎಳೆಯ ತಾವರೆದಂಟುಗಳನ್ನು ಸೇರಿಸಿ ಮಾಡಿದ ಬಿತ್ತರಿಗೆ (ಲೋಡು) ಯನ್ನು ಕಾಲದೆಸೆಗೆ ಹಾಕಿಕೊಂಡು ಪಥಪರಿಶ್ರಮವನ್ನು ಪರಿಹರಿಸಿಕೊಳ್ಳಲು ಮಲಗಿದನು ; ಆಗಾಗ ಪಚ್ಚೆಕಪ್ಪುರದ ಹರಳುಗಳನ್ನು ಬಾಯಲ್ಲಿ ಹಾಕಿಕೊಂಡು ತಾಂಬುಲವನ್ನು ಸವಿಯುತ್ತಿದ್ದನು, ನಡುನಡುವೆ ಗಿಳಿಗಳು ತುಂಬಿಗಳು ನವಿಲುಗಳು, ಕೋಗಿಲೆಗಳು ಇವುಗಳೊಂದಿಗೆ ಸರಸವಾಡಿ ಸಲ್ಲಾಪಮಾಡುತ್ತ , ಹಿತಕರವಾಗಿ ಮೇಲ್ಗಾಳಿ ಬೀಸುತ್ತಿರಬೇಕಾದರೆ ಕಣ್ಮುಚ್ಚಿ ಒಂದರ್ಧ ಜಾವ ಸುಖ ನಿದ್ರೆ ಮಾಡಿದನು.

ಆ ಸುಖನಿದ್ರೆಯಲ್ಲಿ ಕೊಡೆಯಾಗಿ ತಣ್ಣನೆ ನೆರಳುನೀಡುತ್ತ ಇದ ಮಾವಿನ ಮರದಡಿಯಲ್ಲಿ ಪುಷ್ಪಶೈಯ್ಯೆಯ ಮೇಲೆ, ಶೇಷಶಯ್ಯಾಸನನಾದ ಮಹಾವಿಷ್ಣುವನ್ನು ಲಕ್ಷ್ಮಿಯು ಸೇವಿಸುತ್ತಿದ್ದಂತೆ, ದಿವ್ಯ ಕನ್ನೆಯೊಬ್ಬಳು ತನ್ನ ಕಾಲುಗಳನ್ನು ಒತ್ತೊತ್ತಿದ್ದಂತೆ ಕನಸು ಕಂಡನು. ಇದನ್ನು ನೋಡಿ ನಿದ್ದೆ ತಿಳಿದು ಚಿತಾಗ್ರಸ್ತನಾಗದೆ ವಿಸ್ಮಯಾವಿಷ್ಟನಾಗಿ ತಾನು ನಿದ್ರೆಯಲ್ಲಿದ್ದೇನೆಂದು ಅರಿತುಕೊಂಡು , ಸ್ವಲ್ಪನಾಚಿಕೆಪಟ್ಟು ರೋಮಾಂಚನಗೊಂಡು ನೋಡುವಾಗ ,ಕಾಲುಗಳೆಡೆಯಲ್ಲಿ ಬಿತ್ತರಿಗೆಯ ಪಕ್ಕದಲ್ಲಿ ಮಂಡಿಸಿದ ಒಬ್ಬ ಸುಂದರಿಯು ತನ್ನ್ ಕಾಲುಗಳನ್ನು ವಿಜಯ ಲಕ್ಷ್ಮಿಯಂತೆ ಬೆಡಗು ಬಿನ್ನಣಗಳಿಂದ ಒತ್ತುತ ಸೇವಿಸುವುದನ್ನು ಕಂಡನು ಆ ಸುಂದರಿಯು “ ನನ್ನ ಕಣ್ಣುಗಳ ಅರಕೆ ತೀರುವಂತೆ ನಾನು ನಿಸಂಕೋಶವಾಗಿ ಈತನನ್ನೂ ಈವರೆಗೆ ನೋಡುತ್ತಿದ್ದ; ಈಗ ಈತನೂ ಏಕೆ ಎಚ್ಚರಮಾಡಿಕೊಂಡನೋ. ಎಂದು ಬಿಸಿಯುಸಿರು ಬಿಟ್ಟಳು ವಸುದೇವನಿಗೆ ಈಕೆ ಅಲ್ಲದೆ ತವರೆಯೆಲೆಯೇ ಬಿಜ್ಜಣಿಗೆಯಾಗಿ ಬೀಸುತ್ತಿದ್ದ ಮತ್ತೊಬ್ಬ ಕಾಂತೆಯೂ ಕಣ್ಣಿಗೆ ಬಿದ್ದಳು ಹಾಗೆ ತನ್ನ ಬೆಂಬಳಿಗೇ ಬಂದ ಭಾಗ್ಯದೇವತೆಯಂತಿದ್ದ ವನಿತೆಯನ್ನು ನೋಡಿ ಕನಸೇ ನನಸಾಯಿತೆಂದು ಭಾವಿಸಿದನು. ಆದರೆ “ ಇದೇನು ಸ್ತ್ರೀಯರು ಕಾರಣವಾಗಿಯೇ ನಾನು ನನ್ನ ನಾಡು ಬೀಡುಗಳನ್ನು ಬಿಟ್ಟು ಓಡಿ ಬಂದರೆ ಇಲ್ಲಿಯೂ ಅವರೇ ನನ್ನನೂ ಹೀಗೆ ಅನುಸರಿಸುವರಲ್ಲ; ಈಗೇನು ಮಾಡಲಿ. ಎಂದು ಬೇಸರಿಸಿದನು. ಆಕೆಯನ್ನು ಕೊರಿತು “ ನನ್ನ ಮುಖದಲ್ಲಿ ನಟ್ಟನೋಟವನ್ನುತೆಗೆ; ಕಣ್ನೋಡನೆ ಹರಿದುಹೊಕ್ಕ ಮನಸ್ಸನ್ನು ತಗೆ. ಎಂದು ನಿಷ್ಠುರವಾಗಿಯೇ ಹೇಳಿದನು. ತಟ್ಟನೆತನ್ನ ಕಾಲನ್ನು ಅವಳತ್ತಣಿಂದ ಹಿಂದಕ್ಕೆ ಎಳೆದುಕೊಂಡನು. ಅದನ್ನು ನೋಡಿ ಆ ಚಿತ್ರಲೇಖೆಯೆಂಬ ಆಕೆಯ ಗೆಳತಿ

ಮುಗುಳ್ನಗೆಯನ್ನು ಸೂಸಿ " ಅಯ್ಯಾ, ಆಕೆ ನಿನ್ನ ಕಾಲೊತ್ತುತ್ತಿದರೆ ಅದನ್ನು ನೀನು ಹಿಂದೆಳೆದುಕೊಂಡೆ ; ಇರಲಿ . ಆಕೆ ನಿನ್ನ ಕೈಹಿಡಿಯುವ ಕಾಲಬರುತ್ತದೆ ; ಆಗ ನೀನು ಅವಳ ಕಾಲುಹಿಡಿಯ ಬೇಕಾಗುವುದು. ಹೇಗೂ ಇಲ್ಲಿಗೆ ಬಂದು ಸಿಕ್ಕಿಕೊಂಡಿರುವೇ. ಈ ಕಾಂತೆಯೋ ಕಡುಗೆಲ್ಲಕರ್ತಿ ; ಹಟ ಹಿಡಿದರೆ ತಪ್ಪದೆ ಸಾಧಿಸಿಬಿಡುವಾಕೆ. ಎಂದಳು. ವಸುದೇವನು ಹಾಗೆಂದರೇನು? ಎಂದು ಪ್ರಶ್ನಿಸಿದನು.

ಅದಕ್ಕೆ ಆಕೆಯೆಂದಳು " ಅಯ್ಯಾ ಈ ಮಾವಿನ ಮರ ಈಕೆಗಾಗಿ ಕಾಮನು ಅರ್ಚಸಿರುವ ಮಾವಿನ ಮರ. ಯಾವ ಉದ್ದಾಮವ್ಯಕ್ತಿಯು ಈ ಮರದ ಬಳಿಗೆ ಬಂದು ಮಿಶ್ರಮಿಸುವುದರಿಂದ ಈ ಮರದಡಿಯ ತಂಪದ ನೆರಳು ಸೂರ್ಯನೇ ಬಂದು ಭೇದಿಸಲು ಯತ್ನಿಸಿದರೂ ಅಲ್ಲಿಂದ ಕದಲದೆ ನಿಶ್ಚಲವಾಗಿ ನೆಲಸಿರುವುದೋ ಆ ದಿವ್ಯಸುಂದರಪುರುಷನೇ ಈ ಕುಮಾರಿಗೆ ವಲ್ಲಭನಾಗುತ್ತಾನೆ. ಎಂದು ಪ್ರಕರಗೊಂಡ ಆದೇಶವೊಂದುಂಟು. ಈ ಪುಣ್ಯವತ್ತ್ಯ ಈ ಪಟ್ಟಣವನ್ನಾಳುವ ಮಗಧಾದಿಪತಿಯ ಮಗಳು ಶ್ಯಮಳೆಯೆಂಬಾಕೆ. ಈ ಕೋಮಲಾಂಗಿ ಇಂದು ನಿನ್ನನ್ನು ಎದುರುಗೊಂಳ್ಳಲೆಂಬಂತೆ ಬಂದು , ಈ ವನದೊಳಗೆ ವಿನೋದದಿಂದ ಕ್ರೀಡಿಸಿತ್ತಿದ್ದಳು ; ನೀನು ಈ ಮಾವಿನ ಮರದಡಿಯಲ್ಲಿ ಬಂದು ವಿಶ್ರಮಿಸಿದ್ದುದನ್ನೂ ಈ ಎಳೆಯ ಮಾವಿನ ಮರದ ನೆರಳು ಪಡಿನೆರಳಾಂತೆಯೂ ನೆಲೆದಲ್ಲಿ ನಾವಿ ಬೇರೂಡಿದಂತೆಯೂ ಕದಲದಿದ್ದುದನೂ ಕಂಡು ನಿನ್ನನ್ನು ಅದೇಶಪುರುಷನೆಂದರಿತುಕೊಂಡು ಸುದ್ದಿಯಿತ್ತ ವನಪಲಕನಿಕೆ ಉಡುಗೊರೆಯಿತ್ತು ,ಅಶನ್ನು ತನ್ನ ತಂದೆಗೆ ತಿಳಿಸಲು ವರ್ತಮಾನವನ್ನು ಕಳಿಸಿಕೊಟ್ಟಳು. ಆಮೇಲೆ ನೂಪುರಕ್ಷಣಿತವೇ ಮಂಗಳವಾದ್ಯವಾಗಿ ಸಂತೋಷದಿಂದ ಈಯಡೆಗೆ ಬಂದು ವಸಂತನ ಮನೆಗೆ ಅತಿಥಿಯಾಗಿ ಬಂದ ಕಾಮದೇವನಂತೆ ಬಂದು ಮಿಶ್ರಮಿಸುತ್ತಿದ್ದ ನಿನ್ನ ಕಾಲೆಡೆಯಲ್ಲಿ ಕುಳಿತು ಪ್ರೇಮವಿಕೋಕನವೆಂಬ ಹೊಸಹೂವಿನ ಹಚ್ಚಡವನ್ನು ನಿನಗೆ ಹೊದಿಸುತ್ತ ಕರಾಬ್ಜಗಳ ಘರ್ಮ್ಮಾಮೃತದಿಂದ ನಿನ್ನಡಿಗಳನ್ನು ನಯವಾಗಿ ಪೂಜಿಸುತ್ತಿದ್ದಾಳೆ. ಪುಷ್ಪಕೋಮಲೆಯಾದ ಶ್ಯಾಮಲೆಯ ವೃತ್ತಾಂತವಿದು.ನೀನು ಬೆಚ್ಚಬೇಕಾದುದಿಲ್ಲ ಗಿಳಿಗಳ ಇಂಚರವೇ ಮಂಗಳಾಪಾಠಕರ ಮಧುರನದವಾಗಿರಲು , ತುಂಬಿಗಳ ಝೇಂಕಾರದ ಧ್ವನಿಯೇ ಸಂಗೀತವಾಗಲು , ಅಂತಸ್ಥವಾದ ಕಮಾಗ್ನಿಯೇ ಸಾಕ್ಷಿಯಗಿರಲು ಕೋಗಿಲೆಯೇ ಮಾವಿನ ಸೊನೆಯ ನೀರನ್ನು ಧಾರೆಯ ನೀರಾಗಿ ಸುರಿದು ಮೆಚ್ಚಿ ನಿಂದ ನಿನಗೆ ಮದುವೆಮಾಡವುದು.

ಅಷ್ಟರಲ್ಲಿ ಮಗಧಾಧಿಪತಿಯ  ಪರಮೋತ್ಸಾಹದಿಂದ ಪರಿಜನಪರಿವೃತನಾಗಿ ಮಂಗಳ ದ್ರವ್ಯಗಳನ್ನು ತೆಗೆಸಿಕೊಂಡುಅಲ್ಲಿಗೆ ವೈಭವದಿಂದ ಬಂದನು. ಆಗ ಚಿಗುರಿದ ಎಳೆಯ ಮಾವಿನ ಮರವೇ ಹಸುರುಹಂದರವಾಯಿತು. ವಸುದೇವನೂ ಶ್ಯಾಮಳೆಗೂ ಅಲ್ಲಿ ಮದುವೆಯಾಯಿತು.  ತನ್ನ ಮಗಳನ್ನೂ ಅಳಿಯನನ್ನೂ ಒಡಗೊಂಡು ಹೋಗಿ ವಸುದೇವನಿಗೆ ಅರ್ಧರಾಜ್ಯವನು ಬಳುವಳಿಯಾಗಿ ಕೊಟ್ಟನು. ವಸುದೇವ ಶ್ಯಾಮಳೆಯರು ಭೋಗಾನುಭವ ಮಾಡುತ್ತಿರಬೇಕಾದರೆ  ಒಂದು ದಿವಸ , ಶ್ಯಾಮಳೆಯು ವಿಷಮನೃತ್ಯ ಶ್ರಮಶಾಂತೆಯಾಗಿ ಗಾಢನಿದ್ರೆಯಲ್ಲಿ ಮುಳುಗಿದಳು. ಆಗ ಆಕೆಯನ್ನು ನೋಡಿ ತಾನು ನೆವಕಾರನಾದ ಕಾರಣ  ಜುಗುಪ್ಸೆಪಟ್ಟು\, ಶ್ರಮದಿಂದಾಗಿ ಹಣೆಯಮೇಲೆ ಬಂದು ಹರಡಿಕೊಂಡುದ್ದ ಆಕೆಯ ಮುಗುರುಳಿನ ಕಸ್ತೂರಿಯ ಕಣಗಳು ಕರಗಿದ ದ್ರವದಲಿ ಒಂದು ಒಳ್ಳೆಯ ಹೂವಿನ ತುದಿಯನ್ನದ್ದಿ ಕೊಂಡು ಅದರಿಂದ ಅವಳ ಕಿವಿಯೋಲೆಯ ಮೇಲೆಯೆ ನಾನು ಹೋಗಿಬರುತ್ತೇನೆ. ನೀನು ಅಲ್ಲಿಯ ವರೆಗೆ ನಿಶ್ಚಿಂತೆಯಿಂದಿರು– ಎಂದಿಷ್ಟು ಬರೆದು ಅವಳಿಗೆ ತಿಳಿಯದಂತೆ ಹೊರಟುಹೋದನು.

ಹೀಗೆ ಯಾರಿಗೂ ಸುಳಿವುಗೊಡದೆ ಹೊರಟುಹೋಗುತ್ತಿರಲು ಘೋರವಾದ ಅರಣ್ಯವೊಂದು ಎದುರಾಯಿತು. ಅ ಅರಣ್ಯದ ಹಲವಗೆಯ ಕ್ರೂರಪ್ರಾಣಿಗಳನ್ನೂ ಪಶು ಪಕ್ಷಿಗಳನ್ನೂ ಗಿಡಮರಗಳನ್ನೂ ನೋಡಿ ನೋಡಿ ಹಾದುಬರುತ್ತ ಇರಬೇಕಾದರೆ ಸುಗಂಧಿತವೂ ಸುಶೀಲವೂ ಆದ ಮುಂದನಿಲವು ಹಿತಕರವಾಗಿ ಬೀಸಿ ಬಂತು. ಅದನ್ನನುಸರಿಸಿ ನಗೇಂದ್ರನಂತೆ ಮಹಲೀಲಾಗಮನನಾದ ವಸುದೇವನು ಮಾಳುಂದುವರಿಯಲು ಒಂದು ಕಮಲದ ಕೊಳವು ಕಣ್ಣಿಗೆ ಕಂಡಿತು. ಆ ಸರೋವರವು ನಿರ್ಮಲೋದಕದಿಂದ ಕಳಕಳಿಸುತ್ತಿದ್ದು. ಅದರ ಚೆಲುವನ್ನು ಅತಿಶ್ಯಗೊಳಿಸುವಂತಹ ದೃಶ್ಯಾವಳಿಂದ ಮನೋಹರವಾಗಿ ಕಾಣುತ್ತಿತ್ತು. ಆ ಕುಸುಮಾಕರವೆಂಬ ಕಮಲಾಕರವನ್ನು ವಸುದೇವಕುಮಾರನು ಹೊಕ್ಕು ಕೈಕಾಲು ಮುಖಗಳನ್ನು ತೊಳೆದುಕೊಂಡು , ನೀರ್ಗುಡಿತು ಕಮಲಪರಾಗದ್ ನೀರ್ಗುಕುಮವನ್ನು ತೊಡೆದುಕೊಂಡು , ತಡಿಯಲ್ಲಿಕ್ಕಿದ್ದ ಗಜಮದದಿಂದ ತಿಲಕವಿಟ್ಟು , ಸಿಂಧೂರಪುಷ್ಪನನ್ನು ಮುಡಿದು , ಕಮಲಪತ್ರವನ್ನು ರಾಗದ ಪಟ್ಟಿಯಾಗಿ ಕಟ್ಟಿ, ಕಾವಿದ್ದ ಕನ್ನೈದಿಲೆಯನ್ನು ಅಂಕುಶವಾಗಿ ಕೈಯಲ್ಲಿ ಹಿಡಿದು ವಿನೋದ್ಜಶೀಲನಾಗಿ ಹೀಗೆ ಗಜಶೃಂಗಾರಗೊಂಡು,

ಆ ಕೊಳದ ತಡಿಯಲ್ಲಿ ಸಮವಸರಣದ ಅಶೋಕೆಯಂತಿದ್ದ ಒಂದು ಅಶೋಕವೃಕ್ಷದ ನೆರಳಿನಲ್ಲಿ ಕುಳಿತುಕೊಂಡನು.

ಆಗ ಆಕಸ್ಮಿಕವೆಂಬಂತೆ ಆ ಕೊಳದಲ್ಲಿ ಅವಹವಿದ್ದ ಒಂದು ಆನೆಯು ಅದರ ಮೇಲ್ಮೈಯನ್ನೂ ಹೆದ್ದೆರೆಗಳನ್ನೂ  ಬಲವಾಗಿ ಸೀಳಿಕೊಂಡು ಮೇಲಕ್ಕೆದ್ದು ಬಂದಿತು. ಮಕರ್ರಕರದಿಂದ ಹೊರಬರುವ ಕರಿಮಕರದಂತೆ ಕಮಲಾಕರದಿಂದ ಹೊರಬಂದು  ದಂಡೆ ಗೇರುವಾಗ ಅದರ ಕಲಿಗೆ ತವರೆದಂಟುಗಳು ಆಡಿಕಿತ್ತು ಸಿತ್ತಿಕೊಂಡು ಬಂದವು ಆ ಗಜದ ಗಾಳಿಗೆ ಮೋಡದ ಗುಂಪು ಚೆದರುವಂತೆ ಕಾಡಾನೆಗಳು ಹಿಂಡೊಡೆದು ಓಡಿದವು. ಮೇಲೆ ಹಾಯ್ದ ಸಿಂಹಗಳೆಲ್ಲ ಅದಿವರಾಹನ ಮೆಲೆ ಹರಿಹಾಯ್ದ ಗ್ರಾಮಸಿಂಹಗಳಂತದುವು. ಬಟ್ಟಾನಗಳೆಲ್ಲ ಬೆನ್ನಿತ್ತು ಓಡುವಂತಾದವು. ಅದು ವನವನ್ನು ಹೊಕ್ಕು ಅತ್ಯುಗ್ರಹವಾಗಿ ಕೆರಳಿ ಮರಮರಗಳ ಮೇಲೆಲ್ಲ ಹಾಯ್ದು ಅವನ್ನೆಲ್ಲ ಕಿತ್ತು ಈದಾಡಿತು. ಗಿಡದ ಚಿಗುರಗಳನ್ನು ಕಿತ್ತು ಎರಚಾಡಿತು. ಹೀಗೆ ಮಹೋಗ್ರವಾಗಿ ಮಸಡಿ ಮನಬಂದತ್ತ ನುಗ್ಗುತ್ತಿದ್ದ ಮದದಾನೆಯನ್ನು ಆ ಕುಮಾರನು ಕಂಡು “ ನಾನು ಈ ಕಟ್ಟಾನೆಯನ್ನ್ಮು ಅಂಕೆಗೆ ಕೊಂಡು ಏರಿವುದಾದರೆ ನಾನೀಗ ಆನೆಬಿನ್ನಣಿ ಎಂದು ಆಲೋಚಿಸಿ, ಅದು ದನಿದೋರಿದ ಸಾರೋವರದ ಬಲಿಯುಲ್ಲಿಯೇ ಸುಳುದು ಬಂದು ಮುಖವನ್ನು ಬಿಗಿದುಕೊಂಡು , ನೆಟ್ಟ ಕಣ್ಣೂರಿ ಗಾಳಿಗೆ ಗರಿಮೂಡಿದಂತೆ ರಿರ್ರನೆ ರಭಾಸದಿಂದ ಬರುತ್ತಿದ್ದ ಆನೆಯನ್ನು ಚಪ್ಪರಿಸಿ ಹಿಡಿದು , ನಂಬಿಸಿ, ಸೊಂಡಿಲಿಗೆ ಕೈಕೊಟ್ಟು ಅತಿ ಚಮತ್ಕಾರದಿಂದ ಅದನ್ನೊಳಗುಮಾಡಿಕೊಂಡು , ಸಿಂಹದಂತೆ ಅದರ ಬೆನ್ನುನ ಮೇಲೆ ಹಾರಿಕೊಂಡು, ಆಯವನ್ನರಿತು ಕುಳಿತು, ಕುಂಭ ಸ್ಥಳವನಾಸ್ಫಾಟಿಸಿ ವನ್ಯಗಗಳಾನ್ನೂ ಗಿರಿಗಳನ್ನೂ   ನಿರ್ಲಕ್ಷ್ಯವಾಗಿ ಭೇದಿಸಿಕೊಂಡು ನುಗ್ಗಿ,  ಕಟ್ಟನೆಯನ್ನು  ಕುಳಿಗೆ  ಕೆಡಹುದಂತೆ ಮಡದಲ್ಲಿಯೂ  ಉಂಗುಟದಲ್ಲಿಯೂ  ಹಿಡಿದು  ಅಳವಡಿಸಿದನು.  ಆಗ  ಆ  ಕೆಡಹುವಂತೆ ಮಡದಲ್ಲಿಯೂ ಉಂಗುಟದಲ್ಲಿಯೂ ಹಿಡಿದು ಅಳಾವಡಿಸಿದನು. ಆಗ ಆ ರಾಜಪುತರನ ಆ ಸಾಹಸಕ್ಕೂ ಬಿನ್ನಣಕ್ಕೂ ಆಶ್ಚರ್ಯಪಟ್ಟು ಇಬ್ಬರು ಖಚರರು. ಆತನಿಗೆ ಅರ್ಘ್ಯವಿತ್ತು ಗೌರವಿಸಿದರು.

ಮುಂದೆ ಅವನಿಗೆ ಅವನತರಾಗಿ ಹೀಗೆ ವಿಜ್ಞಾಪಿಸಿದರು .ದೇವ ಬಿನ್ನಹ ಈಮನೆ ತನ್ನನ್ನೇರುವೆನೆಂಬವನ ನೆತ್ತಿಗೆ ತಾನೇ ಎರುತ್ತದೆ, ತನ್ನಮೆಲೆ ಮುನಿಯುವವನ ಮೇಲೆ ತಾನೇ ಮೀರಿ ಮುನಿಯುತ್ತದೆ, ಇದನ್ನು

ನಡೆಸುವೆನೆಂಬವನನ್ನು ಬಳಲಿಸಿ ಹೀರಿಹಿಪ್ಪೆ ಮಾಡುತ್ತದೆ. ಇಂಥ ಅತಿವರ್ತಿಯಾದ ಆನೆಯನ್ನು ವಶವರ್ತಿಯಗಿ ಮಾಡುವದಕ್ಕೂ ಅಂಕುಶವಿಲ್ಲದೇಯೇ ಇದನ್ನು ಅಂಕೆಗೆ ತರುವದಕ್ಕು ನಿನಗೊಬ್ಬನಿಗೆ ಮಾತ್ರ ಸಾಧ್ಯ ನಿನೀಗ ದೇವನಲ್ಲದೆ ಮತ್ತಾರುತಾನೆ ದೇವನಾದಾನೂ? . ಹೀಗೆ ಹೊಗಳಿದ್ದಲ್ಲದೆ, ಮುಂದೆ ದೇವಾ , ಬೇಗ ಈ ಆನೆಯಿಂದಿಳಿದು ನಮ್ಮ ಸ್ವಾಮಿಯು ಆದೇಶ ಭಾಗವನ್ನು ನೀನು ನೆರವೇರಿಸಿ ಕೊಡಬೇಕು, ಎಂದು ಪ್ರಾರ್ಥಿಸಿದರು. ವಸುದೇವನು ಹಾಗೇಯೇ ಆನೆಯ ಬೆನ್ನಿಂದಿಳಿದು ಬಂದು ನೀವು ಯಾರು? ನೀವು ಹೇಳುತ್ತಿರುವುದೇನು? ಎಂದು ಕೇಳಿದನು.

ಆ ವಿದ್ಯಾಧರರು ಹೇಳತೊಡಗಿದರು ವಿಜಯರ್ಧಪರ್ವತದ ದಕ್ಷಿಣಶ್ರೇಣಿಯಲ್ಲಿ ಕಿನ್ನರಗೀತವೆಂಬ ಪಟ್ಟಣವಿದೆ ; ಅದನ್ನು ಮಹಾಭಾಗನಾದ ಅಶನಿವೇಗನೆಂಬ ಖೇಚರಪ್ರಭುವು ಆಳುತ್ತಿದಾನೆ . ಆತನ ಮಗನ ಪರಪುರುಷಶುಕಶಾಲ್ಮಲಿಯಾದ ಶಾಲ್ಮಲಿಎಂಬವಳು ಆಕೆಗೆ ಅನುರೂಪವರನ್ನನ್ನು ಖಚರರಲ್ಲಿಯೂ ಭೂಚರರಲ್ಲಿಯೂ ಕಾಣದೆ ಆತನು ಖಿನ್ನನಾಗಿರಬೇಕದರೆ ಆದೇಶಪುರುಷನೂ ಈ ಮದಗಜವನೇರಿದವನು ಆದವನು ನಿನ್ನ ಮಗಳಿಗೆ ಮದುವಣಿಗನೆಂದು ಹೇಳಲಾಗಿ ಆನಂದದಿಂದ ನಮ್ಮ ಪ್ರಭುವು ನಮ್ಮಿಬ್ಬರನ್ನೂ ಈ ಕರಿಪತಿಗೆ ಕಾವಲಾಗಿ ನಿಯಮಿಸಿದನು. ಅಂದಿನಿಂದ ಇಂದಿನ ವರೆಗೆ ನಾವು ಈ ಅರಣ್ಯದಲ್ಲಿ ಅಡಿಮಿಡುಕದೆ ಮೃಗಗಳಾಗಿದ್ದೆವು. ನಮ್ಮ್ ಪುಣ್ಯವೇ ಪುರುಷ ರೂಪವಾಗಿ ಬಂದಂತೆ ನೀನು ಬಂದು ಸಾಹಸಪುರುಷನೂ ಆದೇಶ ಪುರುಷನೂ ಆಗಿ ಕಾಣಿಸಿಕೊಂಡಿದ್ದರಿಂದ ಇಂದಿನವರೆಗೆ ನಮ್ಮ ತಪಸ್ಸು ಶಾಲ್ಮಲಿದತ್ತೆಯ ಕಾಮತಾಪವೂ ಸಫಲವಾಯಿತು. ಈಗೋ, ಈ ದಿವ್ಯ ಶ್ರೀ ವಿಮನವನ್ನುಸಂತೋಷದಿಂದ ನೀನು ಏರು. ಬಾ, ಪಟ್ಟಣಕ್ಕೆ ಹೋಗೋಣ. ಅಕೋ ಅಲ್ಲಿ ಕಾಣುವುದೇ ವಿಜಯಾರ್ಧಾಚಲ . ನಿನ್ನಸ್ವಾಗತಕ್ಕೆ ಅದು ಸಿದ್ಧವಾಗಿದೆ. ಆನೆಯನ್ನೆರಿದೆ, ಈಗ ವಿಮಾನವನ್ನೇರು. ಇದರಲ್ಲಿ ಕುಳಿತು. ಈ ಪರ್ವತಶಿಖರವನ್ನು ನೀನು ಸೇರುವೆ. ಹೀಗೆಂದು ಆ ಖಚರಯುಗಳವು ತಂದೊಡ್ಡಿದ ಮನಿಮಯ ವಿಮಾಗನವನ್ನೇರಿ ಮೂರ್ತಿಮಾರ್ತಾಂಡ ದೇವನಾದ ವಸುದೇವನು ವಿಜಯಾರ್ಧಪರ್ವತದತ್ತ ಹಾರಿದನು.

ಷಷ್ಠಾಶ್ವಾಸ

ಖೇಚರವಿಮಾನವನ್ನೇರಿ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಕಿನ್ನರಗೀತದ ಕಡೆಗೆ ಹಾರಿದ ವಸುದೇವನು ಮಣಿಮಯವಿಮಾನವೆಂಬ ಹಡಗಿನಲ್ಲಿ ಕುಳಿತು ಸ್ತ್ರೀ ರತ್ನವೆಂಬ ಅನರ್ಘ್ಯರತ್ನವನ್ನು ಹುಡುಕಿ ತರಲು ನಿರಿಮುಗಿಲೆಂಬ ಸಮುದ್ರದ ಮೇಲೆ ಹೊರಡುವ ಹಡಗಿನ ವ್ಯಾಪಾರಿಯಂತೆ ಕಾಣುತ್ತಿದ್ದನು. ಆಯೆತ್ತರ ಹಾರುವಾಗ ಕುಲಗಿರಿಗಳ ಸಮೂಹವು ಈತನ ಮಹೋನ್ನತಿಯನ್ನು ಕಂಡು ಲಜ್ಜಿಸಿ ಕೆಳಕೆಳಕ್ಕೆ ಕುಗ್ಗಿ ಹೋದಂತೆ ತೋರುತ್ತಿತ್ತು. ಮೈಮಿರುಗುವ ಸರ್ಪಗಳ ಗುಂಪೆನ್ನುವಂತೆ ಬಳುಕಿ ಬಾಗಿ ಹರಿಯುವ ನದಿಗಳಿಂದ ಭೂಲೋಕವೇ ನಾಗಲೋಕವೆಂಬಂತೆ ತೋರುತ್ತಿತ್ತು. ಸಮುದ್ರವೇ ಒಂದು ಬಳೆಗಿಂತ ಭೂಮಿ ಒಂದು ಕವಲಿಗಿಂತ, ಕುಲಗಿರಿಗಳು ಹಗಲಕಾಯಿಗಳಿಗಿಂತ , ಮದಗಜಗಳು ಹಂದಿಗಳಿಗಿಂತ ನದಿಗಳು ಹಾವುಗಳಿಗಿಂತ ಕೊಳಗಳು ಕಣ್ಣುಗಳಿಂಗಿಂತ ಉತ್ತುಂಗ ವೃಕ್ಷಗಳು ಸೀಗುರಿಗಿಂತ ಚಿಕ್ಕವಾಗಿ ಕಾಣುತ್ತಿದ್ದವು . ನಿಮ್ನೋನ್ನತ ಪರ್ವತರಣ್ಯ ಪ್ರದೇಶದಿಂದ ಕೂಡಿದ ಆ ಜಂಬೂದ್ವೀಪವು ಚಿತ್ರೀಕೃತವಾದ ಜಂಬೂದ್ವೀಪವೆಂಬಂತೆ ಕಾಣುತ್ತಿತ್ತು . ಹೀಗೆ ವಸುದೇವನು ಕಿನ್ನರಗೀತವನ್ನು ತಲುಪಿ ಶಾಲ್ಮಲಿದತ್ತೆಯನ್ನು ವರಿಸಿದನು. ಇಬ್ಬರೂ ರತಿಸುಖವನ್ನು ಅನುಭವಿಸಿದರು. ಆ ವಸಂತದಲ್ಲಿಯೇ ವನಕೇಲಿ ಜಲಕೇಲಿಗಳನ್ನು ಅಧಿ ಬಳಲಿ ಬಂದು ಸುರಟಾನುಭಾವಮಾಡಿ ಶಾಂತರಾಗಿ ಸೌಧಾಗ್ರಭೂಮಿಯಲ್ಲಿ ದೇವದಂಪತಿಯಂತೆ ಪವಡಿಸಿದರು.

ಆಗ ಒಂದು ವಿಚಿತ್ರ ಘಟನೆ ನಡೆಯಿತು. ಹೆಣ್ಣು ಹಾವಿನ ತಕ್ಕೇ ಬಿಡಿಸಿ ಎಳೆಯ ಗಂಧದ ಮರವನ್ನು ಕಿತ್ತೀಯ್ಯುವಂತೆ ಯವನೋ ಒಬ್ಬ ಖಚರನು ಶಾಲ್ಮಲಿಯ ಒಲಿವಿನ ತೋಳಪ್ಪುಗೆಯಿಂದ ವಸುದೇವನನ್ನು ಬಿಡಿಸಿಕೊಂಡು ಹೊರಟು ಹೋದನು. ಆಗ ಶಾಲ್ಮಲಿದತ್ತೆ ಕೂಡಲೇ ಎಚ್ಚರಗೊಂಡು , ವ್ಯಗ್ರಗೊಂಡು ಚಂದನಗ್ರಹಿಯ ಬೆನ್ನಟ್ಟುವ ಹೆಣ್ಣುಹಾವಿನಂತೆ , ಗಂಡುಡೆಯುಟ್ಟು, ಕತ್ತಿ ಗುರಣಿಗಳನ್ನು ಎತ್ತಿ ಹಿಡಿದು ಅತಿವೇಗದಿಂದ ಆಕಾಶದತ್ತ ಹಾರಿ ಖಚರನನ್ನು ಬೆನ್ನಟ್ಟಿದಳು. ಸ್ವಲ್ಪ ದೂರದಲ್ಲಿಯೇ ವಸುದೇವನನ್ನು ಕಂಕುಳಲ್ಲಿರುಕಿಕೊಂಡು ಹೋಗುವ ಅವನನ್ನು ಕಂಡು ಕೆರಳಿ ' ಇನ್ನು ನೀನು ಸತ್ತಂತೆಯೇ, ಇನ್ನು ಎಲ್ಲಿಗೆ ಹೋದೀಯೇ? ಎಂದು ಗರ್ಜಿಸಿದಳು. ನನ್ನ ಇನಿಯನನ್ನು ಬಿಟ್ಟಬಿಡು ಇಲ್ಲವೆ ಬಲವಾಗಿ ಹೊಡೆದಳು. ಅವಳ ಗರ್ಜನೆಗೆ ಬೆದರಿದ ಖಚರನು ಅಲ್ಲಿಂದ ಮುಂದಿಡಿಯಿಡುವ ಧೈರ್ಯ ಸಾಲದೆ ವಸುದೇವನನ್ನು ಅವಳ ಮೇಲೇಯೇ ಎಸಿದುಬಿಟ್ಟು

ಪಲಾಯನಮಾಡಿದನು. ಆಗ ಶಾಲ್ಮಲಿಯ ಬೀಳುತ್ತಿದ್ದ ವಸುದೇವನಾನ್ನು ತಟಕ್ಕನೇ ಎದೆಗವಿಚಿಕೊಂಡು ಹಿಗ್ಗಿನಿಂದ ಹಿದಿರುಗುವಾಗ , ಆಕೆಗೆ ಒಂದು ದಿವ್ಯ ಧ್ವನಿ ಕೇಳಿ ಬಂತು. ಎಲೈ ಖಚರಿ ಈ ರಾಜಕುಮರನನ್ನು ನೀನು ನೆಲಕ್ಕಿಳಿಸು. ಆಸೆ ಪಟ್ಟು ನಿನ್ನೊಂದಿಗೆ ಬಯ್ಯಬೇಡ. ಈತನು ಭೂತಲವನ್ನೆಲ್ಲ ಸುತ್ತಿ ಒಂದು ನಿಮ್ಮ ಕುಲಪತಿಯ ಮನೋರಥವನ್ನು ನೆರವೇರಿಸುವನಾಗುತ್ತಾನೆ. ಈ ಧನಿ ಕಿವಿದಗುತ್ತಲೇ ಚತುರ್ದಿಸಗಳನ್ನು ಶಲ್ಮಲಿಯ ನೋಡಿ , ಇದು ದೇವತಾ ವಚನ , ಅಲಂಘನೀಯವಾದ್ದು. ಎಂದು ಕೊಂಡು ವಸುದೇವನು ಪೂರ್ಣಲಘುವಿದ್ಯೆಯ ಕೈಯಲ್ಲಿ ಕೊಟ್ಟು ಹೊರಟು ಹೋದಳು ಅದು ಅವನನ್ನು ಚಂಪಾಪುರದ ಹೊರವೂಳಲು ಕಮಲಸರೋವರದ ನಡುವಿನ ಮರಳಿ ದಿಣ್ಣೆಯ ಮೇಲೆ ಇಳಿಸಿ ಹೊರಟು ಹೋಯಿತು.

ಸ್ವಲ್ಪ ಹೊತ್ತಿನಲ್ಲಿಯೇ ಬೆಳಗಾಯಿತು. ನೀರು ಹಕ್ಕಿಗಳ ದನಿಗೆ ಬೆಚ್ಚಿದಂತೆ ವಸುದೇವನು ಎಚ್ಚತ್ತು. ಅಶ್ಚರ್ಯ ಪಟ್ಟು ಇದೇನು ಹೀಗೆ ಎಂದು ತನ್ನಲಿಯೆ ಚಿಂತಿಸಿ ಆ ಸರೋವರದ ರಮಣಿಯತೆಗೆ ಮನಸೋತು ಅದರಲ್ಲಿ ಸ್ನಾನ ಮಾಡಿ , ಜಿನಪತಿಯನ್ನು ಅಂತರಂಗದಲ್ಲಿಯೇ ಪರಿಭವಿಸಿ ಅಂತಕ್ಕರಣ ಪೂರ್ವಕ ವಾಗಿ ಧ್ಯಾನಿಸಿ ಪೂಜಿಸಿ, ಕೃತಕೃತ್ಯನಾಗಿ ಕೆಲಕಾಲದಮೇಲೆ ಬಹಿರಮುಖನಾಗಿ ಅದೇ ಕೊಳದ ದಡದಲ್ಲಿ ಕೈಕಾಲು ಮುಖಗಳನ್ನು ತೊಳೆಯುತ್ತಿದ್ದ ಕೆಲವರನ್ನು ಈ ಸರೋವರವನ್ನು ಹಾಯುವ ದಾರಿ ಯಾವುದು ಪ್ರಶ್ನಿಸಿದನು. ಅವರು ಗಟ್ಟಿಯಾಗಿ ನಗುತ್ತ " ಓಹೋ ಈ ಅಣ್ಣನು ಆಕಾಶದಿಂದ ಉದರಿಬಿದ್ದ ಹಾಗೆ ಮಾತಾಡುತ್ತಾನೆ. ಎಂದು ನಗೆಯಡಿದರು.ಆಗ ವಸುದೇವನು ನಿಮ್ಮಮಾತು ಸುಳ್ಳಲ್ಲ ಎಂದು ಹೇಳಿ ಹನುಮನ ಮತದಿಂ ಅದನ್ನು ದಾಟಿ ಹೋಗಿ ಸಂಸಾರವನ್ನು ದಾಟಿ ಹೋದವರು ಸಿದ್ದಾಲಯವನ್ನು ಸೇರುವಂತೆ ವಾಸುಪೂಜ್ಯ ಭಟ್ಟಾರಕರ ನಿರ್ವಾಭೂಮಿಯಲ್ಲಿ ಇಂದ್ರನ ಆದೇಶದಂತೆ ಕುಬೇರನು ನಿರ್ಮಿಸಿದ ಚಿತ್ರಚೈತ್ಯಾಲಯವನ್ನು ಸೇರಿದನು ಅದನ್ನು ಬಲಗೊಂಡು ಅಲ್ಲಿಯ ವಸ್ತುಪೂಜ್ಯ ಜಿನಬಿಂಬಕ್ಕೆ ಅಭಿಮುಖನಾಗ್ಯೆ ನಿಂತು ಭಾಕ್ತಿಯಿಂದ ಸ್ತುತಿಸಿದನು. ಅಲ್ಲಿದ್ದ ಬೋಧಸಿಂದು ಭಟ್ಟಾರಕರನ್ನು ದಂಡಿಸಿ ಅವರಲ್ಲಿ ಧರ್ಮಶ್ರವಣಮಾಡಿ ವಿದ್ಯಾಧರಲೋಕದಿಂದ ಅಲ್ಲಿಗೆ ಬಂದ ಮೃತಾಂತವನ್ನು ಅವರಿಂದ ಕೇಳಿ ತಿಳಿದುಕೊಂಡು ನಮಸ್ಕರಿಸಿ ಅಲ್ಲಿಂದ ಮುಂದೆ ಹೊರಟನು.

ಬಸದಿಯಿಂದ ಹೊರಡುತ್ತಲೇ ಆತನ ಕಿವಿಗಳಿಗೆ ಅತ್ಯಪೂರ್ವವು ಅತಿ ಮಧುರವು ಆದ ವೀಣಾಧನಿಯೆಂದು ಕೆಳಿಬಂತು. ಆಧ್ವನಿ ಬಂದ ದರಿಯನ್ನೇ ಹಿಡಿದು ಸ್ವಲ್ಪದೂರ ಮುಂದುವರೆದನು. ಅಲ್ಲಿಒಂದು ಉಪವನದ ನಡುವೆ ಹೂವಿನ ಹುಡಿಯಲ್ಲಿ ಹುಡುಗಿದ್ಂತಿದ್ದ ಹೊಂಬಸದಿಯ ಜಗುಲಿಯ ಮೇಲೆ ರತ್ನಪೀಠಗಳಲ್ಲಿ ವೀಣಾಪಾಣಿಗಳಾಗಿ ಮುಂಡಿಸಿದ ಕೆಲವು ಕುಮಾರಿಯನ್ನು ಕಂಡನು. ಆ ಬಸಹಿಯೇಳಗೆ ಭೂವನದ ಭಾಗ್ಯದೇವತೆಯಂತಿದ್ದ ಪದ್ಮಾವತಿ ದೇವರು ಮುಂದೇ ಚಂದ್ರಬಿಂಬ ಬಿಸತಂತು ಇಕ್ಷುಚಾಪದಂಡ ಇವುಗಳಿಂದ ತುಂಬಿಯನ್ನು ತಂತಿಯನ್ನು ದ,ಂಡಿಗೆಯನ್ನುಮಾಡಿಕೊಂಡು ಪಚ್ಚಶರಗಳನ್ನೇ ಸಪ್ತಸ್ವರಗಳಾಗಿ ಮಾಡಿಕೊಂಡು ದೇವಿಯನ್ನಾರಾಧಿಸಿ ವೀಣೆಯನ್ನು ಬಾಜಿಸುವ ರತಿದೆವ್ಯೆಯೆಂತಿದ್ದ ಒಬ್ಬ ಸುಂದರ ಸುಕುಮಾರಿಯಾದ ಕುಮಾರಿಯನ್ನು ವಸುದೇವನು ನೋಡಿದನು ಆಕೆಯ ವೀಣಾವಾದನ ವೃದುಗ್ಧತೆಗೂ ಸಕಲ ತ್ರಿಭೂವನಾತಿಶಯರೂಪಾಕೃತಿಗೂ ಮಿಚ್ಚಿಕ್ಕೊಂಡು ಮೈಮರೆತು ಅಲ್ಲಿಯ ಒಂದು ಕಂಬದ ಮರೆಯಲ್ಲಿ ಹೋಗಿ ಕುಳಿತು ಕೆಳುತ್ತಿದ್ದನು.

ಆ ಸಂದರ್ಭದಲ್ಲಿ ಆ ವೀಣಾವಿಶಾರದೇಯ ಗುರು ಮನೋಹರನೆಂಬ ಗಂಧರ್ವಚಾರ್ಯನು ವಸುದೆವನು ನೋಡಿ ಅವನನ್ನು ದೇವನೆಂದೇ ಭಾವಿಸಿ ಪೀಠವನ್ನು ಹಾಕಿಸಿಕೊಟ್ಟ ಕುಮಾರನ ಆಕಾರವನ್ನು ಅಪಾದಮುಕ್ತವಾಗಿ ಸವಧನವಾಗಿ ನೋಡಿ, ಆತನಲ್ಲಿ ದಿವ್ಯಪುರುಷಲಕ್ಷಣಗಳನ್ನೆಲ್ಲ ಸ್ಪಷ್ಟವಾಗಿ ಗಮನಿಸಿ, ತನ್ನಲ್ಲಿಯೇ 'ಈತನು ಸಾಮಾನ್ಯ ಪುರುಷನಲ್ಲ; ತ್ರಿಭುವನಜನತಾಮಾನ್ಯನಾದ ಮಹಾಪುರುಷ– ಎಂದು ನಿಶ್ಚಯಿಸಿಕೊಂಡನು; ಉದಾತ್ತಪುರುಷತ್ವವನ್ನು ಮನಸ್ಸಿನಲ್ಲಿಯೇ ಮೆಚ್ಚಿಕೊಳ್ಳುತ್ತಿದ್ದನು. ಅಷ್ಟರಲ್ಲಿ ಪನ್ನಗಪೂಜಿತೆ ದೇವಿ ಪದ್ಮಾವತಿಯು ಆ ಸುಕುಮಾರಿಯ ವೀಣಾವಾದನಪ್ರಾವೀಣ್ಯಕ್ಕೆ ಮೆಚ್ಚಿ ಪ್ರಸಾದವಾಗಿ ಅನುಗ್ರಹಿಸಿದ ಕಿರೀಟದ ಹೂವನ್ನು ಆ ಕುಮಾರಿಯು ಹರ್ಷಿಸಿ ಮುಡಿಗಿರಿಸಿಕೊಂಡಳು. ಆಮೇಲೆ ಭಟ್ಟತ್ತಿಗೆ ನಮಸ್ಕರಿಸಿ ಬಂದು, ಉಪಾಧ್ಯಾಯರಿಗೆ ಎರಗಿ, 'ದೇವಿಯು ನನಗೆ ಎಂದೂ ಕಿಟ್ಟಿರದ ಈ ವರಪ್ರಸಾದವನ್ನು ಇಂದು ಗುರುಪ್ರಸಾದದಿಂದಾಗಿ ಅನುಗ್ರಹಿಸಿದ್ದಾಳೆ– ಎಂದು ಹೇಳಿ ಹೊರಟುಹೋದಳು. ಆಗ ಉಪಾಧ್ಯಾಯನು 'ಈ ಮಹಾಭಾಗನಿ ಆಗಮನವೂ ದೇವತೆಯ ವರಪ್ರಸಾದವೂ ಈಕೆಗೆ ಇಂದು ಏಕಕಾಲದಲ್ಲಿ ಉಂಟಾಗಿರುವ ಕಾರಣ, ಈ

ಕಾರಣಪುರುಷನೇ ಈ ನನ್ನ ಶಿಷ್ಯೆಗೆ ವರನಾಗತಕ್ಕವನಿರಬೇಕು– ಎಂದು ನೆನೆದು ಕುಮಾರಿಯು ಯಾರ ಮಗಳು? ಯಾರಿಗೆ ಮದುವೆಯಾಗಲಿದೆ? ಇವಳ ಪರಿಚರ್ಯದಾಕೆ ಮಕ್ಕಳನ್ನು ಎತ್ತಿಕೊಂಡಂತೆ ವೀಣೆಯನ್ನು ಕಂಕುಳಲ್ಲಿ ಎತ್ತಿಕೊಂಡಿರುವುದೇಕೆ? ಎಂದು ಕೇಳಿದನು. ಅದಕ್ಕೆ ಆತನು 'ಈಕೆ ಈ ಪುರವನ್ನಾಳುವ ಚಾರುದತ್ತನೆಂಬ ಗುಣಾಢ್ಯನಾದ ವ್ಯಾಪಾರಿಯ ಮಗಳು, ವೀಣಾವಾದನನೈಪುಣ್ಯದಲ್ಲಿ ಈಕೆ ಸರಸ್ವತಿಯನ್ನೇ ಮೀರಿಸುತ್ತಾಳೆ. ವೀಣಾವಾದನಲ್ಲಿ ತನ್ನನ್ನು ಯಾವನು ಗಲ್ಲುವನೋ ಆತನ್ನಲ್ಲದೆ ಮತ್ತ್ಯಾರನ್ನೂ ತಾನು ಮದುವೆಯಾಗುವದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಾಳೆ. ಇದರಂತೆ ಈಕೆಯ ತಂದೆಯೂ ತಿಂಗಳಿಗೊಮ್ಮೆ ಮನೋಹರವಾಗಿ ವೀಣಾಸ್ವಯಂವರವನ್ನು ಏರ್ಪಡಿಸುತ್ತಾನೆ. ಎಂತೆಂತಹ ಕಿನ್ನರರೋ ವಾದನನೈಪುಣ್ಯಡಲ್ಲಿ ಈಕೆಯನ್ನು ಸೋಲಿಸಲಾರದೆ, ಕನ್ಯರಾಶಿಗೆ ಬಂದ ಸೂರ್ಯನಂತೆ ನಿಷ್ಪ್ರಭರಾಗಿ ನಿರಾಶೆಗೊಂಡು ಹೋಗುತ್ತಾರೆ. ಇದು ಈಕೆಯ ಸಂಬಂಧವಾದ ವಿಪಂಚೀಪ್ರಪಂಚ – ಎಂದು ವಿವರಿಸಿದನು.

ಕುಮಾರನು ತನ್ನಲ್ಲಿಯೇ ಆಕೆಯ ಸಾಮರ್ಥ್ಯವನ್ನು ಮೆಚ್ಚಿಕೊಂಡು ಹೀಗೆ ಭಾವಿಸಿದನು: 'ವ್ಯಾಪಾರಿಯ ಮಗಳಿಗೆ ಇಂಥ ಕಲಾಪರಿಣತೆಯೂ ರೂಪವೂ ಇರುವದು ಅಸಂಭವ. ನವಕರ್ಣಿಕಾರ ವೃಕ್ಷದ ಅಡಿಯಲ್ಲಿರುವ ಸಂಪಗೆಯ ಹೂವಿನಂತೆ ಇರುವ ಈಕೆ ಯಾರ ಮಗಳಿರಬಹುದೋ? ತನಗೆ ತಾನೆ ಹೇಳಿಕೊಂಡರೂ ಹೇಳಿಕೊಂಡ ಮಾತಿನರ್ಥವನ್ನು ಗ್ರಹಿಸಿ ಮನೋಹರನು, 'ನಿನ್ನ ಅನುಮಾನವು ನನಗೆ ಅರ್ಥವಾಯಿತು. ಈ ಚಾರುದತ್ತನಿಗೆ ಪರಮಮಿತ್ರನಾದ ಅಮಿತಗತಿಯೆಂಬ ಒಬ್ಬ ಖೇಚರನುಂಟು. ಅವನ ಮಗಳು ಈಕೆ. ಇವಳ ಹೆಸರು ಗಂಧರ್ವದತ್ತೆ. ಈ ಚಾರುದತ್ತನ ಚಾರಿತ್ರ್ಯಕ್ಕೂ ಅವನ್ನು ಬಿಟ್ಟಿರಲಾರದೆ ಅಮಿತಗತಿಯು ಅವನ್ನು ತನ್ನ ವಿದ್ಯಾಧರಲೋಕಕ್ಕೆ ಒಡಗೊಂಡು ಹೋಗಿ ತನ್ನ ರಾಜ್ಯವನ್ನೇ ಅವನಿಗೆ ಕೊಡಲಪೇಕ್ಷಿಸಿದನು. ಆದರೆ ಚಾರುದತ್ತನು ಅದನ್ನೊಲ್ಲದೆ ಗಂಧರ್ವದತ್ತೆಯ ಗಾಂಧರ್ವಗಂಧಿಯಾದ ಕಲಾಕೇಳಿಗೂ ವಲಕ್ಕಿ ವಲ್ಲಭತೆಗೂ ಬೆಡಗನ್ನು ಕೆಳೆಗೊಂಡ ಗಾಡಿಗೂ ಅವಳಮೇಲೆ ಅಕ್ಕರೆಯುಕ್ಕಿ ಅವಳನ್ನು ತನಗೆ ದತ್ತಕಪುತ್ರಿಯಾಗಿ ಸ್ವೀಕಸಿದನು. ಇದು ಈಕೆಯ ವಿಚಾರ – ಎಂದು ಸಂದೇಶವನ್ನು ಪರಿಹರಿಸಿದನು. ಆಮೇಲೆ ವಸುದೇವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮಜ್ಜನ ಭೋಜನಾದಿಗಳಿಂದ ಆತನನ್ನು ಉಪಚರಿಸಿದನು.

ಮರುದಿವಸ ವೀಣಾಸ್ವಯಂವರವೇರ್ಪಾಡವಾಯಿತು. ಆಗ ವಸುದೇವನು ವೀಣೋಪಾಧ್ಯಾಯನೊಡನೆ ಬಂದು ಸ್ವಯಂವರಮಂಟಪದಲ್ಲಿ ಒಂದೆಡೆ ಕುಳಿತುಕೊಂಡಿದ್ದನು. ಅಲ್ಲಿಗೆ ವೀಣಾವಾದನಸ್ಪರ್ಧೆಗೆಂದು ಬಂದಿದ್ದ ಕಿನ್ನರಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರನನ್ನು ಗಂಧರ್ವದತ್ತೆಯು ತನ್ನ ಅನ್ಯಾದೃಶವೂ ಅತ್ಯಂತ ಮಧುರವು ಆದ ವೀಣಾವಾದನ ಕೌಷಲದಿಂದ ಸುಲಭವಾಗಿ ಸೋಲಿಸಿಬಿಟ್ಟಳು.ವಸುದೇವನು ಇದನ್ನು ಕಂಡು ಮನೋಹರನ ಅನುಮತದಿಂದ ಸ್ಪರ್ಧಾಬೂಮಿಕೆಯಾದ ವಿದ್ಯಾಪೀಠವನ್ನು ಹತ್ತಿಕುಳಿತು ನುಡಿಸುವದಕ್ಕೆ ವೀಣೆಯನ್ನು ಕೇಳಿದನು. ಉಪಾಧ್ಯಾಯನು ಒಳ್ಳೆಯವೆಂದು ಆರಿಸಿತಂದು ಕೊಟ್ಟ ವೀಣೆಗಳನ್ನು ಒಂದೊದಾಗಿ ಮಿಡಿದು ನೋಡಿ , ಒಂದೊಂದರಲ್ಲಿಯೂ ಏನಾದರೊಂದು ದೋಷವುದ್ದುದನ್ನು ಎತ್ತಿ ಹೇಳಿ, ನಿರ್ಧುಷವಾಗಿರುವ ವೀಣೆಯನ್ನು ಕೊಡಿರೆಂದು ಕೇಳಿದನು. ಮನೋಹರನು' ಈ ಲೋಕದಲ್ಲಿ ಇವಲ್ಲದೆ ಬೇರೆಯಿಲ್ಲ , ನೀವು ಒಪ್ಪುವಂತಹ ವೀಣೆ ಯಾವಲೋಕದಲ್ಲಿ ದೊರೆಯಬಹುದು? ಎಂದು ನಂಮ್ರವಾಗಿ ಕೇಳಿದನು. ಇದನ್ನು ಕೇಳಿದ ವಸುದೇವನು ಆತನಿಗೆ ಒಂದು ಉಪಾಖ್ಯಾನವನ್ನು ಹೇಳಲು ತೊಡಗಿದನು:

ಬಲಿ–ವಾಮನೋಪಾಖ್ಯನ: " ಪ್ರಸಿದ್ಧವಾದ ಹಸ್ತಿನಾಖ್ಯ ಪುರದ ಅಧಿಪತಿ ಮೇಘರಥನಿಗೂ ಆತನ ಪತ್ನಿ ಪದ್ಮಾವತಿಗೂ ಲೋಕವಿಖ್ಯಾತರಾದ ವಿಷ್ಣುಕುಮಾರರದ ಮತ್ತು ಪದ್ಮರಥ ಎಂಬ ಇಬ್ಬರು ಮಕ್ಕಳಾದರು. ಮೆಘಾರಥನು ಒಮ್ಮೆ ಮುಗಿಲನ್ನು ಕಂಡು ಅಷ್ಟರಿಂದಲೇ ವೈರಾಗ್ಯಪರನಾಗಿ ವಿಷ್ಣುಕುಮಾರನನ್ನೂ ಒಡಗಿಂಡು ತಪಸ್ಸಿನಲ್ಲಿ ನಿಂತು ಬಿಟ್ಟನು. ಪದ್ಮರಥನು ದೊರೆಯಾದನು. ಅವನ ಮೇಲೆ ಇದೇ ಸಮಯದಲ್ಲಿ ಪ್ರತ್ಯಂತಭೂಪಾಲರ ಸೈನ್ಯವು ದಾಳಿಟ್ಟಿತು. ಆಗ ಬಲಿಎಂಬ ಆತನ್ ಮಂತ್ರಿ ಮಂತ್ರ ಶಕ್ತಿಯಿಂದ ಅದು ಮುಂದೆಬಾರದಂತೆ ನಿವಾರಿಸಿದನು. ಅದಕ್ಕೆ ಪದ್ಮರಥನು ಮೆಚ್ಚಿಕೊಂಡು ' ನಿನಗೆ ಇಷ್ಟವಾದುದನ್ನು ನೀನು ಬೇಡಿಕೊಳ್ಳಬಹುದು ಎಂದು ಅವನಿಗೆ ತಿಳಿಸಿದನು. ಆಗ ಬಲಿಯು ಜೋಕುಮಾರನಂತೆ ಏಳು ದಿನಗಳ ಅರಸುತನವನ್ನು ಬೇಡಿಕೊಂಡು ಅದನ್ನು ಪದ್ಮರಥನಿಂದ ಪಡೆದುಕೊಂಡನು.

ಈ ಸಮಯದಲ್ಲಿಯೇ ಅಕಂಪನವ್ರತಿಗಳು ಇತರ ಯೋಗಿಗಳೊಂದಿಗೆ ' ಕೂಡಿಕೊಂಡು ಬಂದು ಆಪುರದ ಹೊರವೊಳಲ ಸೌಮ್ಯಗಿರಿಯಲ್ಲಿ ತಂಗಿದ್ದರು. ಇದನ್ನು ತಿಳಿದ ಬಲಿಯು ಅಕಂಪನಮುನಿಗೆ

ಉಪಸರ್ಗವುಂಟುಮಾಡಲು ಆಲೋಚಿಸಿದನು. ಇದಕ್ಕಾಗಿ ಕೋಟಿ ಹೋಮವನ್ನೂ ಬ್ರಹ್ಮಣಭೋಜನವನ್ನು ಸೌಮ್ಯಗಿರಿಯ ಗುಹಾಗೇಹಗಳಲ್ಲಿ ಮಂತ್ರಿಯು ಮಾಡಲಿದ್ದಾನೆ ; ಇಂಥ ಸೊಗಸಾದ ಸದರ್ಭ ಇನ್ನೆಲ್ಲಿಯೂ ಸಿಗುವಂತಿಲ್ಲ – ಎಂದು ಡಂಗುರಹೊಯ್ಸಿದನು. ಆಗ ಬಾಯಸವಿಗೆ ಮನಸೋತ ಬ್ರಾಹ್ಮಣರೆಲ್ಲರೂ ಪರ್ವತಕ್ಕೆ ಮೂಷೆಇಡುವಂತೆ ಸುತ್ತಿಮುತ್ತಿ ಒಂದು ಕಡೆ ಹೊಮವನ್ನೂ ಒನ್ನೊಂದು ಕಡೆ ಪಾಕಸಂರಂಭವನ್ನೂ ಎಡೆಬಿಡದೆ ಅಲ್ಲಿ ಜರುಗಿಸಿದರು. ಇದರಿಂದಾಗಿ ಆ ಪರ್ವತ ಭೂಮಿಯನ್ನೆಲ್ಲ ಹೊಗೆದಟ್ಟವಾಗಿ ಕವಿದುಬಿಟ್ಟಿತು. ಅದರಲ್ಲಿ ಮುಚ್ಚಿ ಹೋದ ಅಕಂಪನ ಯೋಗಿಯು ಅಗ್ನಿಭಟಾರನಂತೆ ಕಾಣುತ್ತಿದ್ದು, ಯೋಗಿಗಣಪರಿತನಾಗಿ ಅಸ್ಖಲಿತನಾಗಿ ಯೋಗದಲ್ಲಿರುತ್ತಿದನು. ಆ ಮುನಿಜನೋಪಸರ್ಗವಾದುದನ್ನು ಕಂಡು 'ಹೀಗೇಕೆ ಎಂದು ವಿಷ್ಣುಕುಮಾರಯತಿಯು ಭಾವಿಸಿ, ವಿಷಯವನ್ನರಿಯಲು ಪದ್ಮರಥನಲ್ಲಿಗೆ ಬಂದನು. ಪದ್ಮರಥನು ತನಗೆ ನಮಸ್ಕರಿಸಿದರೂ ಆಶಿರ್ವದಿಸದೆ ವೀತರಾಗಾಸನದಲ್ಲಿದ್ದುಕೊಂಡು ಕುಳಿತುಕೊಳ್ಳಲು ಇಷ್ಟ ಪಡದೆ ಕೋಪದಿಂದ ಹೀಗೆ ನುಡಿದನು 'ಮಂತ್ರಿಯು ನಿಷ್ಕಾರಣವಾಗಿ ಕೋಪಿಸಿ ಮಹಾಮುನಿಗಳಿಗೆ ಇಂಥ ಮಹೋಪಸರ್ಗವನ್ನು ಮಾಡುವದು ನೋಡಿ ಕೂಡ (ಅರಸಾಗಿರುವ ನೀನು) ನೀನೇ ಮಂತ್ರಿಯಾದ ಹಾಗೆ ಹೀಗೆಕೆ ಸುಮ್ಮನಿರುವೆಯಲ್ಲ ಅರಸಾದುದಕ್ಕೆ ಇದೇ ಫಲವೇನು? ಪದ್ಮರಥನು ನಡುಗಿ 'ತ್ರಿಲೋಕಗಳನ್ನೂ ಎರಗಿಸುವ ನಿಮ್ಮಗಳ ತಪೋರಾಜ್ಯವೇ ರಾಜ್ಯ. ಎಡೆಯಕಡೆಯ ಬಡವರನ್ನೂ ಎರಗಿಸಲಾರದ ನಮ್ಮ ರಾಜ್ಯವು ಏತರ ರಾಜ್ಯ? ಇಂದ್ರೋಪೇಂದ್ರಾದಿಗಳೆಗೆ ಆಸನ ಕಂಪನವನ್ನುಂಟುಮಾಡುವ ನಿಮ್ಮಗಳ ತಸಸ್ತೇಜಗಳ ಎದುರಿನಲ್ಲಿ ಮನ್ನೆಯ ಮಂತ್ರಿಯನ್ನೂ ನಡುಗಿಸಲಾರದ ನಮ್ಮಂತಹ ನರಕೀಟಕಗಳ ತೇಜಸ್ಸೆಂಬುದು ಆದಿತ್ಯತೇಜದ ಎದುರಿನಲ್ಲಿ ಮಿಂಚುಹುಳುವಿನ ತೇಜಸ್ಸಿನ ಹಾಗೆ. ಅಲ್ಲದೆ ಬೇಗೆ ಹಬ್ಬಿದ ಪರ್ವತಗಳ ತಾಪವನ್ನು ಪರಿಹರಿಸಬೇಕಾದರೆ ಅವುಗಳಿಗಿಂತ ಎತ್ತರದ ಮೋಡಗಳೆ ಆಗಬೇಕಲ್ಲದೆ ಕೆಳಗಿನ ತೊರೆ ಬಾವಿ ತೊಡು ಇವುಗಳಿಂದ ಸಾಧ್ಯವಿಲ್ಲ. ಮಹಾನುಭಾವರ ಉಪಸರ್ಗವನ್ನು ಹಿಂಗಿಸಬೇಕಾದರೆ ಸಾಮರ್ಥ್ಯವಂತರಾದ ನಿಮ್ಮಂತಹವರಿಂದಲೇ ಸಾಧ್ಯ. ಅತೀ ಸಾಮಾನ್ಯರಾದ ನಮ್ಮಂತಹವರಿಂದ

ಏನಾದೀತು?   ಎಂದು ವಿಜ್ಞಾಪಿಸಿದನು. ಆಗ ವಿಷ್ಣುಕುಮಾರನು 'ಅಂತಾದರೆ ನಾವೇ ಇದಕ್ಕೆ ತಕ್ಕುದನ್ನು ಮಾಡುತ್ತೇವೆ ಎಂದು ಮರಳಿದನು.

ತ್ಪಪಸ್ವಿವಿಷ್ಣುಕುಮಾರನು ಪೀತಾಂಬರ ಯಜ್ಞೋಪವೀತ ಶಿಖೆ, ಕೌಪಿನ, ಕರಡಗೆ ಬಂಗಾರದ ಕೊಡೆ, ದ್ವಾದಶನಾಮದ ಲಾಂಛನ, ದರ್ಭೆ, ಮುಂಜಿಯ ಉಡಿದಾರೆ ಮುತ್ತುಗದ ದಂಡ ಕುಂಡಲ – ಈ ಎಲ್ಲ ವಟುವೇಷವೂ ತನಗೆ ಅನುವಾಗಿ ಒಪ್ಪುತ್ತಿರಲು ವಾಮನನಾಗಿ ಬಲಿಯಲ್ಲಿಗೆ ನೇರವಾಗಿ ಹೊರಟುಬಂದನು. ಆ ಮಾಣಿಕದಂತಹ ಮಾಣಿ ಮಂತ್ರಿಯ ಮುಂದೆ ನಿಂತು ಮಂತ್ರಘೋಷ ಮಾಡಿ ಅಕ್ಷತೆಯನ್ನಿತ್ತು 'ಬಲಿಂ ವಿಷ್ಣುರಯಂ .. . ಎಂಬುದನ್ನು ಉಪಶ್ಲೋಕಿಸಲು ಆ ಒಟುವಿನ ವಾಕ್ಪಟುತ್ವಕ್ಕೂ ಬ್ರಹ್ಮ ವರ್ಚಸ್ಸಿಗೂ ಬಲಿಯು ಅಚ್ಚರಿಪಟ್ಟನು. ಅವನಿಗೆ ಪ್ರದಕ್ಷಿಣ ನಮಸ್ಕಾರ ಪೂರ್ವಕವಾಗಿ ಬೇಕಾದದ್ದನ್ನು ಬೇಡಿಕೂಳ್ಳಿ ಎಂದು ಪ್ರಾರ್ಥಿಸಿದನು. ಆಗ ವಾಮನನು ನಮಗೆ ಕುಳಿತುಕೊಂಡು ಅನುಷ್ಠಾನ ಮಾಡಲು ತಕ್ಕಷ್ಟು ನಮ್ಮ ಸಣ್ಣ ಹೆಜ್ಜೆಯಲ್ಲಿ ಮೂರು ಹೆಜ್ಜೆಯಷ್ಟು ನೆಲವನ್ನು ಕೊಡುವುದು– ಎಂದು ಹೇಳಿದನು. ಅದಕ್ಕೆ ಬಲಿ ಬೀಸುಸುಯ್ದು 'ನನಗೆ ಅದೃಷ್ಟವಿಲ್ಲ; ಬಲು ಸಣ್ಣ ಬೇಡಿಕೆಯನ್ನು ಬೇಡಿದಿರಿ. ಕೊಟ್ಟಿದ್ದೇನೆ; ಅಳೆದುಕೊಳ್ಳಿ ಎಂದನು. ಆ ವಟುವು ಆಗಲೇ ಮರದುದ್ದ ವಾದನು; ಅಷ್ಟೆಲ್ಲ ಎರಡಾಳು ಉದ್ದವಾದನು; ಅಹೋ! ಕೋಟೆಯ ಗೋಡೆಯಷ್ಟು ಉದ್ದವಾದನು; ಇವನು ಯಾರಪ್ಪಾ ಹೆಮ್ಮರದುದ್ದ ವಾದನಲ್ಲ; ಇಕೋ ಗಿರಿಯುದ್ದ ವಾದನು; ಇದು ಪರಮ ಆಚ್ಯರ್ಯ ಆಕಾಶದುದ್ದ ವಾದನು. ಇವನು ನಿಜವಾಗಿ ಮಹಾಮಾಯಾವಿ– ಎನ್ನುವಂತೆ ಮನೋವೇಗದಲ್ಲಿ ವಾಮನ್ನನ್ನು ಮಹತ್ತಾಗಿ ಬೆಳೆದುಬಿಟ್ಟನು ಅಷ್ಟೇ ಅಲ್ಲ; ಮರವನ್ನು ಮುಟ್ಟಿಬಿಟ್ಟ; ಇಲ್ಲ ಮುಗಿಲೊಡ್ಡಿನಲ್ಲಿ ಕಾಲನ್ನು ಕೋದನು ಇಲ್ಲಿಲ್ಲ ಬೆಟ್ಟವನ್ನೇ ದಾಟಿದನು; ಇಲ್ಲ; ಆಕಾಶಗಂಗೆಯಲ್ಲಿ ಕಾಲಿಟ್ಟ; ಇಲ್ಲಿಲ್ಲ, ಆ ಸೂರ್ಯನನ್ನೇ ಈ ಮಾಯದ ಮಾಣಿ ಚೆಂಡಿನಂತೆ ಒದ್ದುಬಿಟ್ಟ ಎನ್ನುವಂತೆ ಬಲಿಯನ್ನು ಗೆಲ್ಲುವ ಸಂಕಲ್ಪದಿಂದಾಗಿ ಆಕಾರವು ಹಿಗ್ಗಿ ಬೆಳೆದಂತೆಲ್ಲ ಕ್ರಮಕ್ರಮವಾಗಿ ಪಾದವನ್ನು ದೂರದೂರಕ್ಕೆ ಚಾಚುತ್ತ ಬಂದನು. ವಾಮನನು ತ್ರಿವಿಕ್ರಮವಾಗಿ ಅನುಕ್ರಮದಿಂದ ವೃಧ್ಧಿಗೊಂಡಂತೆ ಆತನ ಬಂಗಾರದ ಬಟ್ಟಗೋಡೆ ಅದೃಷ್ಯವಾಗಿ ರತ್ನಕಿರಿಟ ಒಂದು ಕಾಣುವುದಾಯಿತು; ಅದೂ ದೃಷ್ಟಿ ಪಥವನ್ನು ದಾಟಿ ವಜ್ರಕುಂಡಲವೋಂದೆ ಕಾಣುತ್ತಿತ್ತು. ಅದೂ

ಮಾಯವಾಗಿ ಕೌಸ್ತುಭರತ್ನ; ಅದೂ ಕಣ್ಮರೆಯಾಗಿ ಕರಚಕ್ರ ಕಾಣುವುದಾಯಿತು. ಮರುಘಳಿಗೆ ಅದು ಕೂಡ ದೃಷ್ಟಿ ಪಥವನ್ನು ದಾಟಿ ನಾಭಿಸರೋಜವೊಂದೇ ಕಾಣುವುದಾಯಿತು. ಹೀಗೆ ಒಂದು ಮರೆಯಾಗುತ್ತಿದ್ದಂತೆ ಇನ್ನೊಂದು ಮಹತ್ತಾಗಿ ದೂರದಲ್ಲೆಲ್ಲಿಯೂ ಎದ್ದು ಕಾಣುತ್ತಿರಬೇಕಾದರೆ ಸೂರ್ಯಬಿಂಬದ ನೆಲೆಯೇ ಮುಚ್ಚಿ ಮುಸಿಕಾಗಿ ಬಿಟ್ಟಿತು. ಲೀಲೆಯಿಂದ ಬೂದೇವಿಯೇ ಹೆಣ್ಣಾನೆಯಾಗಿ ಎತ್ತರದ ಸೊಂಡಿಲೊ ಎನ್ನುವಂತೆ; ಅಲ್ಲ ಆಕಾಶವೆಂಬ ಧ್ವಪಟವನ್ನು ಕಟ್ಟಿದ ಧ್ವಜದಂಡವೋ ಎನ್ನುವಂತೆ ಹಾಗಲ್ಲ ಸೂರ್ಯನೆಂಬ ಕಮಲದ ಮೃಣಾಳನಾಳವೆಂಬಂತೆ; ಅದೂಅಲ್ಲ ಚಂದ್ರಲೋಕದ ದೀಪಸ್ತಂಬವೆಂಬಂತೆ, ಹಾಗೂ ಅಲ್ಲ ನಕ್ಷತ್ರಗಳೆಂಬ ಪುಷ್ಪಗಳನ್ನು ತಳೆದು ಮಹಾವೃಕ್ಷವೆಂಬಂತೆ, ಅಂತೂಅಲ್ಲ; ಅಭ್ರಾವನಿಶೇಷವೆಂಬಂತೆ ಪಯೋಜಾಕ್ಷನ ಆ ಪಾದವು ಅನುಕ್ರಮಾವಾಗಿ ಬೆಳೆಯಿತು. ವೃಕ್ಷ ಪ್ರಮಾಣವನ್ನು ಮೀರಿ ಮೇಘಪಟಲವನ್ನು ಮಿಕ್ಕು ಹಿಮಾಚಲವನ್ನು ಹಾದು ರವಿಯ ರಥದಿಂದತ್ತ ಹಿಗ್ಗಿ ಬೆಳೆದು; ಸುಟ್ಟುರೆಯ ಆಚೆಯಾಚೆಗೂ ಮೀರಿ ಬೆಳೆಯದಿರಲಾರನೂ – ಎಂದು ಆ ಅದ್ಭುತವನ್ನು ನೋಡುವವರು ಪರಮಾಶ್ಚರ್ಯದಿಂದ ನೋಡುತ್ತಿರಬೇಕಾದರೆ ಅವರ ಕಣ್ಣು ಬೆದರಿ ಎದೆ ನಡುಗಿ ಚೇತನವೇ ತ್ರುತ್ತರಿಸುವ ಹಾಗೆ ಅತೀ ಶೀಘ್ರವಾಗಿ ವಿಷ್ಣುವು ವರ್ಧಿಸಿದನು. ಆ ಜಗದ್ಭವ್ಯಾಕೃತಿಯನ್ನು ಅಮರಾದ್ರಿಯೆಂದು ತಿಳಿದು ಎಡೆಯೆಡೆಯಲ್ಲಿ ಜ್ಯೋತಿರ್ಗಣ ಬಲಗೊಂಡಿತು. ಒಂದು ಪಕ್ಕದಲ್ಲಿ ನಕ್ಷತ್ರ ಪ್ರಕಾಶವು ಹೊಮ್ಮುತ್ತಿದ್ದರೆ, ಇನ್ನೊಂದು ಪಕ್ಕದಲ್ಲಿ ಸೂರ್ಯಪ್ರಕಾಶವು ಮೊತ್ತಗೊಂಡು ಉಜ್ವಲವಾಗಿ ಬೆಳಗುತ್ತಿತ್ತು. ಹೀಗೆ ವಿಕ್ರಿಯಾಬಲದಿಂದ ತ್ರಿವಿಕ್ರಮನು ಮೀರಿ ಬೆಳೆದನು. ಸೂರ್ಯನ ರಥದ ಕುದುರೆಗಳು ದಿಕ್ಕೆಟ್ಟು ರಥವನ್ನು ಸಿಕ್ಕಿದ್ದಂತೆ ಎಳೆದಾಡಿದವು. ಚಂದ್ರನ ಬೆಳ್ಮೊಗವು ಬೆಚ್ಚಿ ಬೆಪ್ಪಾಗುವಂತೆ ಬೆದರಿದಂತಹ ತಮ್ಮ ಖೇಚರಿಯರನ್ನು ಖೇಚರರು ಹೊತ್ತುಕೊಂಡು ದಿಕ್ಕಾಪಾಲಾಗಿ ಓಡುವಂತೆ, ದಿಕ್ಪಾಲಕರು ಗಾಬರಿಗೊಳ್ಳುವಂತೆ, ಬ್ರಹ್ಮಾಂಡವನ್ನೇ ಹೋಗಿ ತಾಗುವಂತೆ ವಿಷ್ಣು ಬೆಳೆದು ಬಿಟ್ಟನು. ಆ ವಟುವಿನ ಕಟ್ಟಿದ ಮೌಂಜಿಕೌಪಿನಗಳು ಮಿಂಚುವ ಎಳೆಮಿಂಚಿನ ಕಟಿ ಸೂತ್ರಕ್ಕೆ ವಾರುದಲೇಖೆಯನ್ನು ಸೇರಿಸಿದಂತಿದ್ದವು. ಆ ತುಂಟ ಮಾಯಾವಿ ರವಿಯನ್ನು ಸಾರಿಯೇ

ಅರ್ಘ್ಯಪ್ರಧಾನ ಮಾಡಬೇಕೆಂದು ಉತ್ಸಾಹಿಸಿ ಆಕಾಶಗಂಗೆಯ ಪವಿತ್ರೋದಕವನ್ನು ತುಂಬಿಕೊಳ್ಳಲು ಹಿಡಿದ ಗುಂಡಿಗೆಯಂಬಂತೆ ಕೈಯಲ್ಲಿ ಕರಡಗೆಯಿತ್ತು. ಹೀಗಾಗಿ ವೃದ್ಧಿ ಪ್ರಮಾಣ ಬೆಳೆದೇ ಬೆಳೆಯಿತು. ಈ ವಟು ಇಂತಯ ಸಿತಗ; ಇಂತಹ ಅತಿವರ್ತಿಯಾದ ಮಾಣೆಯನ್ನೂ ಕೋಡಗವನ್ನೂ ಸಮ್ಮನಿರಿಸುವುದು ಸಾಧ್ಯವೇ? ಅಂಥ ಸೂರ್ಯನ ಚಲಿಸುವ ರಥದಲ್ಲಿಯೇ ಕಲೂರಿದನೆಂದರೆ ಹೇಳುವುದೇನಿದೆ? ಹೀಗೆ ಗಗನತಲವನ್ನೇ ಮುಟ್ಟಿ ಬೇಳೆದು ಕಣ್ಬೆರಗನ್ನುಂಟುಮಾಡಿದ ಅಚ್ಯುತನ ಚರಣದಂಡವೂ ತಾರಾಗಾಣಪರೀವೃತವಾಗಿದ್ದು ದೀಪಮಾಲೆಯನ್ನು ಬೆಳಗಿಸುವ ದೀಪಸ್ತಂಭದ ಹಾಗೆ ಪ್ರಜ್ವಲಿಸುತ್ತಿತ್ತು. ಆ ಬಲಿಹರನ ಚರಣದಂಡದ ಅಗ್ರಭಾಗದಲ್ಲಿ ಸಣ್ಣದಾಗಿ ಕಂಡು ಇಳಿಬಿದ್ದ ಆಕಾಶಗಂಗೆಯು ಗಾಳಿಯ ಅಲೆತಕ್ಕೆ ಅತಿತ್ತ ಸುಳಿದಾಡುವಾಗ ವಿಷ್ಣುಕುಮಾರನ ಗೆಲವನ್ನು ಕಂಡು ಅಮರರು ಉತ್ಸಾಹಿಸಿ ಎತ್ತಿದ ಬಾವುಟದಹಾಗೆ ತೋರುತ್ತಿತ್ತು ಆ ವಾಮನನ ಪಾದ ಸ್ಪರ್ಶಘರ್ಷಣಗಳಿಗೆ ಮುಗಿಲೊಡೆದು ಸೂಸಿದ ಮಾಹಾಜಲಧಾರೆಗಳಿಂದ ಆ ಮುನಿಜನಾಪಕಾರಕವಾದ ದಟ್ಟವಾದ ಕಬ್ಬೊಗೆ ಪೂರ್ತಿಯಾಗಿ ನಂದಿಹೋಯಿತು.

ಹೀಗೆ ಆ ಮಹಾಮುನಿಜನೋಪಸರ್ಗವನ್ನು ನಿವಾರಿಸಲೆಂದು ವೈಕುರ್ವಣ ಋದ್ಧಿಯಿಂದ ಬ್ರಹ್ಮಾಂಡವನ್ನೇ ಒಡೆದು ಬೆಳೆದ ಆ ತ್ರಿವಿಕ್ರಮನ ಮೇಲೆತ್ತಿದ ಆ ಹೆಜ್ಜೆಯ ಹೆಬ್ಬೆರಳೇಟಿಗೆ ತ್ರೀಲೋಕಗಳೂ ಉದುರಿಹೋಗುವುವೆಂಬ ಭಯವುಂಟಾಗಲು ದೇವೇಂದ್ರನು ಆಜ್ಞಾಪಿಸಿದ ಗಂಧರ್ವದೇವರು ಬಂದು ಗಾಂಧಾರಗ್ರಾಮನನ್ನಾಲಾಪಿಸಲು ಧಾರಾವಿ ಮತ್ತು ಸಾರಿರಿ ಎಂಬ ಎರಡೂ ವೀಣೆಗಳನ್ನಳವಡಿಸಿಕೊಂಡು ಪ್ರಕೃತಿಯಪಶುಪಕ್ಷ್ಯಾದಿಗಳು ಮೊದಲ್ಗೊಂಡು ಸರ್ವವೂ ಗಾನರಸತಲ್ಲೀನವಾಗುತ್ತಿರಲೂ ತ್ರೀಸ್ಥಾನಶುಧ್ಧಿಯಿಂದ ಆಲಾಪನೆ ಮಾಡಿದನು ಆಗಂಧರ್ವವಾದನಕ್ಕೆ ವಿಷ್ಣು ಗಂಧಿಯದ ವಿಷ್ಣುಕುಮರನು ಅತೀ ಪ್ರಸನ್ನನಾಗಿ ನಿಜೋದ್ರೇಕವನ್ನೂ ವೈಕುರ್ವಣವನ್ನೂ ಉಪಸಂಹರಿಸಿ, ಬಲಿಯನ್ನು ಬಂಧನದಲ್ಲಿರಿಸಿದನು.

ಇಲ್ಲಿಗೆ ವಾಸುದೇವನು ತಾನು ವಿವರಿಸುತ್ತಿದ್ದ ಬಲಿವಾಮನೋಪಖ್ಯಾನವನ್ನು ಮುಗಿಸಿ “ ಆ ವೀಣೆಯ ವಂಶದ ವೀಣೇಯುಂಟು ಎನ್ನುವುದಾದರೆ ಅದನ್ನು ತನ್ನಿ. ಎಂದು ಮನೋಹರಾದಿಗಳಿಗೆ ಹೇಳಿದನು. ಆತನ ಆ ವಿಪಂಚಿ ಪ್ರಂಪಂಚದ ಕಥನ ವೈಖರಿಗೂ ಮನೋಹರಾಕಾರಕ್ಕೂ ಮಿಚ್ಚಿಕೊಂಡ

ಗಾಂರ್ಧವದತ್ತೆಯು ಆತನಲ್ಲಿ ಅತ್ಯಂತ ಆಸಕ್ತಳಾದಳು ಇಂದ್ರ ಪ್ರತಿಮನು ರೂಪಕಂದರ್ಪದೇವನೂ ಆದ ವಾಸುದೇವನು ಆಕೆಯನ್ನು ವರಿಸಿ ಆಕೆಯ ಮೃದುಹೃದಯದಲ್ಲಿ ನೆಲೆಗೊಂಡ ದೇವಪುರುಷನಾದನು.

ಒಂದು ದಿವಸ ವಸುದೇವಕುಮಾರನು ವಿದ್ಯಾಮಂಡನಮಂಡನೀಭೂತ ಜಟತ್ ತ್ಯಾಗ ಸಿಂಹಾಸನದಲ್ಲಿ ಉಪವೇಶವನ್ನು ಧರಿಸಿ ಮಂಡಿಸಿರಬೇಕಾದರೆ, ಆ ಸಂಮಯದಲ್ಲಿ ಕುಂಕುಮ ಮತ್ತು ಕುಚಕಳಸ ಎಂಬ ಇಬ್ಬರು ಅಕ್ಕರಿಗ ಹೊಗಳುಭಟ್ಟರು ಶುಭೋದಯವೆಂದು ಹೇಳಿ ಸಂಸ್ಕೃತ ಪ್ರಾಕೃತಗಳಲ್ಲಿ ಗುಮಸ್ಥವನ ಮಾಡಿದರು. ವಸುದೆವನು ಅವರಿಗೆ ತೊಡುವಷ್ಟು ರತ್ನಾಭರಣಗಳನ್ನಿತ್ತು , ಉಡುವಷ್ಟು ಪಟ್ಟೆ ವಸ್ತ್ರಗಳನಿಟ್ಟು, ಮೂಟೆಗಟ್ಟಿ ಹೊತ್ತುಕೊಂಡು ಹೋಗಲು ಸಾಧ್ಯವಿರುವಷ್ಟು ಹೊನ್ನನಿತ್ತು 'ನೀವು ಎಲ್ಲಿಂದ ಬಂದಿರಿ.? ಎಲ್ಲಿಗೆಹೋಗುವವರಿದ್ದಿರಿ ಎಂದು ಪ್ರಶ್ನಿಸಿದನು. ಆಗ ಕುಚಕಲಸನು –" ಸ್ವಾಮಿ , ವಂಶವಿಷಯದಲ್ಲಿ ಮಾಗಧಿಯೆಂಬ ಕೊಳನ್ನಾಡುವ ರತ್ನಾಕ್ಷನೆಂಬ ಅರಸನಿಗೂ ಸುಮಿತ್ರೆಯೆಂಬ ಅರಸಿಗೂ ರೋಹಿಣಿ ಎಂಬ ಮಗಳಾದಳು ಆಕೆ ಪರಮಸೌಂದರ್ಯವತಿ . ಅವಳ ಶೃಂಗಾರ ಸ್ವಯಂವರಕ್ಕೆ ಜರಾಸಂಧ ಚಕ್ರವರ್ತಿಯೂ ಸಮುದ್ರವಿಜಯನೇ ಮೊದಲಾದ ಮಾಂಡಲೀಕರೂ ಸೇರಿದ್ದಾರೆ ಎಂದು ಕೇಳಿ ಇವರನ್ನು ಬೇಡಬೇಕೆಂಬ ಮನಸ್ಸಾಗಿ ಅರ್ಥಿಗಳಾಗಿ ಬಂದೇವೂ ಆದರೆ ನಾವು ಈ ಭವದಲ್ಲಿ ಮತ್ತಾರನ್ನೂ ಬೇಡದಿರುವ ಹಾಗೆ ನೀನು ಮಾಡಿದ್ದೀಯೆ ; ಯಾರು ಬೇಡಿದರೂ ಬೇಡಿದಷ್ಟನ್ನು ನಾವೇ ಇತರರಿಗೆ ಕೊಡಬಹುದು ಅನ್ನುವಷ್ಟನ್ನು ನಮಗೆ ನೀನು ಕೊಟ್ಟಿದ್ದಿಯೆ. ನೀನೀಗ ದಾನಿ ಎಂದು ಹೊಗಳಿ ಹೊರಟು ಹೋದರು.

ವಸುದೇವನು ಆ ಹೊತ್ತೆ ಹೊತ್ತಾಗಿ ಪರ್ಣಲಘುವಿಧ್ಯೆಯ ಬಲದಿಂದ ಗರುಡನಿಗಿಂತ ವೇಗವಾಗಿ ಮಾಗಧಿಗೆ ಹೋಗಿ ಪ್ರಾಕೃತಕಾವ್ಯದಂತೆ ಸಹಜಸೌಭಾಗ್ಯ ಭಂಗಿಭಾವಾಲಂಕಾರದಿಂದ ಅಲಂಕೃತ ನಾಗಿ ಸ್ವಯಂವರ ಮಂಟಪವನ್ನು ಪ್ರವೇಶಿಸಿದನು. ಅಲ್ಲದೆ ಸ್ವಯಂಗರಸಭೆಯಲ್ಲಿದ್ದ. ಒಬ್ಬ ಮದ್ದಲೆಯವನ ಹೆಗಲ ಮದ್ದಲೆಯನ್ನು ತಾನು ತಗೆದುಕೊಂಡು ತನ್ನ ಹೆಗಲಿಗೆ ಸೇರಿಕೊಂಡು ತ್ರಿವಿಧಲಯಗಳನ್ನೂ ಜತಿಗಳನ್ನೂ ವಿವಿಧ ವಾದ್ಯ ವಿಧಿಗಳನ್ನೂ ಅನುಸರಿಸಿ ಮಧುರಾತಿಮಧುರವೂ ಚಿತ್ರಾತಿಚಿತ್ರವೂ ಆದ

ರೀತಿಯಲ್ಲಿ ಮೃದಂಗವನ್ನು ಬಾಜಿಸಿದನು. ಆ ವಾದ್ಯ ವಿದ್ಯಾಧರನ ಮೃಂದಂಗವಾದನಪೌಢಿಗೆ ಮರುಳಾಗಿ ಅಲ್ಲಿದ್ದ ಸಮಸ್ತ ರಾಜನ್ಯಕವೂ , ಆ ಸ್ವಯಂವರಸಂಭ್ರಮವನ್ನೂ ಮಳಹಸ್ತೆಯಾಗಿ ನಿಂತಿದ್ದ ರಾಜ ಪುತ್ರಿಯನ್ನೂ ಮರೆತು ತಮ್ಮ ಗಂಡಗಾಡಿ ಗಂಡುವೇಟಗೊಂಡು , ಉತ್ಸುಕರಾಗಿ ವಸುದೇವನನ್ನೇ ನೋಡುತ್ತ ವಾದನವನ್ನು ಅಲಿಸುತ್ತ ನಿಂತುಬಿಟ್ಟರು. ಹಾಗೆಯೆ ರಾಜಪುತ್ರಿ ರೋಹಿಣಿಯೂ ಕಾತರಚಿತ್ತೆಯಾಗಿ ಕಿವಿಸೋತೌ ಕೇಳಿ ಮನಸೋತು ಬಂದು , ಕಣ್ಸೋತು ನೋಡಿ ಅತನಿಗೇ ತನ್ನ ಹೃದಯವನ್ನೊಪ್ಪಿಸಿ ಮಾಲೆಯನ್ನು ಸೂಡಿದಳು. ಉಪವೇಷಧರನಾದ ವಸುದೆವನಿಗೆ ಮಾಲೆಸೂಡಿದ್ದೇ ತಡ ರಾಜಕುಮಾರರ ಮನಸ್ಸಿನಲ್ಲಿ ಚಿತೆಯುರಿಯೆದ್ದಂತಾಗಲು ಚಕ್ರವರ್ತಿಗೂ ಮಾಂಡಲಿಕರಿಗೂ ಕೊಡಲಿದ್ದ ಕೂಸನ್ನು ಈ ದೆಶಿಗನು ಕಸಿದುಕೊಂಡುನಲ್ಲ, ಇದೇನಿದು? ಎಂದು ಉಗ್ರವಾಗಿ ಕೆರಳಿದರು. ಅವರೆಲ್ಲ ಒಗ್ಗೂಡಿ ಹೊರಾಡಲೆಂದು ಅವನಿಗೆ ಮುತ್ತಿ ಮುಸುರಿಕೊಂಡರು. ಆದರೆ ವಸುದೇವನು ಅಸಾಮಾನ್ಯವಾದ ರೌದ್ರಾದ್ಭುತ ಶರವರ್ಷದಿಂದ ಅವರ ಅಟೋಪ್ಪವನೆಲ್ಲ ಅಡಗ್ಗಿಸಿಬಿಟ್ಟನು. ವಸುದೇವನು ಮನೋವೇಗದಲ್ಲಿ ಪುಂಖಆನುಪುಂಖವಾಗಿ ಶರಾಸಾರವನ್ನು ಕರೆದನು. ಅವು ಪ್ರತಿಪಕ್ಷದ ಜೀವಹರಣಕ್ಕೆ ಮೃತ್ಯುವಿನ ಜಿಹ್ವೆಯಂತೆ ಧಾವಿಸಿದುವು. ಅಲಗಲಗು ಘಟಿಸಿ ಎದ್ದು ಉರಿಗೆ ದಿಕ್ಕುಗಳು ಕತ್ತಲಿಸಿದುವು. ಸೂರ್ಯನು ದಿಕ್ಕು ತಪ್ಪಿದನು. ಹಿರಿಯಣ್ಣನಾದ ಸಮುದ್ರವಿಜಯನು ಅಕರ್ಣಾತ ಸಂಧಾನಮಾಡಿ ಪ್ರಯೋಗಿಸಿದ ಮಹಸ್ರಗಳು ಯಾವುವೂ ತಮ್ಮ ನನ್ನು ತಾಗಲೇ ಇಲ್ಲ. ಆದರೆ ವಸುದೇವನು ಶೂರರಾಜಸಮೂಹವನ್ನೂ ಹಸ್ತ್ಯಶ್ವಗಳನ್ನೂ ಒಂದೊಂದೇ ಬಾಣದಿಂದ ನಿವಾರಿಸಿ , ಅಣ್ಣನನ್ನು ಸಮೀಪಿಸಿ ಬಂದನು. ನಾನು ಬಿಟ್ಟ ಬಾಣಾಗಳು ತಮಗೆ ತಪ್ಪಿ ನಡೆದುಕೊಂಡವು ; ಈಗ ನನ್ನ ವಿನಯಪೂರ್ವಕ ಅಭಿವಾದವನ್ನು ಅಂಗೀಕರಿಸಬೇಕು –ಎಂದು ವಂದನೆಮಾಡಿ ವಿಜ್ಞಾಪಿಸಿಕೊಂಡನು.

ಹೀಗೆ ನಮಸ್ಕಾರ ಮಾಡುತ್ತಲೂ ಸಮುದ್ರವಿಜಯನು ಆಲೋಚಿಸಿ ಅವನು ತನ್ನ ತಮ್ಮ ವಸುದೆವನೇಂದೇ ತಿಳಿದುಕೊಂಡನು. ನಿಜ ಸಮಸ್ತಸೇನೆಯೊಡನೆಯೂ ಏಕಾಕಿಯಾಗಿ ಕಾದಿದ್ದರಿಂದ (ತನ್ನನ್ನು ಅಣ್ಣನೆಂದರಿಯಲಾಗದೆ ಹೀಗೆ) ಕೈತಪ್ಪಾಯಿತು. ಹೊಕ್ಕಿರಿದು ಎಲ್ಲರ ಮೇಲೆ ಎಂತೂ ಅಂತು ನನ್ನ ಮೆಲೇಯೂ ಶರವರ್ಷವನ್ನು ಕರೆದನು. ಮಗು ಚೆಲ್ಲಿದ ತುಪ್ಪವನ್ನು ಮತ್ತೆ ಎತ್ತಿ ಸಂಗ್ಗಿಸಲು

ಬರುತ್ತದೆಯೇ? (ಹಾಗೆಂದು ಮಗುವನ್ನು ದಂಡಿಸುವುದೂ ಸರಿಯೇ?) ನನ್ನ ಮೇಲೇ ಅಗ್ರಹಪಟ್ಟು ಕಾದಿದನೆಂದು ನಾನು ಈಗ ಕೋಪಿಸಬಹುದೆ? ಎಂದುಕೊಂಡು ಇವನು ಕೈತವದಿಂದ ಗಂಡ್ಬಲು ಕೊಯ್ದನೆಂದು ಮೊದಲು ನೊಂದುಕೊಂಡದ್ದು ಈಗ ಉಂಟಾದ ಸಂತೋಷದಿಂದ ದೂರವಾಗಿ ಐರಾವತಸಮನಾದ ಸಮುದ್ರವಿಜಯನು ತಮ್ಮನನ್ನು ಪ್ರಿತಿಯಿಂದ ಅಂಗಲಿಸಿದನು. ಆನಂದಬಾಷ್ಪಗಳು ಚಿಮ್ಮಿ ಪುಲಕಾಂಕುರವು ಹೊಮ್ಮಿ ಮೈಮನ ತಣಿದಂತೆ ಅಣ್ಣನನ್ನು ತಕ್ಕಯ್ಸಿದನು. ಅನಂತರ ಜರಾಸಂಧನಿಗೂ ಅಗ್ರಜನ ಸೂಚನೆಯಂತೆ ಮಣಿದನು. ಮರುದಿವಸ ಸ್ವಯಂವರಕ್ಕೆಂದು ದೇಶವಿದೇಶಗಳಿಂದ ಬಂದಿದ್ದ ಅರಸುಮಕ್ಕಳೆಲ್ಲ ನಿಬ್ಬಣೆಗರಾಗಲು ರೋಹಿಣಿಯನ್ನು ಮದುವೆಯಗಿ ಹಿಂದಿರುಗಿ ಸುರ್ಯಪುರಕ್ಕೆ ಹೊಗಿ ಸುಖಸಂಕಥವಿನೊದದಿಂದ ಇದ್ದು ಕೊಂಡನು ಆತನ ಭೋಗಭಾಗ್ಯಾತಿಶಯವನ್ನು ಹೇಳಬೇಕೆಂದರೆ ಅತನು ಅಣನೊಂದಿಗೆ ಮುನಿಸಿಕೊಂಡು ಹೋದಂದಿನಿಂದ ಸೂರ್ಯಪುರಕ್ಕೆ ಬಂದು ಸೇರುವ ವರೆಗೆ ಷೋಡಶಸಹಸ್ರವಿವಾಹಮಹೋತ್ಸವಗಳನ್ನು ಪಡೆದವನಾಗಿ ಲೋಕವಿಶ್ರುತನದನು. ಸೂರ್ಯಪುರಕ್ಕೆ ಬಂದ ಕೆಲಕಾಲದಲ್ಲಿಯೇ ಆತನಿಗೆ ರೋಹಿಣಿಯಲ್ಲಿ ಗುಣವಿಧಿಯೂ ರಣರಸಿಕನೂ ಪ್ರಬಲನೂ ಆದ ಬಲದೇವನು ಚಂದ್ರ ರೋಹಿಣಿಯರಿಗೆ ಬುಧನು ಜನಿಸಿದಂತೆ ಜನಿಸಿದನು. ಅಂದು ರ್‍ರೋಹಿಣೀಸ್ವಯಂವರದ ಸಂದರ್ಭದಲ್ಲಿ ತನ್ನ ಬಿಲ್ಗಾರಿಕೆಯ ಬಿನ್ನಣಕ್ಕೆ ಮೆಚ್ಚಿ ತನಗೆ ಬಂಟರಾಗಿ ಬಂದು ಬೆಸಕ್ಕೆದು ಬೇಡಿಕೊಂಡ ರಾಜ ಕುಮಾರರಿಗೆ ಬಿಲ್ವಿದ್ಯೆಯನ್ನು ಕಲಿಸಿದ್ದನು. ಒಂದು ದಿವಸ ವಸುದೇವನಲ್ಲಿಗೆ ಸುಡುದಲೆ, ಬಿಟ್ಟಕಣ್ಣು , ಕಲಿಮೊಗ ಕಡಿಗೊಂಡ ಉಡುಗೆ , ಸ್ಥೂಲ ಕಠಿಣವಾದ ಕೈಗಳು ಮಲ್ಲನ ಮೈಕಟು, ಆ ಮೈಕಟ್ಟಿಗೆ ತಕ್ಕ ರೂಪ ತುಪ್ಪವನ್ನು ತೊಡೆದ ಹಾಗಿರುವ ಮೀಸೆ –ಇವುಗಳಿಂದ ಬಹು ತೇಜಸ್ವಿಯಾಗಿದ್ದ ಧೀರಯುವನೊಬ್ಬನು ಕೈಯಲ್ಲಿ ಬಿಲ್ಗೊಂಡು ಬಂದು ಕಾಣಿಸಿಕೊಂಡನು. ವಸುದೆವನಿಗೆ ನಮಸ್ಕರಿಸಿದನು. ಅರಸನು ಎಲ್ಲಿಂದ ಬಂದೆ? ಮತ್ತೆ ಎಲ್ಲಿಗೆ ಹೋಗುವೇ? ನಿನ್ನ್ ಹೆಸರೇನು? ಎಂದು ಪ್ರಶ್ನಿಸಿದನು. ಆಗ ಭಟನು ಹೀಗೆ ಹೇಳಿದನು. “ ಜನನಾಥಾ, ಧನುರ್ವಿದ್ಯೆಯನ್ನು ಕಲಿಯುವ ಆಸಕ್ತಿಯಿಂದ ಬಿಲ್ಲೋಜನನ್ನು ಅರಸಿಕೊಂಡು ನಾಡುನಾಡನು ತೊಳಲಾಡಿದೆ. ಬಿಲ್ಲ ಬಿಲ್ಮೆಯಲ್ಲಿ ನೀನು ದೇವನೇ ಆಗಿದ್ದೀಯೆ ನಾನೂ ನಿನ್ನ ಶಿಷ್ಯನಾಗಲು ಸಂಕಲ್ಪಿಸಿ ಬಂದಿದ್ದೇನೆ. ನಿಮ್ಮ

ಶತ್ರುಗಳನ್ನು  ಧ್ವಂಸಮಾಡಬಲ್ಲವನಾದ ನಾನು ಕಂಸನೆಂಬ ಹೆಸರಿನವನು. ಎಲ್ಲೆಲ್ಲಿಯೂ ನಿನ್ನ ಖ್ಯಾತಿಯನ್ನು ಕೇಲಿ ಬಲ್ಲವನಾಗಿ ನಿನ್ನಲ್ಲಿಗೆ ಬಂದಿದ್ದೇನೆ – ಎಂದನು ಆಗ ವಸುದೇವನು ಆತನನ್ನು ಶಿಷ್ಯನನ್ನಾಗಿ ಪ್ರಿಗ್ರಹಿಸಿ ಅವನಿಗೆ ಬಿಲ್ವಿದ್ಯೆಯನು ಕಲಿಸುತ್ತಿದ್ದನು. ಕಂಸನೂ ವಸುದೇವನ ಆಪ್ತಶಿಷ್ಯನಾಗಿ, ಉಳಿದ ಚಾಪಾಚಾರ್ಯರಿಗೆಲ್ಲ ಗುರುವಾಗಿ ಧನುರ್ವಿದ್ಯೆಯನ್ನೂ ಸಾಧಿಸುತ್ತಿದ್ದನು.

ಸಮ್ಮೇದನಗದ ಸಾನುವಿನಲ್ಲಿ ಶೋಭಿಸುವ ಪೌದನಪುರವನ್ನು ತಾಳಹಸ್ತನೆಂಬ ದೊರೆ ಆಳುತ್ತಿದ್ದನು. ಅವನು ಹಿಂದೊಮ್ಮೆ ಸಿಂಹದ ಮರಿಯನ್ನು ಹಿಡಿದು ಪ್ರೀತಿಯಿಂದಾ ಸಲಹುತ್ತಿದ್ದು, ಅದು ದೊಡ್ಡದಾದ  ಮೇಲೆ ಅದನ್ನು ಹತ್ತಿಕೊಂಡು ಲೋಕದಲ್ಲಿ  ಸುತ್ತಾಡುತ್ತಿದ್ದುದರಿಂದ ಅತನಿಗೆ ಸಿಂಹರಥನೆಂಬ ಹೆಸರೂ ಬಂದಿತು. ಆ ಸಿಂಹವನ್ನು , ಬೇರೆ ಕಡಿವಾಣಾವಿಲ್ಲದೆ ಮೃಗಹತ್ಯೆಯಿಂದಾದ ಬಾಯಿ ಕರುಳೇ ಕಡಿವಾಣ ವಾಗಿರಲು ಆ ನೃಪಸಿಂಹನು ನಿರ್ಲಕ್ಷವಾಗಿ ಹತ್ತಿ ಹೊರಡಲುಯಾವಾಗಲೂ ಉತ್ಸಾಗಿಸುತ್ತಿದನು. ದೇವಧಿದೇವರ ಮೃಗವಾಹನಕ್ಕೆ ತನ್ನ ಸಿಂಹವಗನವು ಅತಿಶಯವೆಂದು ಅಭಿಮಾನಿಸುತ್ತಿದ್ದನು. ನಾಡಿನಲ್ಲಿ ಮೀಸಿಯೊತ್ತಿನೆಂದು ಮರೆಯುವ ವೀರರಿಂದ ಮೀಸಿದೆರಿಗೆಯನ್ನು ತೆರಿಸುತ್ತಾನೆ. ವೀರಪತ್ನಿಯ ಹೆಸರು ಹಿಡಿದು ಹೆಣ್ಣುಮಕ್ಕಳನ್ನು ಆಡಿಸಲು ಅವಕಾಶ ಕೊಡುತ್ತಿಲ್ಲ ತನ್ನ ತೇಜೋಗ್ನಿಯಿಂದ ಅರಮೀಸೆಗಳನ್ನು ಹುಲ್ಲರಿಯಡಿಸುತ್ತಿದನು. ಎನ್ನುವಂತಹ ಬಿಂಕದಿಂದ ಬೇಗಿ ಗರ್ವ  ಸಿಂಹರಥನು ಮೆರೆಯುತ್ತಿದನು. “ ನನು ಜೀವಿಸುತ್ತಿರಬೇಕಾದರೆ ಮತ್ತೊಬ್ಬನ ನೆತ್ತಿಯ ಮೇಲೆ ಸುತ್ತಿಗೆಯ ಕೈಯಲ್ಲಿ ಕೈದುವೂ ಉಂಟೆನ್ನುವುದೇ ನನ್ನ ರಾಜವೃತ್ತಿಗೂ ವೀರವೃತ್ತಿಗೂ ಅಪಮಾನಕರ – ಎಂದು ಸಿಂಹರಥನು ತನ್ನ ಸಿಂಹದ ಸಹಾಯಬಲವೂ ಹರಿತಗೊಂಡ ಕೈದುವಿನ ಬಲವೂ ಜತೆಗೊಂಡು ಉಬ್ಬಿಕೊಬ್ಬಿನಿಂದ ನುಡಿಯುತ್ತಿದ್ದನು. ‘ ಬಿಡುವೆಸರ ಚಕ್ರಿಯದಿದ್ದರೆ (ಕುಂಬಾರ) ಮಡಕೆಗಳನ್ನು  ಮಾಡಿ ಲಳಿಸಲಿ; ಅಲ್ಲ ವಾದರೆ ಈಗ ತಾನು  ಮಾಡಕೆಗೆ ( ಸಾಯುವುದು ನಿಶ್ಚಯವದ್ದರಿಂದ , ಮುಂದಿನ ಕರ್ಮದಿಗಳಿಗೆ ) ಎಡಮಾಡಿಕೊಳ್ಳಲಿ ಎಂದು ಚಕ್ರವರ್ತಿ ಜರಸಂಧನನ್ನೇ ಹೀನಾಯವಾಗಿ ತಿಳಿಯುತ್ತಿದ್ದನು. ಆ ಗರ್ವದಿಂದ ಉಬ್ಬಿ ಆವನ ಮೇಲೊಬ್ಬ ಕ್ಷುದ್ರದೂತನನ್ನು ಅಟ್ಟಿದನು. ಅವನು ಹೊರರುಬಂದು ಉಗ್ರವಾಗಿ ಕೆರಳಿ ಮೀಸೆಗಡಿಯುತ್ತ ಕೆಡಿಕಿಡಿಯಾಗಿ  ಕಟ್ಟಾಕ್ಷದ ಕೋಪಗ್ನಿಯ ಹೊತ್ತಿ ಉರಿದು(

ಚಕ್ರವರ್ತಿ ಮೇಲೇ ಕೈ ಮಾಡುವ ಅವಸರದಲ್ಲ), ಹಬ್ಬಿ ಹರಡಿದಂತೆ ತಳತಳಿಸುವ ಚಕ್ರವರ್ತಿಹಸ್ತವನ್ನು ಕಾಣುತ್ತಿಲ್ಲ ಆತ ಹೀಗೆಂದನು

ಖಳನನ್ನು ಗೆಲ್ಲುವದೇ ಭಂಗ ಅವನನ್ನು ಕಳೆಗೊಳ್ಳುವುದೇ ಕಷ್ಟ ಅವನಲ್ಲಿ ಹಗೆಯೂ ಕಳೆಯೂ ಆಗದು ಆತನು ನೀನು ಕೋಪಿಸುವಷ್ಟು ಅಸಾಧ್ಯನೇನು? ಆ ಕ್ಷುದ್ರನ ಮೇಲೆ ಕೋಪಿಸುವುದು. ಆಯುಕ್ತ , ಅನಾವಶ್ಯಕ – ಎಂದನು.ಆದ್ದರಿಂದ ಜರಾಸಂಷನೂ ತಾನೂ ಯುದ್ಧಕ್ಕೆ ಹೊರಡದೆ ತನ್ನ ಅನಂತಚರ್ತುಬಲಕ್ಕೆ ಅನುಜ್ಞೆಯಿತ್ತು. ಕಳುಸಿದನು. ಅದು ಪೌದನಪುರದ ಹೊರಗೆ ಒಡ್ಡಿ ನಿಂತಿತು ಆಗ ಸಿಂಹರಥನು ಇದೇನು ಹೀಗಾಯಿತಲ್ಲ ಅಟ್ಟಿ ತಿನ್ನುವ ದೈವಕ್ಕೆ ಹರಿಕೆ ಹೊತಂತಯಿತು. ಎಂದುಕೊಂಡು ಚಕ್ರೀಯಸೈನ್ಯದ ಕೋಲಹಲಕ್ಕೆ ಕೆರಳಿ ರಣಾ,,ಂಗಣ್ಕಕ್ಕೆಬಂದು ಎದುರಿಸಿದನು ಆ ತಾಳ ಹಾಸ್ತನೃಪನು ವಾಹನವಾದ ಸಿಂಹವೇ ಶತ್ರುಸೈನ್ಯವನಲ್ಲ ಅಲ್ಲ ಲಲ್ಲೋಲ ಮಾಡಿ ಬಿಟ್ಟಿತು . ಚರುರಂಗ ಬಲವು ಒಂದರಡಿಯಲ್ಲಿ ಬಂದು ಸಿಕ್ಕು ವಿಶೀರ್ಣವಾಯಿತು. ಅದರಲ್ಲಿ ಒಬ್ಬ ಅಳಿದುಳಿದ ಯೋಧನು ಮಾರಿ ಉಳಿಸಿದ ಆಡಿನಂತೆ ಓಡಿಹೋಗಿ ಜರಸಂಧನಿಗೆ ಸುದ್ದಿ ಕೊಟ್ಟನು . ಅದನು ಕೇಳಿದ ಜರಾಸಂಥನು ಜರಾಜರ್ಝರನಂತೆ ಜಕ್ಕನೆ ಜರಿದು ಹೋದನು. ರೋಹಿಣಿಯ ಸ್ವಯಂವರಸಂರ್ಧದಲ್ಲಿ ವಸುದೇವನು ತೊರಿದ ಸೌರ್ಯ ಪ್ರತಾಪಗಳನ್ನು ನೆನೆದುಕೊಂಡು, ಅವನಲ್ಲಿಗೆ ಈ ಸಿಂಹರಥನ ಮೃತ್ಯುವನ್ನು ಮಿಡಿಯಲು ಸಮರ್ಥರಿಲ್ಲರೆಂದು ಬಗೆದು ಶೌರಿಪುರಕ್ಕೆ ವರ್ತಮಾನವನ್ನು ಕಳಿಹಿದನು. ಅಲ್ಲದೆ ಸಿಂಹರಥನನ್ನು ಯಾರು ಹಿಡಿದು ಅವರಿಗೆ ತನ್ನ ಮಗಳನ್ನು ಬೇಡಿದ ನಾಡನ್ನು ಚಕ್ರವರ್ತಿಯ ಕೊಡುತ್ತನೆ ಎಂದು ಘೋಷಣೆ ಹೊರಡಿಸಿದನು.

ಕಂಸನು ಈ ಘೊಷಣೆಯನ್ನೋಪ್ಪಿಕೊಂಡು ವರ್ತಮಾನವನ್ನು ತಿಳಿಸಲು, ಆತನು"ಈ ಸುದ್ದಿಯನ್ನು ಶಿಷ್ಯರಲ್ಲೆಲ್ಲ ಕಂಸನೊಬ್ಬನೇ ತನ್ನ ಹೆಸರು ನಿಲ್ಲುವಂತೆ ಉಪಕಾರೆಮಾಡಿದ್ದಾನೆ ಎಂದು ಸಂತೋಷಿಸಿ ಪ್ರಸ್ಥಾನಭೇರಿಯನ್ನು ಹೊಯ್ಸಿ ಹೊರಾಟಕ್ಕೆ ಹೋರಡಲು ವುದ್ಯುಕ್ತನದನು. ಆಗ ಕಂಸನು ನಿಮ್ಮವರಿಗೆ ಬರುವಂಥ ಕಷ್ಟವೇನಿದೆ ಇಲ್ಲಿ? ಎಂದು ಅವನನ್ನು ತಡೆದು ತಾನೆ ಪಡೆಯೊಂದಿಗೆ ಯುದ್ಧಸನ್ನದನಾಗಿ ಪೌದನಪುರದತ್ತ ತೆರಳಿದನು. ಸಿಂಹರಥನು ಕಂಸನ ಈ ಹವಣಿಕೆಯನ್ನು ಕೇಳಿ ಗಳಾಗಾಳಿಸಿ ನಕ್ಕು ನುಡಿಯುವಾಗ ಬಾಯ್ದುಂಬಲು ಸುಸುತ್ತಿರಬೇಕಾದರೆ ಮದಮತ್ತನಾಗಿ ಸೊಕ್ಕನೆ ತಿನ್ನುವವನಿಗೆ ಆಡಿ

ಹೋಳಿಗೆಯೆಂಬತೆ ಚಕ್ರವರ್ತಿಗೆ ಸೈನ್ಯವನ್ನೇ ಬರಿದು ಮಾಡಿದ ತನ್ನ ಸಿಂಹಕ್ಕೆ ಒಡೆಯ ಕಡೆಯ ಬಡವರ ಸೈನ್ಯ ಒಂದು ಹಲ್ಲಿನ ಕೊನೆಗೂ ಸಾಲಾದು ಎಂದು ಸೊಕ್ಕುನುಡಿಯಡಿ ಕದನಕಿದ್ದಿರಾದನು .ಕಂಸನಮೆಲೆ ಸಿಂಹರಥನು ತನ್ನಸಿಂಹ ನುಗ್ಗಿಸಿದನು ಅದರೆ ಆ ಸಿಂಹವನ್ನು ಕಂಸನು ತನ್ನ ನಿಶಿತಾಸ್ತ್ರದಿಂದ ಘಾತಿಸಿದನು, ಸೆಳೆದ ಖಡ್ಗದಿಂದ ಶ್ರೂದ್ರಕ್ಕೆ ರಾಜನಂತೆ ಹೊರಾಟದಲ್ಲಿ. ಇರಿದುಬಿಟ್ಟನು. ವೀರಶ್ರೀಯಿಂದ ಉಂಟಾದ ನಖಕ್ಷತೆವೆಂಬಂತೆ ಆ ಸಿಂಹದ ಉಗುರೇಟಿನಿಂದಾದ ಗಾಯಗಳು ಕಂಸನ ಮೈಮೆಲೆ ಎದ್ದು ಕಾಣುತ್ತಿದ್ದವು.

ಹೀಗೆ ಸಿಂಹವನ್ನು ಸಂಹರಿಸಿ , ಸಿಹಕ್ಕಿಂತ ಮೊದಲೇ ನೆಲದ ಮೇಲೆ ಉರುಳಿ ಹೋಗಿದ್ದ ಸಿಂಹರಥನನ್ನು ನೋಡಿ ಅಯ್ಯ, ಸತ್ತರೆ ಸಿಂಹದ ಬೆನ್ನ ಮೇಲೆಯೇ ಸಾಯಬೇಕು; ಈಗೇಕ ಹೀಗೆ ಬಿದ್ದು ಹೋಗಿರುವೇ? ಎದ್ದು ನಿನ್ನ ಸಿಂಹದ ಹಲ್ಲೆಣಿಸಿ ನೋಡು – ಎಂದು ಭಂಗಿಸಿ ನುಡಿದು, ಅಷ್ಟು ಸಾಲದೆನ್ನುವಂತೆ ಅದರ ಹಲ್ಲುಗಳನ್ನು ಕಳಚಿ ತಂದು ಅವನ ಅಂಗೈಯಲ್ಲಿ ಹಾಕಿ ಆ ಮಂದಮತಿಯ ಮುಂದೆ ಸಿಂಹದ ತೆಲೆಯ ಚುಂಚನ್ನು ಹಿಡಿದ್ದು ತೋರಿ, ಅವನನ್ನು ಎಳೆದು ತಂದು ವಸುದೇವನ ಬಳಿಗೆ ಬಂದು ' ಇಕೋ ನಿಮ್ಮ ಸಿತಗನದ ಸಿಂಹರಥನು ಇವನೇ ಹೌದೇ, ಕೇಳಿ ತಿಳಿದುಕೊಳ್ಳಿ ಎಂದು ಹೇಳಿ ತನ್ನ ಕರ್ತವ್ಯವನ್ನು ತಾನು ನಡಸಿಬಿಟನು. ವಸುದೇವನು ಅವನಿಗೆ ಮೆಚ್ಚಿತು. ಆ ಸಿಂಹವನ್ನೂ ಸಿಂಹರಥನನ್ನೂ ಬಂಡಿಯಲ್ಲಿ ಹಾಕಿಕೊಂಡು ಹೋಗಿ ಅದನ್ನು ಜರಾಸಂಧನ ಮುಂದೆ ತಂದಿಳಿಸಿದನು. ಅವನು ಮುಂದಸ್ಮಿತಮುಖನಾಗಿ ಆಶ್ಚರ್ಯಗೊಂಡವನಾಗಿ , 'ಇತ್ತ ಬಾ ಎಂದು ವಸುದೇವನನ್ನು ಬಳಿಗೆ ಕರೆದು ತನ್ನೊಂದಿಗೆ ಅರ್ಧಾಸನವನಿತ್ತು ನಿನಗೆ ಇಷ್ಟವಾದುದನ್ನು ಬೇಡಿಕೋ ಎಂದು ತಿಳಿಸಿದನು. ಆಗ ವಸುದೇವನು 'ದೇವಾ ಬಿನ್ನಹ; ಇದು ನನ್ನಿಂದ ಆದ ಕೆಲಸವಲ್ಲ; ನನ್ನ ಶಿಷ್ಯನಿಂದಾದುದು ಎಂದು ಅರಿಕೆಮಾಡಿ ಕಣ್ಸನ್ನೆಯಿಂದ ಕಂಸನನ್ನು ಕರೆಸಿ ಅವನಿಗೆ ನಮಸ್ಕಾರಮಾಡಿಸಿದನು.

ಕಂಸನು ವಿಯನದಿಂದಲೇ ಪ್ರಭು, ಪರಚಕ್ರಹರಿಯೂ ರಣಲೇಸರಿಯೂ ಆದವನಿಗೆ (ವಸುದೇವನಿಗೆ ) ನನ್ನನ್ನು ಕಚ್ಚಿಕೊಂಡು ಹಾರಿಹೋಗಬಲ್ಲಂಥ ಕಲಿತನದ ಶಿಷ್ಯರು ಎಷ್ಟೋ ಮಂದಿ ಇದ್ದಾರೆ; ಎಂದಮೇಲೆ ನನ್ನು ಅಷ್ಟು ಜನರಲ್ಲಿ ಯಾವ ಲೆಕ್ಕ? ಏನು ಮಹಾ ದೊಡ್ಡವನು? ಎಂದನು. ಜರಾಸಂಧನು ಕಂಸನನ್ನು ಕುರಿತು ನೀನು ಎಲ್ಲಿಯವನು? ಯಾರ ಮಗನು ಎಂದು ಪ್ರಶ್ನಿಸಿದನು.

ಕಂಸನು ಕೈಮುಗಿದು 'ನಾನು ಕೌಶಂಬಿಯ ಕಳ್ಳವತಿ ಮಂಡೋದರಿಯ ಮಗ ಎಂದನು. ಆಗ ಅರಸನು ಅವನನ್ನು ಆಪಾದಮಸ್ತಕವಾಗಿ ನೋಡಿ ವಿಚಾರಮಾಡಿ ತನ್ನಲ್ಲಿಯೇ ಹೀಗೆ ಬಗೆದನು: ಸಿಂಹವನ್ನು ಘಾತಿಸುವ ಈ ಸಾಹಸ ಮೀಂಗುಲಿಗರ ಮಗನಾದವನಿಗೆ ಅಸಂಭವ; ಆಗುವುದಾದರೆ ಮೀನುಗಳನ್ನು ಹಿಡಿಯುವದು ಒಂದಾದೀತು. ಅಲ್ಲದೆ ಈ ಸಾಹಸಿ ಆಕೃತಿಯಲ್ಲಿಯೂ ಉತ್ತುಂಗನಾಗಿದ್ದಾನೆ; ಇವನು ರಾಜಪುತ್ರನೇ ಆಗಿರಬೇಕು. ಕಾಗೆ ಸಾಕಿದಷ್ಟರಿಂದಲೇ ಕೋಗಿಲೆಯು ಅದರದೇ ಮರಿಯಾಗುವುದೇನು? ಬೇಗ ಕಾಗೆಯ ಸಂಪರ್ಕವನ್ನು ಬಿಟ್ಟು ಚೋತವನಕ್ಕೆ ಹೋಗಿ ಅಲ್ಲಿಯೇ ಇದ್ದುಕೊಳ್ಳುತ್ತದೆ. 'ಕರ್ಮಘಟಿತವಘಟಿತಘಟಿತಂ. ಹೀಗೆಂದುಕೊಂಡು ಮಂಡೋದರಿಯನ್ನು ಕರೆತರಲು ಆಳನ್ನು ಕಳುಹಿಸಿದನು. ಆತನು ಹೋಗಿ ಅವಳನ್ನು ಕಂಡು 'ಬೇಗ ಹೊರಡು, ನಿನ್ನನ್ನು ಚಕ್ರವರ್ತಿ ಈ ಕೂಡಲೇ ಜತೆಯಲ್ಲಿ ಕರೆತರಲು ಹೇಳಿದ್ದಾನೆ ಎಂದು ಸುದ್ದಿಯನ್ನಿತ್ತನು. ಹೀಗೆಂದ ಕೂಡಲೇ ಆಕೆಯು ಸಿಕ್ಕಿಬಿದ್ದ ಕಳ್ಳನ ಹಾಗೆ ತಲ್ಲಣಿಸಿ 'ಇದೆಲ್ಲಿಯ ಸಾವು; ಯಾಕಂತೆ? ನಾನಿನ್ನು ಸತ್ತೆ; ಹೆದರುತ್ತಿದುದು ದಿಟವೇ ಆಯಿತು; ಯಾವ ಕಳ್ಳಿಯ ಬಸಿರಿನಿಂದ ಬಂದನೋ (ಕಂಸನು) ತಿಳಿಯದು. ಈಗ ನನ್ನ ಹೊಟ್ಟೆಗೆ ಬೆಂಕಿ ತಗುಲಿಸಿದ. ಹೊರಗೆ ಅಟ್ಟಿದ ಮೇಲೂ ಬೆನ್ನಟ್ಟುವನಲ್ಲ; ಇವನೆಲ್ಲೋ ಹೋದ ಜನ್ಮದ ಹಗೆ ನನಗೆ. ಎಂದು ಬಡಬಡಿಸಿದಳು. ಆದರೆ ಗತ್ಯಂತರವಿಲ್ಲದೆ ಚಕ್ರವರ್ತಿಯ ಸನ್ನಿಧಿಗೆ ಹೊರಟು ಹೋದಳು. ಕಂಸನು ತನಗೆ ದೊರೆತಿದ್ದ ಸಣ್ಣ ಕಂಚಿನ ಪೆಟ್ಟಿಗೆಯನ್ನು ಎತ್ತಿಕೊಂಡು ಬಂದು ಜರಾಸಂಧನ ಮುಂದೆ ಹಾಕಿ, ಬಿಡುಮುಡಿ ಬೆವರಿದ ಮೈ ಬಿಳಿಪೇರಿದ ಮೊಗ ಮಾಡಿಕೊಂಡು; ಅಂಜುತ್ತ ಅರಿಕೆ ಮಾಡಿದಳು: ದೇವರ ಪಾದದಾಣೆ; ಆ ಸಿತಗ ನನ್ನ ಮಗನಲ್ಲ. ಕಾಳಿಂದೀ ನದಿಯಲ್ಲಿ ದೊರೆತ ಈ ಕಂಚಿನ ಕಿರುಪೆಟ್ಟಿಗೆಯಲ್ಲಿ ಹುಟ್ಟಿ ದೊರೆತು ಕಂಸನೆಂಬ ಹೆಸರು ಪಡೆದಿದ್ದಾನೆ. ಹೀಗೆ ಹೇಳಿ ಆ ಪೆಟ್ಟಿಗೆಯಲ್ಲಿದ್ದ ಮಾಣಿಕ್ಯಗಳನ್ನು ಅವನಮುಂದೆ ಸುರಿದು 'ಇನ್ನು ನನ್ನನ್ನು ಕೊಲ್ಲುವುದು ಬಿಡುವುದು ತಮಗೆ ಸೇರಿದ್ದು ಎಂದು ಹೇಳಿ ನಿಂತಳು.

ಜರಾಸಂಧನು ಅವಳ ಮಾತಿಗೆ ನಕ್ಕು, ಕಂಚಿನ ಕಿರು ಪೆಟ್ಟಿಗೆಯನ್ನು ತಗೆಸಿ ನೋಡಲಾಗಿ ಅದರಲ್ಲಿ ನಾಗಸಂಪಗೆಯ ಎಸಳಿನಂತಿದ್ದ ಕನಕಪತ್ರವನ್ನು ಕಂಡು, ಬಿಸುಂಬಱಯುಮಿಲ್ಲದೆ ನಿಬಿಡಮಾಗಿ ಬರೆದಿರ್ದಕ್ಕರಂಗಳಂ ಓದಿನೋಡಿದಾಗ, ''ಉಗ್ರಧೀರುಗ್ರಸೇನಾಂಕಾನ್ಮ ಧುರಾನ್ಮ ದುರೇಶಿತುಃ ಎಂದು

ಬರೆದಿದ್ದಿತು. ಅದನ್ನು ಓದಿದ್ದರಲ್ಲಿ ಅವನು ತನ್ನ ಬಾಗಿನೇಯನ್ನೆಂದು ತಿಳಿದುಬಂದು, ಸಂತೋಶಿಸಿ ಬೇಡಿದ ಕಾಡೊಳೆ ಮಱಿಕೊಂಡುದು ಎಂದುಕೊಂಡು ಆ ಮುಹೂರ್ತವೇ ಶುಭ ಮುಹೂರ್ತವೆಂದು, ಮಂಡೊದರಿ ನಿಂತು ಬೆಕ್ಕಸಬೆರಗಾಗಿ ನೋಡುತ್ತಿರಬೇಕಾದರೆ, ಕಂಸನನ್ನು ಕುರಿತು ಹೀಗೆ ನುಡಿದನು: 'ನಿಶ್ಚಯವಾಗಿ ನೀನೆ ನನ್ನ ಮಗಳಿಗೆ ವರ, ನಿನ್ನ ಸಾಹಸಸಸಿಂಹಕ್ರೀಡೆಗೆ ನಾನು ಋಣಿಯಾಗಿದ್ದೇನೆ ಇದನ್ನು ನಿನಗೆ ಶ್ರುತಪಡಿಸುತ್ತಿದ್ದೇನೆ. ಎಂದು ನುಡಿದು, ಮಂಗಳವಾದ್ಯಗಳು ಭೋರ್ಗರೆಯುತ್ತಿರಬೇಕಾದರೆ, ರೂಪವತಿಯಾದ ಜಿವಂಜಸೆ ಎಂಬ ತನ್ನ ಕುಮಾರಿಯನ್ನು ಕಂಸನಿಗೆ ಕೊಟ್ಟು ಮದುವೆ ಮಾಡಿದನು. ಅದನ್ನು ನೋಡಿ ಗಲ್ಲದಮೇಲೆ ಕೈ ಇಟ್ಟು ಬೆಕ್ಕಸಬೆರಗಾಗಿ ನಿಂತಿದ್ದ ಮಂಡೋದರಿಗೆ ಉಡುಗೆ ತೊಡುಗೆಗಳನ್ನು ವಿಶೇಷವಾಗಿ ಕೊಟ್ಟು ಕಳಿಸಿದನು. ಅವಳೂ ಆನಂದಪಟ್ಟು ಬದುಕಿನೆಂದುಕೊಂಡು ಹೊರಟಳು.

ಇತ್ತ ಕಂಸನನ್ನು ಕುರಿತು, 'ನಿನಗೆ ಮೆಚ್ಚಿದ ನಾಡನ್ನು ಕೇಳಿಕೋ ಎಂದು ಜರಾಸಂಧನು ತಿಳಿಸಿದಾಗ ಕಂಸನು, 'ತನಗೆ ತನಯ ಪ್ರೀಯನಪ್ಪ ತಂದೆಯ ನಾಡನೆ ದಯೆಗೆಯ್ವುದು ಎಂದು ಬೇಡಿದನು. ಕಂಸನು ತಂದೆಯ ಮೇಲಿನ ಕೋಪವನ್ನು ಎತ್ತಿ ಕಾಣಿಸದೆ ಅಡಗಿಸಿಟ್ಟು ಆಡಿದ ಕಟಕಿಯನ್ನು ಜರಾಸಂಧನು ಅರ್ಥಮಾಡಿಕೊಡು ತನ್ನಲ್ಲಿಯೇ ಹೇಗೆ ಭಾವಿಸಿದನು: 'ತಂದೆಯ ವಿಚಾರದಲ್ಲಿ ಈ ಸಾಹಸಿ ವಿಷ ಕಾರುತ್ತಿದ್ದಾನೆ. ಇದು ನನಗೆ ಕಾಣದೇನು? ;ಸಂಸಾರದ ಸಮುದ್ರದಲ್ಲಿ ಈ ತಾಮಸ ಇದ್ದದ್ದೇ, ಏಡಿಯ ಹೊಟ್ಟೆ ಯೊಡೆದುಕೊಂಡೇ ಹುಟ್ಟುವದಿಲ್ಲವೇ ಅದರ ಮರಿಗಳು! ಆದರೆ ಎಷ್ಟೇ ಉಗ್ರವಾಗಿ ತಪಿಸಿ ವ್ಯಾಪಿಸಿದರೂ ಸಮುದ್ರಗರ್ಭದ ಬಡಬಾಗ್ನಿಯು ಸಮುದ್ರವನ್ನು ಹೇಗೆ ಸುಡಲಾಗದೋ ಹಾಗೆಯೇ ಮಗನು ತಂದೆಯಮೇಲೆ ಎಷ್ಟೇ ಕೋಪಿಸಿದರೂ ಅವನ್ನನ್ನು ನಾಶಪಡಿಸುವ ಮಟ್ಟಿಗೆ ಕೆಟ್ಟದ್ದನ್ನು ಮಾಡಲಾರ. ಬಿಸಿನೀರು ಎಷ್ಟೇ ಬಿಸಿಯಾಗಿದ್ದರೂ ಮನೆಯನ್ನು ಸುಡಲಾರದಷ್ಟೇ. ಇವನು ಕೇಳಿದನ್ನೇ ಕೊಟ್ಟು ಬಿಡುತ್ತೇನೆ. ಎಂದು ಕೊಂಡು ಆಪ್ರಕಾರದಲ್ಲಿಯೇ ಕಂಸನಿಗೆ ಮಧುರೆಯ ಅಧಿಪತ್ಯವನ್ನಿತ್ತು ಕಳುಹಿಸಿದನು.

ಕಂಸನು ಜರಾಸಂಧ ಚಕ್ರವರ್ತಿಹೇಳಿದ ಚತುರಕ್ಷೋಹಿಣಿ ಬಲವನ್ನು ಒಡಗೊಂಡು ವಸುದೇವ ಸಹಿತನಾಗಿ ದಾಳಿಟ್ಟು ಮಾಥುರಾಪುರವನ್ನು ಲೀಲಾಮಾತ್ರದಿಂದ ವಶಪಡಿಸಿಕೊಂಡು ಅರಣೆಯನ್ನು

ಉರಿಸುವ ಅಗ್ನಿಯಹಾಗೆ ತಂದೆ ಉಗ್ರಸೇನನನ್ನು ಹಿಡಿದು ಕಟ್ಟಿ ಸಂಕಲೇ ತೊಡಿಸಿದನು, ಹೀಗೆ ಹುಳಿ ಮಜ್ಜಿಗೆ ಹಾಲನ್ನು ಕೆಡಿಸುವಂತೆ ಸ್ವಂತ ಮಗನೇ ತಂದೆಗೆ ವಿಪತ್ಕಾರಕನಾಗಿ ಉಗ್ರಸೇನನ್ನನ್ನು ಸೋಲಿಸಿ , ಮಥುರಾಪುರದ್ವಾರದಲ್ಲಿ ಸಂಕೋಲೆಯಲ್ಲಿ ಸೆರೆಗೊಳಿಸಿ ದೈನ್ಯಬಡಿಸಿದನು. ಇದು ಯಮರಾಜನಾಗಿದ್ದ ಅತಿ ಮುಕ್ತಕನ ವೈರಾಗ್ಯಕ್ಕೆ ನಿಮಿತ್ತವಾಗಿ ಆತನು ತಪಸ್ಸಿಗೆ ಹೊರಟು ಹೋದನು . ಕಂಸನು ವಸುದೇವನನ್ನು ಬರಿಸಿ ಆತನನ್ನು ಸಿಂಹಾಸನಾಲಂಕೃತನನ್ನಾಗಿ ಮಾಡಿ ಸಾಷ್ಟಾಂಗಪ್ರಣತನಾಗಿ ಹೀಗೆ ವಿಜ್ಞಾಪಿಸಿದನು :

"ಹರಿವಂಶವೆಂಬುದು ನಿಮ್ಮಕಾರುಣ್ಯದಿಂದಾಗಿ ವಿಪುಲ ಭೋಗಖ್ಯಾತವಯಿತು ; ಪರ್ವತಕಿಂತ ಸ್ಥಿರವಾಯಿತು ಶಸ್ತ್ರಮಯವಾಯಿತು ; ದಾನಮಯವಾಯಿತು; ಸುದಾಧಾಮವಾಯಿತು; ಲಕ್ಷ್ಮೀಸ್ಥಾನವಾಯಿತು . ಆ ಅಂದಿನ ಯಾಮುನಾಪ್ರವಾಹ,ಅದರಲ್ಲಿ ತೇಲಿಬಂದ ಮಂಜ್ಯೂಶ, ಅದು ಮಂಡೊದರಿಯೆಂಬ ಅಂಬಿಗಳ ಕೈದೊರೆತದ್ದು, ನಾನು ಅಲ್ಲಿ ಬೆಳೆದದ್ದು, ನಿಮ್ಮ ಬರವು ನಿಮ್ಮಲ್ಲಿ ಶಾಸ್ತ್ರಶಸ್ತ್ರಗಳ ಅಭ್ಯಾಸ, ಸಿಂಹರಥನ ದಮನ ಚಕ್ರೀಯಕೃಪೆಯಿಂದ ರಾಜ್ಯಸಂಪದವು ಸ್ವಾಧೀನವಾದ್ದು– ಈ ವಿಚಿತ್ರವೂ ಆಕಸ್ಮೀಕವೂ ಆದ ಘಟನೆಗಳಲ್ಲಿ, ಅಲ್ಪನಾದ ನಾನೆಲ್ಲಿ? ಇವೆಲ್ಲ ನಿಮ್ಮ ಪ್ರಸಾದೋದಯದಿಂದಾಗಿ ವದಗಿದ ಭಾಗ್ಯೋದಯಗಳೆಂದೇ ನನ್ನ ಎಣಿಕೆ ; ಆದ್ದರಿಂದ ನನ್ನನೂ ಈ ನನ್ನ ರಾಜ್ಯಭಾರವನ್ನೂ ಸಾಪ್ರಾಂಗವನ್ನೂ ನೀವೆ ರಕ್ಷಿಸಬೇಕು– ಎಂದು ಬೇಡಿಕೊಂಡನು . ತನ್ನ ಮನೆಯ ಬಲಭಾಗದಲ್ಲಿ ರತ್ನಖಚಿತವೂ ಕಾಂಚನಚಿತವೂ ಆದ ಮಹಾರಾಜ ಭವನವನ್ನು ವಸುದೇವನಿಗಾಗಿ ಮಾಡಿಸಿಕೊಟ್ಟನು . ಈ ಮೊದಲೇ ವಸುದೇವನ ಯಾೂಪವಿಲಾಸ ಸೌಭಾಗ್ಯ ಭಾಗ್ಯೋದಯವನ್ನು ಕೇಳಿ ಕಿವಿವೇಟಗೊಂಡು ಮರುಳುಗೊಂಡು ಮದನಕಾತರೆಯಾಗಿದ್ದ (ತನ್ನಚಿಕಪ್ಪ ದೇವಸೇನನ ಮಗಳು ದೇವಕೀಯ ಭಾವವನ್ನು ಅಂತಃಪುರಪರಿಚಾರಿಕೆಯರಿಂದ ಕೇಳಿದ್ದನಾದ್ದರಿಂದ ಬುಧಸಂಭಾವಕೀಯೂ ಮನ್ಮಥಸಂಜೀವಕೆಯೂ ಆದ ಆಕೆಯನ್ನು ಕಂಸರಾಜನು ವಸುದೇವನಿಗೆ ಸಂತೋಷದಿಂದ ಮದುವೆಮಾಡಿಕೊಟ್ಟನು) ಆ ದೇವಕೀಯಾದರೋಬ್ರಹ್ಮನೇ ಮನ್ಮಾಥನಾಗಿ ಸುಧಾಂಶು ಚಂದನ ಸರಸಿಜ ಉತ್ಪಲ ಆದಿಯಾದವುಗಳಿಂದ ರೂಪಿಸಿ ತನ್ನ ಮನಸ್ಸಂಭವೇಯನ್ನಾಗಿ ಶೃಷ್ಟಿಸಿದನೆಂಬಂತಹ ಚಲುವೆ. ವಿವಾಹವಾದ ಮೇಲೆ ಅ ವಸುದೇವ ದೇವಕಿಯರು ಅನೂನ

ಕಾಮಸಾಮ್ರಾಜ್ಯ ಸುಧಾಸಾಗರದಲಿ ಓಲಾಡುತ್ತುದರು. ತನ್ನ ಶರೀರ ಸ್ಪರ್ಶದಿಂದ, ಅಧರಾಮೃತದಿಂದ ಸರ್ವಾಂಗಸೌಗಂಧದಿಂದ , ರೂಪಾತಿಶಯದಿಂದ , ಪಿಕಾಲಾಪದಿಂದ ದೇವಕಿಯು ವಸುದೇವನಿಗೆ ಪಂಚೇಂದ್ರೀಯ ಸೌಖ್ಯವನ್ನು ನಿರಂತರವಾಗಿ ನೀಡುತ್ತಿದ್ದಳು.

ಸಪ್ತಮಾಸ್ವಾಸ

ಒಂದು ದಿವಸ ಮಧ್ಯಾಹ್ನದಲ್ಲಿ ಮಕ್ಷುರಾಪುರಕ್ಕೆ ಒಬ್ಬ ಮುನೀಂದ್ರನು ಚರಿಗೆಗೆಂದು ಬಂದನು. ಪಕ್ಕೆಲುಬುಗಳು ಎದ್ದು ಕಾಣುವ ಕಂಕಾಲದೇಹ, ತೀರ ಗುಳಿಬಿದ್ದ ಕಣ್ಣುಗಳು, ನರಗಳೆದ್ದು ಕಾಣುವ ಸಣಕಲು ಕೈಕಾಲು, ಬೆನ್ನಿಗೆ ಹತ್ತಿಕೊಂಡಿದ್ದ ಒಣಕಲು ಹೊಟ್ಟೆ, ಉಡುಗಿಹೋಗಿದ್ದ ಎದೆಗೂಡು, ಕೆನ್ನೆಗಳು ಬತ್ತಿ ಒಳಕ್ಕಂಟಿದ್ದ ಬಾಯಿ – ಇವುಗಳಿದ ಆತನು ದುರ್ಬಲನಂತೆ ಕಾಣುತ್ತಿದ್ದನು; ಆದರೆ ಆತನಲ್ಲಿ ಆತ್ಮತೇಜಸ್ಸು ಹೊಮ್ಮುತ್ತಿತ್ತು. ಬಿಸಿಲಿಗೆ ಆತನ ಒಡಲು ಬಿರಿದಂತಾಯಿತು. ಪರಮವಿರಾಗಿಯಾದ ಆತನ ಮೈಯಲ್ಲಿ ಒಲವು ಮಿಸುಗುತ್ತಿತ್ತು. ಆತನ ತ್ಪೋಗ್ನಿಗೆ ಸೂರ್ಯನೇ ಹೆದರಿ ಮೋಡದ ಮರೆಯನ್ನು ಆಶ್ರಯಿಸುತ್ತಿದ್ದನು. ಆ ತಪದಂಕಕಾರನ ಮಹೋಗ್ರವಾದ ತಪಸ್ಸು ಸೃಷ್ಟಿಯ ಚರಾಚರಕ್ಕೇ ತಾಪವನ್ನು ಉಂಟುಮಾಡುವಷ್ಟು ಉಗ್ರವಾದುದಾಗಿತ್ತು.

ಆ ಮುನಿಯ ಹೆಸರು ಅತಿಮುಕ್ತಕ . ಈತನು ( ನರಪತಿವೃಷ್ಣೀಯ ಮಗ) ದೇವಸೇನನ (ಇವನು ಉಗ್ರಸೇನನತಮ್ಮ) ಮಗನೂ , ದೇವಕಿಯ ಅಗ್ರಜಾತನೂ ಆಗಿದ್ದು ಕಂಸನು ತನ್ನ ತಂದೆಯನ್ನು (ಉಗ್ರಸೇನನ್ನು) ಸೆರೆಗೆ ಹಾಕಿದ್ದೇತನಗೆ ನಿರ್ವೇಗನಿಮಿತ್ತವಾಗಲೂ ತಪದಲ್ಲಿರುತ್ತಿದ್ದನು.

ಮುನಿಯಗಿ ಒಮ್ಮೆ ಮಾಸೋಪವಾಸದ ಪಾರಣೆಯ ಸಂದರ್ಭದಲ್ಲಿ ಪಾರಿಸಲೆಂದು ಮಥುರಾಪುರಕ್ಕೆ ಬಂದು, ಕಂಸನ ಅರಮನೆಯ ಮುಂದಿನಿಂದ ಚರಿಗೆಗೆಂದು ನಡೆದು ಬರುತ್ತಿದ್ದನು. ಆ ಪ್ರಸ್ತಾವದಲ್ಲಿ , ಮೈನೆರೆದಿದ್ದ ದೇವಕಿಯ ಋತುವಸ್ತ್ರವನ್ನು ಬುಟ್ಟಿಯಲ್ಲಿಟ್ಟು ಸಂತೋಷದಿಂದ ಸಡಗರಿಸಿ ಓಡಾಡುತ್ತಿದ್ದ ಕಂಸನ ಪತ್ನಿಯಾದ ಜೀವಂಜಸೆಯು ಮುನಿಯನ್ನು ನೋಡಿದಳು. ಬಿಸಿಲ ಜಳಕ್ಕೆ ಬಳಲಿ ಬಂಡಾಗಿ ಬರುತ್ತಿದಹ ಅತಿಮುಕ್ತಕ ಮುನಿಯನ್ನು ನೋಡಿ ಕುತೂಹಲಗೊಂಡಂತೆ ಸಂಭ್ರಮಿಸಿ ಎದುರಿಗೆ ಬಂದಳು. ಆಗ ಮುನಿಯು ಚರಿಗೆಗೆ ತನ್ನನ್ನೇ ನಿಲ್ಲಿಸಲು ಆಕೆ ಬಂದಳೆಂದು ಭಾವಿಸಿ, ಮನೆಯ ನೇರಕ್ಕೇ

ಬಂದು ನಿಂತನು. ಆಗ ಜೀವಂಜಸೆಯು ಆ ಮುನಿಯನ್ನು ಅಪಹಾಸ್ಯಮಾಡುತ್ತ " ಭಾವಾ ನಮೋಸ್ತು; ನೀವೇನುದೇವಕಿ ಮೈರೆದಳೆಂದು ಕೇಳಿ ತಿಳಿದು ಇಲ್ಲಿಗೆ ಬಂದಿರೇನು? ಒಳ್ಳೆಯದಾಯಿತು. ಉಡುಗೊರೆಯೇನು ತಂದಿರಿ? ಎಂದು ಮಾತಾಡಿದಳು. ಅಷ್ಟಕ್ಕೆ ಸುಮ್ಮನಾಗದೆ, " ಬತ್ತಲೆ ಬಂದಿರಿ; ಹಿಡಿಯಿರಿ, ಇದನ್ನು ಸುತ್ತಿಕೊಳ್ಳಿ ; ನಿಮ್ಮ ತಂಗಿ ನಿಮಗೆ ಉಡಲೆಂದು ಇದನ್ನು ಕಳುಹಿದ್ದಾಳೆ – ಎಂದು ಚುಚ್ಚುಮಾತಾಡಿ ಬುಟ್ಟಿಯಲ್ಲಿದ್ದ ಋತುವಸ್ತ್ರವನ್ನು ಅವನ ಮುಂದೆ ಹಿಡಿದಳು. ಹಾಗೆ ಆ ವಸ್ತ್ರವನ್ನು ವಿರಕ್ತನಾದ ಅತಿಮುಕ್ತಕಮುನಿಯ ಮುಖಕ್ಕೆ ಎತ್ತಿ ಹಿಡಿದದ್ದು, ಆತನಿಗೆ ತುಂಬ ನಾಚಿಕೆಯಾಯಿತು. ಅಪಹಾಸ್ಯೋಕ್ತಿಗಳನ್ನಾಡಿ ಕಾಡಿದ್ದು ಆತನಿಗೆ ವಾಚಾಸಮಿತಿಯನ್ನು ಮೀರಿ ಮುನಿಯುವಂತಾಯಿತು ; ಭಿಕ್ಷುವಿನ ಕ್ಷುಧಾಗ್ನಿ ರೋಷಾಗ್ನಿಯಾಗಿ ಕೆರಳಿದಂತಾಯಿತು. ಎಂದೂ ಮುನಿಯದ ಆ ಮುನಿ ಅಂದು ಮುನಿದು ಇಂತೆಂದನು :

"ಅತ್ತಿಗೆ ಕೇಳು, ನೈಮಿತ್ತಿಕರು ಹೇಳುವುದನ್ನು ನಾನು ಕಾಣೆನೆ ಎನ್ನಬೇಡ. ಇಕೋ ಹೇಳುತ್ತೇವೆ : ಈ ಮಂಗಳೋತ್ಸವಕ್ಕೆ ಎತ್ತಿದ ಕೈಯನ್ನೇ ಬಸಿರಿಗೆ (ಬಡಿದುಕೊಳ್ಳಲು) ಎತ್ತುವ ಕಾಲ ಬರುತ್ತದೆ. ಇದು ಹಾಗಾಗದಿದ್ದರೆ ನಿನಗೆ ತೋರಿದ ಮಾತಾಡು, ಅಪಹಾಸ್ಯಮಾಡು, ಕುಲಟೆ. ಈಗ ನೀನು ತೋರಿಸುತ್ತಿರುವ ಋತುವಸ್ತ್ರವೇ ದೇವಕಿಯ ಮಗನ ಜನನಕ್ಕೆ ಮೂಲ; ಅವನ ಜನನದಿಂದ ಇದೇ ಮುಂದೆ ನೆತ್ತರು ಕಾರುವ ಕಂಸನ ನೆತ್ತರು ಬಟ್ಟೆಯನ್ನು ನಮಗೆ ತಪ್ಪದೇ ತೋರಿಸುತ್ತದೆ. ಹೀಗೆಂದು ಕೋಡಲೇ ಆಕೆ ಹೆದರಿ ಹೆಪ್ಪಾಗಿ,ಹುಟ್ಟಿದ ಮನೆ ಹೊಕ್ಕಮನೆ ಎರಡರ ಕೆಡನೂ ಆಡಿ ತೋರಿಸುವಂತೆ ಅಕಪ್ಪಡವನ್ನು ಎರಡು ಚೂರಾಗಿ ಹರಿದು ವಿಸಾಡಿದಳು. ಬಡಿದವರ ಮೇಲೆ ಕೈಮಾಡಲಗದೆ ಮಣ್ಣ ಹಿಂಟೆಯನ್ನೇ ರೋಷದಿಂದ ಕಚ್ಚುವಂತೆ ಅವಳ ಸ್ಥಿತಿ ಆಗಿತ್ತು. ಮನಿ ಮತ್ತು ಜೀವಂಜಸೆ ದುಸ್ಸಾಧವಾದ ಯುದ್ಧರಂಗದಲ್ಲಿ ನಿನ್ನ ಗಂಡನನ್ನು ತಂದೆಯನ್ನು ದೇವಕಿಗೆ ಹುಟ್ಟದ ಮಗನೆ ತಪ್ಪದೆ ಕೊಲ್ಲುತ್ತನೆ, ದೆವರು ಅವರನ್ನು ಆಗ ರಕ್ಷಿಸಲಾರರು ಎಂದು ಸ್ಪಷ್ಟೋಕ್ತಿಯನ್ನಾಡಿದನು ಇದನ್ನು ಕೇಳಿ ಆಕಿಯ ಕಿವಿಗೆ ಮಹಾಪ್ರಲಯ ಕವಿದಂತಯಿತು ಆ ಮುನೆಯ ಕಾಲಿಗೆ ಬಿದ್ದು ತಿಳಿಯದೆ ಮಾಡಿದೆ ಕ್ಷಮಿಸಿ ಎಂದು ಬೆಡಿದಳು, ಆಗ ಆತನು ಆಕೆಯನ್ನು ಕುರಿತು ಹರಸಬೇಕಾಗಿದ್ದ ಬಾಯಿಂದ ಬೈಗಳು ಬರುವಂತೆ ಮಾಡಿದೆ, ಕ್ಷಮೆತೋರುವ ,ಮನಸ್ಸನ್ನು ಮುನಿಯವ ಹಾಗೆ ಮಾಡಿದೆ ಇನ್ನೂ

ಕ್ಷಮೀಸಬೇಕೆಂದು  ಕೊಂಡರು ಆಗದು, ಏಕೆಂದರೆ ನನ್ನಿಂದ ಬಂದಮಾತು ನಿನ್ನ ನಗೆ ಮೊಗವನ್ನು ಅಳುಮೊಗವನ್ನಾಗಿ ಮಾಡದೆ ಬಿಡದು. ದೇವರಿಗಾಗುವ ಮಗ ಸಮಸ್ತಲೋಕವೇ ತನಗೆ ಮಣಿಯುವಂತೆ ಮಾಡಿಕೊಳ್ಳುವನು– ಇದು ಆತನ ಭಾವೀ ಶಿಲಾಲಿಖಿತ ಹೀಗೆ ಹೇಳಿ ಮುನಿ ಹೊರಟು ಹೋದನು.

ಜೀವಂಜಸೆಯ ಬಾಣವು ನಟ್ಟಿ ಮರಿಹುಲ್ಲೇಯ ಹಾಗೆ ನೆಲಕ್ಕೆ ಬಿದ್ದು ಹೊರಲಾಡಿ ಬಾಯನ್ನು ಬಸಿರನ್ನೂ ಬಡಿದುಕೊಂಡು ರೋಧಿಸಿದಳು. ಅವಳ ಎದೆಯ ಹಾರ, ಕೈಯ ಕಡೆಗೆ ಕಿವಿಯ ಓಲೆ ಇವುಗಳು ಆಕೆಯ ಕಣ್ಣೀರನ್ನೋದಿಗೆ ಕಳಿಚಿಬಿದ್ದವು. ಆಕೆಗೆ ಆಗಲೇ ಗಂಡನ ಸಾವು ಕಂಡಂತಾಯಿತು. ನಿರಾಜೆಯ ಬಾಳೆ ಮುನಿನಂತೆ ಮಿಡುಕಾಡಿ ಹುಡಿಯಲ್ಲಿ ಹೊರಳಾಡಿ  ಮೂರ್ಛಿತೆಯಾದಳು. ಸೇವಕಿಯರು ಬಂದು ಎತ್ತಿಕೊಂಡು ಹೋಗಿ ಶೈತ್ಯೋಪಚಾರ ನಡೆಸಿ ಎಚ್ಚರಿಸಿದರು. ಕನ್ನ ಹಾಕುವಾಗ ಸತ್ತು ಕಳ್ಳನ ತಾಯಿಯಂತೆ ಒಳಗೊಳಗೆ ಅಳುತ್ತಾ . ತಾನು ಮಾಡಿದ ಪಾತಕವನ್ನು ಯಾರಿಗೂ ಹೇಳಿಕೊಳ್ಳಲು ಧೈರ್ಯವಿಲ್ಲದೆ ತನ್ನಲ್ಲಿಯೇ ಹೀಗೆ ಭಾವಿಸಿದಳು. “ ಈ ದೇವಕಿಯಮ್ಮೆನೆರೆದದ್ದು ಏಕೆ? ಈ ಸಮಯದಲ್ಲಿಯೇ ಆ ಮಹಾವ್ರತಿ ಬಂದಿದ್ದಕ್ಕೆ ಆ ಹೊತ್ತಿಗೆ ನಾನು ಅವನಿಗೆ ಕಾಣಿಸಿಕೊಂಡು ಭಯಭೀತಿಯಿಲ್ಲದೆ ಆ ಮೂರ್ಖನನ್ನು ಕೆರಳಿಸಿದ್ದಕ್ಕೆ ? ಅದಕ್ಕೆ ಆ ತಪಸ್ವಿ ಮುನಿದು ಹೀಗೆ ವಿಷವಿಟ್ಟನೇಕೆ?  ಇದೆಲ್ಲ ನನ್ನ ಪುರಾಕೃತಕರ್ಮದಲ್ಲದೆ ಬೇರೆಯಲ್ಲ. ಹೀಗೆ ಹೇಳಿಕೊಡ್ಡು ತನನ್ನು ತಾನೆ ಹೆಗೋ ಸಂತೈಸಿ ಮಂಕುಬಡಿದವಳಂತೆ ಇರುತ್ತಿದ್ದಳು

ಕಂಸನ ಗಮನಕ್ಕೆ ಜೀವಂಜಸೆಯ ಮನ್ನೋವ್ಯಥೆ ಬಾರೆದೆ ಹೋಗಲಿಲ್ಲ ಆಕೆಯ ಮನೋಭಾವದಲ್ಲಿ ಆದ ಮಾರ್ಪಾಟನ್ನು ಕಂಡು ಬೆಚ್ಚಿಬೆರಗಾದನು. ಕಳೇಗೆಟ್ಟು ಮುಖವೇಕೆ ಹೀಗಿದೆ? ನಗೆಯೇಕೆ ಕಾಣುತ್ತಿಲ್ಲ ? ಈ ಕಣ್ಣೀರು ಬಿಸಿಯುಸಿರು , ಕನ್ನೇಯ ಕಡುಗೆಂಪು ಗಗ್ಗರಿಕೆ ಇವೆಲ್ಲ ಏಕೆ? ಒಳಗೊಳಗೆ ಏನು ಕುದಿಯಿರುವಂತೆ ಈ ದುಗುಡವೇಕೆ? ಎಂದು ಮೃದುವಾಗಿ ಪ್ರಶ್ನಿಸಿದನು. ಹೀಗೆಂದಾಗ ನಿಟ್ಟುಸಿರಿಟ್ಟು  ಮತ್ತೇನೂ ಆಡಲಾಗದೆ ಸುಮ್ಮನಿದ್ದಳು. ಮೂಗರು ಕಂಡಕನಸಿನಂತೆ ಏನನ್ನೂ ಆಡಹೆ ತೋರದೆ, ಸ್ವಲ್ಪ ಕಾಲ ತಡೆದು ಇದು ನಿನಗೆ ಹೇಳ ಬಹುದಾದ ಮಾತಲ್ಲ  ಎಂದಿಷ್ಟು ಹೇಳಿ ತಲೆಯಾಡಿಸಿಬಿಟ್ಟಳು. ಆದರೆ ಕಂಸನು ಅಗ್ರಹಪಡಿಸಿದ್ದರಿಂದ ಅವಳು ಹೇಳಲೇಬೇಕಾಯಿತು. ಎಂದೂ

ಬಾರದವನು, ಅತಿಮುಕ್ತಕ ಮುನಿಯ ಚರಿಗೆಗೆ ಬಂದುದನ್ನು ನೋಡಿ ಮೈದುನತನದ ಸಲಿಗೆಯಿಂದ ತೋರಿಸಿ ಸ್ವಲ್ಪ ಕಿಟಲೆ ಮಾಡಿದರೆ, ಅದನ್ನು ಅತನು ವಿನೊದಕ್ಕೆಂದು ತಿಳಿಯದೆ ನನ್ನ ಮೆಲೆ ಕೋಪಿಸಿ ಹೀಗೆ ಎಂದು ಪೂರೈಸುವುದರೊಳಗೆ, ಅರ್ಧದಲ್ಲಿಯೇ, ಜೀವಂಜಸಗೆ ಪಳಾಪಳನೆ ಕಣ್ಣೀರು ಉಕ್ಕಿ ಹರಿಯುತು. ಅದ್ನು್ನ ಆಕೆ ಸೆಳ್ಳುಗುರಿಂದ ಒರಸಿಕೊಳ್ಳುತ್ತ ಆಡಬೇಕಾಗಿದ್ದ ಮಾತೆನ್ನು ಆಡಿ ಮುಗಿಸಿದಳು: ತನ್ನ (ಮುನಿಯ) ತಂಗಿಗೆ (ದೇವಕಿಗೆ) ಅತ್ಯುನ್ನತನಾದ ಮಗನಾಗುತ್ತಾನಂತೆ ; ಆದ ಮೇಲೆ ಆತನೊದಲೇ ನನ್ನ (ಜೀವಂಜಸೆಯಾ) ಮತ್ತು ನನ್ನ ತಾಯಿಯ ಓಲೆಗಳನ್ನು (ಓಲೆಭಾಗ್ಯವನ್ನು) ತಾನು (ಮಿನಿಯು) ತೆಗಿಸಿ ಬಿಡುತ್ತಾನಾಂತೆ. ಈ ಮಾತುಗಳು ಒರಸಿ ಹಕುವಂಥವು, ಲಕ್ಷಿಸಬೇಕಾದ್ದಿಲ್ಲ ಎನ್ನದಿರು. ಕಂಸನಿಗೆ ಇದನ್ನು ಕೇಳಿ ಎದೆಗೆ ಇರಿದಂತಾಯಿತು. ಅವನು ತುಂಬ ನೊಂದು ಪತ್ನಿಗೆ ಹೇಳಿದನು: ಕದಡಿದಾಗ ದೇವಗಂಗೆಯೇ ಆದರೂ ಕಾಲಕದೀ ಹೋಗ್ಗುವುದೇ? ಹೊಸೆದರೆ ಹೊಸಹೂವೇ ಆದರೂ ಬಾಡಿದ ವಸನೆ ಹೊಡಿಯದೆ? ಕಡಿದರೆ ಶ್ರೀಗಂಧವೇ ಆದರೂ ಕಿಡಿ ಹುಟ್ಟದೇ? ಕ್ಷಿರಸಾಗರವೇ ಆದರೂ ದೇವತೆಗಳು ಅದನ್ನು ವಿಪರೀತವಾಗಿ ಮಥಿಸಿದರೆ ವಿಷ ಹುಟ್ಟಿದೇ? ಹಗೆಯೇ ಶಾಂತರಾದವರನ್ನು ಮದಮಾತ್ತರಾದವರು ತಿರಸ್ಕಾರವಾಗಿ ಕಂಡರೆ ಅಪಹಾಸ್ಯಮಾಡಿದರೆ, ಅವರಲ್ಲಿಯೂ ಮಾನೋವಿಕಾರವುಂಟಾಗದೆ? ಅದನ್ನವರು ಹೇಗೆ ತಾನೆ ಸಹಿಸಿಯಾರು? ಅಯ್ಯೋ ಹುಚ್ಚಿ, ತುಂಬ ತಲ್ಲು ಕೆಲಸ ಮಾಡಿದೆ. ಹಿರಿಯ, ಮರ್ಮವೇದಿ, ಮೂರ್ಖ, ನಾರಪತಿ ಧನಪತಿ, ಗುರು ದೈವ– ಇವರಿಗೆ ತಪ್ಪದೆ ಹೆದರಲೇಬೇಕು, ಇದನ್ನರಿಯಲು ಯ್ಪಾಧ್ಯಾಯರೇನೂ ಕಲಿಸಬೇಕಾಗಿಲ್ಲ ಜನರೆಲ್ಲರೂ ಯಾರಿಗೆ ಮಾಣಿಯುವರೋ ಅವರಿಗೆ ನಾವೂ ಮಣಿಯಾಬೇಕು; ಯರನ್ನು ಅಲಕ್ಷಿಸವರೋ ಅವರನ್ನು ನಾವೂ ಅಲಕ್ಷಿಸಬೇಕು ಎಂಬುದನ್ನು ಹಾಲಕುಡಿಯುವ ಹಾಸುಳೆಗಳು ಮೊದಲುಗೊಂಡ ಎಲ್ಲರೂ ಬಲ್ಲರು. ಸವರಣ ಮಾತು ನಡೆದೇ ನಡೆಯುತ್ತದೆ. ಹಾಸ್ಯಕ್ಕೆ ಹೇಳಿದರೂ ಅವರ ಮಾತು ಸತ್ಯವಾಗ್ಗುತ್ತದೆ. ಇರಲಿ. ಈಗೇನಾಯಿತು ! ಇದಕ್ಕೆ ಒಂದು ಉಪಾಯವನ್ನು ಯೋಚಿಸಿದ್ದೇನೆ ಕಾರಣವಿಲ್ಲದೆ ಕಾರ್ಯವು ಹೇಗಾಗ್ಗುತ್ತದೆ? ಇದಕ್ಕೆ ಕಾರಣಭೂತಳಾದ ದೆವಕಿಯನ್ನೇ ಕೊಲ್ಲುತ್ತೇನೆ. ಹೀಗೆ ತನ್ನ ನಿರ್ಧರವನ್ನು ನುಡಿದಾಗ, ಒಂದು ಡ್ಡಿವ್ಯಧ್ವನಿಯು ಆಗದಾಗದು ಎಂದಿತು. ಅದನ್ನು ಕೇಳಿ ಲಕ್ಷಕ್ಕೆ ತಂದುಕೊಂಡು, ಆ ದಿವ್ಯಕ್ಕೆ ಬೇಸರಿಸಿ,

ಹಲ್ಲು ಕಡಿಯುತ್ತ ಆಗಲೇ ವಸುದೆವ ಸ್ವಾಮಿಯ ಸಮೀಪಕ್ಕೆ ಬಂದನು. ಅತಿವಿನಯವು ಧೂರ್ತಲಕ್ಷಣ ಎಂಬಂತೆ ಭಯಸ್ಥನಾಗಿ ನಮಸ್ಕರಿಸಿ ಅವನ ಕಾಲ ಕೆಳಗೆ ಕುಳಿತುಕೊಂಡು ಕಾಇ ಮುಗಿದುಕೊಂಡು ಹೀಗೆ ಅರಿಕೆಮಾಡಿದನು ;

ಸ್ವಾಮಿ ಈ ನನ್ನ ಗೃಹ (ವಾಸಸ್ಥಳ) ದೇವಕಿಗೆ ತವರುಮಾನೆಯೂ ಆಗಿದೆ; ಹೊಕ್ಕ ಮನೆಯೂ ಆಗಿದೆ. ಈ ನಮ್ಮ ಸಂತೋಷಕ್ಕೆ ತಕ್ಕ ರೀತಿಯಿಂದ ಅವಳನ್ನು ಕರೆದಿಕ್ಕಿ ಉಪಚರಿಸಬೇಕಲ್ಲದೆ ಬೂಟಾಟಿಕೆ ಒಳ್ಳೆಯತನವನ್ನು ಅಣ್ಣನಾಗಿ ನಾನು ತೋರಿಸಿದರೇನು ಬಂತು? ಅಕ್ಕ ತಂಗಿಯರು ಹಡೆದ ಉತ್ಸವಕ್ಕೆ ನಡೆಯುವ ಮಂಗಳಾಕಾರ್ಯಗಳಿಂದಲೇ ತವರುಮನೆಯಾವರಿಗೆ (ಹತ್ತ ಮನೆಯವರಿಗೆ) ಶ್ರೇಯಸ್ಸು (ವಂಶ , ಮನೆ ಬೆಳೆಯಲು ಸಾಧ್ಯ ) . ದೇವಕಿಯು ಸಾವಿರ ಮಕ್ಕಳಾನ್ನು ಹಡೆದು ಸುಕವಾಗಿರಲೆಂದು ನಮ್ಮ ಹರೈಕೆ ಆಳು ಗರ್ಭಿಣಿಯಾಗಿ ದಿವಸ ತುಂಬುತ್ತಲೂ ನಮ್ಮ ಸುಖವಾಗಿರಲೆಂದು ನಮ್ಮ ಹಾರೈಕೆ ಅವಳು ಗರ್ಭಿಣಿಯಾಗಿ ದಿವಸ ತುಂಬುತ್ತಲೂ ನಮ್ಮ ಮನೆಗೆ ಕಳಿಸಿಕೊಟ್ಟುಬಿಡಿ.

ಹೀಗೆ ಪಯೋಮುಖವಿಷಕುಂಭನಾದ (ಗಡಿಗೆಯೊಳಗೆ ವಿಷ ಮೇಲೆ ಹಾಲು) ಕಂಸನು ದೈನ್ಯಭಾವಾದಿಂದ “ಇದನ್ನು ನಾನು ಬೇಡಿಕೊಂಡೆ , ಡಯಪಲಿಸಬೇಕು ಎಂದು ಪ್ರಾರ್ಥಿಸಿದನು; ವಸುದೇವನು ಮನಸ್ಸಿಲ್ಲದೆ ಮನಸ್ಸಿನಿಂದ ಒಪ್ಪಿಕೊಂಡನು. ಕಂಸನಿಗೆ ಸಮಾಧಾನವಾಯಿತು.

ಸಿರಿವಂತರು ತಂಗಿಯರನ್ನು ತವರಿಗೆ ಕರೆದುಕೊಂಡು ಗರ್ಭಿನಿಗೆ ಸುಖೋಪಚಾರಮಾಡಿ ಆಯಸ ಕ್ಲೇಶಾದಿಗಳನ್ನು ಕಳುಯಲೂ ಸುಖವಗಿ ಹೆದರಿ ಮಾಡಿಸಿ ಸಂತೋಷಪಡಲೂ ಬಲ್ಲರಲ್ಲದೆ ಕತ್ತುರಿ ನಾಲ್ಗೆ ಬೆಲ್ಲ ಎಂಬುದನ್ನು ಕಂಸನಂತೆ ಬಲ್ಲವರಲ್ಲ ವ್ಯಕ್ತಿಗಿಂತ ಆತನ ಗುಣಶೀಲದ ಒಂದು ದುರ್ಜನಿಕೆಯೇ ಮಿಗಿಲಗಿರುವುದು ಲೋಕದ ಪಾಪವಲ್ಲವೇ? ಜೀವಂಜಸೆಯ ಹಂಸನ ಕಿವಿಯಮೇಲೆ ಹಾಕಿದ ಮಾತುಗಳು ಅವನ ಮನಸ್ಸಿನಲಿ ಅಪಾರಭಿತಿಯನ್ನು ಬಿತ್ತಿದ್ದವು. ಆಗಲಿರುವ ಅವನಿಗೆ ಚ್ಚಿಕ ತಂಗಿಯ ಸಂತತಿಯ ಕೊಂಡಿಕ್ಕುವ ಕೆಟ್ಟ ಹವಣಿಕೆಯ ಧ್ಯಾನವಾಯಿತು. ಪರಚಿಂತಗತಿ ಏಹಿ ಎಂಬ ನಿಡಿಯನ್ನು ಅವನೇಕೆ ಚನ್ನಾಗಿ ಚಿಂತಿಸದೆ ಇಟುವನು ತನ್ನ ತಂದೆಯ ಮೇಲೆಯೇ ಎರಗಿ

ನುಂಗೆಲೆಳಿಸಿದನು  ಇನ್ನು ತನ್ನ ತಂಗಿಯ ಮಕ್ಕಳನ್ನು ಕೊಲ್ಲಲು ಸಂಕಲ್ಪ ಮಾಡನೇನು? ದನತಿನ್ನುವನಿಗೆ ಅದು ತಿನ್ನವುದೆನು ಪಾಪವೇ?

ಹೀಗೆ ಆತನು ಕರಾಳ ಕಾಳಸರ್ಪವು ತನ್ನಿಕ್ಕಿದ ತತ್ತ್ರಿಯನ್ನು ತಾನೆ ನುಂಗಿ ನೋಣೆವಂತೆ, ಕೆರಳಿದ ಮೃತ್ಯುವು ನನ್ನವರು ತನ್ನವರೆನ್ನದೆ ತುಳಿದಿಕ್ಕು ಎಲ್ಲವನ್ನು ತುತ್ತುಗೊಳ್ಳುವಂತೆ ಭೀಕರ ಬದ್ದಭ್ರುಕುಟ್ಟಿಯಾಗಿ ಆ ಮನಸ್ತಾಪ ಸ್ವಲ್ಪವು ತಗ್ಗದೆ  ಒಳಗೊಳಗೇ ಕಿನಿಸಿ ಕಿಂಕಿರಿವೋಗಿ ತನಗೆ ಅರಿಶ್ಟಚಿ ಹ್ನೇಯಾಗಿ ಕಾಣಿಸಿಕೊಳ್ಳುವ ದೇವಕೀದೇವ್ಯೆಯ ಗರ್ಭ ಚಿಹ್ನದತ್ತಲೇ ದತ್ತಾವಧಾನನಾಗಿ ಕಿಲುಬೇರಿದ ಕಂಚಿನಂತೆ ಕಲಿಶಚಿತ್ತನಾಗಿ ಕಾಲುಹಾಕುತ್ತಿದನು. ಕುಲದೆವತೆಗಳು ಹೂವನ್ನು ಕಾಣಿಸದೆ ಹಲಸು ಫಲಬಿಡುವ ತೇರದಲ್ಲಿ ದೇವಕಿಯ ಬಸಿರಾಗದೆಯೇ ಮಕ್ಕಳಾನ್ನು ಪಡೆಯಲ್ಲಿ ಹರಿಸುತ್ತಿದ್ದರು.

ಹೇಗಾದರು ದೇವಕಿಗೆ ಗರ್ಭಾಚಿ ಹ್ನಗಳು ಕಾಣಿಸಿಕೊಂಡವು. ಒಂಬತ್ತು ತಿಂಗಲಾಗುತ್ತಲೂ ತಿಳಿದು ಕಂಸನೂ ಅಪ್ರಯೋಜಕನು ಅಂಜಿಕುಳಿಯ ಆದ್ದರಿಂದ ಜನರಂಜನಾರ್ಥವಾಗಿ ಎಂದು ತೋರುವಂತೆ ಅನೇಕ ಮಾಣಿಕ್ಯಮಯವಾಗಿ ಮಾಡಿಸಿದ ಸೂತಿಕಾಸನದಲ್ಲಿ ದೇವಕಿಯನ್ನು ಬರಮಾಡಿ ಇರಿಸಿ ಕಾವಲುಹಾಕಿ, ಹಿತರು ಅಹಿತರು ಆದ (ತನಗೆ ಹಿತರು ದೇವಕೀಯ ಪಾಲಿಗೆ ಅಹಿತರು ಆಗಿ ವರ್ತಿಸುವವರು ಆದ ) ಪರಿಚಾರಿಕೆಯರನ್ನು ಕೆಲಸ ಕಾರ್ಯ ಗಳಿಗೆ ನೇಮಿಸಿ ಯುಕ್ತಕಾಲದ ನಿರೀಕ್ಷೆ ಮಡುತ್ತ ಹುಲಿಯಹಾಗೆ ಕಾಯುತ್ತಿದ್ದನು.

ಹೀಗಿರಲು ಒಂದು ದಿನ ಅರ್ಧರಾತ್ರಿಯ  ವೇಳಿಯಲಿ  ದೇವಕಿಯು ಅವಳಿಮಕ್ಕಳನ್ನು ಹಡೆದಳು ಜೀವಂಜಸೆಯ ಹೆರಿಗೆ ಮಾಡಿಸಿದಳು. ಇಂದ್ರನ ಬೆಸದಿಂದ ಮಾಯಾವಿ ನೈಗಮಗವನ್ನು ಒಂದು ಆಕ್ಷಣದಲಿಯೇ  ಎರಡು ಮಾಯಾಶಿಶುಗಳಾನ್ನು ದೆವಕಿಯ ಪಕ್ಕದಲಿ ಅವಳಿಗೆ ಅರಿವಿಲ್ಲದಂತೆ ತಂದಿರಿಸಿ ಅವಳಿಗೆ ಹುಟ್ಟಿದ ಅವಳಿ ಮಕ್ಕಳನ್ನು ಎತ್ತುಕೊಂಡು ರಾಹುಮುಖದಿಂದ  ಅವಳಿ ಚಂದ್ರರನ್ನು  ತಪ್ಪ್ವಿಸಿ ಕೊಂಡೊಯ್ಯುವಂತೆ ಮಲಯಾಚಲಕ್ಕೆ  ಒಯ್ದನು. ಇತ್ತ ಕಂಸನು ಮಾಯಾಶಿಶುಗಾಳ ಜನನ ಕಾಲದ ರೋದನ ಧ್ವನಿ ಕಿವಿದಾಟುತ್ತಲ್ಲೇ ಇಲ್ಲಿಯ ಸದ್ದನ್ನು ಕೇಳಿದ ಬೆಕ್ಕನಂತೆ ಪಕ್ಕನೇ ಹಾರಿಬಂದು ಹಸಿದ ಹೆಬ್ಬುಲಿ ಜಿಂಕೆಯ ಮರಿಗಳನ್ನು ಕೊಲ್ಲುವಂತೆ ಹಲ್ಲು ಕಡೆಯುವಂತೆ ಉದ್ರೇಕ್ತನಾಗಿ ತನ್ನ ಸಿರಿವನೆಯನ್ನು ಹೊಕ್ಕು ಹೆಮ್ಮಾರಿಯನ್ನು ಪೂಜಿಸಿ ತನ್ನ ಬದುಕಿನ

ಸವಿಸೊಗವನೇ ದಿಗ್ಭಲಿಗೊಡುವಂತೆ ಆ ಮಾಯಾಶಿಶುಗಳನ್ನು ನಿಷ್ಕರುಣೆಯದ ಕಂಸನು ಅಗಸನು ಬಟ್ಟೆಯೋಗೆಯುವ ಹಾಗೆ ಹಸುಗಲ್ಲಿನ ಮೇಲೆ ಮೊಳಿಮಾಸದಲ್ಲಿ ಒಂದು ಮುದ್ದಿಯಗಿ ಹೋಗುವಂತೆ ಒಗೆದುಬಿಟ್ಟನು.

ಇನ್ನೊಂದು ಬಾರಿಯ ಹೀಗೆಯೇ ಆಗಿ ಮತ್ತೆ ಆ ಮಾಯಾಶಿಶುಗಳನ್ನೇ ಕಂಸನು ಹಾಸುಗಲ್ಲಿನ ಮೇಲೆ ಭಯಂಕರವಾಗಿ ಎತ್ತಿ ಒಗೆದು ಕೊಂದುಹಾಕಿದನು; ರಕ್ತವು ದಿಕ್ಕುದಿಕ್ಕಿಗೆ ಎರಚಾಡಿಹೋಯಿತು. ಮತ್ತೊದು ಬಾರಿಯ ಹೀಗೆಯೇ ಆರಗುಲಿಯಾದ ಕಂಸನು ಮಹೋಗ್ರವಾಗಿ ಕೆರಳಿ ಮಾಯಾಶಿಶುಗಳನ್ನು ಎಳೆದು ತಂದು ಹಾಸುಗಲ್ಲಿನ ಮೆಲೊಗೆದು ಕೊಂದು ಬಿಟ್ಟನು ಮನೇಯ ಮರೆಯಲ್ಲಿ ಮಾಡಿದ ಕಂಸನ ಈ ಹೊಲೆಗೆಲಸ ಹೊರಗೆ ಹಬ್ಬದೇ ಬಿಡಲಿಲ್ಲ ಅಡುಗೆಯ ಮನೆಯಲ್ಲ್ಲಿ ಕಾಣಿಸಿಕೊಂಡ ಹಾಗೆ ಮನೆಯಾಚೆಗು ಹಬ್ಬಿಹೋಗುವುದು ಸಹಜ.

ದೇವಕಿಯ ಹೀಗೆ ಮೂರು ಬಾರಿ ಋತುಮತಿಯಾಗಿ ಮೂರು ಬಾರಿಯ ಹಡೆದ ಅವಳಿಮಕ್ಕಳನ್ನು ಒಂದೆಡೆ ನೈಗಮದೇವನು ಮಲಯಚಲಕ್ಕೆ ಕೊಂಡೊಯ್ಯುವದೂ ಇನ್ನೋಂದೆಡೆ ಅವನು ತಂದಿಟ್ಟ ಮಾಯದ ಮಕ್ಕಳನ್ನು ನಿಜನನ್ನರಿಯದ ನಿಷ್ಕರುಣಿಯಾದ ಕಂಸನು ಬಂಡೆಯ ಮೆಲೆ ಬಿಡಿದಿಕ್ಕಿ ಹಾವಳಿಮಾಡಿ ಕೈಯಾರೆ ಸಿಕ್ಕೊಂಡು ಮುನಿಯ ಮಾತನ್ನು ವರೆಸಿಹಾಕಿದೆನೆಂದು ಭಾವಿಸುವುದು ಮಡಿದ ಮಕ್ಕಳ ಕೊಲೆ ದಿಟದ ಮಕ್ಕಳ ಕೊಲುಯಲ್ಲಿ ಬರಿದು ಹುಸಿಯಂದರಿಯದೆ ಅತೀಮುಕ್ತರ ಮುನಿಯ ಆದೇಶವೇ ಹುಸಿಯಾಗಿತ್ತೆಂದು ತಿಳಿಯುವುದೂ ಸಾಗಿತು. ಹೀಗೆ ಕಂಸನೂ ಇವೆಲ್ಲ ತನಗೆ ಅಪಮೃತ್ಯುಹೇತುಗಳೆಂದು ಅರಿಯದ ತನ್ನ ಹೊಲೆಗೆಲಸಕ್ಕೆ ಉಬ್ಬಿ ಉಕ್ಕೇರಿ ನಿಚಿಂತನಾಗಿರುತ್ತಿದ್ದನು.

ಇತ್ತ ಕಡೆ ಜೀವಂಜಸಯು ಸುಳ್ಳು ಅಳುವನ್ನು ಅಳುತ್ತ ಇಲ್ಲದ ದುಃಖವನ್ನು ನಟಿಸುತ್ತ ಅಂಜುತ್ತಾ ಅಳುತ್ತಾ ಪ್ರಸೂತಿಮಯದಲ್ಲಿ ಸತ್ತೆಂವೆದು ದೆವಕಿಗೆ ತಿಳಿಸುತ್ತಿದ್ದಳು. ದೇವಕಿಯೂ ಅಕೆಯಿಂದ ಪುತ್ರಮರಣವೃತ್ತಾಂತವನ್ನು ತಿಳಿಯುತ್ತಿದ್ದತೆಯೇ ಅಸಹನೀಯವಾದ ದುಃಖಾಗ್ನಿಯಲ್ಲಿ ನೊಂದು ಬೆಂದು ಬಳಲುತ್ತಿದ್ದಳು. ದುಸ್ಸಹವಾದ ಋುಃಖವುಂಟಾಗಿ ಹೊಟ್ಟೆಯಲ್ಲಿ ಉರಿಯೆದ್ದು ಮರಣಸಂಕರವನ್ನೆ ಅನುಭವಿಸಿದಳು. ಹಂಬಲಿಸಿದಳು. ಹೊಟ್ಟೆ ಹೊಸೆದುಕೊಂಡಳು ; ಮಿಡುಕಾಡಿದಳು. ; ನಿಟ್ಟುಸಿರು ಕರೆದಳು; ಗೋಳಿಟ್ಟು ಹೊರಳಾಡಿದಳು ; ವಿಧಿಯನ್ನು ಬೈದುಳು

ಯಾರೂ ಇಲ್ಲದ ಹೊತ್ತಿನಲ್ಲಿ ಬಡಿದುಕೊಂಡ ಬಸರಿನ ಮೇಲೆದ್ದ ಬಾಸುಂಡೆಗಳು ತಗಡನ್ನು ಹತ್ತಿಸಿದಂತಾಯಿತು. ಒಳಗೊಳಗೆ ಮೂಗಳುವನ್ನು ಅತ್ತತ್ತು, " ಮಕ್ಕಳ ಮುಖವನ್ನು ನೋಡದೆ, ಸತ್ತ ಕೂಸನ್ನಾದರೂ ಎತ್ತಿಕೊಳ್ಳದೆ ಅಪ್ಪೇಷ್ಟರು ಬಳಸಿ ಸುತ್ತಿ ಮುತ್ತಿಕೊಳ್ಳದೆ , ಮಗುವಿನ ಮೇಲುರುಳಿ ಹೊರಳಿ ಅತ್ತು ಕರೆಯದೆ, ಹೂಳಲು ಹೊತ್ತುಕೊಂಡು ಹೋಗದೆ, ಹೇಗಾದರೂ ನಾನು ಬದಿಕಿರಲಿ? ಮಕ್ಕಳನ್ನು ಪಡೆದೂ ಅವುಗಳ ಲಾಲನೆ ಪಾಲನೆಯ ಸುಖವನ್ನು ಕಾಣದೆ ಹೀಗೆ ಇನ್ನೂ ಮನೆಯಲ್ಲಿರುವುದಕ್ಕಿಂತ ಬಂಜೆಯಗಿರುವುದೂ (ಬೀಡು ಬಿಟ್ಟ) ಕಡಲ್ಲೆರುವುದೂ ಲೇಸು– ಎಂದು ಗೋಳಾಡಿದಳು. ರಾತ್ರಿ ನಿದ್ದೆಯಿಲ್ಲದೆ, ಹಗಲು ಅನ್ನ ನೀರನ್ನು ಒಲ್ಲದೆ, ಮಮ್ಮಲಮರುಗಿ ದುಃಖವುಕ್ಕಿ ಗದ್ಗದಕಠೆಯಾಗಿ ಇಟುತ್ತಿದ್ದಳು.

ಒಂದು ದಿವಸ ಅತಿಮುಕ್ತಕಮುನಿ ಮತ್ತೊಮ್ಮೆ ಮಧುರಾಪುರದಲ್ಲಿ ಕಂಸನ ಮನೆಯೆದುರು ಕಾಣಿಸಿಕೊಂಡನು. ದೇವಕಿಯ ಆತನನ್ನು ನಿಲ್ಲಿಸಿಕೊಂಡು ಕಾಣ್ಣೀರಿನಲ್ಲಿ ಕಾಲ್ತೊಳೆದು , ಕೈಗೆ ನೀರೆರೆದು, ಕೋಪಿಸಿ ಮೇಲೆ ಬಂದ್ದಂತೆ ಕಾಲ ಮೇಲೆ ಕವಿದುಬಿದ್ದು, ಗೋಳಿಟ್ಟಳು: " ಕಾಪಾಡಬೇಕಾದವರೆ ಕೈಗೆ ಬಾಣವಗಳನು ಕೊಂದರು , ತಯಿಯೇ ರಾಕ್ಷಸಿಯಾದಳು. , ತಿನ್ನುವ ಅನ್ನವೆ ಕೊಲ್ಲುವದಾಯಿತು, ಕಡಿಯುವ ನೀರೆ ವಿಷವಾಯಿತು. ಎನ್ನುವಂತೆ ಪೂಜ್ಯರಾದ, ಉದ್ಧಾರಕರಾದ ನಮ್ಮ ಅಮೋಘಶಾಪದಿಂದಾಗಿಯೇ ನನಗೆ ಈ ಪಾಡಾಗಿದೆ. ಬಸಿರು ಬರಿದಗಿ ಹೆತ್ತು. ಮಗನ ಮುಖ ಕಾಮದೆಯೇ ಹೋದೆ. ಒಂಬತ್ತು ತಿಂಗಳು ಬತ್ತಿಟ್ಟ ಬಾಳುಕವಾದಿ ಹೊತ್ತ ಬೇನೆಯನ್ನೂ ಹಿಟ್ಟಿದ್ದು ಸತ್ತ ಬೇನಿಯನ್ನೂ ಹೇಗೆ ತಾನೆ ಮರೆಯಲಿ? ನೀವು ನನ್ನ ದುಃಖವನ್ನು ನಿವರಿಸುವುದಾದರೆ , ಒಕೋ ಈ ನನ್ನ ತೆಲಿಯನ್ನು ತೆಗೆಡುಬಿಡಿ– ಎಂದಳು. ಕೂದಲು ಹರಿದುಕೊಂಡು ತೆಲೆ ಅತ್ತು ಅತ್ತು ಬತ್ತಿಹೋದ ಬಾಯಿ ಇವುಗಳಿಂದ ಮತ್ತೆ ಅಳಲು ಮೊದಲಿಟ್ಟು ,ಹುಚ್ಚುಡಿದು, ಬಾಯಿ ಸೋಲುವಂತೆ ಪ್ರಲಾಪಿಸುತ್ತಿದ್ದದೇವಕೀದೇವೀಯನ್ನು ಅತಿಮುಕ್ತಕಮುನಿ ಸಂತೈಸಿದನು ;ಎಳೇಳು ತಾಯಿ ಏನೂ ಪ್ರಮಾದವಿಲ್ಲ . ಶಾಂತಂ ಪಾಪಂ ಪ್ರತಿಹತಮಮಂಗಳಂ ಇದು ಹೀಗೆ ನೀನು ಹೆತ್ತ ಕೋಡಲೆ ನಿನ್ನ ಮುಂದೆ ಪ್ರತಿಯಾಗಿ ಮಾಯಾಶಿಶುಗಳನ್ನು ತಂದಿಕ್ಕಿ ಹೆತ್ತ ಮಕ್ಕಳನ್ನು ನೈಗಮದೇವನು ಎತ್ತಿಕೊಂಡು ಹೋಗಿ ಅವುಗಳಿಗೆ ತಾನೇ ದಾದಿಯಾಗಿ ಅಮೃತಪಾನ

ಮಾಡಿಸಿ ಸಲಹುತ್ತಿದ್ದಾನೆ. ನಿನ್ನ ಮಕ್ಕಳೆಲ್ಲ ಮಲಯಾಚಲದಲ್ಲಿ ಗಿರಿಕೂಟೋನ್ನವಾದ ಸೌಧತಲದಲಿ ವಿಶವಂಭರಾಖಂಡದಂತೆ ಕ್ಷೇಮವಾಗಿದ್ದಾರೆ. ಇದಲ್ಲದೆ ನಿನಗೆ ಚಾಣೂರ ಮುರ ಕಂಸ ಜರಾಸಂಧ – ಈ ಶೂರರನ್ನೇ  ಒತ್ತಿ ನಿಗ್ರಹಿಸಬಲ್ಲ ಮಹಾಶೂರನಾದ ಇನ್ನೊಬ್ಬ ಮಗನು ಹುಟ್ಟುತ್ತಾನೆ ಆದ್ದರಿಂದ ನ್/ಈನು ಉದ್ದೇಗಪ್ಡಬೇಕಾದ್ದಿಲ್ಲ. ಹುಟ್ಟುವ ಅ ಮಗನು ತ್ರಿಖಂಡಮಂಡಲಧಿಪತಿಯಾಗುವನು. “ ಇಷ್ಟು ಹೇಳಿ ದೇವಕಿಯ ದುಃಖಾಗ್ನಿಯ ಮೇಲೆ ದಯಾರಸವರ್ಷವನ್ನು ಕರೆದು ಸಮಾಧಾನೋಕ್ತಿಗಳಾನ್ನಾಡಿ ಅತಿಮುಕ್ತಕ ಮುನಿಯ ಹೊರರು ಹೋದನು.

ಹಾಗೆ ಹೀಗೆ ಎನ್ನುವ ಹೊತ್ತಿಗೆ ಕೆಲವುದಿನಗಳಲ್ಲಿಯೇ ಕಂಸಂಗೆ ವಿಱು ಮೂಡುವ ತೆಱದಿಂ ದೇವಕಿಗೆ ಮತ್ತೆ ಗರ್ಭಾಷ್ಹ್ನೆಗಳು ಸ್ಪಷ್ಟವಾಗಿ ಕಾಣಿಸಿಕೊಂಡವು ಅಸುರರ ಮೊಗಗಳು ಕಪ್ಪಿಟ್ಟವು . ಕಂಸನ ಲಲಾಟಲಿಖಿತದ ರೇಶೆಯೂ ತೊಡೆದುಹೀಯಿತು. ಆಕೆಗೆ ಕಾಲಕ್ರಮದಲ್ಲಿ ಗರ್ಭದ ಬಯಕೆಗಳು ಬೆಳೆದವು . ಕೃಷ್ಣನು ದಿಕ್ಕರಿಯ ಹಾಗೆ ಕಂಸನನ್ನು ಮುರಿದಿಕ್ಕಲು ಅವನು ಅರಚಿಕಿರಿಚಿ ಕೆಳಾಕ್ಕೆ ಬಿದ್ದು ಮಣ್ಣು ಮುಕ್ಕುತ್ತಾನೆ.  ಎಂಬುದನ್ನು ಸಾರಿ ತೋರಿಸುವಂತೆ ದೇವಕಿಯ ಬಯಕೆಯಿಂದಾಗಿ ಮಣ್ಣನ್ನು ತಿನ್ನುತ್ತಿದ್ದಲು. ಕೊಲ್ಲಲ್ಲೆಂದು ತವಕಪಟ್ಟು ಕಂಸನು ಮಗುವಿಗಾಗಿ ಕೈನೀಡಿದನಾದರೆ ಅವನನ್ನು ನುಂಗಲೆಂದು ಗರ್ಭನಿಧಾನವನ್ನು ಕಾಯುತ್ತಿದ್ದ ಕಾಳಾಹಿಯಂತೆ ಆಕೆಯ ರೋಮರಾಜಿಗಳಿದ್ದವು. ಸಿಧು ಪರೀತ್ಭೂತಳವನ್ನು ಅಧೀನಪಡಿಸಿಕೊಳ್ಳಲೇಂದು ಜರಾಸಂಧನ ಕಂಠವನ್ನು  ಛೇದಿಸಲು ಕೆಶವನು ಕರಚಕ್ರವನ್ನು ಹೀಗೆ ಪ್ರಯೇಗಿಸುತ್ತನೆ ಎಂಬುದನ್ನು ಮೊದಲೆ ಮನಗಾಣಿಸುವಂತೆ ದೇವಕಿಯ ಮೇಳಾದ ಕುಬ್ಬ ಕಿರಾತರುಗಳ ಮಣಿದ ಕುತ್ತಿಗೆಗಳನ್ನು ವಿನೋದಕ್ಕೆಂದು ತಿರಿಚಿಮುರುಚಿ , ಕ,ಂಕಣವನ್ನೇ ಅವರ ಕುತ್ತಿಗೆಗೆ ಎಸೆಯುತ್ತಿದ್ದಳು. ಆ ಗರ್ಭಶಾಂತಿಗೆ ಶಾಂತ್ಯುದಕವನ್ನು ತಳಿಯುವ ಮಳೆಗಾಲ ಕಾಲಿಟ್ಟಿತು . ದೇವಕಿಯು ಆ ಮಳೆಗಾಲದಲ್ಲಿ (ಜಿನನ) ಅಭಿಷೇಕದಲ್ಲಿ ಅಭಿಂತವನ್ನೂ ದಾನದಲ್ಲಿ ಧನವನ್ನೂ ಪೂಜೆಯಲ್ಲಿ ವೇಳೆಯನ್ನೂ ಕಳೆಯುತ್ತಿದ್ದಳು.ಆ ಪುಣ್ಯದಂತೆ ಪುಣ್ಯಯತಿಗಳನ್ನು ಕೇಳಲಾಗಿ, (ಅವರು ಸೂಚಿಸಿದಂತೆ ) ತಿಂಗಳು ತುಂಬಿಬರಲ್;ಉ ಕಂಸಭಯದಿಂದ ಗರ್ಭವು ಕಲಕಿದಂತೆ ಬಸಿರ ಬೇನೆ ಬಂದು ತನ್ನ ಮಗನು ಭದ್ರಪದನಾಗುತ್ತಾಂನೆಂದು ಹೇಳುವಂತೆ ಭಾದ್ರಪದಮಾಸದಲಿ , ಮುಳಿಯಿಸಿದವರಿಗೆ ವಿಳಯಕಾಳನಾಗುತ್ತಾನೆಂದು ತಿಳಿಸುವಂತೆ ಕಾರಿರುಳಿನಲ್ಲಿ

ದುಷ್ಟಚತುಷ್ಟಯಕ್ಕೆ ಅಷ್ಟಮಚಂದ್ರನಾಗುವನೆಂಬುದನ್ನು ನಿವೇದಿಸುವಂತೆ ಅಷ್ಟಮಿಯಲ್ಲಿ ಅರ್ಧಚಕ್ರವರ್ತಿಯಾಗುವನೆಂಬುದನ್ನು ಸೂಚಿಸಿದಂತೆ ಅರ್ಧರಾತ್ರಿಯಲ್ಲಿ ದೇವಕಿಯ ವೈರಿವಿನಾಶಕನಾದ , ಕಂಸೋಷ್ಣನಾದ ಕೃಷ್ಣನನ್ನು ಹಡೆದಳು. ಪದ್ಮಿನಿಯು ಅಳಿಯನನ್ನು ವಾರ್ಧಿಮೆಲೆಯು ವಿಷವನ್ನು ಹುಲ್ಲೆಯು ಕಸ್ತೂರಿಯನು ದೀಪಿಕೆಯು ಕಜ್ಜಳವನ್ನು , ಕಾಳರಾತ್ರಿಯು ತಮಸ್ಸನ್ನು , ರೋಹಣಾವು ನಿಲರತ್ನವನ್ನು ಭೂದೇವಿಯು ತಮಾಲವನ್ನು ಪಡೆದು ಹಾಗೆ ದೇವಕಿಯ ನೀಲವರ್ಣನಾದ ಕೃಷ್ಣನಿಗೆ ಜನ್ಮವಿತ್ತಳು.

ಆ ಪ್ರಸ್ತಾವದಲ್ಲಿ ನಾವು ಬದುಕಿದೆವು ಎಂದು ದೇವತೆಗಳು ಶುಭೋದಽಯದಲ್ಲಿ ಮೊಳಗಿಸಿದದುಂದುಭಿಧ್ವನಿಗಳು ಗುಡುಗಿನ ದನಿಯೊ,ಂದಿಗೆ ಬೆರೆಗುಹೋದವು ; ದೇವ ಕಾಂತೆಯರು ನಿವಾಳಿಸುವ ಮಂಗಳದೀಪಗಳ ಬೆಳಗು ಮಿಂಚಿನ ಗೊಂಚಲಲ್ಲಿ ಒಂದಾಗಿ ಹೊಯಿತು ಸೂಸುವ ಮುತ್ತಿನ ಸೇಸೆಗಳಲ್ಲ್ಲಿ ಆಲಿಕಲ್ಲುಗಳು ಸೇರಿ ಗಾರೆ ಕಲಸಿದಂತಾಯಿತು. ಸುರಿದು ಮಳೇಯಲ್ಲಿ ಅವರ ಆನಂದಬಾಷ್ಪಗಳು ಅಡಗಿಹೋದವು. ಹೀಗಿರಲು ಕಂಸನಿಗೆ ಹೇಗೆ ತಾನೆ ಕೃಷ್ಣೋದಯವು ಗೋಚರವಾಯಿತು? ಲೋಕಸಂಮಸ್ತಕ್ಕೂ ಅಧಿಕೋತ್ಸವವಾಯಿತು. ಕೃಷ್ಣನು ತನ್ನ ತ್ನುತಮಾಲರುಚಿಯಿಂದ ಹೆರಗೆ,ಮನೆಯ ಸೊಡರ್ವೆಗಳನ್ನೇ ಆವರಿಸಿ ಮಸುಕುಮಾಡಿಬಿಟ್ಟನು, ಎಕೆಂದರೆ ಆಕಸ್ಮಿಕವಾಗಿ ಈ ದೀಪಕಾಂತಿಯು ಮೇಲ ಚೆಲ್ಲಿ ಕಂಸನು ಎಚ್ಚರಗೊಂಡನೆಂದರೆ ಕೃಷ್ಣನು ಹುಟ್ಟಿಶ್ಶು ಅವನಿಗೆ ತಿಳಿದು ಅನಾಹುತವಾಗಿಬಿಡುತ್ತದೆ ! ಆತನು ಕಾರಣಪುರುಷನಾದ ಕಾರಣದಿಂದ ಸಹಜ ಘನಸಂಹನನನಾಗಿದ್ದನು; ಸಾಮಾನ್ಯ ಶಿಶುವಿನಂತೆ ಕಲಲಚ್ಛಾಯೆಯಿಂದ ಕೊಡಿರದೆ ಪರಿಣತಚ್ಛಾಯೆಯಿಂದ ಶೋಭಿಸುತ್ತಿದ್ದನು. ನೀಲಶಲಾಕೆಗೆ ಜೀವಹೊಯ್ದಂತಿದ್ದ ಕೃಷ್ಣನ ಮೂರ್ತ್ತಿಯನ್ನು ಕಣ್ತುಂಬ ಕಾಣುವಂತಾಗಿ , ಕುರುಡನು ಕಣ್ಬಡೆದು ನಿಧಾನವನ್ನು ಎತ್ತಿಕೊಳ್ಳೂವಂತೆ ಆ ಈರಿಲಮ್ಮೆಯಲಿಯೆ ಮಗುವನ್ನು ಬೇಗ ಎತ್ತಿಕೊಂಡು, ಜೋಕೆಯಿಂದ ಹಿಡಿದುಕೊಂಡು ಅಲ್ಲಿಂದ ಯಾರಿಗೂ ಗೊತಾಗುವಂತೆ ವಸುದೆವನು ಹೊರಟುಬಿಟ್ಟನು. ಅಂಗೈಗಳಲ್ಲಿ ಮಗುವನ್ನಿರಿಸಿಕೊಂಡು ಆ ಕಾರ್ಗತ್ತಲೆಯಲ್ಲಿ ಹೊರಟಿದ್ದು ಕಾಳಿಂದೀನದಿಯಲ್ಲಿ ಓಲಾಡಲು ಮಗುವಿಗೆ ಕಲಿಸಲೆಂದು ಹೊರಟಂತಿತ್ತು.

ಹೀಗೆ ಹೊರಟಾಗ ಏಕಕುಂಡಲನಾದ ರೋಹಿಣಿಸಂಜಾತನೂ ಹಲಾಯುಧನೂ ಆದ ಬಲದೇವನು ಮುಕುಂದನ ಮೆಲಿನ ಸಹಜ ಸ್ನೇಹಸಂಭ್ರಂದಿಂದ ಹೊರಟುಬಂದ ಕರಿಯ ಬಟ್ಟೆಯನ್ನು ಮುಸುಕಿಕೊಂಡು ಓಲೆಯ ಕೊಡೆಯನ್ನು ವಸುದೆವಾದಿಗಳ ತಲೆಯ ಮೆಲೆತ್ತಿ ಹಿಡಿದು ತಾಳಧ್ವಜನಾಗಿ ತೋರುತ್ತಿದ್ದು ಪ್ರಮಾಣದಲ್ಲಿ ಅವರನುಹಿಂಬಾಲಿಸುತ್ತಿದ್ದನು. ಪುರುಷೋತ್ತಮನ ಪುಣ್ಯಪ್ರೇರಣೆಯಿಂದ ತನ್ನ (ವಸುದೇವನ ) ಮೆಲೆ ಕಾಲೂರಲಂಜಿದಂತೆ ಮೋಡಗಳ ಗುಂಪು ವರ್ಷಾಪಾತಆಘಾತವನ್ನು ನಿಲ್ಲಿಸಿ ಕುಡಿಮಿಂಚಿನಾ ಕೈದಿವಿಗೆಯನ್ನು ಹಿಡಿದು ದರಿತೋರಿದುವು. ಹರಿಯುವ ಹೋಳೇಗಳೇ ಪಡಿಯರರಾಗಿ ದಾಗಿಯಲ್ಲಿ ಮುನ್ನಡಸಿದವು. ಹೀಗೆ ಮಸುದೆವನೂ ಬಲದೆವನೂ ತಮ್ಮೊಡವೆಗೆ ತವೆ ಕಳ್ಳರಾಗಿ ಸರಸರನೆ ನಡೆದುಹೋಗಿ ಹೆಬ್ಬಗಿಲ ಬಳಿಗೆ ಬಂದು ಮುಟ್ಟಿದಾಗ ಅವರ ನಡೆಗೆ ತಡೆ ಬಂತು. ಆ ಹೆಬ್ಬಾ ಗಿಲಿಗೆ ಒಂದು ಬೀಗವನು ಹಾಕಿ ಒಂದು ಸೊಳ್ಳೆಯೂ ಒಳಗೆ ನುಸುಳಲು ಸಾಧ್ಯವಾಗದಂತೆ ಬಲಪಡಿಸಿತ್ತು . ಜಡಿದಿದ್ದ ಕಬ್ಬಿಣದ ಕದಗಳನ್ನೂ ಕಂಡು ಇಬ್ಬರೂ 'ಇನ್ನೇನು ಮಾಡುವುದು ಎಂದು ದಿಕ್ಕು ತೋರದೆ ಕಳಾವಳ ಪಟ್ಟರು. ಅಷ್ಟರಲ್ಲಿ ಸಗ್ಗಿಗರ ಸೈಪಿನಿಂದ ಸಗ್ಗದ ಬಾಗಿಲು ತೆಗೆಯುವಂತೆ ಆ ಶಕಟಿಘರಟ್ಟಿನ (ಕೃಷ್ಣನ) ಉಂಗುಷ್ಠವು ತಗುಲಿದೊಡನೆ ಮುಚ್ಚಿದ ಕಬ್ಬಿಣದ ಬಾಗಿಲುಗಳು ತಮಗೆ ತವೇ ತೆರೆದುಕೊಂಡು ಈ ಅದ್ಭುತ್ವನ್ನು ನೋಡಿ ನಿಬ್ಬೆರಗಾಗಿ ಬಾಗಿಲ್ಗಾಪಿನ ಜಾವದ, ಉಕ್ಕಡದ ಗರವಟಿಗೆಯ (ಗಸುತ್ತಿರುಗುವ) , ಠಾಣಾಂತರದ ಎಲ್ಲರೂ ಮಾಟದ ಮನುಷ್ಯರಂತೆ ಮಿಳ್ಮಿಳನೆ ನೋಡುತ್ತ ನಿಂತರು. ಅವರು ನೋಡುತ್ತಿರುವಂತೆಯೇ ವಸುದೇವ ಬಲದೆವ್ರು ಮಾರಿಯ ಬಾಯನ್ನು ದಾಟಿ ಹೋಗುವಂತೆ ಮಧುರೆಯ ಹೆಬ್ಬಾಗಿಲನ್ನು ದಾಟಿಕೊಂಡು ಹೋದರು.

ಹೀಗೆ ಹೊರಟರಾದರೂ ಮುಂದೆ ದಾರಿ ತೋರದೆ ದಿಙ್ಮೂಡರಾಗಿ ನಿಲ್ಲುವುದಕ್ಕೂ ಮುಂದೆ ಸರಸರನೆ ನಡೆಯುವುದಕ್ಕಿ ಆ ಗಾಢಾ,ಂಧಕಾರದಲ್ಲಿ ತಿಳಿಯುವುದು ಸಾಧ್ಯವಾಗದೆ ಮೆಲ್ಲಮೆಲ್ಲಗೆ ಹೆಜ್ಜೆ ಹಾಕುತ್ತಿದ್ದರು. ಆಗ ಆಕಸ್ಮಿಕವೆನ್ನುವಂತೆ ಧವಳವೃಷಭವೊಂದು ಕಾಣಿಸಿಕೊಂಡು , ದಾರಿಬೆಳಕಾಗಿ ಫಣಿಯೆರಡರ ಹೆಡೆಯ ಮಣಿಗಳೆಂಬಂತೆ ತನ್ನರಡು ಕೋಡೆಗಳಲ್ಲಿ ಸೊಡರನ್ನು ಹೊತ್ತಿದ್ದು,ಕೆಲೆದು, ವಸುದೆವಾದಿಗಳಿಗೆ ಮಾರ್ಗದರ್ಶನವನ್ನು ನೀಡುತ್ತತನು ಮುಂದೆಮುಂದೆ ನಡೆದು ಅವರನ್ನು

ತನ್ನೊಂದಿಗೆ ಕರೆದೊಯ್ದಿತು. ಆ ವೃಷಭನನ್ನು ಹಿಂಬಾಲಿಸಿ ಹೋಗುತ್ತಿರಬೇಕಾದರೆ ಭೋರ್ಗರೆದು ಹರಿಯುವ ಯಮುನಾನದಿಯು ಪ್ರಯಾಣಕ್ಕೆ ಅಡ್ಡಿಯಾಗಿ ಅನತಿದೂರದಲ್ಲಿ ಕಣ್ಣೆದುರು ಕಾಣಿಸಿತು. ಆಗ ಅದನ್ನು ನೋಡಿ ' ಅಹೋ ವಿಘ್ನಪರಂಪರಾ ಎನ್ನುತ್ತಾ ಇಬ್ಬರೂ ಉದ್ವೇಗಪಡುತ್ತಿರಲು , ಇವರಿಗೆ ಮುಂದಿದ್ದ ಬಸವನು ಹುಲ್ಲುಹಸಲೆಗೆ ನುಗ್ಗುವಂತೆ ಯಮುನೆಯ ಪ್ರವಾಹದೊಳಗೆ ನಿರಾಯಸವಾಗಿ ನಿರ್ಲಕ್ಷ್ಯವಾಗಿ ನುಗ್ಗಿ ನಡೆಯಿತು. ಬಾಲಕನ ಮಹಿಮೆಯಿಂದಾಗಿ ಆ ಕಾಲಿಂದಿಯ ನೀರ ಮೆಲೆ ಧವಳವೃಷಭವು ನೀಲರತ್ನದ ನೆಲೆಗಟ್ಟಿನ ಮೆಲೆ ನಡೆಯುವ  ಹಾಗೆ ಸರಾಗವಾಗಿ ನಡೆದುಹೋಯಿತು. ಇಷ್ಟರಲ್ಲಿ ಚಂಚಲವಾದ ಅಲೆಗಳು ನಿಶ್ಚಲಗೊಂಡಂತೆ  ಆಗಿ ಎರಡು ಪಾಲಿಗೆ ಹೊಗಿ ಪ್ರವಾಹವೇ ಸ್ಥಗಿತಗೊಂಡ ಪುರ್ಣಯಮುನಾನದಿಯನ್ನು ಹಲಾಯುಧನೂ ವಸುದೆವಭೂಪನೂ ಹಾದುಹೋದರು. ಈ ರೀತಿಯಲ್ಲಿ ಹೇಗೋ ಹಾದುಹೋಗ್ಗುತ್ತಲೂ ಅ ಯಮುನೆಯ ಆಚೆಯ ದಡದಲ್ಲಿದ್ದ ತುರುಹಟ್ಟಿಯನ್ನು  ತೋರಿಸಿ, ಗೋಪತಿಯು ಗೋಕುಲವನ್ನು ತೋರುವುದು ಸಹಜ ಯುಕ್ತ ಎನ್ನಿಸಿ, ಆ ಧವಳವೃಷಭವು ಅದೃಶ್ಯವಾಯಿತು.

ಆ ತುರುಹಟ್ಟಿಗೆ ಹತ್ತಿರದಲ್ಲಿಯೆ ಬಂದು ಹತ್ತಿರದಲ್ಲಿಯೇ ಬಂದು ನಿಂತ ವಸುದೇವ ಬಲದೇವರಿಗೆ ಅವರ ಪುಣ್ಯದೇವತಾಗೃಹದಂತೆಮುಂದುಗಡೆ ಒಂದು ದೇವತಾಗೃಹವು ಕಣ್ಣಿಗೆ ಕಂಡಿತು ಅದನ್ನು ಅವರು ಹೊಕ್ಕು ಹೊರಭಾಗವನ್ನು ನೋಡುತ್ತಿರಬೇಕಾದರೆ ಆ ಕಗ್ಗತ್ತಲಲ್ಲಿ ಅಲ್ಲಿಗೆ ಯರೋ ಒಬ್ಬಾತನು ದೀಪ ಹಿಡಿದುಕೊಂಡು ಬರುತ್ತಿರುವುದನ್ನು ನೋಡಿದರು. ಕೂಡಲೇ ಅವರಿಗೆ ತಮ್ಮ ಹೆಜ್ಜೆವಿಡಿದು ಬೆನ್ನಟ್ಟಿ ಬಂದ ಕಂಸನೇ ಇರಬೇಕು ಎಂದು ತೋರಿ ಭಯವಾಯಿತು. ಅಲ್ಲಿಯೇ ಮೈಮೆರೆಸಿಕೊಂಡು ಕುಲಿತರು . ಹಾಗೆ ಬಂದವನು ಬೇರರೂ ಆಗಿರದೆ ತುರುಹಟ್ಟಿಯ ಯಜಮಾನನಾದ ನಂದನೇಂಬುವನಾಗಿದ್ದನು. ಅವನೂ ತಮಗೆ ಹೇಗೋ ಆಗಲೇ ತನ್ನ್ ಪತ್ನಿಗೆ ಆಗಿದ್ದ ಹೆಣ್ಣುಮಗು ಒಂದನ್ನು ಎತ್ತಿಕೊಂಡು ಬಂದು ದೇವತೆಯೆದುರು ನಿಂತು ಹೀಗೆ ಹೇಳಲು ತೊಡಗಿದನು: " ದೇವತೆಗೂ ಈ ವಂಚನೆಯ ಬುದ್ದಿಯೇ, ಹೇಳು? ನನ್ನ ಹೆಂಡತಿ ನಿನಗೆ ಹರಕೆಹೊತ್ತು ಗಂಡುಮಗೌವನ್ನು ಬೇಡಿಕೊಂಡರೆ ಈವೊಂದು ಹುಳಿತ ಹೆಣ್ಣನ್ನು ಕೊಟ್ಟಿದೇಯೇ ಅವಳುಇಡ್ಮನ್ನು ಒಲ್ಲಳು.  ನೀನೇ ತಗೆದುಕೋ . ಬಂದ ಪಾಡು ಬರಲಿ ಗೊಲ್ಲರೇನು ಹಾಯಾಗಿ

ಬಿದ್ದುಗೊಂಡು ಉಣ್ಣುವಂಥವರೆ ? ಸರಿಸರಿ, ಈ ಹೆಣ್ಣು ಮಗುವೆನು ದನಗಳಾನ್ನು ಕಾಯಲಾದೇತೇ, ಕರೆಯಲದೀತೆ, ಅಟ್ಟಲಾದೀತೆ. ಕಟ್ಟಲಾದೀತೆ, ಯಾತಕ್ಕೆ ತಾನೆ ಆದೀತು? ನಚ್ಚಿನ ಎಮ್ಮೆ ಕೋಣನನ್ನೀದಂತಾಯಿತು. ನೀನೂ ಹೆಣ್ಣಾದ್ದರಿಂದ ಹೆಣ್ಣನ್ನೇ ಕೊಡುವೆಯಲ್ಲವೆ, ಪಾಪ ! ಗಂಡನ್ನು ಎಲ್ಲಿಂದಾದರೂ ಕದ್ದು ತರುವೆಯಾ ನಿನ್ನ ಹೆಣ್ಣನು ನೀನೇ ತಗೆದುಕೋ ನನ್ನ ಹೆಂಡತಿ ನಿನಗೆ ಇಷ್ಟು ಹರಕೆ ಹೊತ್ತು ಹಸಿದು ಪಾಡುಪಟ್ಟು ಇದ್ದುದ್ದಕ್ಕೆ , ಗಂಡಾಗ್ಗುವುದೆಂದು ಹಿಂದೆ ನೀನು ಕೊಟ್ಟ ಹರಕೆಯನ್ನು ಮತ್ತೆ ಕೊಡು; ಇಲ್ಲವಾದರೆ ನಿನ್ನನ್ನು ಈ ,ಮಾನೆಯೊಳಗೆ ನಿಜವಾದ ದೇವತೆಯಂತೆ ಹೀಗೆ ಮಾಲಗಿಕೊಂಡು ಒಡವೆ ವಸ್ತ್ರಗಳನ್ನು ಇಟ್ಟು ತೊಟ್ಟು ಮರೆಯುವುದಕ್ಕೆ ನಾನು ಬಿಡುವುದಿಲ್ಲ. ' ವಿಷ್ಣುಗುಪ್ತಂ ಲಿಂಗದ ನೆತ್ತಿಯೊಳಿಕ್ಕಿದಂತೆ ದೊಡ್ಡದೊಂದು ಕರಿಯ ಕಲ್ಲನ್ನೇತ್ತಿ ತಂದು ನಿನ್ನ ನೈತ್ತಿಯ ಮೇಲೆ ಕುಕ್ಕಿ ಗೊಲ್ಲತಿಯರನ್ನು ಠಕ್ಷಿಸಿ ನುಣ್ಣಗೆ ನುಂಗಿದ್ದೆಲ್ಲವನ್ನೂ ಮೂಗಿಂದ ಬಾಯಿಂದ ಕಕ್ಕಸಿಬಿಡುತ್ತೆನೆ. ಹೀಗೆ ತೋರಿದ್ದನ್ನಾಡಿ ಮೀಸೇಗಡಿಯುತ್ತ ಕೂಸನ್ನು ಅಲ್ಲೇ ಬಿಸಾಡಿಬಿಟ್ಟು ನಂದನು ಮನೆಗೆ ಹಿಂದಿರುಗುತ್ತಿದ್ದನು. ಆಗ ಅದನ್ನು ವಸುದೇವ ಹಲಾಯುಧರು ನೋಡಿ ಹುಡುಕಿತ್ತಿದ್ದ ಬಳ್ಳಿ ಕಾಲಿಗೇ ತೊಡರಿಕೊಂಡು ಅನಾಯಾಸವಾಗಿ ಲಭ್ಯವಾಯಿತೆಂದು ಕೊಂಡರು. ವಸುದೇವನು ತನ್ನ ಗಂಡುಕೂಸನ್ನು ದೇವತೆಯ ಮುಂದಿರಿಸಿ ಅಲ್ಲಿದ್ದ ಹೆಣ್ಣುಕೋಸನ್ನು ತಗೆದುಕೊಂಡು ' ಕಾರ್ಯವಶಕ್ಕೆ ಕತ್ತೆಯ ಕಾಲ್ವಿಡಿದನೆಂಬಂತೆ ನಂದಗೋಪನಿಗೆ ದೈನ್ಯವನ್ನು ತೋರಿ 'ಏನಯ್ಯ ಕೋಪಿಸಿಕೊಂಡು ಹೊರಟುಹೋಗಬೇಡ, ಬಾ; ಗಂಡುಮಗುವನ್ನೇ ಕೊಡುತ್ತೇನೆ ಎಂದು ಕೂಗಿಕರೆದನು. ನಂದನು ತನಗೆ ಹೆದರಿ ದೇವತೆಯೇ ಕರೆದಳೆಂದು ಭಾವಿಸಿ ಮತ್ತೆ ಬಂದು ದೇವತೆಯ ಎದುರಿನಲ್ಲಿದ್ದ ಗಂಡುಮಗುವನ್ನು ನೊಡಿ ಹಿಗ್ಗಿ ನಲಿದು ಮಜ್ಜಿಗೆ ಕೊಟ್ಟು ಮಾಣಿಕ್ಯವನ್ನು ಕೊಳ್ಳುವಂತೆ ತನ್ನ (ನಾಡಾಡಿ) ಕೂಸಿಗೆ ಬದಲಾಗಿ ಆ ದೈವಿಕವಾದ ಕೂಸನ್ನು ತೆಗೆದುಕೊಂಡು ಕಣ್ಬಡೆದ ಕುರುಡನಂತೆ, ಪಣ್ಬೆಡೆದ ಎಳವಕ್ಕಿಯಂತೆ ಸಂತೊಷಪಟ್ಟನು. ''ಹೀಗಾದರೆ ನೋಡು ನೀನೀಗ ದೇವತೆ ಎಂದು ಆ ದೇವತೆಗೆ ಅಡ್ಡಬಿದ್ದ ,ಮನೆಗೆ ತೆರಳಿದನು; ತಂದ ಆ ಗಂಡುಮಗುವನ್ನು ಯಶೋದೆಗೆ ಕೊಟ್ಟನು.

ಇತ್ತ ಕಡೆ ಆ ಹೆಣ್ಣುಮಗುವನ್ನು ಎತ್ತಿ ತಂದು ವಸುದೇವನು ದೇವಕಿಯ ಮುಂದೆ ತಂದಿರಿಸಿದ ಮೇಲೆ ಅದನ್ನು ತಂದು ವಸುದೇವನು ದೇವಕಿಯ ಮುಂದೆ ತಂದಿರಿಸಿದ ಮೇಲೆ ಅದನ್ನು ತಂದ ವಸುದೇವ

ಹಲಾಯುಧರಿಬ್ಬರೂ ತಮಗೇನೂ ತಿಳಿಯದೆಂಬಂತೆ ಇದ್ದುಬಿಟ್ಟರು. ಕಂಸನು ತನ್ನ ತಂಗಿಯು ಹಡೆದ ಸುದ್ದಿಯನ್ನು ಕೇಳಿ ಆ ಬೈಗಿರುಳೇ ಬಂದು ತಂಗಿಯಪಕ್ಕದಲ್ಲಿದ್ದ ಹೆಣ್ಣು ಮಗುವನ್ನು ನೋಡಿ , ಕೊಲ್ಲಲು ಬೇಕಿಲ್ಲದೆ ಇವಳೊಬ್ಬಳಿಂದ ಏನೂ ಸಾಹಸವಾದೀತು, ಎಲ್ಲಾದರೂ ಗಂಡಾದರೆ ಮಾತ್ರ ಅವನು ನನಗೆ ಪಿಡುಗಾಗುತ್ತಾನೆ. ಎಂದುಕೊಂಡು ಆ ಹೆಣ್ಣುಕೂಸಿನ ಮೂಗನ್ನು ಚಪ್ಪಟೆಯಗುವಂತೆ ಒತ್ತಿ ಬಿಟ್ಟು ಹೊರಟು ಹೋದನು ಆಕೂಸು ಕೂಡ ತನ್ನನ್ನು ತನರಿತುಕೊಂಡಮೇಲೆ ,(ದೊಡ್ಡವಳಾಗಿ ತನಗೆ ತಿಳುವಳಿಕೆ ಬಂದಮೆಲೆ) ತನ್ನ ಮುಖದತ್ತ ನೋಡುವವರ ಮುಖವನ್ನು ತಾನು ನೋಡಲು ನಾಚಿಕೆಯಾಗಿ ವಿಂದ್ಯ ಪರ್ವತವನ್ನು ವಿಂದ್ಯಮಾನಸೆಯೆಂಬ ದೇವತೆಯಾದಳು.

ಅತ್ತನಂದಗೋಪಾಲನ ಮನಿಯಲ್ಲಿ ಗಂಡು ಮಗುವಾಯಿತೆಂದು ಮಹೋತ್ಸವ ಜರುಗಿತು. ಗೋಪಿಯರೆಲ್ಲ ಸೇರಿ ಅಚ್ಯುತನನ್ನು ಪಡೆದ ಯಶೋಧೆಗೆ ಹೆರಳಲ್ಲಿ ಮೀಹಕ್ಕೇರೆದರು. ಮಗುವು ಮುಂದೆ ಪೀತಾಂಬರಧರನೆಂದು ಲೋಕಕ್ಕೆ ಹೇಳಿವಂತೆ ಅರಿಸಿಣದ ವಸ್ತ್ರವನ್ನು ಸ್ವಲ್ಪವೂ ಜಾರಿಸಲಾಗದಂತೆ ಯಶೋಧೆ ಕೃಷ್ಣನ ಹೊಕ್ಕುಳೆಡೆಗೆ ಕಟ್ಟಿದಳು. ನಲಿದು ಒಡಹುಟ್ಟಿದ ಮುಂಗೈ ಎಂಬ ಎಳೆಗೂಸು ಕಣ್ದೆರೆದ ಹಾಗೆ ಜಲಜಾಕ್ಷನ ಮುಂಗೈಯಲ್ಲಿ ಯಶೋಧೆಯು ಗಲಗಲಿಸುವ ಕವಡೆಗಳನ್ನು ಕಟ್ಟಿದಳು. ಹೊಸ ಹೊಂಗೆಯ ಚಿಗುರಿನಂತೆ ಕಪ್ಪಾದ ಬಾಲಕೃಷ್ಣನು ಯಶೋಧೆಯನ್ನು ಕಾಡಿ ಬೇಡಿ ಸ್ಥನ ಪಾನ ಮಾಡುತ್ತಿದ್ದನು. ಯಶೋಧೆಯು ಕೃಷ್ಣನ ಮುಖದಲ್ಲಿ ಹರಿಯ ಕಸ್ತೂರಿಯ ತಿಲಕದಂತಿರುವ ವಿಶಿಷ್ಟಜಾತಿಯ ಸುಗಂಧದ ಬೊಟ್ಟನಿಡುತ್ತಿದ್ದಳು. ಕಂಸನನ್ನು ಹಿಡಿದು ಕಟ್ಟಿ ಮೈಯೋಡೆವಂತೆ ಗುದ್ದಿ ಗುದ್ದಿ ಒದ್ದೊದ್ದು ಕೊಲ್ಲಬೇಕೆಂಬ ತವಕವನ್ನು ತೋರಿಸುವಂತೆ ಕೃಷ್ಣನ ಹಿಡಿಮುಚ್ಚಿದ ಕೈಗಳು ಅತ್ತಿತ್ತ ಒದೆದಾಡುವ ಕಾಲುಗಳೂ ಇರತ್ತಿದ್ದವು ಅರಗಿಣಿಯನ್ನು ಮಾಣಿಕ್ಯದ ಪಂಜರದಲಿ ಇರಿಸುವಹಾಗೆ ಮರಕತ ವರ್ಣನಾದ ಕೃಷ್ಣನನ್ನು ಮಣಿಯತೊಟ್ಟಿಲಲ್ಲಿ ಮಲಗಿಸಿ ಯಶೋಧೆ ಹಿಗ್ಗಿ ನಲಿದು ಜೋಗುಳವನ್ನು ಹಾಡುತ್ತಿದ್ದಳು. ಅಳುವಕಂದನನ್ನು ಸಂತೈಸಿ ಲಲ್ಲೈಸಿ ತೊಟ್ಟಿಲು ಹಿಡಿದು ತೋಗುತ್ತಿದ್ದಳು . ಕೃಷ್ಣನ ಎಳವೆಯ ಮುದ್ದೂ ರೂಪವೂ ಗೋಪಿಯರ ಮನಸ್ಸಿಗೆ ಅತ್ಯಂತ ಆಕರ್ಷಣೀಯವಾಗಲೂ ಅಲ್ಲಿ ಮನ್ಮಥನೂ ಬೆಳೆದಂತೆ ಬೆಳೆದು ಗೋಪಿಯರ ತೋಳಮೇಲೆಯೂ ತೊಟ್ಟಿಲೊಳಗೂ ವೃಧ್ದಿಗೊಂಡನು. ವಸವೆಂಡರ ನೈದಿಲ ಕಡೆಗಣ್ಣ ನೋಟದಲ್ಲಿ

ಹೊರಳಿಸಿ ತೆಗೆದಂತೆ (ನವಯುವತಿಯರನ್ನು ತನ್ನತ್ತ ಆಕರ್ಷಿಸುವ ಚಲುವನಾಗಿ) ಚಿಣ್ಣನಾದ ಕೃಷ್ಣನು ನೀಲವರ್ಣನಾಗಿದ್ದನು. ಸೈಶವದಲ್ಲಿಯೆ ಯುವತಿಯರನ್ನೂ ಕೇಶವನು ವಲಿಸಿದನು, ಮರುಳಮಾಡಿದನು.

ಮತ್ತೆ ಇತ್ತ ಮಧುರಾಪುರದಲ್ಲಿ ಮೆಲಿಂದಮೇಲೆ ಅಪಶಕುನಗಳು ಕಾಣಿಸಿಕೊಂಡವು. ಹಗಲಲ್ಲಿ ಉಲ್ಕಾಪಾತವಾಯಿತು ಮರಗಳು ಒರಲಿದುವು ಬೆಟ್ಟಗಳು ನಿದ್ದು ಹಾಳಾದವು. ದಿಕ್ಕುಗಳು ಹೊಗೆಯಿಟ್ಟವು ಭೂಮಿಗುಡುಗಿತು. ಹೊತ್ತಿಸಿದ ಬೆಂಕಿ ತಟ್ಟನೆ ಬೂದಿಯಯಿತು. ರಾತ್ರಿಯಲ್ಲಿ ಮರುಳುಗಳು ಎದ್ದು ಅರಚಿದುವು. ದೇವಪ್ರತಿಮೆಗಳು ಒಂದೇ ಸಮನೆ ಕಣ್ಣೀರು ಕರೆದುವು. ಕಂಸನ ಉಗ್ರಾಸಿಯು ಉಡಿದುಬಿದ್ದಿತು. ಅರಮನೆಸುಟ್ಟಿತು. ಬೆಳ್ಗೊಡೆ ಉರಿಯುತು. ಕುದುರೆ ಸತ್ತಿತು.ಆನೆ ಬಿದ್ದಿತು , ಸಿಂಹಾಸನ ಉರುಳಿತು . ಆಲನ ಸ್ಥಂಭವು ಒಂದು ಪಕ್ಕಕ್ಕೆ ಬಿದ್ದು ಹೋಯಿತು. ನಿಧಿಯೆಲ್ಲ ಸುರುದು ಚೆಲ್ಲಿಹೋಯಿತು .ಕಂಸನು ಹಾಕಿಕೊಂಡು ಉಣ್ಣುವ ತಟ್ಟೆ ಪಕ್ಕಕ್ಕೆ ಉರುಳಿ ಹೋಯಿತು. ಮಂಚವು ಮುರಿದು ಬಿತ್ತು.ಸೌಧವೂ ತೀವ್ರವಾಗಿ ಕಂಪಿಸಿತು.ಗ್ರಹದೇವತೆಗಳು ಅತ್ತುವು, ಅವುಗಳ ಕಿವಿಯೋಲೆಗಳು ಮುತ್ತುವೂ ಅವುಗಳಿಗೆ ಇದಕ್ಕಿಂದತೆ ಕಣ್ಣೀರು ಸುರಿದುವು . ಜೀವಂಜಸೆಯೂ ಕಣ್ಣೂಮುಚ್ಚುತಲೂ ಕೆಟ್ಟಕನಸೂಗಳೇ ಕಾಣಿಸಿಕೊಂಡವು ಹಾಗೇಯೆ ಕಂಸನೂ ಹೇಳುವಂತವೂ ಅಲ್ಲದ, ಹಾಗೆಂದು ಮನಸ್ಸಿನಲ್ಲಿಯೇ ಅಡಗಿಸಿಕೊಳ್ಳಲು ಬಾರದ ಕೆದಕಿ ಕೇಳಿದವರು ಯಾರೂ ಕೇಳಿ ಬದುಕುವ ಹಾಗಿಲ್ಲದ, ಕಾಣುತ್ತಿದ್ದ ಹಾಗೆಯೇ ಇನ್ನೂ ಬೆಳೆಯುತ್ತ ಹೋದ ಹೊಲ್ಲ ಗನಸುಗಳಾನ್ನು ಕಂಡು ಹೆದರಿದನು, ವ್ಯಥೆಗೊಂಡನು.

ಕಂಸನೂ ಸ್ವಪ್ನಾರ್ಥಗಳನ್ನು ತಿಳಿಯುಲು ವರುಣನೆಂಬ ನೈಮಿತ್ತಕನನ್ನು ಕುರಿತು ಪ್ರಶ್ನಿಸಿದನು. ಆತನು ಕಂಸನ ಮಾತುಗಳು ಪೂರ್ತಿಯಾಗುವಮೊದಲೇ ಕಂಬನಿದುಂಬಿದನು. ದೇವಕಿಯ ಮಾಗನಿಬ್ಬನು ಹೊರಗೆಲ್ಲೊ ಉಳಿದು ಕೊಂಡು ಬೆಳೆಯುತಿದ್ದಾನೆ. ಎಂದು ಸ್ಪಷ್ಟಮಾಡಿದನು. ಕಂಸನಿಗೆ ಈ ಸುದ್ದಿ ಹೇಳಿದ್ದು ಅವನ ಎದೆಯಲ್ಲಿ ಹೊಗೆಯಲ್ಲಿ ಬಿತ್ತಿದಂತಾಯಿತು ! ಕಂಸನು ಹೊಡೆತ ತಿಂದಂತೆ ಚಕಿತಗೊಂಡು ತನ್ನಲ್ಲಿಯೇ ಹೀಗೆ ಚಿಂತಿಸಿದನು "ವಿಧಿ ಹಗೆಯಲಿ ಬರೆದ ಬರೆಹವೂ ಪರಮ ತಪೋಧನದ ವಾಕ್ಯವು ತಪ್ಪುವುದಿಲ್ಲ ಲೋಕದಲ್ಲಿ ದೇವನಾಗಿರಲಿ ದೈತ್ಯನಾಗಿರಲಿ, ಯಾರಿಗೆ ಆಗಿರಲಿ

ಮತ್ತೇನನ್ನಾದರೂ ನಿವಾರಿಸಿ ತಪ್ಪಿಸಿಕೊಳ್ಳುವ ಉಪಾಯಗಳುಂಟು ; ಆದರೆ ಮೃತ್ಯುವನ್ನು ತಪ್ಪಿಸುವ ಉಪಾಯ ಯಾವುದೂ ಇಲ್ಲ . ಆಶೌಚವನ್ನು ಗೋವಧೆಯನ್ನು ಬೇಕಾದರೆ (ಪ್ರಾಯಶ್ಚಿತಾದಿಗಳಿಂದ) ಕಳೆದು ಕೊಳ್ಳಬಹುದು ಆದರೆ ಪಾಪವೂ ಹಿಸುಣತೆಯೂ ನಮ್ಮನ್ನು ಬಿಡುವುದಿಲ್ಲ ಏತರಿಂದಲೂ ಅವುಗಳನ್ನು ನಾವೂ ಕಳೆದುಕೊಳ್ಳಲಾಗದು. ಹೀಗೆ ನೊಂದುಕೊಂಡು ಮಲಗಿರಬೇಕಾದರೆ ಅವನಿಗೆ ಪೂರ್ವಭವದ ಸಹಚರಿಯರಾಗಿದ್ದ ಎಂಟುಮಂದಿ ದೇವತೆಯರು ಬೇರೆಬೇರೆಯಾಗಿ ಕಾಣಿಸಿಕೊಂಡು ತಾವು ಸಹಾಯಕರಾಗಲೂ ಸಿದ್ದವೆಂದು ದರ್ಪದಿಂದ ತಿಳಿಸಿದರು. ಪರಮೋತ್ಸಾಹದಿಂದ ಮಸಗಿ " ರಾಜಾವಂತಸನಾದ ಕಂಸನೇ , ನಿನಗಾಗಿ ಯಾರನ್ನೂ ನಾನು ನೀವಾರಿಸಲಿ? ಯಾರನ್ನೂ ನಿನಗೆ ಎರಗಿಸಲಿ? ಯಾರನ್ನು ಕೊಂದು ಮತ್ತಾರನ್ನು ರಕ್ಷಿಸಲಿ ಬೇರುಸಹಿತವಾಗಿ ಯಾರನ್ನು ಕಿತ್ತೊಗೆಯಲಿ? ಯಾರನ್ನು ಕಿತ್ತು ನುಂಗಿ ನೊಣೆಯಲಿ? ಯಾರನು ತಿಂದು ತೀರಿಸಲಿ ಹೋಗಲಿ? ಮೇಲೆಬಿದ್ದು ಯಾರನ್ನೂ ಹೊಡೆದಪ್ಪಳಿಸಿ ಅಬ್ಬರಿಸಲಿ ? ಯಾರನ್ನು ಹಿಡಿದು ಹೋಳಲಿ? ಯಾರನ್ನು ನಾರು ಸೀಳಿವಂತೆ ಸೀಳಲಿ ? ಈಗಲೇ ಅಪ್ಪಣೆ ಮಾಡು, ಮಾಡು. ನೀನು ಕೂಡಕಳವಳ ಪಡುವಷ್ಟು ಕಷ್ಟವಾದೇನುಂಟು? ಎಂದು ಅಬ್ಬರಿಸಿದುವು. ಆಗ ಕಂಸನು ದೇವಕಿಯ ಮಗನೊಬ್ಬನು ಎಲ್ಲಿದ್ದಾನೆಂಬುದನ್ನು ಭೆದಿಸಿ , ಅವನನ್ನು ಕೊಂದು ಬಿಡಿ. ಎಂದನು.

ಆ ದೇವತೆಗಳು ಶ್ರೀಕೃಷ್ಣನಿದ್ದ ಬಗೆಯನ್ನು ವಿಭಂಗಜ್ಞಾನದಿಂದ ತಿಳಿದು ಅವನ ವಿನಾಶಕ್ಕೆ ಪ್ರತ್ಯೇಕವಾಗಿ ಪ್ರಯತ್ನ ಮಾಡಿದರು. ರಾಕ್ಷಸಪ್ರಕೃತಿಯ ಪೂತನಿಯೆಂಬ ದೇವತೆಯು ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ನಂದಗೋಪಿಯು ನೀರನ್ನು ತರಲುಃ ಹೊರಗೆ ಹೋಗಿರಬೇಕಾದರೆ ಅವಳ ಕಣ್ಮರೆಯಲ್ಲಿ ತನೇ ಅವಳ ಹಾಗೆ ವೇಷಾಂತರಗೊಂಡು ಕೃಷ್ಣನ ತೊಟ್ಟಿಲ ಬಳಿಗೆ ಬಂದಳು. ಆ ಪೂತನಿಯು ಒಳಕ್ಕೆ ಸೇರಿಹೋದ ಹಣೆಯ ಪೆರೆನೊಸಲಾಯಿತು. ಅವಳ ಉದ್ದವಾದ ಮೈಕಟ್ಟು ಚೆಲುವಾದ ನಿಲವಿನ ಮೈಕಟ್ಟಾಯಿತು. ಒಪ್ಪುದಲೆ ನಿರಿದಲೆಯಯಿತು . ದುಷ್ಟೋದ್ಯೋಗನಿರಂತರವಾಗಿದ್ದ ಹಿಲ್ಲತೋಳು ಮಮತೆಯನಲ್ಲ ತೋಳಾಯಿತು. ಬಿಟ್ಟ ಕಣ್ಣುಗಳೇ ತುರುಗವೆಯ ಕಣ್ಣುಗಳಾದವು. ಪಳ್ವಸಿರು ತೆಳ್ವಸಿರಾಯಿತು. ಬಿದ್ದ ಮೊಲೆಯೇ ನೆಲೆಮೊಲೆಯಾಯಿತು. ಹೀಗೆ ಗೋಪಿ (ಯಶೋದೆ)ಯಾಗಿ ರೂಪಾಂತರಗೊಂಡ ಪೂತನಿ ಬೇಗಬಂದ ಕೃತದಿಂದ ನೀರನ

ಪಾತ್ರೆಯನ್ನಿಳಿಸಿ, 'ನನೆಂಥ ಮಾಯವಿನಿ, ಮಗುವನ್ನು ಪೂತನಿ ಬೇಗಬಂದು ಕೃತದಿಂದ ನೀರಿನ ಪಾತ್ರೆಯನ್ನಿಳಿಸಿ 'ನಾನೆಂಥ ಮಾಯಾವಿನಿ, ಮಗುವನ್ನು ಎತ್ತಿ ಕೊಳ್ಳುವರಿಲ್ಲದೆ, ಎಷ್ಟು ಹೊತ್ತು ಮಾಡಿ ಬಂದೆ ! ನನ್ನ ಮುದ್ದುಕಂದನು ಎಷ್ಟು ಹಸಿದನೋ ಏನೋ ಬಾಬಾ ಎಂದು ಅಳುತ್ತಿದ್ದ ಕೃಷ್ಣನನ್ನು, ಹೇಳುವ ಕೇಳುವರಿಲ್ಲ ತಬ್ಬಲಿಮಗುವನ್ನು ಎತ್ತಿಕೊಳ್ಳುವಂತೆ ಎತ್ತಿಕೊಂಡಳು. ಎತ್ತಿಕೊಂಡು ಕೊಲ್ಲುವ ಬುದ್ಧಿಯಿಂದ ತೆರೆಳಿದ ಆ ಪೂತನಿಯು ಮೊಲೆಯುಡಿಸುವ ನೆಪದಲ್ಲಿ ನಂಜೂಡಿಸಿದಳು. ಆದರೆ ಆ ನಂಜಿನಂತಹ ನೀಲಾಂಜನವರ್ಣನಾದ ಶ್ರೀಕೃಷ್ಣನು ಹಾಗೆ ಊಡಿಸುವಷ್ಟರಲ್ಲಿಯೇ ಕನ್ನೆತ್ತರನ್ನು ಜಿಗುಣೆಯು ಹೀರಿಹಾಕುವಂತೆ ಆ ನಂಜೂಡಿದ ಮೊಲೆಗಳನ್ನು ಹೀರಿಹಾಕಿದಾನು. ಅವಳು ಇದರಿಂದಾಗಿ ಹಾಹಾಕಾರಮಾಡುತ್ತ ಹುಯ್ಯಲಿಡುವಂತೆ ಬಾಯಿಬಾಯಿ ಬಿಡುವಂತೆ ಮಾಡಿ ಕರಡಿಯ ಮರಿಯಂತೆ ಅಷ್ಟಕ್ಕೆ ಬಿಡದೆ, ಕಾಲಸರ್ಪವು ಹೀರಿಕೊಲ್ಲುವಂತೆ ಪೂತನಿಯು ಪ್ರಾಣವನ್ನೇ ಹೀರಿ ಅವಳನ್ನು ಕೊಂದುಹಾಕಿಬಿಟ್ಟನು.

ಇನ್ನೊಬ್ಬ ಅತಿಪ್ರಚಂಡೆಯಥ ಚಾಂಡಾಳಪ್ರಕೃತಿಯ ದೇವತೆ ಕಾಗೆಯ ಆಕಾರವನ್ನು ತಳೆದು ಕೃಷ್ಣನ ಮಣೆದೊಟ್ಟಿಲ ಬಳಿಗೆ ಹಾರಿ ಬಂದು ಒಂಟಿಯಾಗಿದ್ದ ಅವನ ಕಣ್ಣನ್ನು ಕುಕ್ಕಲು ಮೇಲೆರಗಿತು. ಆ ಕ್ಷಣವೇ ಕೃಷ್ಣನು, ಎಡಗೈಯಲ್ಲಿ ಆ ಕಾಗೆಯ ಕೊಕ್ಕನ್ನು ಗಟ್ಟಿಯಾಗಿ ಹಿಡಿದೊತ್ತಿ ಮುರಿದುಬಿಟ್ಟನು. ಮತ್ತೆ ಕಾಗೆಯು ಕೃಷ್ಣನ ಪಕ್ಕೆಗಳು ಮುರಿಯಿವಂತೆ ತನ್ನ ಮುಂಗಾಲ್ಬೆರಳಿನ ಭಾಗದ ರೆಕ್ಕೆಗಳಿಂದ ಬಿಡಿಯಲು , ಕಣ್ಣೊಡೆಯುವಂತೆ ಕೊಕಿನಂತಹ ಕೂರುಗುರಿಂದಲೇ ಕುತ್ತಿ ಮೇಲೆರಗಲು ಕೃಷ್ಣನು ಆ ಹಂಗಾಗೆಯ ಒಡಲು ಒಂದು ಮಾಂಸದ ಮುದ್ದೆಯಾಗುವಂತೆ ಬಲವಾಗಿ ಬಿಡಿದನು. ಆ ಕಾಗೆಯು ಮೇಲೆ ಒದರುತ್ತಾ ಕೆಳಕ್ಕೆ ಬೀಳುವಷ್ಟರಲಿ, ಗಿಡುಗನು ಬೆನ್ನಟ್ಟಿ ಹಿಡಿದಂತೆ ಅದನ್ನು ಬಲಗೈಯಿಂದ ಒತ್ತಿ ಹಿಡಿದು ಕೊಂ,ದುಹಲಿಬಿಟ್ಟನು. ಹೀಗೆ ಅ ಕಾಗೆ ಯಮನ ಊಟಕ್ಕೆ ಉಣಿಸಾಗಲು ಮುಂದೆ ಕೆಲವು ದಿವಸ ಬಾಧೆಯಿಲ್ಲದೆ ಸಂದಿತು.

ಕೃಷ್ಣನು ಆನೆಯ ಮರಿಯಂತೆ ಅಂಬೆಗಲಿಟ್ಟು ನಡೆಯತೊಡಗಿದನು. ಅವನ ಮುಂದಲೆಯ ನಿಡುಜಡೆ ಅನೆಯ ಸೊಂಡಿಲಂತೆ ನೆಲವನ್ನು ತಾಕುತ್ತಿತ್ತು. ಮೈಬಣ್ಣ ಆನೆಯ ಮೈಬಣ್ಣದಂತೆ ಕಪ್ಪು

ಮಿರುಗುತ್ತಿತ್ತು. ಮಂದ ಹಾಸಬಿಸವಲ್ಲರಿಯ ಮೊಳಕೆಗಳಿವು ಎನ್ನುವಂತೆ ಅವನಿಗೆ ಹೊಳಪಿನ ಹಲುಗಳು ಬಂದವು.

ಈವಯಸ್ಸಿನಲ್ಲಿ ಕಂಸನಿಗೆ ಅಶ್ವಾಸನವಿತ್ತಂತೆ ಇನ್ನೊಬ್ಬ ದೇವತೆ ಶಕಟರೂಪನ್ನಾಂತು 'ಲೋಕಸರದ ಮೇಲೆ ಬಂಡಿ ಹಾರಿದಂತೆ ಮಾಡುತ್ತೇನೆ ಎಂದು ಅಂಗಳದಲ್ಲಿ ಆದರೆ ಕೃಷ್ಣನು ಬಂಡಿಯೊಳ್ಕಾಲ್ಗೋವ ಗೋವವೆನಿಸಿ ಗಣಕೆಯ ಬಂಡಿಯನ್ನೊದೆಯುವ ರೀತಿಯಲ್ಲಿ ಗಾಡಿಯ ಭಾಗಗಳೆಲ್ಲ ಒಂದಕ್ಕೊಂದು ಒತ್ತಿಹೋಗಿ ಬಿಡಿಸಲು ಬಾರದಂತೆ ಅದನ್ನು ಬಲವಾಗಿ ಒದ್ದುಬಿಟ್ಟನು.

ಹೀಗೆ ಈ ರಥವೂ ಕಂಸನ ಮನೋರಥವೂ ಭಗ್ನವಾಗಲು, ಮತ್ತೊಬ್ಬ ದೇವತೆ ಕುದುರೆಯಾಗಿ ಕಾಣಿಸಿಕೊಂಡು, ಕೇಶವನನ್ನು ಕಾಣುತ್ತಲೇ ಕೆನಿದು ಕಿವಿಬಾಯಿಗಳನ್ನು ತೆರೆದುಕೊಂಡು ಬೆದರದೆ ಬಂದು ಅವನ ಕಯ್ಯ್ಯ್ ರೋಷಾವೇಶದಿಂದ ಬಲವಾಗಿ ಕಚ್ಚಿ ಬಿಟ್ಟಿತು. ಕೊಬ್ಬಿದ ಕುರಿಯ ಕೊಯ್ದಾಗಲೂ ಮಸಗಿ ಮೇಯುವುದನ್ನು ಹೇಗೆ ಬಿಡುವುದಿಲ್ಲವೋ ಹಾಗೆ ಕುದುರೆಯು ಕಚ್ಚಿ ಗಾಯವಾದರೂ ನೋಯದೆ ಕೃಷ್ಣನು ತಾನೂ ಅದರ ಮೇಲೇರಿ ಹೋಗಿ ಅದನ್ನು ತಳ್ಳಿಹಾಕಿ ಕಯ್ಯಿಂದ ಬಲವಾಗಿ ತಲೆಯ ಭಾಗದಲ್ಲಿ ಕುತ್ತಿದನು. ಆ ಕುತ್ತಿದ ಕೈ ಕುದುರೆಯ ನೆತ್ತಿಯನ್ನು ಭೇದಿಸಿಕೊಂಡು ಹೊರಗೆ ಮೂಡಿತು; ಕುದುರೆಗೆ ಮತ್ತೂ ಒಂದು ಕಿವಿ ಮೂಡಿದಂತಾಯಿತು! ಒಂದು ಗೂಟದ ಬಾಯಲ್ಲಿ ಇನ್ನೊಂದು ಗೂಟವನ್ನು ಪೆಟ್ಟದಂತೆ ಇದ್ದ ತನ್ನ ಕೈಯನ್ನು ಈಚೆಗೆಳೆದುಕೊಂಡು, ಕೊಂಡದ ಕಿಚ್ಚಿನಂತಿದ್ದ ಕೋಪಾಗ್ನಿಯಿಂದ ಆ ದುಷ್ಟಾಶ್ವವನ್ನು ಹೊಡೆದುಕೊಂಡು ಹೀಗೆ ಮಾಧವನು ಅದೊಂದು ರೀತಿಯಲ್ಲಿ ಅಶ್ವಮೇಧವನ್ನು ಮಾಡಿ ಮೆರೆದನು.

ಕೃಷ್ಣನ ಬಾಲಲೀಲೆಗಳು ಅತಿಶಯ ಆಕರ್ಷಣೀಯವಾಗಿದ್ದವು. ತುರುಹಟ್ಟಿಯ ಹಾಲು ಮೊಸ್ರು ಬೆಣ್ಣೆಗಳನು ಸೂರೆಗೊಂಡು ಸಹಪಾಂಸುಕ್ರೀಡಿತರಾದ ಗೋಪಕುಮಾರರಿಗೆಲ್ಲ ದಕ್ಷಿಣೆ ಕೊಡುವಂತೆ ಕೊಟ್ಟು ನೊಡಿಕೊಳ್ಳಿತ್ತಿದ್ದನು. ಗೋಪಿಯರು ಕೃಷ್ಣನ ತುಂಟಾಟಗಳನ್ನು ಆಗಾಗ್ಗೆ ಯಶೋದೆಯ ಬಳಿಗೆ ಬಂದುಬಂದು ದೂರುತ್ತಿದ್ದರು. ಅವರ ದೂರಗಳು ಹೀಗೆ ಬಗೆಬಗೆಯಗಿರುತ್ತಿದ್ದವು ;ಆಡುವ ಮಕ್ಕಳನ್ನು ಜತೆಗೂಡಿಸಿಕೊಂಡು ಅವರಿಗೆ ಮನೆಯ ಒಳಗಿದ್ದ ಬೆಣ್ಣೆಯನ್ನು (ಕದ್ದು) ಊಡಿಸಿಬಿಟ್ಟು ಮತ್ತೆ ತನಗೇನೂ ತಿಳಿಯದೆಂಬಂತೆ ಬೆಣ್ಣೆಗಾಗಿ ನಮ್ಮನ್ನು ಬೇಡುತ್ತಾನೆ ಯಶೋದೆ ಹೀಗೆ ಮಾಡಬೇಡ

ಎಂದು ನಿನ್ನ  ಮಗನನ್ನು ನೀನು ಕೆರೆಯಬಾರದೆ? “ಕಾಸಿಟ್ಟ ಹಾಲು ಉಳಿಯುವಂತಿಲ್ಲ ನೆಲುವಿನ ಮೇಲಿಟ್ಟ ಹಾಲು ಉಳಿಯುವಂತಿಲ್ಲ; ಇಕೋ ಕರೆಯುತ್ತಿಟುವ ಈ ಪಾತ್ರೆಯ ಹಾಲೌ ಮೊದಲೇ ಉಳಿಯುವಂತಿಲ್ಲ; ಇಕೋ ಕರೆಯುತ್ತಿರುವ ಈ ಪಾತ್ರೆಯ ಹಾಕು ಮೊದಲೇ ಉಳಿಯುವಂತಿಲ್ಲ; ಯಶೋದೆ, ಕರೆದು ನಿನ್ನ ಮಗನಿಗೆ ಕೊಲೆಯೂಡಿಸಬಾರದೇ? “ ಹಾಲು ಕರೆಯಲು  ಸ್ವಲ್ಪವೂ ಕಾಇಯಲ್ಲಾಗದಾಗ ತೊಡೆಯಿಂದ ಆಕಳ ಕಾಲನ್ನು ಇರುಕಿಕೊಂಡು ಕರೆಯುವ ಹಾಗೆ ಕೃಷ್ಣನು ತನೂ ಕರೆದು ಎಲ್ಲರೂ ಬಾಯೊಡ್ಡಿ ಕುಡಿಯುವಂತೆ ಮಾಡುತ್ತಾನೆ, ಯಶೋದೆ ನಿನ್ನ ಮಗನನ್ನು ಕರೆಯಬಾರದೆ?

ಹೀಗೆ ದೂರವ ಗೋಪಿಯರ ಕತೆಗಳನ್ನೆಲ್ಲಕೇಲಿ ಯಶೋದಯ ‘ಯಾರಿಗೆ ಹುಟ್ಟಿ ಯಾರಿಗೆ ಮುದ್ದಾದನು.ಎಂದು ಮನಸ್ಸಿನಲ್ಲಿಯೇ ಸಂತೋಷಿಸಿ, ಇವನ ಚೆಷ್ಟೇಗಳನ್ನು ತಡೆದುಕೊಳ್ಳಲಾಗದೆ ಗೋಪಿಯರು ಇವನನ್ನು ಹಿಡಿದು ರಕ್ಕಸಹನಕ್ಕೆ  ಇಕ್ಕುವರಲ್ಲ್  ಎಂದು ಚಿಂತಿಸಿ  ಬಳಿಗೆ ಕೃಷ್ಣನನ್ನು ಕರೆದು ಮೊಸರು ಕಡೆಯುವ ಕಂಭಾದಲಿ ಕಟ್ಟಿಹಾಕಿದಳು. ಆದರೆ ಕೃಷ್ಣನು ಬಲವಾದ ಕಂಭವನ್ನು ಅಂಜನಗಜವು ಆಲಾನಸ್ತಂಭವನ್ನು ಮುರಿದಿಕ್ಕುವಂತೆ ಮುರಿದುಹಾಕಿ ಅಲ್ಲಿಂದ ಹೊರರುಹೋಗುತ್ತಿದ್ದನು. ಅಗ ಯಶೋದೆ ಅದನ್ನು  ಕಂಡು ಅವನನ್ನು ಗದರಿಸಿ ಬೆದರಿಸಿ ಮತ್ತೆ ಹಗ್ಗ್ಗದಿಂದಗಟ್ಟಿಯಾಗಿ ಬಿಗಿದು ಒರಳಿಗೆ ಕಟ್ಟಿಹಾಕಿದಳು. ಲೊಟ್ಟಿಯ ಬಾಗದಲ್ಲಿದ್ದ ಒರಳು ಶ್ರೀಕೃಷ್ಣನು ಜಗ್ಗಿ ಎಳೆದಾಗ ಸೊಂಟದ  ಭಾಗಕ್ಕೆ ಇಳಿದುಹೋಗಿ ಆ ದಾಮೋದರ ದೇವನಿಗೆ ಉಡೆವಣಿಯಾಯಿತು. ಆ ಒರಗಲ್ಲಿನ ಭಾರ ಇಷ್ಟಕ್ಕೆ ಬಂತು ‘ಆನೆಯ ನೆತ್ತುವಂಗಾಡು ಚಿಕ್ಕಡೆಂಬಂತೆ ಗೋವರ್ಧನಾಚಲವನ್ನೇ ಎತ್ತಿದವನಿಗೆ ಆ ಇರಳೆಂಬುದು ಯಾವ ಲೆಕ್ಕ? ಎಂದು ಬಲ್ಲವರೆಲ್ಲ ಒಕ್ಕೊರಲಿಂದ ಹೊಗಳುತ್ತಿರಲು ಆ ದೊಡ್ಡ  ಒರಳನ್ನೆಳೆದುಕೊಂಡು ಕೃಷ್ಣನು ಓಡಾಡಿದನು. ಮತ್ತೊಮ್ಮೆ  ಮರುಳ್ದೇವತೆಗಳು ಮುತ್ತಿಯಮರಗಳಾಗಿ, ಆಡುತ್ತಿದ್ದ ಕೃಷ್ಣನನ್ನು ನಡೆದು ಇರುಕಿಸಿ ಬಿಟ್ಟಾಗ , ಅಮಿತಬಲನಾದ ಆ ಕೃಷ್ಣನು ಆಯೆರಡು ತರುಕಾಂಡಗಳನ್ನೂ ಪಕ್ಕಕ್ಕೊತ್ತಿ ಕಿತ್ತೆಸೆದು ಬಿಟ್ಟನು. ಇಂದು ಪುರುಷೋತ್ತಮನು ಕಂಸನ ಭುಜಯುಗಳವನ್ನು ಮುಂದೆ ನಿರ್ಲಕ್ಷ್ಯವಾಗಿ ಕಿತ್ತೆಸೆಯುವುದನ್ನು ಸೂಚಿಸುವಂತಾಯಿತು!

ಕೃಷ್ಣನ ಸಾಮರ್ಥ್ಯಾತಿಶಯ ಇನ್ನೂ ಮಿಗಿಲಾಗಿದ್ದಿತು; ಅವನು ಅ ತುರುಹಟ್ಟಿಯ ಮಕ್ಕಳನೆಲ್ಲ ತುಂಬ ಗೋಳುಗುಟ್ಟಿಸುತ್ತಿದ್ದನು. ಕತ್ತು ತಿರಿಚಿ ಬೋಳುದಲೆಗೆ ಬಿಡಿಯುತ್ತಿದ್ದನು. ಮುಂಗೈಗಳಿಂದ ಮೂತಿಯ ಮೇಲೆ ಬಾರಿಸುತ್ತಿದ್ದನು. ತಳ್ಳಿಹಾಕಿ ಕಿವಿಯನ್ನು ಹಿಂಡುತ್ತಿದ್ದನು. ಲಲ್ಲೆ ಮಾಡುತ್ತಾ ಅಳ್ಳೆಯನ್ನೂ ಗಲ್ಲವನ್ನೂ ಮಿಡಿಯುತ್ತಿದ್ದನು. ಮಿಂಡರ(ಶೂರರ) ಮೀಸೆಯನ್ನು ಎಳೆದು ಮುಗೆತ್ತಿ ಅಣಕಿಸುತ್ತಿದ್ದನು. ಆ ಕಾಳಾಹಿಕೋಳಾಹಳಾನು ಎಂಥ ದುಷ್ಟನೆಂದು  ಹೇಳೋಣ ! ಮಕ್ಕಳನ್ನು ಬಡಿಯುವನು, ಗುದ್ದುವನು, ತಿಕ್ಕುವನು, ಕೆಡಹುವನು,  ಮೇಲೆ ನುಗ್ಗಿ ಅದುಮುವನು, ಕುತ್ತುವನ್ನು, ಗದರಿಸುವನು, ಅಡ್ಡಗಟ್ಟುವನು, ಅಡ್ಡಗಟ್ಟುವನು, ಬೆನ್ನಟ್ಟುವನು, ಮುಟ್ಟುವನು ಹಿಡಿಯುವು .ಮಕ್ಕಳಾಟದಲ್ಲಿ ಕೇಶವನು ಎಂಥತುಂಟನೆಂಬುದನ್ನು ಹೇಳುತ್ತಿರದು!

ಹೀಗೆ ಆ ತುರುಹುಟ್ಟ್ ಇಯ ಚಿಕ್ಕ  ಮಕ್ಕಳನ್ನೂ ಬೆಳೆದ ಮಕ್ಕಳನ್ನೂ ಎಲ್ಲರ ತಲೆಗೂ ಒಂದೇ ಮಂತ್ರವಾಗಿ ಹುಯ್ಯಲಿಡಿಸುವ ಕೃಷ್ಣನನ್ನು ನೋಡಿ ಗೊಲ್ಲತಿಯರೆಲ್ಲ ಅಳುತ್ತ ಕರಿಯುತ್ತ ಬಂದು ತಮ್ಮ ಮಕ್ಕಳ ತರೆಚಿದ ಮೈಯನ್ನೂ ತಿರಿಚಿದ ಕೈಯನ್ನೂ ಒಡೆದು ಮೂಗನ್ನೂ ಅಣೆದ ನೆತ್ತಿಯನ್ನೂ ಬೋರುಬಂದ ಮುಂಡೆಯನ್ನೂ ಯಶೋದೆಗೆ ತೋರಿಸಿ ತೋರಿಸಿಸ್ ದೂರು ಹೇಳಿದರು ಯಶೊದೆಯು ಏನು ಹೇಳಲೂ ತೋರದೆ, “ ನಾನು ಏನು ಮಾಡಲಿ ಕೊಂದರೂ ನಾನು ಹೇಳಿದಹಾಗೆ ಅವನು ಕೇಳುವುದಿಲ್ಲ. ನನ್ನಿಂದ ಅವನನ್ನು ಹಿಡಿಯುವುದೌ ಸಾಧ್ಯವಿಲ್ಲ ( ನನ್ನ ಬಾಯಿಗಳಿಗೆ ಅವನು ಸಿಕ್ಕುವವನಲ್ಲ) ಅವನು ಕಿಚ್ಚಿಲ್ಲದೆ ಉರಿಯುವಂಥ ಅಸಾಧ್ಯನು. (ಅವನ ಕಡುಗೋರಲೆಯನ್ನು ತಾಳಲಾರದೆ ನಾವೇ ಪಾಡು ಪಡಬೇಕಾಗುವುದು, ನೊಂದು ಬೆಂದುಹೋಗಬೇಕಾಗುವುದು) . ನನಗೊಂದು ತಿಳಿಯದು. ನೀವು ಹೋಗಿ ಹೋಗಿ ನಿಮಗೆ ಮನಸ್ತೃಪ್ತಿಯಗುವಂತೆ ನಿಮಗಿಷ್ಟ ಬಂದದ್ದನ್ನು ಮಾಡಿಕೊಳ್ಳಿ ಬೇಕಾದರೆ ಅವನನ್ನು ಹೊಡೆಯಿರಿ ಹೀಗೆಂದಾಗ  ಗೋಪಿಯರು “ (ವಿನೋದಕ್ಕಾಗಿ ವಿಶ್ವಾಸದಿಂದಾಗಿ ) ದೂರಲೇಬೇಕೆಂದು ದೂರದೆವಲ್ಲದೆ ನಿನ್ನ (ತುಂಟ) ಮಗನನ್ನು ಸುಧಾರಿಸಲಾಗದೆಂದು, ಅವನ ಕಾಟವನ್ನು ತಡೆದುಕೊಳ್ಳಲಾಗದೆಂದು  ನಾವು ಆಕ್ಷೇಪಿಸಲು ಬಂದಿಲ್ಲ. ಇನ್ನು ನಿನ್ನ  ಮಗನ ತುಂಟಾಟವನ್ನು ಸ್ವಲ್ಪ ನೋಡು – ಎಂದು ಹೋಗಿ ತಮ್ಮ ಮಕ್ಕಾಳನ್ನು  ಹೇಗೋ ಹಾಗೆ ಭಾವಿಸಿ ಬೆತ್ತವನ್ನು

ಹಿಡಿದುಕೊಂಡು ಗೋಪಿಯರೆಲ್ಲ ಗದ್ದಲಮಾಡಿ ಮಲೆತು ಅವನ ಬೆನ್ನಟ್ಟಿದರು. ಕೃಷ್ಣನು ಕಿರುನಗೆನಗುತ್ತ ಸ್ವಲ್ಪ ದೂರಓಡಿ, ಮುಂದೆ ಓಡಲಾರದವನಂತೆ ಹಿಂದಿರುಗಿ , ಇನ್ನು ಮಕ್ಕಳ ತಂಟೆಗೆ ಬಂದರೆ ನನ್ನನ್ನು ಬಡಿಯಿರಿ ; ಈಗ ಬಿಟ್ಟು ಬಿಡಿ ಎಂದು ಹೆದರಿದಂತೆ ಮಾಡಿ ತಟ್ಟನೆ ಆ ಗೋಪಿಯರ ಕಾಲ್ವಿಡಿದ್ದೆತ್ತಿ ಕೆಡವಿ ಕಾಲು ಹಿಡಿದುಎಳಿಎಳೆದು ಚನ್ನಾಗಿ ಅಳಿಸಿಬಿಟ್ಟನು ; ಇನ್ನೊಂದು ಬಾರಿದೇವತವತಾರವಾದ ತಾಳೆಮರವು ಬೇತಾಳಾನು ಕಲ್ಲಿನಮಳೆಗೆರೆಯುವಂತೆ ಗೋಪಾಲರೆಲ್ಲರೆ ತೆಲೆಯೊಡೆದು ಹೋಗುವಂತೆ ತಾಳೆಹಣ್ಣುಗಳಾನ್ನು ಪಟಪಟನೆ ಕರೆದು ಬಿಟ್ಟಿತು. ಆಗ ಕೃಷ್ಣನು ಒಂದೆ ಹೋಡೆತದಿಂದ ಆ ತಾಳೆಯ ಮರವನ್ನು ಮುರಿದಿಕ್ಕಿದನು. ಇವನು ಮನೆಯಲ್ಲಿದ್ದರೆ ಎಲ್ಲಿಲ್ಲದ ದೂರನ್ನು ದುರ್ಯಶಾವನ್ನು ತಟುತ್ತಾನೆ ಎಂದು ನಂದಗೋಪನು ಭಾವಿಸಿ ಒಂದು ದಿನ ಒಂದು ತಕ್ಕಾ ಕಡನ್ನು ಆರಿಸಿ , ಕಡೊಡೊಯನಿಗೆ ಎರಗಿ ವಿಷಯವನ್ನು ತಿಳಿಸಿ ಕೆಲವು ಗೋವಳರನ್ನು ಉಡಿಸಿ ತಿಡಿಸಿ ಆವರೊಂದಿಗೆ ಗೋವಿಂದನನ್ನು ದನಕರುಗಳನ್ನು ಕಾಯುವಂತೆ ತಿಳಿಸಿ ವೃಂದಾರಕವನಕ್ಕೆ ( ಪಾ. ವೃಂದಾವನ) ಕಳಿಸಿಕೊಟ್ಟನು. ಅಲ್ಲಿಯೂ ಅತನ್ ಬಾಲಕ್ರೀಡೆ ಇನ್ನೊಂದು ಬಗೆಯಾಯಿತು. ಕೃಷ್ಣನು ಹಾವುಗಳಾನ್ನು ಹಗ್ಗವೆಂದು ನಿರ್ಲಕ್ಷ್ಯವಾಗಿ ಎತ್ತಿ ತರುತ್ತಿದ್ದ; ಕಾಡ ಹುಲಿಯನ್ನು ಬೆಕ್ಕಿನಂತೆ ಎತ್ತಿ ತರುತ್ತಿದ್ದ ಮಹಗಜವನ್ನು ಕೊಬ್ಬಿದ ಹಂದಿಯೆಂದು ಹಿಡಿದು ತರುತ್ತಿದ್ದ . ಸಿಂಹವನ್ನು ನಾಯೆಂದು ಕುತ್ತಿಗೆಗೆ ಉರುಲಿಕ್ಕಿ ಎಳೆದು ತರುತ್ತಿದ್ದ.

ಇನ್ನೊಂದು ದಿವಸ ಒಂದು ಘಟ್ಟನೆ ನಡೆಯಿತು ಇದ್ದಕ್ಕಿದ್ದಂತ್ತೆ ಎತ್ತಿದ ಬಾಲ ಕಿರಿಚುವ ದನಿ ಬಳುಕಿದ್ ಬೆನ್ನು ,ಬಿಟ್ಟ ರಕ್ಕಸಗಣ್ಣು, ಬಾಯಿತೆರೆದಂತೆ ತೋರುವ ಕಿವಿಗಳು ಹನುಗಳ ಹಿಂಡನ್ನು ಬೆಚ್ಚಿಸುವ ಗುದ್ದಲಿಯಂತೆ ವಿಶಾಲವೂ ದೀರ್ಘವೂ ಆದ ಹಲ್ಲುಗಾಳು ಅಗಲವಾಗಿ ತೆರೆದ ಬಾಯಿ , ಹೊಲಸುನಾರುವ ಮೈಬಣ ಇವನ್ನು ಎತ್ತಿ ಕಾಣಿಸುತ್ತ ಒಂದು ಕತ್ತೆಯು ಎಲ್ಲಿಂದಕೋ ಗಿಲ್ಲರಿದ್ದೆಡೆಗೆ ನಡೆದು ಬಂದು. ಅದು ದಾರಿಯಲ್ಲಿಬರುವಾಗ ಹೆಣ್ಣು ಕೋಳಿಗಳಾನ್ನು, ದಾರಿ ಕೆಡವುತ್ತಾಕಡವೆಗಳಾನ್ನು ಕಚ್ಚಿ ಕೆಡವುತ್ತ . ಬೆದರಿ ಓಡುತ್ತಿದ್ದ ಜನಪ್ರಾಣಿಗಳನೆರವಿಯನ್ನು ಉರುಳಿ ಬೀಳಿವಂತೆ ನುಗ್ಗಿ ಕೆಡವುತ್ತ. ತನ್ನ ಶೌರ್ಯಕ್ಕೆ ಎಂಟು ಜನ್ವನ್ನು ಬೆನ್ನಿಗೇರಿಸಿಕೊಂಡ ಕಾತ್ತೆಯಂತೆ ಬೀಗಿ ಬಿಂಕಗೊಂಡು ಬ್ರಹ್ಮನನ್ನು ಒಲಿಸಿದ ಕತ್ತೆಯಂತೆ ಯಾರನ್ನೂ ಲಕ್ಷ್ಯಮಾಡದೆ, ಇದರ ಬಾಯೊಳಾಗೆ

ತೂರಲು ಬ್ರಹ್ಮಾಂಡವು ಸಣ್ಣದೇ ಎನ್ನುವಷ್ಟು ಅಗಲಕ್ಕೆ ಬಾಯಿ ತೆರೆದು ಕೇಳಿದವರ ಎದೆ ಬಿರಿಯುವಂತೆ ಒರಲಿ ಕಿರಲಿತು. ಕೋಳಿಯ ಹೊಟ್ಟೆಯನ್ನು ಕಚ್ಚಿ ಸೆಳೆಯಲು ಬಾಯಲ್ಲಿ ಜೋಲುವ ನೇಲುವ ಕರುಳಿಂವ ಕಯ್ಯು ಕುಣಿಕೆಯನ್ನು ಕಚ್ಚಿ ಓಡುವ ಕುದುರೆಯಂತೆ ಸಿಕ್ಕದಂತೆ ಬೀದಿಯಲ್ಲಿ ನುಗ್ಗಿ , ಹುಚ್ಚು, ಹಿಡಿದಂತೆ ಉಗ್ರವಾಗಿ ಕೆರಳಿ ಗೊಲ್ಲಹಟ್ಟಿಯೆಲ್ಲವನ್ನೂ ಬಡಿದುಹಾಕಿ ಚೇದುರಿಸಿ ಕೊಲ್ಲುವಂತೆಹ ಕತ್ತೆಯ ಕೋಲಾಹಲಕ್ಕೆ ಗೋವಳರೆಲ್ಲ ಗಾವಳಿಗೊಂಡು, ಗೋವಳಿಗೋಲನ್ನೆತ್ತಿಕೊಂಡು ಹೆದರಿ ಬೆದರಿ ಒದರಲಿಟ್ಟರು ಆದರೆ ಈಅ ಸಮೂಹದಲ್ಲಿದ್ದ ಧೀರನಾದ ಕೃಷ್ಣನು ಸ್ವಲ್ಪವೂ ಭಯಪಡೆದೆ ಕತ್ತೆಥಿದಿರಾಗಿಯೇ ಬಂದನು. 'ಅಜ್ಜಿಗೆ ಬೇಕಾದ್ದು ಅವರೆಯ ಹಿಟ್ಟೇ ಎನ್ನುವಂತೆ ನನಗೆ ಬೇಕಾದ್ದು ಇವನೇ ಎಂದು ಕತ್ತೆಯು ಕೃಷ್ಣನ ಮೇಲೆ ನುಗ್ಗಿಹೋಯಿತು. ಕೃಷ್ಣನು ಕೋಡಲೇ ಹರ್ಯಕ್ಷನ ಬಾಯಂತೆ ಕತ್ತೆಯ ಬಾಯನ್ನು ತನ್ನೆರಡೂ ಕೈಗಳಿಂದ ಹಿಡಿದು ಭಯಂಕರವಾಗಿ ಎರಡು ಪಾಲಾಗಿ ಸೀಳಿ ಎರಡೂ ದಿಕ್ಕಿಗೆಸೆದು ಬಿಟ್ಟನು. ಆಗ ಕೃಷ್ಣನ ಕೈಗೋಲಿನ ಏಟಿನಿಂದ ಉದಿರಿಹೋದ ಕತ್ತೆಯ ಹಲ್ಲುಗಳು ಆ ಕತ್ತೆಯ ವೀರೋದ್ಯೋಗವನ್ನು ಕತ್ತೆಯ ಹೇರುಕಟ್ಟಿ ನೆಲವನ್ನುತ್ತು ಕೊನೆಗೆ ಕವಡೆಗಳನ್ನು ಬತ್ತಿ ಬೆಳೆಯಿಲ್ಲವ್ವಾಗುವಂತೆ ಎತ್ತಿ ತೋರಿಸುವುದಾದವು. ಮುರಾರಿಯ ವೀರವೃತ್ತಿ ಎಲ್ಲರಿಗೂ ತಿಳಿದು ಎಲ್ಲರೂ ಪರಮಶ್ಚರ್ಯಪಟ್ಟರು. ವಿಷಯತಿಳಿದು ತಂದೆ ತಾಯಿಗಳಾದ ನಂದ ಯಶೋದೆಯರೂ ಸಂತೋಷಪಟ್ಟರು. ಹೀಗೆ ಪೂತನಾದಿ ಕ್ಷುದ್ರಸ್ವಭಾವದ ವಿದ್ವೇಷ ಬುದ್ದಿಯ ವಿನಾಶಕಾರೀದೈವಗಳಾನ್ನು ಗೋಪಾಲಕೃಷ್ಣನು ಲೀಲೇಯಿಂದ ನಿಗ್ರಹಿಸಿ ಯಶೋಭಾಗಿಯಾದನು.

ಅಷ್ಟಮಾಶ್ವಾಸ

ಗಂಡಗೋಪಾಲನ ಲೀಲಾವಿಲಾಸದ ನೆಲೆಯಾಗಿದ್ದ ಗೋಕುಲಕ್ಕೆ ಹಲ್ಲು ನೀರುಗಳನ್ನು ಸಲ್ಲಿಸಿ ಬೆಚ್ಚಿ ಬೆಸಕೆಯ್ಯಲೆಂದು ಮಳೆಗಾಲವು ತಲೆಹಾಕಿತು. ಹಾಗೆ ಬಂದ ಮಳೆಗಾಲದಲ್ಲಿ ಕಂಸನ ಕಾರ್ಯಸಾಧನೆಗೆ ಭರವಸೆಗೊಟ್ಟಿದ್ದ ಅವನ ಪೂರ್ವಭವದ ಎಂಟು ಮಂದಿ ದೇವತೆಗಳೂ ಮತ್ತೆ ಉತ್ಸಾಹಿತರಾಗಿ ಕೃಷ್ಣನಿಗೆ ವಿಪತ್ತನ್ನುಂಟುಮಾಡಲು ಹವಣಿಸಿದರು. ಭೇತಾಳನ ಹೆಣದಂತೆ ಬೆನ್ನನ್ನು ಬಿಡನೆ ಸತ್ತೂ

ಸಾಯದೆ ಒಂದು ಕಡೆಗೆ ಬಂದು ಸೇರಿ " ಹರಿಯುವ ನೀರನ್ನು, ಹರಿಯುವಂತೆಯೇ ಹೊಯ್ಯಲೂ ಉರಿಯನ್ನು ಇರಿದು ಗಾಯಪಡಿಸಲೂ ಪಾದರಸವನ್ನು ಶೋಧಿಸಲೂ ನಮ್ಮನ್ನು ನೋಯಿಸಲೂ ಸಮರ್ಥನಾದವನು ಇನ್ನೂ ಹುಟ್ಟಿಬರಬೇಕಾಗಿದೆ. ಎಂದು ಒಬ್ಬೊಬ್ಬರೂ ಕೈಕೈ ಹೊಡೆದುಕೊಂಡು ಕರುಳುಕಿತ್ತು ಬರುವಂತೆ ಗಹಗಹಿಸಿ ನಕ್ಕರು" ಇನ್ನೂ ಮಂಡೆಯ ಮಾಸು ಕೂಡ ಅರದ ಈ ಕೂಸು ಪೌರುಷದಲ್ಲಿ ನಮಗೆ ಕೂಡ ಅಸಾಧ್ಯನದನಲ್ಲ! ಇವನು ಹೀಗೆಯೇ ಹೆಚ್ಚಿಕೊಂಡರೆ ಇವನನ್ನು ಹೋರಾಟದಲ್ಲಿ ತಡೆಯಲು ಆ ಈಶ್ವರನಿಗೂ ಆಗದು, ಯಮನಿಗೂ ಆಗದು ಎನ್ನುವಲ್ಲಿಗೆ ಬರುತ್ತದೆ. ಅದರೇನು ? ಇನ್ನೂ ಒಂದು ಬಾರಿ ನಮ್ಮಿಬ್ಬರಿಗೂ (ಘರ್ಷಣೆನಡೆಯಬೇಕಾದ್ದು ಇದೆ. ಮಲ್ಲನೆಂದು ತಿಳಿದು ಇವನೊಡನೆ ಮಲ್ಲರಾಗಿ ನಾವು ಹೋರಾಡಬಂದರೆ ಕೈಸಾಗದೆ ತಾನು ಧನುರ್ಧರನಂತೆ ನುಸುಳಿಕೊಂಡುಬಿಟ್ಟನು. ಈಗ ನಾವೇ ಬಿಲ್ಗಾರರಾಗಿ ಎದುರಿಸಿದರೆ ಏನು ಮಾಡುತ್ತಾನೋ ನೋಡೋಣ ಎಂದು ಹೀಗೆ ಯೋಚಿಸಿ ,ಮತ್ತೆ ಕೃಷ್ಣನ ಮೇಲೆ ಕೈ ಮಡುವ ಸಂಕಲ್ಪಮಾಡಿದರು.

ಕೃಷ್ಣನು ತುರುಗಾಯಲೆಂದು ಹೋಲದ ಕಡೆಗೆ ಹೋದಾಗ ನೋಡಿಕೊಂಡು ಈ ದೇವತೆಗಳು ಮಹೋಗ್ರವಾಗಿ ಕೆರಳಿ ತಮ್ಮ ಕ್ರೋಧಾಗ್ನಿಯೇ ಅಗ್ನಿಯಾಗಿ ವ್ಯಾಪಿಸಿ ಹೊಗೆ ಹಬ್ಬಿತೆಂಬಂತೆ ದಶಹಿಕ್ಕುಗಳಾಲ್ಲಿಯೂ ಗುಡುಗಿನ ಅರ್ಭಟವಾಗಿ ಕಾರ್ವೋಡಗಳು ಕವಿಯುವಂತೆ ಮಾಡಿಬಿಟ್ಟರು. ಕಡಲಲ್ಲಿ ಮ ಲಗಿದ್ದವನು ಈಗ ವನದಲ್ಲಿ ಮಲಗಲುಆಸ್ಪದವಿಲ್ಲವೆಂದು ಸಪ್ತಸಾಗರಗಳೂ ಮೇಲಕ್ಕೆ ಬಂದು ಈಗ ಒಡೆದುಬಿದ್ದುವೇನೋ ಎನ್ನುವ ಹಾಗೆ ಆಯಿತು; ಮಿಂಚುಗಳ ಹೊಡೆದುವು; ಆಶಾಮುಖದ್ರೋಣಿಯಿಂದ ಆಕಾಶವೇಗೋಳಿಡುತ್ತಿರುವಂತೆ ಒಂದೆ ಸಮನಾಗಿ ಮೋಡಗಳು ಗುಡುಗಿದವು; ಕೃಷ್ಣನನ್ನು ಸಿಡಿಲಿದಲೂ ಆಲಿಕಲ್ಲಿ ಬಡಿದು ಬಾರಿಸಿ, ಗೋಕುಲವೇ ತೇಲಿಹೋಗುವ ಹಾಗೆ ಮಾಡಿ ಆದೇವತೆಗಳುಧಾರಾವರ್ಷವನ್ನು ಕರೆದರು. ಆದರೆ ಬಲಸ್ಥನಧ ಕೃಷ್ಣನು ಬಡಿಯುವ ಸಿಡಿಲನ್ನು ನೆಲಕ್ಕೆ ಬಿದ್ದು ಏಳೆಂಟು ತುಣುಕು ನೆಗೆದು ನುಗ್ಗಗುವ ಹಾಗೆ ತನ್ನ ಕೈಯ ಗೋವಳಿಗೋಲಿನಿಂದ ಹೊಡೆಚೆಂಡಾಡುವಾ ಹಾಗೆ ಹೊಡೆದಿಕ್ಕಿದನು. ಕರಗದ ಮುಗಿಲನ್ನು ಮರೆಯಾಗದ ಕಾಮನ ಬಿಲ್ಲನ್ನೂ ಒಂದೇ ಸಮನಾಗಿ ಬರುತ್ತಿದ್ದ ಮಿಂಚು ಸಿಡಿಲಗಳಾನ್ನೂ ನಿಲ್ಲದ ಜಡಿಮಳೆಯನ್ನೂ ಕಂಡ ಗೋಪರೆಲ್ಲ ಗಾಬರಿಯಾಗಿದ್ದ ಗೊಲ್ಲರನ್ನೂ ಗೋವುಗಾಳನ್ನೂ

ಜತೆಗೂಡಿಸಿಕೊಂಡು ಹತ್ತಿರದಲ್ಲಿಯೇ ಇದ್ದ ಗೋವರ್ಧನ ಗಿರಿಯ ಮರೆಗೆ ಹೋದನು. ಆದರೆ ಅದು ಅಖಂಡಿತಶಿಲೆಯಾದ ಬೆಟ್ಟವಾಗಿ ಇದ್ದುದರಿಂದ ಅಲ್ಲಿ ಪಶುಶಿಶುಗಳ ಪ್ರವೇಶಕ್ಕೆ ಕೂಡ ತಕ್ಕ್ ಒಂದು ಗುಹೆಯೂ ಕಾಣಬಾರದೆ ಕೃಷ್ಣನು ತನ್ನ ಚರಣಾಂಗುಷ್ಠದ್ದ ತುದಿಯಿಂದ ಆ ಬೆಟ್ಟವನ್ನೇ ಮೀಟಿ, ಒಂದೇ ಕಯ್ಯಲ್ಲಿ ಆದೂ ಎಡದ ಕೈಯಲ್ಲಿ ಪೂರ್ತಿಯಾಗಿ ಕಿತ್ತೆತಿಬಿಟ್ಟನು. ಹಾಗೆ ಕೃಷ್ಣನೆತ್ತಿದ ಆ ಗೋವರ್ಧನ ಗಿರೀಂದ್ರವು ಅವನ ಕ್ರೀಡಾವಿನೋದಕ್ಕೆ ಎತ್ತಿದ ಕೊಡೆಯೆಂಬಂತೆ ಕಾಣುತ್ತಿತ್ತು. ಏಕೆಂದರೆ ಬೆಟ್ಟದ ಸುತ್ತೂ ಕಡೆಯಿಂದ ಬೆಟ್ಟಝರಿಗಳ ನೀರು ಝಲ್ಲೆಂದು ಸೂಸಿ ಸುರಿದದ್ದು ಮುತ್ತಿನ ಜಾಲರಿಗಳಂತೆಯೂ ಎತ್ತಿದ ಎಡಗೈ ಕೊಡೆಯ ಕಾವಿಯಂತೆಯೂ ತೋರುತ್ತಿತ್ತು. ಕೃಷ್ಣನ ಬಲಾಗೈಯ ಗೋವಳಿಗೋಲು ಚೆಂಡನ್ನೆಸೆವ ಒಂದು ದಾಂಡನ್ನೂ ಎಡಗೈಯಲ್ಲಿ ಎತ್ತಿದ ಬೆಟ್ಟವು ಒಂದು ಆಟದಚೆಂಡನ್ನೂ ಹೋಲುತ್ತಿತ್ತು. ಆ ಗಿರಿಯ ಹರಳುಗಳು ಮೇಲೆ ಉದುರಿಬೀಳುತ್ತಿರಲು ಅದಿಶೇಷನು ಭೂಮಿಭಾರಫ್ಷನ್ನು ಧರಿಸಿದಂತೆ ಶೇಷನಂತಿದ್ದ ತನ್ನ ಕೈಯಿಂದ ಭೂಮಿಭಾರದ ಗೋವರ್ಧನಗಿರಿಯನ್ನು ಎತ್ತಿ ಶೇಷವನ್ನು ಹೊತ್ತು ಕಮಠನಿಂತಿದ್ದ ತನ್ನ ತೀಲೆಯಲ್ಲಿ ಗಿರಿಯಿಂದ ಉರುಳಿಬೀಳಿವ ಹರಳುಗಳನ್ನು ತೆಲುಯೊಡ್ಡಿ ತಡೆದನು. ಕರಿಕಳಭಪತಿಯ ಬೌಅಲ್ಲಾವರೆಯನ್ನು ಕಿತ್ತೆತ್ತುವಂತೆ ಆ ಕಿಶೋರಕೃಷ್ಣನು ಗೈರಿಕರಜೋ ವಿರಾಜಿತದರಿಯಾದ ಆ ಗಿರಿಯನ್ನೌ ಕಿತ್ತೆತ್ತಿದನು. ಆ ಶೈಲವನ್ನು ಎತ್ತುತ್ತಲೂ ಫಣಾಮಣಿಗಳು ಮಿನುಮಿನುಗುವ ಪಾತಾಳಸರ್ಪಸಮೂಹವು ಹಾವಿನ ಹೇಳಿಗೆಯನ್ನು ತೆರೆದ ರೀತಿಯಲ್ಲಿ ಅಡಿಯಲ್ಲಿ ಕಾಣಿಸಿಕೊಂಡವು. ಅಲ್ಲಿಗೂ ಆ ದೇವತೆಗಳು ಬಿಡಲಿಲ್ಲ ಕೆಂಡದ ಮಳೆಗಳು ತಂಡತಂಡವಾಗಿ ಹೊಡೆಯುತ್ತವೆ ಎನ್ನುವಂತೆ ಆ ಗಿರಿಯ ಮೇಲೆ ಚಂಡಿಕೆಯರು ಮುಳಿದು ಕಿಡಿಗೌ ಹುಟ್ಟಿ ಹಾರತ್ತಿರಲು ಕಲ್ಲಿನ ಮಳೆಯನ್ನೇ ಕರೆದುಬಿಟ್ಟರು.

ಹೀಗೆ ಆ ದೇವತೆಯ ಏಳು ದಿವಸಗಳ ಕಾಲ ಸಂವರ್ತನಸಮಯಪರಿವರ್ತಿತ ಪುಷ್ಕಳಾವರ್ತಗಳೆಂತೆ ಆವರ್ತನಪರಿವರ್ತನವಾಗಿ ಬಂದು ನಿರ್ವತಿಸಿದ ಹಾಗೂ ಕಗ್ಗನೆ ಕನಿತು ನೆಗೆದ ಮೋಡಗಳ ದಂಡ ನೀಲಪರ್ವತಗಳೇ ವಿಪುಲವಾಗಿ ಕಲ್ಲುರಾಶಿಯ ಕಾಳ್ಪುರಗಳನ್ನು ಕರೆಯುತ್ತಿದೆಯೆಂಬಂತೆ ಮಹಾವರ್ಷಗಳಾನ್ನು ಸುರಿಸಿದವು . ಗೋವರ್ಧನನು ಗೋವರ್ಧನಗಿರಿಯನ್ನೇತ್ತುವಂತೆ ಗೋಕುಲವನ್ನೇತ್ತಿ ರಕ್ಷಿಸಿದ್ದನ್ನು ಕಂಡು ಗೋವರೂ ಸೀವರೂ ಮಕ್ಕಾಳೂ ಮರಿಗಳೂ

ಬೆಕ್ಕಸಬೇರಗಾದರು. 'ಇವನು ದೇವನೂ ಅಲ್ಲ ದಾನವನೂ ಅಲ್ಲ– ಎಂದು ಆತನ ಅಮಾನುಷವೂ ಮಹಾದ್ಭುತವೂ ಆದ ಸಾಹಸಕಾರ್ಯವನ್ನು ಕಂಡು ಉದ್ಗಾ ರಮಾಡಿದರು . ಪುರುಷೋತ್ತಮನನ್ನು ಎವೆಯಿಕ್ಕದೆ ನೋಹಿ ಇಬ್ಬರೊಡ್ಮಾ್ಡಗಿ ಪರಮನಂದವನ್ನು ಅನುಭವಿಸಿದ ನಂದನನ್ನೂ ಯಶೋದೆಯನ್ನೂ ದೇವದೇವಿಯರೆಂದು ತಿಳಿದು ಪೂಜಿಸಿ ವಂದಿಸಿ ತೆರಳಿದರು . ಈ ಸುದ್ದಿಯ ಎಲ್ಲೆಲ್ಲಿಯೂ ಹಬ್ಬಿ ಹರಡಿ ನಾಡುಬೀಡುಗಳೊಂದಾಗಿ ಅಲ್ಲಿಗೆ ಯಾತ್ರೆ ಹೊರಟಿತು.

ಕಂಸನಿಗೂ ಸುದ್ದಿ ಬಂದು ಆತನು ತುಂಬ ಕಳವಳಪಟ್ಟನು. 'ಇದು ನನಗೆ ಬಂದ ಮಾರಿಯಾಗದೆ ಹೋಗದು ಎಂದು ಮನಸ್ಸಿನಲ್ಲಿಯೇ ಮುರುಗುತ್ತ ಇರುತ್ತಿರುವಾಗ ಭಗ್ನ ಪ್ರಯತ್ನರಾದ ಅವನ ಕಡೆಯ ದೇವತೆಗಳು ಹಾಳು ದೇಗುಲದ ದೇವತೆಗಳಂತೆ ಖಿನ್ನರಾಗಿ ಅಪಮಾನಿತರಾಗಿ ಕಂಸನನ್ನು ಸಮಿಪಿಸಿ ಬಂದು ನಿಂತು' ಆ ಹಗೆ ನಮ್ಮ ಶಕ್ತಿಗೆ ಮೀರಿದ್ದು ಎಂದು ಸೋಲೊಪ್ಪಿ ಹೊರಟುಹೋದರು. ಕಂಸನು ಹಲ್ಲುಹೊದ ಹಾವಿನಂತಾಗಿ ತೆಲೆದೂಗಿ ತನ್ನಲ್ಲಿಯೇ ಹೀಗೆಂದುಕೊಂಡನು. ' ಮೊಳೆಯಾಗಿರುವಾಗಲೇ ಹೆಗ್ಗೊಡಲಿಗಳೂ ಕೆಟ್ಟಿ ಕಡಿದಿಕ್ಕಲಾದಡೆ ಮುಕ್ಕಾದವು ಎಂದಮೇಲೆ ಮುಂದಿನ್ನು ಬೆಳೆದು ಮ ರವಾದ ಕಾಲಕ್ಕೆ ತಾಕಲೂ ಕಡಿಯಲೂ ಯಾತರಿಂದಲೂ ಆಗುವಂತಿಲ್ಲಎಂದೇ ತೋರುವುದು.

ಹೀಗೆ ಯೋಚಿಸಿ ತನಗೆ ಇಷ್ಟನಾದ ಅರಿಷ್ಟನೆಂಬ ದಾನವನನ್ನು (ಇವನು ಹೆಸರಿಂದ ಮಾತ್ರ ಅರಿಷ್ಟನಲ್ಲದೆ , ಶಬ್ದಾರ್ಥದಂತೆ ಪೀಡೆ ಪಿಡುಗು ಎಂದಲ್ಲ . ಅವನು ಕಂಸನು ಕೆಲಸಕಾರ್ಯಗಳಿಗೆ ಅನುಕೂಲನಲ್ಲದೆ ಅರಿಷ್ಟನಲ್ಲ ). ಪ್ರತ್ಯನೀಕದ ವನಕ್ಕೆ ಬರಮಾಡಿಕೊಂಡು , " ಪ್ರತಿಕಾರವನ್ನು ಸಾಧ್ಯವಿದ್ದಾಗ ಮಾಡಿಬಿಡಬೇಕು ಎಂಬ ವಚನವನ್ನು ಹೇಳಿ ವಿರೋಧಿಯನ್ನೂ ವ್ಯಾಧ್ಜಿಯನ್ನೂ ಅವು ಬೆಳೆಯದ ,ಮೊದಲೇ ಕಿರಿದೆಂದು ಕಡೆಗಣಿಸದೆ ,ಪರಿಹರಿಸುವದು ಕರ್ತವ್ಯವೆಂದು ತಿಳಿಸಿ,ಕೃಷ್ಣನ ಮೇಲೆ ಆಕ್ರಮಣಮಾಡಲು ಅವನಿಗೆ ಆಜ್ಞಾಪಿಸಿದನು.

ಅದೇ ಪ್ರಕಾರದಲ್ಲಿ ಅರಿಷ್ಟನೂ ಕೃಷ್ಣನಿದ್ದ ಗೋಕುಲದಲ್ಲಿ ತನ್ನ ಕಾರ್ಯಾಚರಣೆಗೆ ತೊಡಗಿದನು . ಅತ್ಯಂತ ಬಲಿಷ್ಟವಾದ ಗೂಳಿಯಾಗಿ ಮೈಗೊಂಡು ದಿಕ್ಕುದೆಸಿಗಳನ್ನು ನೋಡದೆ ದಾಂಧಲೆಮಾಡುತ್ತ ನುಗ್ಗಿದನು. ಎದುರಾದುದೆಲ್ಲವನ್ನೂ ತಿವಿದು ಎತ್ತುತ್ತ ತನ್ನ ಮಾರ್ದನಿಗೆ ತನೇ ಹೋರಿದಾಗ

ಗಾಯಗೊಂಡು ಹುಣ್ಣಾದ ಹಿಣಿಲಿಗೆ ಮುಸಿರುವ ನೋಣಗಳನ್ನು ಶೃಂಗಾಗ್ರದಿಂದ ತೊಡೆದುಕೊಳ್ಳುತ್ತ, ತುರುಮುಂದೆಯನ್ನು ಭೇದಿಸಿ ಕಲೆಯುತ್ತ, ಬೆಚ್ಚಿದ ಬಲ್ಲೂಳಿಗಳು ಬೆನ್ನುತ್ತು ಓಡಲು ತನ್ನ ಪೌರುಷವನ್ನು ಹಾಗೆ ಪ್ರಕಟಿಸುತ್ತ, ಮದೋದ್ರಿಕ್ತವೂ ಪಿಂಗಳಾಕ್ಷವೂ ಆದ ಆ ಮಹಾಗೂಳಿಯು ಧಾವಿಸಿ ಬಂದಿತು ಹೀಗೆ ಬಂದು ಮೇಘಸನ್ನಿಭನಾದ ಮುರಾರಿಯ ನಿಷಮತರ ಪೌರುಷವನ್ನು ಎದುರಿಸಲು ಸಜ್ಜಾಗಿ ಇರಿಯುವ ಕೋಡನ್ನು ಮುಂದೆ ತೋರಿಸಿತು. ಹಾಗೆ ತೋರಿದ್ದೇ ತಡ ಕೃಷ್ಣನು ಅದರ ಕುತ್ತಿಗೆಯನ್ನು ತಿರುಚಿ ಹಾಕಿದನು. ಆ ಗೂಳಿಯ ಕಣ್ಣುಗಳು ಹೊರಕ್ಕೆ ಹೊರರುಕೊಂಡು, ಗುರುಗುರುಗುಟ್ಟಿ ಸಾಯುವ ಹಾಗೆ ಅಗಿ ಅದು ಕೆಡೆಯಿತು. ಕೃಷ್ಣನು ಹೀಗೆ ತನ್ನ ಏಕಾಂಗಸಾಹಸವನ್ನು ಮೆರೆದು ತನ್ನೊಂದು ತೋರುಬೆರಳಿಂದ್ಲೇ ಅಲಕ್ಷ್ಯವಾಗಿ ತಿವಿದುಹಾಕಿದನು. ಈ ರೀತಿ ಮಹಾಗೂಳಿಯಾಗಿ ಕೆಕ್ಕಳಿಸಿ ಅಟ್ಟಿಕೊಂಡು ಬಂದ ಕಂಸನಟ್ಟಿದ ಅರಿಷ್ಟದಾನವನನ್ನು ಅಂದಿನ ಗಂಡಾಂತರವನ್ನು ನಿವಾರಿಸಿಕೊಂಡಂತೆ ನಿವಾರಿಸಿ ತನು ಪಶುಪಾಲನಾದ ಕಾರಣ ಪಸುರೂಪದಲ್ಲಿ ಬಂದ ದಾನವನನ್ನು ಕೊಲ್ಲುಲೊಲ್ಲದೆ ಕರುಣಿಸಿ ಕಾದು ಅಟ್ಟಿ ಕಳೆದನು.

ಮಗನ ಸಹಸಕಾರ್ಯಗಳನ್ನೇಲ್ಲ ಕೇಳಿ ವಸುದೇವ ದೇವಲಿಯರು ಮೂರುಲೋಕಗಳನ್ನು ಆಳಿದಷ್ಟು ಸಂತೋಷಪಟ್ಟು , ಮಗನನ್ನು ನೋಡಲೆಂದು ಆಸೆಪಟ್ಟು ಗೋಮುಖಿಯೆಂಬ ನೋಂಪಿಯ ನೆಪದಿಂದ ಬಲದೇವ ವಾಸುದೇವರಿದ್ದ ( ವಾಸುದೇವನಿದ್ದ ಎಂದೇ ಇರುವುದು ಯುಕ್ತ) ತುರುಹಟ್ಟಿಗೆ ಮಹವೈಭಾವದಿಂದ ಪ್ರಯಾಣಮಾಡಿದರು. ಅಲ್ಲಿಗೆ ತಲುಪಿ , ಸೌಖ್ಯದ ಸೀಮೆ ಕಾಣುವಂತೆ ಕೃಷ್ಣನನ್ನು ಕಂಡು ಬರಸೆಳೆದು ಅಪ್ಪಿದರು. ದೇವಕಿಗೆ ಕೃಷ್ಣನನ್ನು ಕಾಣುತ್ತಲೇ ವಾತ್ಸಲ್ಯವುಕ್ಕಿತು. ದೇವಕಿ ಬಹುಪುತ್ರವತಿಯಾದ್ದರಿಂದ ತೊರಿದ ಸ್ತನ್ಯದಲ್ಲಿ ಮಗನ ಮಜ್ಜನ ಮಾಡಿ ಮುಗುಳ್ನಗೆಯ ಮುತ್ತು ಬೆರಸಿದ ಸೇಸೆಯನ್ನು ತಳಿದು , ಯಕ್ಷಕರ್ದಮದಿಂದ ಮೈಗೆ ಲೇಪನಮಾಡಿ , ಕಣ್ಣೆಂಜಲಾಗುವುದೆಂದು ದೃಷ್ಟಿ ಬೊಟ್ಟಿಡುವಂತೆ ಚಿನ್ನದ ಚಿಪ್ಪಿನ ಕಸ್ತೂರಿಯಿಂದ ಹಣೆಗೆ ಬೊಟ್ಟಿಟ್ಟು, ಬೆಲೆಗೆ ಭಾರವಾದವೂ ಮೈಗೆ ಹಗುರವಾದವೂ ಆದ ದೇವಾಂಗವಸ್ತ್ರಗಳನ್ನು ಉಡಿಸಿ , ಮಾಣಿಕ್ಯದ ತೊಡಿಗೆಗಳನ್ನು ತೊಡಿಸಿ , ಅಮೃತಾನ್ನವನ್ನು ಉಣಿಸಿ ಮಗನ ಪಂಕ್ತಿಯಲ್ಲಿಯೇ ಗೋಪಕುಮಾರರಿಗೆ ಉಡುವುದಕ್ಕೂ ತೊಡುವುದಕ್ಕೂ ಕೊಟ್ಟು, ಉಣ್ಣುವುದಕ್ಕೆ ಇಟ್ಟು, ಯಶೋದೆ ಮಿದಲಾದ ಗೋಪಿಯರಿಗೆಲ್ಲ

ಹೊನ್ನರತ್ನದ ಬಾಗಿನಗಳನ್ನು ಕೊಟ್ಟು ಸಂತೋಷಪಟ್ಟಳು ; ಇದೀಗ (ಗೋಮುಖಿ ) ನೋಂಪಿಯನ್ನು ನೋನುವ ವಿಧಾನ ಎಂದು ನಿರ್ವತಿಸಿದಳು. ಕೃಷ್ಣನನ್ನು ಬಳಿಗೆ ಕರೆದುಕೊಂಡು 'ಇದಾರ ಮಗ ಇತನು ಹೊನ್ನಿಗೂ ಆದಿತ್ಯನಿಗೂ ದೇವನಿಗೂ ದೇವಿಗೂ ಹುಟ್ಟಿದ ಹಾಗೆ ಇದ್ದಾನೆ ಎಂದು ತೊಡೆಯ ಮೇಲೆ ಕೂರಿಸಿಕೊಂಡು ಅಕ್ಕರೆಯಿಂದ ನೋಡುತ್ತಿದ್ದಳು. ನಕ್ಷತ್ರಗಾಣದ ನಡುವೆ ಚಂದ್ರನ ಬೆಳಗುವಂತೆ ಒಡನಾಟದ ಗೋಪರ ನಡುವೆ ಕೃಷ್ಣನು ತೊಳಗಿ ಬೆಳಗುತ್ತಿದ್ದನು.

ಅಷ್ಟರಲ್ಲಿ ಅತ್ತ ನಂದಗೋಪನು ವಸುದೇವ ಬಲದೇವರನ್ನು ಒಡಗೊಂಡು, ಗೋಪ ವೃದ್ಧೆಯರನ್ನೂ ಜತೆಗೆ ಕರೆದುಕೊಂಡು ಹೊರಟು ಕೃಷ್ಣನು ಸಾಹಸಗಳನ್ನು ಮೆರೆದ ಕ್ಷೇತ್ರಗಳನ್ನು ಒಂದೊಂದಾಗಿ ತೋರಿಸಿದನು. ಒತ್ತಿ ಕೊರಳು ನುಲಿದ ಕಾಗೆಯ ಕನ್ನೆತ್ತರನ್ನು ಹೀರಿ ನೆಲವೆಲ್ಲ ಕೆಮ್ಮಣ್ಣ ನೆಲವಾಗಿ ಬಣ್ಣವೇರಿ ನೆತ್ತರುನಾರುತ್ತ ದುರ್ವಾಸನೆಗೊಂಡು ಹೇಸಿಗೆಯುಂಟುಮಾಡುತ್ತಿದ್ದ ನೆಲವನ್ನೂ ತೋರಿಸಿದನು; ಪೂತನಿಯ ಸತ್ತ ದೇಹದ ನೆತ್ತರ ಹಲ್ಲೆಗಳಿಂದ ಜಾದುಕಲ್ಲಿನ ಗಣಿಯ ಹಾಗೆ ಇದ್ದ, ಮೆಟ್ಟಿದರೆ ಬಾಣಂತಿಯ ಎದೆಹಾಲು ವಿಷವಾಡುತ್ತಿದ್ದ 'ವಿಷಮೃತ್ತಿಕೆಯೆಂಬ ನೆಲವನ್ನು ತೋರಿಸಿದನು: ಈಯೆರಡನ್ನೂ ಅಗೆದರೆ ಕಾಗೆಗಳೇ ಮೇಲಕ್ಕೇದು ಹಾರುವ 'ಕಾಕಗರ್ಭೆ ಎಂಬ ಹೆಸರನ್ನು ತಳೆದು ಆ ಭೂಮಿ ಭಾಗವನ್ನು ತೋರಿಸಿದನು. ಆ ಮೆಲೆ ಕೃಷ್ಣನು ಕಾಲುಕೊಟ್ಟು ಕೆಡವಿಬಿಡಲು ನುಚ್ಚುನೂರಾಗಿ ಹೋಗಿ ಹಾರಿಬಿದ್ದ ಕಠಿನಶಕಟದ ಈಷಾದಂಡದ ( ಈಸು ಈಸಿನ ಕೋಲು) ಏಟಿನಿಂದಾಗಿ ಭೂಮೀಯೇ ಪಾತಳಕ್ಕೆ ಬಿರುಕುವಿಟ್ಟಂತೆ ತೂತಾಗಿ ಹೋಗಿದ್ದ , ಅದರಲಿ ಬಗ್ಗಿ ನೋಡಿದೆವರಿಗೆ ಛಾಯಾಭಗವತಿಯಂತೆ ಶಕಟಚ್ಛಾಯೆಯೇಕಂಡುಬರುತ್ತಿದ್ದ 'ಶಕಟದ್ವಾರವೆಂಬ ಬಿಲದ್ವಾರವನ್ನು ತೋರಿಸಿದನು. ಯಮುಳಾರ್ಜುನಭಂಜನನಾದ ಕೃಷ್ಣನು ಕಾಕೇಭಕುಂಜಗಳನ್ನು ಕಿತ್ತು ಈಡಾಡಲು ಕೂಪದಷ್ಟು ದೊಡ್ಡಕುಳಿಯಗಿ ನೆಲದಷ್ಟು ಮಣ್ಣನ್ನು ಅಡಕಿತಂದು ಹುಯ್ದರೂ ಹೂಳಲಾಗದೆ ಆಶಾಗರ್ತದಂತೆ ಕಾಣುತ್ತಿದ್ದ ' ಅರ್ಜುನಗರ್ತವೆಂಬ ಪ್ರಸಿದ್ಧವಾದ ಕುಳಿಯನ್ನು ತೋರಿಸಿದನು. ಕಿಶೋರನ ( ಕುದ್ರೆಯ ) ಬಾಯನ್ನು ಸೀಳಲು ಸುರಿದ ರಕ್ಷದಿಂದ ನೆಲದ ಧೂಳು ಸಿಂದೂರವರ್ಣಕ್ಕೆ ತಿರುಗಿದ್ದು, ಹಾಗಿರಲರದು ಸುಳ್ಳ ಎಂದುಕೊಂಡು ಮೆಟ್ಟಿದರೆ ಮೆಟ್ಟಿದವರ ಮೊಗಗಳು ಕುದುರೆಮೊಗವಾಗುತ್ತಿದ್ದುದರಿಂದ ತುರಗಮುಖಿಯೆಂಬ ಹೆಸರನ್ನು ಪಡೆದ ಭೂಮಿಯನ್ನು

ತೋರಿಸಿದನು. ಮುರರಿಯ ಕತ್ತೆಯನ್ನು ಸರ್‍ರನೆ ಸೀಳಿ ತಗ್ಗದ ಸಿಟ್ಟಿನಿಂದ ಅದನ್ನೊಗೆದು ಅಬ್ಬರಿಸಿ ಹೊಸೆದಿಕ್ಕಲು ಧಾತುನಿರ್ಝರದಂತೆ ಅದರ ಅಶ್ರುಜಲವು ಚಿಮ್ಮಿ ಜಿನುಗುತ್ತಿರುವ ನೆಲವಾದ ಕಜ್ಜಿಗಲ್ಲು ಎಂಬ ಹೆಸರಿನ ಕಲ್ಲನ್ನು ತೋರಿಸಿದನು, ಗಿರಿಧರನು ಕಿತ್ತೆತ್ತಿ ಮತ್ತೆ ಕೆಳಗಿಡಲು, ಮೊದಲಿದ್ದ ಹಾಗಲ್ಲದೆ ಒಂದು ಪಕ್ಕಕ್ಕೆ ಓರೆಯಾಗಿ  ಕುಸಿದು ಕುಳಿತು ಗೋವರ್ಧನವೆಂಬ ಹೆಸರನ್ನು ಪಡೆದುಕೊಂಡು ಗಿರಿಯನ್ನು ತೋರಿಸಿದನು.

ದೇವಕೀದೇವಿಯೇ ಮೊದಲಾದವರು ಇವನ್ನೆಲ್ಲ ನೋಡುತ್ತ ಅಶ್ಚರ್ಯಪಡುತ್ತ ಬಂದರು. ವಿಶೇಷವಾಗಿ ಗೋಪಿ ಯಶೋದೆಯು “ ಕಾಕನನ್ನು ಕುಪ್ಪಳಿಸಿದ ಎಡೆಯಿದು; ಪೂತನಿಯ ರಕ್ತವನ್ನು ಹೀರಿದ ಎಡೆಯಿದು; ತೇರ್ಗೈಸಿ ತೇರನ್ನು ಒರಸಿ ಹಾಕಿದ  ಎಡೆ; ಮತ್ತಿಯ ಮರಗಳಾನ್ನು ಲೀಲೆಯಿಂದ ಕಿತ್ತೆಸೆದ ಎಡೆ ; ತಾಳೆಯಮರವನ್ನು ಕೆಡವಿದೆಡೆ, ಗರ್ದಭವನ್ನೂ ಅಶ್ವವನ್ನೂ ಸೀಳಿ ಹಾಕಿದ ಎಡೆ ಎಂದು ದೇವಕೆಗೆ  ಎಲ್ಲವನ್ನೂ ತೋರಿಸಿದಳು. “ ಏನು, ಹೇಗೆ ಎಂದು ಕೇಳುವುದೇನು ಬಂತು ? ನಿರ್ಲಕ್ಷ್ಯವಾಗಿ ಅಣಬೆಯನ್ನು ಕೀಳುವ ತೆರೆದಲ್ಲಿ ಕೃಷ್ಣನು ಕಿತ್ತು ದಿನಗಳ ಕಾಲ ಮೇಲೆತ್ತಿ ಹಿಡಿದಿದ್ದ ಗೋವರ್ಧನಗಿರಿಯಿದು ಎಂದು ತಿಳಿಸಿದಳು. ದೇವ್‌ಕಿಯು ಮಗನ ಶಕ್ತಿ ಸಾಹಸಗಳಿಗೆ ಆಶ್ಚರ್ಯಪಟ್ಟು, ಇದನ್ನೇಲ್ಲ ಕೇಳಿ ಎಲ್ಲಿ ಕಂಸನು ಕೆರಳಿ ಕೆಟ್ಟದ್ದನ್ನು ಬಗೆಯುವ್ನೋ ಎಂದು ಹೆದರಿ , ಕಂಸನ ಕೋಪ ಮಗನಿಗೆ ತಟ್ಟುವುದು ಬೇಡ ಎಂದು ಉಪ್ಪನ್ನು  ನಿವಾಳಿಸಿ ತೆಗೆದುಹಾಕಿದಳು. ಮಗನನ್ನು ಬಿಟ್ಟು ಬರಲಾರದೆ ತೊಳಲಾಡಿತ್ತಿದ್ದ ದೇವಕೀದೇವಿಯನ್ನು ಹೇಗೋ ಎಳೆದುಕೊಂಡು ವಸುದೇವನು ದುಂದುಭಿಧ್ವನಪೂರ್ವಕವಾಗಿ ಮಧುರಾನಗರವನ್ನು ಪ್ರವೇಶಿಸಿದನು.

ಈ  ಸಂದರ್ಭದಲ್ಲಿ ಮಧುರಾನಗರಕ್ಕೆ ಕಾರಣಭೂತವಾದ ಚೈತ್ಯಾಲಯದ ಮುಂದಿನ ದೇವತಾಯತನವಾದ ಬಿಲದ್ವಾರದಲ್ಲಿ ಶುಚಿನಾಗಶಯ್ಯೆಯೂ ಸುರುದುಂದುಭಿಧ್ವನಿಯಾಯಿತು; ಸುರತರುವು ಪುಷ್ಪವೃಷ್ಟಿಯನ್ನು ಕರೆಯಿತು ಸುರರು ಅಹೋ ಪುರುಷೋತ್ತಮಪುಣ್ಯಂ ಎಂದು ಉದ್ಘೋಷಿಸಿದರು. ಭೂದೇವಿಯು ಫಣಿರಾಜಸಂಬಂಧದಿಂದಾಗಿ ಹಡೆದ ಹಾವೆನ್ನುವೆಂತೆ ಭೂಗರ್ಭದಿಂದ ಹೊರಟು ಬಂದ  ಸರ್ಪವು ಸಪ್ತಫಣಗಳ ರತ್ನಪ್ರಭೆಯಿಂದ ಶೋಭಿಸಿತು. ಹಾಗೆಯೇ ಅಸದೃಶವಾದ ಶಾರ್ಙ್ಗಚಾಪವು ಹರಡಿದ ಮೌರ್ವಿಯಿಂದ ವಿದ್ಯುದ್ರಸಿತವಾದಾಗಿತ್ತು. ಸಿಂಹವು ಕೆರಳಿ

ಪಂಚಾನನದಿಂದ ಗರ್ಜಿಸುವಂತೆ  ಪಾಂಚಜನ್ಯವೆಂಬ ಅಯ್ವಾಯ ಶಂಖವು ಗರ್ಜಿಸುವುದಾಗಿತ್ತು. ಈ ಮೂರು ವಸ್ತುಗಳ ಉದಯವನ್ನು ಕಂಡು ಕಂಸನು ಭಾಯಗೊಂಡು ಮೂಲಚೈತ್ಯಾಲಯಕ್ಕೆ ಹೊರಟುಬಂದು, ಅಲ್ಲಿಯ ಯೋಗೀಶ್ವರರಿಗೆ ಪಾದಭಿವಂದನಮಾಡಿ, ಅವುಗಳ ಉದಯದ ವೃತ್ತಾಂತವನ್ನು ಪ್ರಶ್ನಿಸಿದನು. ಅವರು ಕಂಸನ ಪ್ರಶ್ನೆಗೆ ಪ್ರತ್ಯುತ್ತರವಾಗಿ “ ಈ ಮೂರು ರತ್ನಗಳೂ ಪರಮಪುರುಷನೊಬ್ಬನ ಪುಣ್ಯಪ್ರೇರಣೆಯಿಂದಾಗಿ ಹುಟ್ಟಿದುವಲ್ಲದೆ ಉತ್ಪಾತ ಹೇತುಗಳಲ್ಲ; ಯಾವ ಮಹಾಭಾಗನು ಈ ನಾಗಶಯ್ಯೆಯನ್ನು ಏರುವನೋ, ಈ ಶಾರ್ಙ್ಗಧನುವನ್ನು ಏರಿಸುವನೋ , ಈ ಪಾಂಚಜನ್ಯವನ್ನು ಪೂರಿಸುವ್ನೋ ಆತನು ಅರ್ಧಚಕ್ರವರ್ತಿಯಾಗಿ ಪೃಥ್ವೀರಾಜ್ಯವನ್ನು ಆಳಿತ್ತಾನೆ ಎಂದರು.ಲ್ ಅದಕ್ಕೆ ಕಂಸನು ಕುತೂಹಲಗೊಂಡು ಇದನ್ನು ಈಗಲೇ ನೋಡಿಬಿಡುತ್ತೇನೆ ಎಂದುಕೊಂಡು ಒಂದು ಘೋಷಣೆಯನ್ನು ಹೊರಡಿಸುವಂತೆ ಹೆಗ್ಗಡೆಗಳಿಗೆ  ಅಪ್ಪಣೆಮಾಡಿದನು. ‘ಯಾವಾತನು ಚೈತ್ಯಾಲಯದ ಬಳಿಯ ನಾಗಶಯ್ಯೆಯನ್ನು ಏರುತ್ತಾನೋ ಆತನಿಗೆ ಹಾವಿನ ಹಸೇ ಹಸೆಯಾಗಲು ಅರಸನು ತನ್ನ ,ಮಗಳನ್ನು ಮದುವೆಮಾಡಿಕೊಡುತ್ತಾನೆ. ಎಂದು ಹೆಗ್ಗಡೆಗಳು ಹೊರಡಿಸಿದ ಘೋಷಣೆಯನ್ನು ಕೇಳಿ ರಾಜಪುತ್ರರು ಅಶ್ಚರ್ಯಪಟ್ಟರು ; ‘ಏನಯ್ಯಾ ಹಾವೆಂದು ಹೆಸರೆತ್ತಿದರೆ ಸಾಕು ಜನರು ನಡುಗಿ ಹೋಗುತ್ತಾರೆ. ಹೀಗಿರಲು ಇದೇನು ಮದುವೆಯೆಂದು ಹಸೆಯಲ್ಲಿ ಕುಳಿತು ಹಾವಿನಿಂದ ಕಚ್ಚಿಸಿಕೊಂಡು ಪ್ರಾಣಬಿಡುವ ಈ  ಒಸಗೆಯನ್ನು ಕಟ್ಟಿಕೊಂಡೇನು ಮಾಡೋಣ ! ಏಂದು ಮೇಲೆ ಓಹೋ ಇದು ದಿಟವಾದ ಮದುವೆಯಲ್ಲ , ಹುಸಿಮೆದುವೆ ಮೊದಲಲ್ಲಿ ಸಾಯುವುದೇ ನಿಜ ಇನ್ನು ಸತ್ತ ಮೇಲೇ ಮದುವೆಯಗತಕ್ಕದ್ದೇನಿದೆ? ನಿಮ್ಮ ರಸನ ಕನ್ನೆ ವಿಷಕನ್ನಿಕೆಯಾಗಿದ್ದರೂ ನಾವು ಹೆದಟುವವರಲ್ಲ ಆದರೆ ಈ ನಾಗಶಯ್ಯೇಯೆಂಬ ಶೀಲವನ್ನೇರಿ ( ಒಲಿದವರ ಕೈಯಿಂದ ) ಹಾಲು ಕುಡಿಯುವ ಸಖ ನಮಗೆ ಬೇಕಿಲ್ಲ ಹೀಗೆ ಸ್ಪಷ್ಟವಾಗಿ ಘೋಷನೆಯನ್ನು ನಿರಾಕರಿಸಿ ವೀರರೂ ಶೂರರೂ ಆದ ರಾಜಪುತ್ರರು ಕಿವಿ ಮುಚ್ಚಿಕೊಂಡು ಹೊರಟುಹೋಗುತ್ತಿದ್ದರು.  ಗೋಕುಲದಲ್ಲಿದ್ದ ಶ್ರೀಕೃಷ್ಣನೂ ಈ ಘೋಷಣೆಯನ್ನು ಕೇಳಿದನ್ನು : ನೀವೆನ್ನುವುದೇನು? ನಾಗ್ಫಶಯ್ಯೆಯೇ ಬಿಲ್ಲು ಶೃಂಗಜವೇ , ಶಂಖವು ಅಯ್ವಾಯ ಶಂಖವೇ ಇರಲಿ ಇಕೋ ನಾನು ಆ ಹಾವನ್ನು ಏರುತ್ತೇನೆ, ಆ ಬಿಲ್ಲನ್ನೇರಿಸುತ್ತೇನೆ. ಆ ಶಂಖವನ್ನು ಇತ್ತುತ್ತೇನೆ– ಎಂದು

ಡಂಗುರವನ್ನು ಒಪ್ಪಿಕೊಂಡನು. ಹೀಗೆ ಒಪ್ಪಿಕೊಂಡು ಮನೆಗೆ ಕೂಡ ಹೋಗದೆ ನೇರವಾಗಿ ಗಣೆಗೆ ಅಂಟಿ ಸರಿಯುವ ಹಾವಿನ ಹಾಗೆ ಆ ಘೋಷಣೆಯನ್ನೇ ಹಿಂಬಾಲಿಸಿ ಕಂಸನ ಅರಮನೆಗೆ ಹೋದನು. ಕಂಸನು ಇದನ್ನು ಕಂಡು “ ಇನ್ನೀಗ ನನ್ನ ಹಗೆಯ ಇಷ್ಟವೂ ಕೈ ಸೇರಿತು ಹಗೆಯ ನಾಶಕ್ಕೆ ವ್ರತ ಹಿಡಿದಿದ್ದಾಗ ಎಲ್ಲಿಂದಲೋ ಎತ್ತು ಬಂದು ಆ ಹಗೆಯನ್ನು ತಾನೇ ಮುಗಿಸಿದ ಹಾಗೆ ಆಯಿತು – ಎಂದು ಉಬ್ಬಿ ಚೈತ್ಯಾಲಯದ ಮುಂದೆ ಅಸ್ಥಾನವನ್ನು ಸೇರಿಸಿ ವಸುದೇವ ಬಲದೇವರು, ಮಂಡಳಿಕರು, ಮುಡುರಬದ್ದರು, ಸಾಮಂತರು , ಮಂತ್ರಿಗಳು ಇವರ ಸಮೇತನಾಗಿ ಬಂದು ಕುಳಿತನು. ,ಮಂತ್ರವಾದಿಗಳಿಂದ ಆ ಮಹಾಸರ್ಪವನ್ನು ಆಹ್ವಾನಮಾಡಿಸಿದನು. ಕಾಣಿಸಿಕೊಂಡ ಆ ಮಹಾಸರ್ಪದ ವಿಜೃಂಭಣಕ್ಕೆ ನೆರೆದ ನೆರೆವಿಯೆಲ್ಲ ಚೇರಿ ಓಡಿಹೋಗಲು ಕಂಸನೂ ಹೆದರಿ ಹೆಪ್ಪಾಗಿ ಗದಗದಿಸಿದನು. ಮಹಾಮಂತ್ರವಾದಿಗಳಾದ ಮುನಿಮುಖ್ಯರನ್ನು ಮರೆಗೊಂಡು ಪಂಚನಮಸ್ಕಾರಮಂತ್ರಗಳನ್ನು ಜಪಿಸುತ್ತ ‘ ಇದನ್ನೇರುವೆನೆಂದು ಬಂದ ಕಲಿಯನ್ನು ಕರೆಯಿರಿ ಎಂದನ್ನು. ಕಂಸನ ಮಾತಿಗೆ ಮೊದಲೇ ಗರುಡಧ್ವಜನು ಎಂದ್ದು ಬಂದನು. ಉರಿವುರಿನ ನಂಜುರಿಯ ಮೇಲೆ ನೀರು ಹೊಯ್ದಂತಾಗಿ ಸರ್ಪವು ಶಾಂತಾವಾಯಿತು. ನವಿಲನ್ನು ಕಂಡ ಸರ್ಪದಂತೆ ಕೃಷ್ಣನನ್ನು ಕಂಡೊಡನೆಯೇ ಹೆದರಿ ಮುದುರಿಕೊಂಡಿತು, ಇದನ್ನು ನೋಡಿ ಜನ ರಿಗೆ ಪರಮಾಶ್ಚರ್ಯವಾಯಿತು. ಆ ಸರ್ಪದಿಂದ ಮಗಮಗಿಸುವ ಕಂಪಿನ ವಾಸನೆಯೊಂದು ಸೂಸಿತು. ಅರೆಬಿರಿದ ಜಾಜಿಯ ಮುಡಿಮಾಲೆಗೆ ಎರಗಿದ ದುಂಬಿಯ ಹಾಗೆ ಕೃಷ್ಣನು ಲೀಲೆಯಿಂದೋಡಿ ಆ ಉರಗೇಂದ್ರನ ಶೀತಲಶ್ಯಯ್ಯೆಯನ್ನು ಏರಿದನು. ಮುತ್ತಿನಂತೆ ಬಿಳುಪಾಗಿದ್ದು ಮಂಡಲಿಸಿದ ಆ ಸರ್ಪದ ಮೇಲೆ ಕೃಷ್ಣನು ಶರದದ ಚಂದ್ರಮಂಡಲದಲ್ಲಿ ಚೆಲುವಾಗಿ ಮಿರುಗುವ ಕಪ್ಪಿನಂತೆ ಶೋಭಿಸಿದನು. ಆ ಫಣಿರಾಜನ ಫಣಾಮನಿಗಳು ಜಯಲಕ್ಷ್,ಇಯು ಪ್ರೀತಿಯಿಂದ ಕೃಷ್ಣನಿಗೆ ನೀರಾಜಿಸುವ ಮಣಿದೀಪಿಕೆಗಳಾದವು .

ೀಗೆಯೇ ಕೃಷ್ಣನು ಲೀಲೆಯಿಂದ ಪಾಂಚಜನ್ಯಶಂಖವನ್ನು ಪೂರೈಸಿದನು. ಭೂಮಿಯ ಎದೆಯೇ ಬಿರಿಯುವಂತಾಗಲು , ದಿಗ್ಗಜಗಳು ಕಾಲುಮೇಲಾಗಿ ಉರುಳಿಬೀಳುವಂತಾಗಲು, ಲೋಕವು ಆಲ್ಲಿಗಲ್ಲೆಂದು ಅನುಮಾನಪಡುವ ಹಾಗೆ ತಾರಾನಿಕರವೇ ಆಕಾಶದಿಂದ ಉದುರುವಂತಾಗಲು, ಬ್ರಹ್ಮಾಂಡಭಾಂಡವೇ ಸಿಡಿದೊಡಿಯುವಂತಾಗಲು, ಪಾಂಚಜನುಅವನ್ನು ಊದಲು ಆ ಧ್ವನಿಯು

ದಿಗಂತವನ್ನು ವ್ಯಾಪಿಸಿತು. ಅದನ್ನು ಇನ್ನೂ ಹಿಡಿದಿದ್ದರೆ ಲೋಕವು ಬೆದರಿ ಬೆಬ್ಬಳಿಸಿ ನಾಶವಾದೀತೆಂದು ಕೃಷ್ಣನು ಕರುಣಿಸಿದನ್ನೇನ್ನುವಂತೆ ಆ ಶಂಖವನ್ನೂ ಶಾರ್ಙ್ಗವನ್ನೂ ಇಳಿಸಿಬಿಟ್ಟು, ನಾಗಶಯ್ಯೆಯಿಂದ ಕೆಳಗಿಳಿದು ಹೊರಟುಹೋಟುತ್ತಿದ್ದನು. ಕಂಸನು ಇದನ್ನು ಕಂಡು ಅವನನ್ನು ಬಳಿಗೆ ಕರೆದು ಹೀಗೆ ಹೇಳಿದನು: “ ಎಲೆ ಗೋಪ ನಿನ್ನ ಸಾಹಸಕ್ಕೆ ನಾನು ದಿಟವಾಗಿ ಮೆಚ್ಚಿಕೊಂಡೆ ಅದರೆ ಇನ್ನೋಂದುಂಟು : ನೀನು ನಾಳೆ ಬೆಳಗಾಗುವುದರೊಳಗೆ ನಾಗಹ್ರದದೋಳಗಿನ ಸಾವಿರೆಸಳ ತಾವರೆಹೂವನ್ನು ಈ ಬಸದಿಗೆ ತರಬೇಕು. ಹಾಗೆ ತಂದು ದೇವರ ಶ್ರೀ ಪಾದದಲ್ಲಿ ಅದನ್ನು ಏರಿಸಿದರೆ ನಿನ್ನನ್ನು ಪಟ್ಟದಾನೆಗೆ ಏರಿಸುತ್ತೇನೆ ಈ ಮಾತಿಗೆ ಕೃಷ್ಣನು ‘ನಾಳೇಯೇಕೆ ಈಗಲೇ ಹೋಗಿ ತಂದುಬಿಡುತ್ತೇನೆ – ಎಂದು ಹೇಳಿ ಆಗಲೇ ಯಮುನಾನದಿಯ ನಾಗಹ್ರದಕ್ಕೆ ಹೊರಟನು.

ಯಮುನಾನದಿಯ ಕಾಳಿಯನಗನ ಮಡುವು ಅತ್ಯಂತ ಭಯಪ್ರದವಾಡಿತ್ತು. ಉರಿಯುವ ಎಣ್ಣೆಯಲ್ಲಿ ಮೇಲೆದ್ದು ಉರಿಯವ ಅಗ್ನಿಯಂತೆ ವಿಷಾಗ್ನಿಯ ಬೆಳೆದು ಬಡಬಾಗ್ನಿಯಂತೆ ನೀರೋಳ್ಗೆ ವ್ಯಾಪಿಸಿ ಉರಿದೇಳಲು ಹಿಂದೆ ಮಂದರದಿಂದ ಕಡೆದಾಗ ಅದರ ಬಾಧೆಗೆ ಉಮ್ಮಳಿಸಿ ಲಯಗ್ನಿಯಾದ ಘೋರಗರಳಾಗ್ನಿಯನ್ನು ಕುದಿದುಕ್ಕಿಸಿ ಲೋಕತ್ರಯವೂ ಭಯಭೀತವಾಗುವಂತೆ ಮಾಡಿದ ಸಮುದ್ರದಂತೆ ಭಾಯಂಕರವಾಗಿತ್ತು. ವಿಷದ ಸೋಂಕಿಂದ ನೀರಿಗೂ ಬೊಬ್ಬೆಗಳೆದ್ದ ಹಾಗೆ ನೀರುಗುಳ್ಳೆಗಾಳು ಸಿಡಿದೇಳಿತ್ತಿರಲು, ಕಾಳೋರಗದ ನಿಶ್ವಾಸನಿಲದಿಂದ ಯಮುನೆಯ ಮಡು ಕತಪತನೆ ಉಕ್ಕುತ್ತಿತ್ತು. ಕಾಳಿಯನ ವಿಷದ ಹೊಗೆ ಮೀರ ಮೇಲೆಳಾಲು ಕಾಳಿಂದುಯ ಕಪ್ಪಾಗಿ ಕೂಡಿ ಕಾಡಿಗೆಗೊಂಡು ಭೂವಾನಿತೆಯ ಬಾಸೆಯ ಹಾಗೆ ತೋರುತ್ತಿತ್ತು! ವಾಯು ಮೇಲುಗಡೆ ಸುಳಿಯಲು ಅಂಜುತ್ತಾನೆ . ಆ ಕಾಲಕ್ಕೆ ಕಾಳಿಯನಿದ್ದ ಪಕ್ಷದಲ್ಲಿ ಸರ್ಪವೈರಿಯಾದ ಗರುಡನಿಗೂ ಈ ವಿಷದ ಬಾಧೆಯಿಂದಗಿ ಶಂಖಚೂಡನನ್ನು ತನ್ನರೆಯಾಗಿ ಕಾಯ್ದುಕೊಳ್ಳಲು ಆಗುತ್ತಿರಲಿಲ್ಲ . ಸ್ವರವನ್ನು ಕೇಳುತ್ತಲೇ ಸಿಡಿಲನ್ನು ಗುಳಕ್ಕೆಂದು ನುಂಗಿಹಾಕದೆ ಬಿಡುವನೇ? ಲಯೋಗ್ರಜ್ವಾಲೆಯುನ್ನು ಎತ್ತಿ ತುತ್ತುಗೊಳ್ಳನೆ? ಕಾಲಿಯನನ್ನು ತಿಂದು ತೇಗನೇ? ಸ್ವರ್ಗಸಮೂಹವನ್ನೇ ಭೇದಿಸಿ ಹೋಗಿ ಮುಕ್ಕಿಬಿಡನೇ? ಎನ್ನುವಂಥ ಮಹೋಗ್ರಸರ್ಪವಾಗಿತ್ತು. ಅದು. ಹರನ ವಿಷವನ್ನು ನುಂಗಿದನೆಂದು ಕೇಳಿದ್ದೇನೆ. ಆದರೆ ಸಮುದ್ರಕ್ಕೀ ವಿಷವೆಂಥದು? ಇ ವಿಷ ದಿಟವಾಗಿ ವಿಷವಲ್ಲ್ . ಇಕೋ ಈಗ ನಾನು

ನನ್ನ ವಿಷವನ್ನ್ನು ಉಗುಳುತೇನೆ ಹರನು ತಾನದನ್ನು ನುಂಗಿ ನೋಡಲಿ , ತಿಳಿಯುತ್ತದೆ– ಎಂದು ಗರ್ಜಿಸಿ, ಮೊದಲು ಬೂತಟ್ಟಿದ ಹಾವುಗಳನ್ನು ಪರಮೆಶ್ವರನು ಭೂಷಣವನ್ನಾಗಿ ಮಾಡಿಕೊಂಡು ಮನ್ನಿಸಿದನದ್ದರಿಂದ  ಕಾಳಿಯನು ಅವನನ್ನು ತೀರಿಸದೆ ಉಳಿಸಿದನು . ಇಲ್ಲವಾದರೆ ಎಂದೋ ಮುಗಿಸಿಬಿಡುತ್ತಿದ್ದನ್ನು ! ಇಂಥ ಸರ್ಪನ ದಾಡೆಗಳಿಂದ ಒಸರಿದ ವಿಷದ ಮಡುವಿನಂತಿದ್ದ ಯಮುನೆಯ ಮಡುವನ್ನು ಕೃಷ್ಣನುಕ್ರೀಡಾಸರೋವರವನ್ನು ಪ್ರವೇಶಿಸುವಂತೆ ಲೀಲೆಯಿಂದ ಪ್ರವೇಶಿಸಿ ತನ್ನ ನಾಭಿಕಮಲದಂತೆ ಯಮುನೆಯ ಸುಳಿಯಲ್ಲಿ ಸೊಗಸುತ್ತಿದ್ದ ಸಾವಿರದೆಸಳ್ ತಾವರೆಯನ್ನು ಕೊಯ್ದುಕೊ,ಂಡನು. ಆ ಫಣಿ ಅಳಲಿತು. ಕೇಸರಗಳು ಉದುರಿದುವು. ತುಂಬಿಗಳು ಚೆದುರಿದುವು. ಹಾಗೆ ಕೊಯ್ದು ತಂದ ಕಮಲವನ್ನು  ದಡಕ್ಕೆ ಬಂದ ಗೋಪರ ಕೈಯಲ್ಲಿ ಕೊಟ್ಟು ಮತ್ತೆ ಕಾಳಿಯ ನಾಗನ ಅನ್ವೇಷಣಕ್ಕಾಗಿ ಮಡುವನ್ನು ಪ್ರವೇಶಿಸಿದನು. ಅದನ್ನು ತನ್ನ ತೋಳುಗಳಿಂದ ತುಳುಕಾಡಿದನು. ಮೊರೆದೆದ್ದು ಮೇಲೆ ಹಾಯ್ದು ದೊಡ್ಡ ದೊಡ್ಡ ಅಲೆಗಳನ್ನೇ ಕಾಳಿಯನೆಂದು ಭಸಿಸಿ ಅವನ್ನು ಒತ್ತಿ ಅಂಗೈಯಿಂದ ಅಪ್ಪಳಿಸಿದನು. ಅಡಗಿದ ಹಾವನ್ನು ಯಮುನೆಯ ಮಡುವಿನಲ್ಲಿ  ಹುಡುಕಾಡಿದ ಕೃಷ್ಣನ ಕೈಯುಗುರ ಕೆಂಪು ಕಡುಗತ್ತಲೀಯಲ್ಲಿ ಹಲವು ಸೊಡರು ಹಿಡಿದು ಹಾವಿಗಾಗಿ ಹುಡುಕುತ್ತಿರುವನೆಂಬಂತೆ ಕಾಣುತ್ತಿತ್ತು. ಸರ್ಪನೇ ಹೆಡೆಮಣಿಯ ಬೆಳಕಿನಿಂದ ಕೃಷ್ಣನನ್ನು ಕಂಡಂತೆ ಸ್ವಲ್ಪ ಹೊತ್ತಿನಲ್ಲಿಯೇ ಆ ಕಾಳಿಯಂಗವು ಎಳಬಿದಿರ  ಗಣೆಗೆ ಸುತ್ತಿಕೊಳ್ಳುವ ಹಾಗೆ ಕೃಷ್ಣನನ್ನು ಅಪಾದಮಸ್ತಕವಾಗಿ ಸುತ್ತಿ ಹೆಣೆದುಬಿಟ್ಟಿತು. ಬಿಸುಸುಯ್ದು ಕೃಷ್ಣನ ಮುಖವನ್ನು ನುಂಗುವಂತೆ ನೋಡಿ ಎತ್ತಿದ ಹೆಡೆಯಿಂದ ಮಸಗಿ ಮುಂದಲೆಗೆ ಬಡಿದು , ಅವನ ಅಂಗೋಪಾಂಗವೆಲ್ಲ ಸುತ್ತುದ್ದ ಹಾವಿನ ತಕ್ಕೆಯಲ್ಲಿ ಸಿಕ್ಕಿ ಮರೆಯಾಗಿ ಎರಡು ಬೇರೆಬೇರೆ ಮೈಯಿಲ್ಲ ಎನ್ನುವಂತೆ ಮಾಡಿ, ಹೆಣೆದು ಹೋರಲು ಕೆರಳಿದಾಗ ಕೃಷ್ಣನೂ ಅದರೊಂದಿಗೆ ಹೆಣಗಿ ಹೋರಾಡಬೇಕಾಯಿತು. ಮತ್ತಮಯೂರದ ಗರ್ಜನೆಗೆ ಶ್ರೀಗಂಧವೃಕ್ಷವನ್ನು ಬಳಸಿದ್ದ ಪನ್ನಗವು ಸುತ್ತಿ ಅಳಿಯುವಂತೆ, ತಾನು ಮಾಡಿದ ಗಳಗರ್ಜನೆಗೆ ಅಂಜಿ ತನ್ನ ಅಂಗಯಷ್ಟಿಯನ್ನು ಸುತ್ತಿ ಅಳಿದ ಕಾಳಿಯನಗನ ಗಂಟಲನ್ನೇ ಕೃಷ್ಣನು ಒತ್ತಿಬಿಟ್ಟನು . ಒಂದು ಕಯ್ಯಿ ಗಂಟಲನ್ನು ಒತ್ತಿತ್ತು; ಇನ್ನೊಂದು ಕಾಲಸರ್ಪದಂತೆ ಕಾಳಿಯ ನಾಗನದೇಹವನ್ನು ಹಿಡಿದಿತ್ತು . ಹೀಗೆ ಕಾಳಿಯನು ಏಕಕಾಲದಲ್ಲಿ ಪ್ರಾಣವನ್ನೂ ಬಿಟ್ಟಿತು; ಇದ್ದ ಎಲ್ಲ ವಿಷವನ್ನೂ ಕಕ್ಕಿತು ಆ ಮೇಲೆ

ಕೃಷ್ಣನು ಕಾಳಿಂದಿಯ ಸೋರ್ಮುಡಿಯನ್ನು ಹಿಡಿದು ತರುವಂತೆ ಆ ಕಾಳಿಯ ಸರ್ಪನ ಕಳೇಬರವನ್ನು ಹಿಡಿದು ತಂದು ಗೋಪಾಲಬಾಲಕರ ಕೈಯಲ್ಲಿ  ಕೊಟ್ಟು , ಸಾವಿರೆಸಳ ಕಮಲದೊಂದಿಗೆ ಎರಡನ್ನೂ ಕಂಸನಲ್ಲಿಗೆ ಕಳಿಸಿಬಿಟ್ಟು ತಾನು ಗೋಕುಲಕ್ಕೆ ಹಿಂದಿರುಗಿದನು.

ಆಗ ಒಂದು ಅಶರೀರವಾಕ್ಯವು " ಅನುನಯವಿಧಾನ ಪರಾಕ್ರಮೋನ್ನತ ಉರಿಯುವ್ ಕೆಂಡಕ್ಕೆ ಗೆದ್ದಲು ಹತ್ತುವುದು ಸಾಧ್ಯವೇ ? ಜಗತೀಜಯಿಯೆನ್ನಿಸಿದ್ದ ಕಂಸನು ಎಸಗುವಕಹಕವು ನಿನಗೆ ಏನು ತಾನೆ ಮಾಡಬಲ್ಲುದು ? ಎಂದು ಕೇಳಿಬಂತು ಅದನ್ನು ವಿಚಾರ ,ಮಾಡಿ ನೋಡಿ ಕೃಷ್ಣನು, ಮೊದಲಾಗಿ ಕಾಳಿಯನ ವರೆಗೆ ಮಾಡಿದ ಅಪಚಾರವೆಲ್ಲ ದುಷ್ಟ ಹಂಚಿಕೆಯೆಲ್ಲ ಕಂಸನದೆ ಕೃತ್ಯವೆಂದು ನಿಶ್ಚಯಿಸಿಕೊಂಡು ಅವೋಂದೋಂದನ್ನೂ ನೆನಸಿಕೊಂಡು ಉಂಟಾದ ಕ್ರೋಧವು ಒಮ್ಮೇಗೆ  ಉಕ್ಕಿ ಬಂದಂತಾಗಿ ಕಂಸನು ಮಾಡುವ ಕಾಪಟ್ಯವನ್ನೇಲ್ಲ ರಹಸ್ಯವಾದ ಪಿತೂರಿಗಳನ್ನೇಲ್ಲ, ಅರಿತುಕೊಂಡೂ ಕೆಲವು ಕಾಲ ಸುಮ್ಮನಿದ್ದನು.

ಅತ್ತ ಸಹಸ್ರಪತ್ರದೊಡನೆ ಕಾವುಳ್ಳ ಕನ್ನೈದಿಲೆಯನ್ನುಂಟುವಂತೆ ನಾರಾಯಣನು ಅಟ್ಟಿದ ಹಾವನ್ನು ಹೂವನ್ನೂ  ಕಂಸನು ನೋಡಿ ಹಾವು ಹತ್ತಿಕೊಂಡು ಅಂಜಿಕುಳಿಯಂತೆ ಬೆದರಿದನು. ಸ್ವಲ್ಪ ಹೊತ್ತು ತಡೆದು ತನ್ನಲ್ಲಿಯೇ ಹೀಗೆ  ಚಿಂತಿಸಿದನು; ಶತ್ರುವು ಬಲಯತನಾಗಿವಿಟ್ಟನು ಕಾಳಿಯನಾಗನೇ ಇವನನ್ನು ಕೊಲ್ಲಲಾರದೆ ಹೋದನಲ್ಲವೇ; ಇನ್ನು ಈ ಕೃಷ್ಣನನ್ನು ಕೊಲ್ಲಬಲ್ಲವರಾರು?ಹೀಗೆ ಕೊಲ್ಲಲು ಸಾಧ್ಯವಿಲ್ಲದ ಹಗೆಯನ್ನು ಎಂದಿಗೂ ಏನು ಮಾಡಿದರೂ ಗೆಲ್ಲಲು ಸಾಷ್ಯವಿಲ್ಲ ಎಂದುಕೊಂಡು ಸುಮ್ಮನಿರುವುದು ಯುಕ್ತವೇ? ಹೀಗೆ ಚಿಂತಿಸಿ ಮಂತ್ರ ಶಾಲೆಗೆ ಹೊಗಿ ಮಂತ್ರಿಗಳಾನ್ನು ಬರಮಾಡಿಕೊಂಡು ಈ ವಿಚಾರವಾಗಿ ಅವರನ್ನು ಪ್ರಶ್ನಿಸಲಾಗಿ ಅವರು ಹೀಗೆ ಸಲಹೆ ನೀಡಿದರು " ಹಗೆಯಬಲ್ಲಿದನಾದನು. ಕೊಟ್ಟಎಲ್ಲ ಬಗೆಯ ಬಾಧೆಗಳಾನ್ನೂ ಗೆದ್ದುಬಿಟ್ಟನು. ಇನ್ನೂ ಮುಚ್ಚುಮರೆಯೇಕೇ? ಇನ್ನು ಉರ್ವಿಶ್ವರರು ವೈರಿಗಳು (ಎಂದಿನಂತೆ ತಮಗೆ ಅಧೀನವಾಗಿರರು) ಏಕೆಂದರೆ ಯಾರನ್ನು ಯರು ಬಡಿದರೂ ನಿವಾರಿಸುವವರಾರು? (ಹಗೆಯಾದಕೃಷ್ಣನಬೆಂಬಲ ಎಲ್ಲರಿಗೂ ಇರುತ್ತದೆ; ಅದ್ದರಿಂದ ಕಂಸನ ಮೇಲೆ ತಪ್ಪುತ್ತದೆ ಎಂದು ಆಶಯ) ನಮ್ಮ ಸಲಹೆಯನ್ನು ಕೇಳು ಮಲ್ಲಗಾಳೆಗವನ್ನು ಮಾಡಿಸಿ ಶತ್ರುವನ್ನು ಕೊಲ್ಲಿಸು . 'ಲೋಕಕ್ಕೇಲ್ಲಾ ತಿಳಿದಿರುವಂತೆ ತಂಗಿಯ

ಮಗನೇ ಆಗಿರುವವನನ್ನು ಹೇಗೆ ಪ್ರತ್ಯಕ್ಷವಾಗಿ ಕೊಲ್ಲಿಸಲಿ ಎಂದು ನೀನು ಭಾವಿಸುವುದಾದರೆ, ಏನಯ್ಯಾ ತಮ್ಮಂದಿರು ಮಕ್ಕಾಳು ಮೊದಲಾದವರಲ್ಲದೆ ದೊರೆಗಳ ಶತ್ರುಗಳೆಂಬುವರು ಬೇರೆ ಒಂದು ದ್ವೀಪದಿಂದ ಬರುವ ಹೊಸವರೇನು? ಮೊದಲು ಉಪಾಯದಲಿ ಮಲ್ಲರಿಂದ ಮುರಿಸು. ಮಲ್ಲರು ಸೋತರೆ ಅಗಲೇ ಮದದಾನೆಗಳಿಂದ ತುಳಿದಿಕ್ಕಿಸು. ಅವೂ ಸೋತರೆ ಒಟ್ಟಿದ ಕಿಚ್ಚಿನಂತಿರುವ ಖಡ್ಗಧಾರಿಗಳ ಪಡೆಗೆ ಹೇಳು; ಅವರೂ ಸೋತರೆ ನೀನೊಬ್ಬನೇ ಕಾಲಯಮನಂತೆ ಕಾದಿ ಕೊಂದುಹಾಕು ಎಂದರು  ಕಂಸನೂ 'ಇದೆ ಸರಿಯಾದ ಆಲೋಚನೆಯೆಂದು ನಿಶ್ಚಯಿಸಿಕೊಂಡನು. ಆ ಪ್ರಸ್ತಾಪದಲಿ ಪಸಿಯ್ರನು ಬ್ಬ್ಮ ನಮಸ್ಕರಿಸಿ " ಗಜಶಾಲಾಧ್ಯಕ್ಷನು ಬಂದು ನಿಂತಿದ್ದಾನೆ ಎಂದು ಅರಿಕೇ ಮಾಡಿದನು. ಕಂಸನು ಬರಹೆಳೆನ್ನುತ್ತಲೂ ಅರೋಹಕನು ಬಂದು ಕಂಸನಿಗೆರಗಿ ಮುಂದೆ ನಿಂತ ಹೀಗೆ ಬಿನ್ನವಿಸಿದನು. " ಪ್ರಭು ನಮ್ಮ ಆನೆಯು ಕೊಲೆಗೆಲಸದಲ್ಲಿ ಯಮನಿಗೆ ಸಮಾನ; ಕ್ರೋಧದಲ್ಲಿ ಅಗ್ನಿಗೆದಾಯಾದಿ ಸಾಮರ್ಥ್ಯದಲ್ಲಿ ಸಿಡಿಲಿಗೆ ಸಹೋದರ; ಮದದಲ್ಲಿ ಕಾಳಿಗೆ ಕೆಳೇ ; ಕಾಲ ಬಲದಲ್ಲಿ ಗರುಡನಿಗೆ ಗುರು; ಮುಳಿಸಿನಲ್ಲಿ ಮಾರಿಗೆ ಉಪಾಧ್ಯಾಯ. ಹೀಗೆ ನಿನ್ನ ಗಂಧಸಿಂಧುರತಿಯ ಅಗ್ಗದಗ್ಗಳಿಕೆ ಅತಿಶಯವಾದುದಾಗಿದೆ. ಇದಕ್ಕೆ ಇರುವಂತೆ ಬಲವಾಗಲಿ ಮದವಗಲಿ ಪ್ರತಪವಾಗಲಿ ಭರಸಹಸತ್ವವಾಗಲಿ ಈ ಸ್ಥಿರಮೋಹದಯವ್ವಾಗಲಿ ಮತ್ತಾವ ಮದದಂತಿಗೂ ಇಲ್ಲ. ಹೀಗೆ ಬಿನ್ನವಿಸಿ ತನ್ನ ಮನಸ್ಸಿನ ವಿಷಾದವನ್ನುೃ ಕಳೆದ ಆ ನೀಷಾದಿಯ ಮಾತಿಗೆ ಗಮನವಿತ್ತು. ಅವನಿಗೆ ಉಚಿತ ಮನ್ನಣೆ ಮಾಡಿ " ನನ್ನ ಹಗೆಯೂ ಇಷ್ರವೂ ಇಂದೂ ಕೈವಶವಾಯಿತು. ಕೃಷ್ಣನನ್ನು ಮೊದಲು ಕೊಲ್ಲುತ್ತೇನೆ; ಇನ್ನು ಕೊಂದೇ ತೀರುತ್ತೇನೆ – ಎಂದು ಹೇಳಿಕೊಂಡು ತೊಡೆಯನ್ನಪ್ಪಳಿಸಿ ತಡೆಯದೆ ಚಾಣೂರಮಲನಿಗೆ ಕರೆಕಳುಹಿಸಿದನು. ಅವನು ಬರುವಷ್ಟರಲ್ಲಿ ಗಜಶಾಲಾಧ್ಯಕ್ಷನಿಗೆ ವೀರಾವೇಶದಿಂದ ಮೆಯ್ಯರಿಯದೆ ಆ ಮಹಗಜದ ಪೂರ್ವವೃತ್ತಂತವನ್ನುೃ ವಿವರಿಸಿದನು.

" ಹಿಂದೆ ಎಂದೋ ಒಂದು ಬಾರಿ ಯುದ್ದೋದ್ಯೋಗವು ಕೈಗಟ್ಟಿದಾಗ , ಕೈಟಭನೆಂಬ ದಾನವನಿಗೆ ನಾನು ಪ್ರಾಣ ದಾನ ಮಾಡಿದ್ದೆ. ಆದ್ದರಿಂದ ಆತನು ನನಗೆ ಮಿನೀತನಾಗಿ ' ನೀನು ನನಗೆ ಉಪಕಾರಮಾಡಿದ್ದೀಯೇ ನಿನಗೆ ನಾನು ಈ ಭವದಲ್ಲಿ ಸೇವಾಪರನಾಗಿ ಇರುವೆನಲ್ಲದೆ ಗರ್ವಿಸುವವನಲ್ಲ. ಈಗ ನನಗೆ ಏನಪ್ಪಣೆ ಎಂದು ಹೇಳಿದನು ನಾನು ಆ ದಾನವನ ಆಳಾವನ್ನೂ

ಕಡಪನ್ನು ಕಯ್ಪನ್ನೂ ಕಂಡು ಈ ರಾಕ್ಷಸನು ಆನೆಯಾಗಲು ತಕ್ಕವನೆಂದು ವಿಚಾರಮಾಡಿ ನೋಡಿ ನೀನು ನನಗೆ ಯುದ್ಧೋದ್ಯೋಗಕ್ಕೆ ಮೀಸಲಾದ ಆನೆಯಾಗಿರು. ಎಂದನು. ಅದೇ ಪ್ರಕಾರ ಅತನೂ ಆನೆಯಾಗಿ ನನ್ನಲ್ಲಿಇದ್ದಾನೆ. ಸಹಜಬಲಶಾಲಿಯಾದ ಅಜಿತನೆಂಬ ಆನೆಯನ್ನು ಪರಾಜಿತಮಾಡಿ 'ಅಜಿತಂಜಯ ನೆಂಬ ಹೆಸರನ್ನೂ ವಿಕಾಸಾಗೊಂಡ ಏಕಕುಸಿಮಾಕಾಸಾರಸರಿತ್ಸರೋವರಗಳನು ಹೊಕ್ಕು ಕುವಲಯವನ್ನೇ ( ನೀಲೋತ್ಪಲ) ಕಿತ್ತು ಮಸ್ತಕಪಿಂಡದಲ್ಲಿ ಒಟ್ಟಿಕೊಳ್ಳುತ್ತಿದ್ದುದರಿಂದ ' ಕುವಳಾಯಪೀಡ ಎಂಬ ಹೆಸರನ್ನೂ ಪಡೆಯಿತ್ತು.

ಕಂಸನು ಹೀಗೆ ಕುವಳಾಯಪೀಡದ ವೃತ್ತಾಂತವನ್ನು ತಿಳಿಸಿ ಆ ಮಹಾಗಜದ ಮಾವುತನನ್ನು ಬಳಿಗೆ ಕರೆದು ಆನ ಕಿವಿಯಲ್ಲಿ ' ನಾಳೆ ನೀನೂ ನಿನ್ನಾನೆಯೂ ಪುರದಗೋಪುರದ್ವಾರದೆಡೆಯಲ್ಲಿ ಬಂದು ಸಿದ್ಧವಾಗಿದ್ದು. ಮಧುರಾಪುರಪ್ರವೇಶ ಮಡುವ ನಂದನ ಮಗನನ್ನು ಯಮಪುರವನ್ನು ಸೇರುವಂತೆ ಮಾಡು ಎಂದು ಆಜ್ಞಾಪಿಸಿ ಕಳಿಸಿದನು. ಅಷ್ಟರಲ್ಲಿ ಚಾಣೂರನು ಬಂದು ಭುಜಾಸ್ಫಾಲಾನ ಮಾಡಿಕೊಂಡು ' ಬೆಸಸು ಬೆಸಸು ಎಂದು ಹೇಳಿ ಕಾರ್ಯಾಚರಣೆಗೆ ಸಿದ್ದನಾಗಿ ನಿಂತನು. ಅದಕ್ಕೆ ಕಂಸನು ಚಾಣೂರ ನಾಳೆ ನಿನಗೆ ಮೆಚ್ಚು ಕೊಡುವುದಿದೆ. ನಿನ್ನೊಡನೆ ಹುರುಡಿಸುವ ಆ ನಂದಸುತನ ಮೂಗಿಂದ ಬಾಯಿಂದ ರಕ್ತವು ಚಿಮ್ಮಿ ಹೊಮ್ಮುವಂತೆ ಅವನನ್ನು ಒತ್ತಿ ಮುರಿದುಬಿಡು. ನನಗೆ (ಕೃಷ್ಣನ ದೆಸೆಯಿಂದಾದ ) ವ್ಯಥೆಯನ್ನು ಕಳೆಯುವುದಿದ್ದರೆ ಇಷ್ಟನ್ನು ಮಾಡಿ ' ಎಂಹು ಹೇಳಿದನು ಕಂಸನ ಆ ಮಾತಿಗೆ ಚಾಣೂರಮಲ್ಲನು ಮುನಿದು ಹೀಗೆ ಹೇಳಿದನು; " ಪ್ರಭು ನೀವು ಈ ಮಾತನ್ನು ಆಡದಿರಿ. ಅಯ್ಯಾ! ಕಿಟವನ್ನು ಕಿವುಚಿಹಾಕುವುದಕ್ಕೆ ಈ ಚಾಣೂರನೇಕೆ ಬೇಕು? ನಾನು ನನ್ನವರಿಗೆ ಮನಸ್ಸು ಮಾಡಲು ಹೇಳಿದರೆ ಕೃಷ್ಣನೆಂಬ ಮಹುಷ್ಯನೊಬ್ಬನು ಉಂಟೇ ಎನ್ನಿಸಿಬಿಡುತ್ತಾರೆ. ನನಗೆ ಇನ್ನೂ ಬೇಕಾದರೆ ದಿಕ್ಕುಗಳನ್ನು ಕಬಳಿಸು ಎನ್ನು; ಏಕೆ, ಆಕಾಶವನ್ನೇ ಉಡಗಿ ಕಟ್ಟು ಎನ್ನು ; ಸೂರ್ಯನನ್ನು ಹೊಸೆದು ಈಡಾಡು ಎಂದು ಹೇಳು ದಿಗ್ಗಜದೊಡನೆ ಹೋರಾಡು ಎಂದು ಹೇಳು ಇದು ಬಿಟ್ಟು ನಮ್ಮ ಹಸುಗಳಾನ್ನು ಕಾದುಕೊಂಡು ಉಣ್ಣುವ ಹಾಲುಹಲ್ಲುಗಳ ಹಸುಳೆಯನ್ನು ಬಡಿದು ಹಾಲು ಎಂದು ಹುಡುಗರಿಗೆ ಹೇಳಿ ಮಾಡುಸುವಂಥ ಕೆಲಸವನ್ನು ಚಾಣೂರಮಲ್ಲನಾದ ನನಗೆ ಅಪ್ಪಣೆ ಮಾಡುವುದು ಸರಿಯೇ? ಹಾಗೆ ನೋಡಿದರೆ, ನಾನು ಜಟ್ಟಿ; ಅವನು ಗೊಲ್ಲ ಎಂದಾಗಲೇ, ದೇವ, ಅವನು

ಹೋರಾಟದಲ್ಲಿ ನನಗೆ ಎಷ್ಟಕ್ಕೆ ಬರವಲ್ಲನು. ನನಗೂ ದೇವಕಿಗೂ ಮಗನಿಗೂ ಅಜಗಜಾಂತರವಲ್ಲವೇ? ಆದರೂ ದೇವರ ಅಭಿಪ್ರಾಯ ನನಗೆ ತಿಳಿದಿದೆ. ದ್ರೋಹಿಗಳನ್ನು ಆನೆಗಿಕ್ಕುವುದೇ ತಕ್ಕುದು; ತಕ್ಕುದಲ್ಲ ಎನ್ನಲಾಗದು. (ಚಾಣೂರನೆಂಬ ಆನೆಯ ಕೈಗೆ ಕೃಷ್ಣನೆಂಬ ದ್ರೋಹಿಯನ್ನೊಪ್ಪಿಸಿ ತುಳಿಸಿ ಬಿಡಲೋ ಮ್ ಸೀಳಿ ಹಕಿಸಲೋ ಕಂಸನು ಆಲೋಚಿಸಿದ್ದಾನೆ ಎಂದು ಆಶಯ ) ನಾಳೆಯ ದಿನ ದೇವಕಿಯ ರೋದನ ಧ್ವನಿಯನ್ನು ಅಖಡದಲ್ಲಿಯೇ ದೇವರ ಕಿವಿ ಮುಟ್ಟುವಂತೆ ಮಾಡುತ್ತೇನೆ. ಬೇರೆ ಬೇರೆಯಾಗಿ ಈ ಮೂರು ಲೋಕಗಳೂ ಉಂಟಷ್ಟೆ. ಕ್ರುದ್ಧರಾದವರು (ಎಲ್ಲ ವೈರಿಗಳೂ) ಅಲ್ಲಿರದೆ ಮತ್ತೆಲ್ಲಿ ತಾನೆ ಇರುವುದು ಸಾಧ್ಯ ? ಪೂತನಿ ,ಖರಕೇಶಿ ಯಮಸ್ವರೂಪರಾದ ಯಮುಳರ್ಜುನರು, ಅರಿಷ್ಟ ಶಕಟ, ಕಾಳಿಯನಾಗ – ಇವರನ್ನೆಲ್ಲ ಕೃಷ್ಣನ ಬಸಿರಿಂದ ನಾನು ಹೊರಟೆಗೆಯದಿದ್ದರೆ ನೀನನ್ನು ನನಗೆ ಅನ್ನವಿತ್ತು ಸಲಹೆಬೇಡ.

ಈ ಪ್ರಕರವಾಗಿ ಚಾಣೂರಮಲ್ಲನು ಕಂಸನಿಗೆ ಭರವಸೆಯಿತ್ತು ಹಿಂದಿರುಗಿದನು. ಕಂಸನು ಗೃಹಮಹತ್ತರರನ್ನು ಕರೆದು ನಾಳೆ ಮಲ್ಲಗಾಳೆಗ ಎಂದು ತಿಳಿಸುತ್ತಲೂ ಅವರು 'ಮಹಾಪ್ರಸಾದವೆಂದು ಹೇಳಿ ಅಖಾಡವನ್ನು ಸಿದ್ಧಪಡಿಸಿದರು.

ಸಿದ್ಧಾವಾದ ಮಲ್ಲರಂಗವು ಪತಾಕಾಪಟಲಗಳು , ರತ್ನಾವಳೀತೋರಣಗಳು ಇವೇ ಮೊದಲಾದವುಗಳಿಂದ ಅಲಂಕೃತವಾಯಿತು. ಅದರಲ್ಲಿ ಭಾರ ತಡೆಯುವಂಥ ಹಲಗೆಗಳು ಕಂಭ ಕಲಶ ಗವಾಕ್ಷ– ಈ ಮೊದಲಾದವನ್ನೊಳಗೊಂಡು ಧರಣಿಯೆಂಬಾನೆಯ ಉತ್ತಮಾಂಗದಂತೆ ವೇದಿಕೆಯೊಂದು ಸಿದ್ದವಾಯಿತು. ಮಾರನೆಯ ದಿನ ನಿಯಮಿತ ವೇಳೆಗೆ ವಿಷಮುಖನಾದ ಕಂಸನು, ತೋರದುರುಬು ಹೆಡೆಯನ್ನು ಹೋಲುತ್ತಿರಲು ,ಹಿಡಿದಕತ್ತಿ ಗುರಾಣಿಗಳು ಭೀಕರಾಕಾರಾವನ್ನು ಪ್ರಕಟಿಸುತ್ತಿರಲು ಹಚ್ಚಿಕೊಂಡ ಶ್ರೀಖಂಡದ ಕಂಪೂ ಮುಡಿದ ಕೇದಗೆಯ ಕಡು ಗಂಪೂ ದೆಸೆದೆಸೆಗೆ ಪಸರಿಸುತ್ತಿರಲು ಗರುಡಧ್ವಜನೆಂಬ ಗರುಡನಬಾರಿಗೆ ವಧ್ಯ ಶಿಲೆಯನ್ನೇರುವ ನಾಗಕುಮಾರನಂತೆ ಬಂದು ಆ ವೇದಿಕೆಯನ್ನೇರಿದನು. ಅವನನ್ನು ಅನುಸರಿಸಿ ನೆತ್ತರ ಪಾನಗೋಷ್ಠಿಗೆ ಆತನ ಬಳಿಸಂದ ಯೋಗಿನಿಯರಂತೆ ಅಂಗನಾಜನವೂ ಬಂದಿತು. ಹಾಗೇಯೇ ಸಕಲ ನಾಯಕರು ದಾಯಕರೂ,ದ,ಂಡನಾಥರೂ, ಮಡಲೀಕರೂ, ಮಹಪ್ರಧಾನರು, ಮಹಿಪಾಲಕುಮಾರರು ಸಲ್ಗೊಂಡು

ಬಂದು ಮುಗಿಲನ್ನೇರುವ ಖೇಚರ ರಾಜರಂತೆ ಚೌಪಳಿಗೆಯನ್ನೇರಿದ್ದರು ಗಗನದಲ್ಲಿ ದೇವತೆಗಳು ಕಿಕ್ಕಿರಿದರು ; ಇಂದ್ರನೂ ಬಂದಿದ್ದನು. ಕೃಷ್ಣ ಚಾಣೂರರ ಕಾಳಗವನ್ನು ಕಣ್ಣು ತುಂಬ ಕಾಣಬೇಕೆಂಬ ಕುತುಹಲದಿಂದ ಉತ್ಸಾಹಗೊಂಡು ನಾರದನು ಬಂದಿದ್ದನು.

ಈ ಹೊತ್ತಿಗೆ ಚಾಣೂರಮಲ್ಲನು ಮಲ್ಲರಂಗಕ್ಕೆ ಬಂದನು. ನೆಲಕ್ಕು ಆಕಾಶಕ್ಕೂ ಕೀಲುಗೊಂಡಂತಹ ದೀರ್ಘಾಕಾರ ; ಎಳೆಂಟು ಆನೆಗಳನ್ನು ಒಂದು ಮಾಡಿದಂತಹ ಮಹಾಗಾತ್ರ ಎರಡು ತೊಡೆಗಳು ಕಾಣುವಂತೆ ಒತ್ತಿ ಏರಿಸಿ ಬಿಗಿದುಟ್ಟ ಪಟ್ಟೆಯ ಚಲ್ಲಣ ತಲೆಯ ಗಾತ್ರವನ್ನು ಮೂದಲಿಸುವಂತಿದ್ದ ಮಹಾಭುಜಾಗ್ರಗಳಿಗೆ ದೃಷ್ಟಿಯಗದಂತೆ ಇಟ್ಟ ಕಸ್ತೂರಿಯ ಬೊಟ್ಟು; ನೆಲವನ್ನು ತಬ್ಬಲು ಸಾಲುವಂತಹ ತೋಳುಗಳು, ತಾಕಿದ ಬೆರಳುವಡೆಯ ಹೋಗುವಂತಹ ಬಲು ವರರಾದ , ಉಕ್ಕಿಗೆ ಸಮಾನವಾದ ಕೈಗಿಡಿ; ಕಲ್ಲನ್ನು ಭೇದಿಸಿಕೊಂಡು ಹೋಗಲು ಸಾಕಾಗುವಂತಹ ಭಾರ; ಮಿಂಚಿನಿಂದ ಮಾಡಿದಂತಹ ನುಣುಪು; ಶ್ರೀಖಂಡದ ಲೇಪನ ಧರಿಸಿದ ಜವಿಯ ದಂಡೆ ಇವುಗಳಿಂದ ಚಾಣೂರನು ಅತ್ಯಂತ ಬಲಿಷ್ಠನೂ ಅತಿ ರೌದ್ರಾಕೃತಿಯ ಮಹಮಲ್ಲನು ಆಗಿದ್ದನು. ಭುಜಾಸ್ಪಾಲನಮಾಡುತ್ತ ಬೊಬ್ಬಿಡುತ ಪೌರುಷದಿಂದ ಬೀಗ ಬಿಂಕಗೊಂಡು ಮದದಾನೆಯ ನಡೆಯನ್ನು ಅನುಕರಿಸುತ್ತ ಚಾಣೂರಮಲ್ಲನು ಮಲ್ಲರಂಗಕ್ಕೆ ನಡೆದು ಬಂದನು ಮಲ್ಲನ ಕೆನ್ನೆಗಳಿಗೆ ವಿಶೇಷವಾಗಿ ಕಿವಿಯ ಕಸ್ತೂರಿ ಕರಗಿ ಇಳಿಯುತ್ತಿದ್ದು ಕರೀಂದರ ಕಾಯದ ಬಲಚಲಗಳು ತನ್ನಲಿ ಪಲ್ಲಟಿಸಿತೇನೋ ಎನ್ನುವಂತೆ ಆಗಿ , ಮದೋದಕವೇ ಜಿನುಗುತ್ತಿದೀನ್ನುವಂತೆ ಇತ್ತು ಬೆಟ್ಟವನ್ನು ಮುಸುರಿ ಮುತ್ತುವ ಮುಗಿಲುಗಳ ಹಾಗೆ ಆ ಮಲ್ಲನಿಕ್ಕಿದ ಗಂಧಾನುಲೇಪನದ ಪರಿಮಳದಿಂದ ಸೆಳೆಗೊಂಡರೂ, ಮಹಾಮಲ್ಲನಾದ್ದರಿಂದ ಹೆದರಿ ಹೆದರಿಯೇ ದುಂಬಿಗಳ ಸಾಲುಸಾಲು ಮುಸುರಿ ಮುತ್ತುತ್ತಿದ್ದವು.

ಐರಾವತವನ್ನು ಉಳಿದ ಆನೆಗಳ ಗುಂಪು ಬಯಸಿ ಹಿಂಬಾಲಿಸಿ ಬರುವಂತೆ , ಚಾಣೂರನನ್ನು ಹಿಂಬಾಲಿಸಿ ಧೀರೋಧತ್ತರಾದ ಮುಷ್ಟಿಕ ಮುಖ್ಯರಾದ ಹಲವರು ,ಮಲ್ಲರು ಮಲ್ಲರಂಗಕ್ಕೆ ಬಂದರು. ಹಾಗೆ ಬಂದು ನೆತ್ತದ ಹಾಸನ್ನು ಸುತ್ತುವರಿದ ಕಿಳಿತ ಜೂಜಾಗಾರರಂತೆ ಅಖಾಡವನ್ನು ಬಳಸಿಕೊಂಡು ಕುಳಿತುಕೊಂಡರು . ಎಡೆಬಿಡದೆ ಆ ಮಲ್ಲರಂಗವನ್ನು , ಕುಡಿಮಿಂಚಿನ ತಟ್ಟಿ ಬಳಸಿದಂತೆ ಕತ್ತಿ ಕಡಿತಲೇ ಗುರಾಣೆಗಳನ್ನು ಹಿಡಿದು ಸಮರ್ಥ ಯೋಧರು ಸುತ್ತುವವರಿದ್ದಿದನು. ಸಮುದ್ರದಲೆಗಳೂ

ದಿಕ್ಗಜಗಳೂ ನೆಲವನ್ನು ಬಳಸಿದಂತೆ ಆ ಮಲ್ಲರಂಗವನ್ನು ತುರಗಳದಳವು ಮದದಾನೆಗಳು ಬಳಿಸಿದುವು .

ಹೀಗೆ ಕಂಸನು ಕೃಷ್ಣನಿಗೆ ಕೆಡು ಮಾಡಲು ಆಲೋಚಿಸಿದ್ದನ್ನು ಕಂಡು, ಪ್ರತಿಯಾಗಿ ವಸುದೇವನು ಬಲದೇವನನ್ನು ಕೂಡಿಕೊಂಡು ಚತುರ್ಬಲದೊಂದಿಗೆ ನಿಯುದ್ಧರಂಗದ ಪಕ್ಕದಲ್ಲಿಯೇ ಯುದ್ಧ ಸನ್ನದ್ಧ ನಾಗಿದ್ದನು. ಈ ವೇಳೆಗೆ ಉಧ್ಧತನಾದ  ಕಂಸನು ಪಡಿಯರನನ್ನು ಬಳಿಗೆ ಕರೆದು ಅವನ ಕಿವಿಯಲಿ ಏನೋ ರಹಸ್ಯವಾಡಿದನು. ಆತನುಹಾಗೆಯೇ ಮಾಡುವದಾಗಿ ಹೇಳಿ ಹೋಗಿ ಅಲ್ಲಿಂದ (ಗೋಕುಲದಲ್ಲಿದ್ದ) ಯಾಶೋದೆಯಬಳಿಗೆ  ನೇರವಾಗಿ ಪಯಣಿಸಿ ಬಂದನು. ಆಕೆಯನ್ನು ಕಂಡು ಕಂಸನು ಮಾತುಗಳಾನ್ನು ಅವಳಿಗೆ ಅರಿಕೆ ಮಾಡಿದನು . “ ನಿನ್ನ, ಮಗನು ಕಾಳಾಗವೆಂದರೆ ಎಲ್ಲಿಗಾದರೂ ಸರಿಯೆ, ಹುರುಡುಗೊಂಡು ಸಡಗರಪಡುತ್ತಾನೆ; ಅವನಿಗೆ ಆ ಹವ್ಯಾಸವು ಆಸಕ್ತಿಯೂ ದಿಟವಾಗಿ ಇದ್ದ ಪಕ್ಷದಲ್ಲಿ ಹೊರಟು ಬಂದು ಚಾಣೂರಮಲ್ಲನೊಡನೆ ಮಲ್ಲಕಾಳೆಗ ಮಾಡಿ ಪರ್ವಕ್ಕೆ ನೆರೆದ ಅರಸುಮಕ್ಕಳ ಕಣ್ಣಿಗೆ ಹಬ್ಬನನ್ನು ಮಾಡಲಿ – ಎಂದು ಕಂಸ ಮಹಾರಾಜನು ಅಪ್ಪಣೆ ಮಾಡಿ ನನ್ನನ್ನು ಕಳುಹಿಸಿದ್ದಾನೆ. ಈ ಲೇಪನದ್ರವ್ಯಗಳನ್ನೂ, ತಿಲಕವನ್ನೂ ಅಲಂಕರಿಸಿಕೊಂಡು ಬರಲಿ; ಕೊಳ್ಳಿ; ಇವನ್ನು ಹಿಡಿಯಿರಿ ಕೃಷ್ಣನೆಲ್ಲಿ?

ಹೀಗೆ ಹೇಳಲು  ಯಶೋದೆ ಮುಗುಳ್ನಗೆ ನಗುತ್ತ ಹೇಳಿದಳು “ ಏನಣ್ಣಾ ನನ್ನ ಮಗನು ಇಂಥವೇನನ್ನು ಈ ಮೊದಲು ತಿಕ್ಕಿ ತಿಡಿಕೊಂಡು ಚಕಟನನ್ನ, ಪೂತನಿಯನ್ನ, ಕಾಳಿಯನನ್ನ, ಯಮಳಾರ್ಜುನರನ್ನ, ನರಕನನ್ನ, ಧ್ವಂಸಮಾಡಿದನು? ಹೇಳು, ಈ ಇವರಿಗಿಂತ ಚಾಣೂರನು ಹೆಚ್ಚೇನು? ದಿಟವಾಗಿ ಸಾಮರ್ಥ್ಯವಿದ್ದವನನ್ನು ಕತ್ತುರಿ ವಾಣಿಯನ್ನೂ ಮತ್ತೆಮತ್ತೆ ಹರಿತಮಾಡಬೇಕೇನು? ಸಿಂಹವು ಆನೆಯನ್ನು  ಕೊಲ್ಲಬೇಕಾದರೆ ಅದಕ್ಕೇ ಮೊದಲು ಯಾವ ಅಭ್ಯಾಸವನ್ನು ಮಾಡಿಕೊಂಡಿತು? ಮೂರಾಂತಕನೂ ಅಂತಕನೂ ಕೊಲ್ಲುವದನ್ನು ಇನ್ನು ಮೇಲೆ ಕಲಿಯಬೇಕೆ? ಕೇಳಿ  ನನ್ನ ಮಗ ನೀರಿನಲ್ಲಿ ನೆನೆಯನು ಬಿಸಿಲಲ್ಲಿ ಬಾಡನು, ಬೆಂಕಿಯುಲ್ಲಿ ಬೇಯನು, ಯಮನಕೈಯಲ್ಲಿ ಸಾಯನು. ಆದ್ದರಿಂದ ಈ ನಿಮ್ಮ ತಿವುರೂ ತಿಲಕವು ಏನೋಂದು ಬೇಡ . ಈಗಲೇ ಕರೆಂದುಕೊಂಡು ಹೋಗಿ  ಈ ಮಾತು ಆಡುವವೇಳೆಗೆ ಅಲ್ಲಿಗೆ ಕೃಷ್ಣನು ಬಂದನು. ಬಂದು, ಅಮ್ಮಾ

ನನಗೆ ಹಸಿವು ಎಂದನು. ಯಶೋದೆ ಕೃಷ್ಣನನ್ನು ಕುರಿತು, ‘ ಮಗುಮೊಸರು ಮಾಡಿಟ್ಟಿದ್ದೇನೆ. ಹಾಗೆಯೆ ಬಾಡಿಸಿದ ಮೊಸರನ್ನು ಸೊಗಸಾಗಿ ಮಾಡಿ ತಂದ್ದಿದ್ದೇನೆ ನಿನಗೆಯೇ ಇವನ್ನು ಲಂಚವಾಗಿ ನೀಡುತ್ತೆನೆ ನನ್ನ ಮಲ್ಲ ಆ ಚಣೂರಮಲ್ಲನನ್ನು ಕೊಂದು ಬಂದು ಆಮೇಲೆ ಉಣ್ಣುವೆಯಂತೆ. ಅಷ್ಟು ಮಾಡಿ ಬಂದರೆ ನಿನ್ನ ಮೈಬಲವೂ ಹೆಚ್ಚಾಗುತ್ತದೆ; ಹಸಿವು ಚನ್ನಾಗಿ ಆಗಿರುತ್ತದೆ. ಎಂದಳು ಅದಕ್ಕೆ ಕೃಷ್ಣನು ಹರ್ಷಗೊಂಡು ಉಬ್ಬಿದನು. “ ಆಹಾ ಸ್ವರ್ಗವೇಕಾಳೇಗವಿರಬೇಕಾದರೆ ಕೂಳನ್ನು ಕಟ್ಟಿ ಕೊಂಡೇನೂ? ಎಂದು ಹೇಳಿ , ಬಂದ ಪಡಿಯರರನ್ನು ಕುರಿತು ‘ ಇಕೋ ಈಗಲೇ ಬಂದೇ, ನೀವು ನಡೆಯಿರಿ ಎಂದು ತನಗೆ ಮೊದಲು ಅವರನ್ನು ಕಳಿಸಿದನು ತನೊಬ್ಬನನ್ನು ಬಿಟ್ಟು ತನ್ನೋರಗೆಯ ಗೋಪರೆಲ್ಲರಿಗೂ ಮಲ್ಲವೇಷವನ್ನು ಹಾಕಿಸಿ, ತಾಯಿಗೆರಗಿ ವೀರಲಕ್ಷ್ಮಿಗೆ ವಲಭನಾಗೆಂದು ಅವಳಿಂದ ಹರಕೆಗೊಂಡು ಗೋವಳರು ತಿತ್ತಿರಿಗಾಳೆ ಕೊಳಲು ಕೊಂಬು ಎಕ್ಕವದ್ದಳೇ ಮೊದಲಾದ ವಾದ್ಯ ಧ್ವನಿಗಳನ್ನು ಉಂಟು ಮಾಡುತ್ತ ಕೋಲಾಹಲ ಮಾಡುತ್ತಿರಬೇಕಾದರೆ ಮಧುರಾನಾಗರಿಗೆ ಉತ್ಸಾಹದಿಂದ ಪ್ರಯಾಣ ಮಾಡಿದನು.

ಈ ನಡುವೆ ಕಂಸನಿಂದ ಹಿಂದೊಂದು ಕಾಲದಲ್ಲಿ ಉಪಕಾರಪಡೆದ ಮಧುವೆಂಬ ರಾಕ್ಷಸನು ಅವನ ಅಪ್ಪಣೆಯಂತೆ ಅಗಸನಾಗಿ ಬಂದು ‘ಕೃಷ್ಣನನ್ನು ಬಟೆಯೊಗೆದ ಹಾಗೆ ಒಗೆದು ಬಿಡುತ್ತೇನೇ ಎಂದುಕೊಂಡು ಅವನಿಗಾಗಿ ನಿರೀಕ್ಷಿಸುತ್ತ ಯಮುನಾನದಿಯ ಒಂದೆಡೆಯಲ್ಲಿಬಟ್ಟೆಯೊಗೆಯುತ್ತಿದ್ದನು. ಕೃಷ್ಣನು ಅದೇ ದಾರಿಯಲ್ಲಿ ಬರುತ್ತಿರುವಾಗ ಈ ಅಗಸನು ಕಣ್ಣಿಗೆ ಬಿದ್ದನು. ಅವನ ಮುಂದೆ ಒಟ್ಟಿದ್ದ ಮಡಿಬಟ್ಟೆಗಳನ್ನೂ ಜೊತೆಯ ಗೊಲ್ಲರು ಉಟ್ಟಿದ ಮೈಲಿಗೆ ಬಟ್ಟೆಗಾಳನ್ನೂ ಕೃಷ್ಣನು ನೋಡಿ , ಅವನ ಹತ್ತಿರಕ್ಕೆ ಬಂದು , ಬಟ್ಟೆಗಳನ್ನು ಒಗೆದೊಗೆದು ಬಗ್ಗಿ ಯುಮುನೆಯುಲ್ಲಿ ಅಗಲಕ್ಕೆ ಬೀಸಿ ಹರಡಿ ಹಿಂಡುತ್ತಿದ್ದ ಅವನಿಗೆ ‘ಮಡಿಬಟ್ಟೆಗಳನ್ನು ಉಡಲು ನಮಗೆ ಕೊಡಬೇಕು ಎಂದು ಕೇಳಿದನು. ಆ ಮಾತಿಗೆ ರಜಕನು ಜಗಳವು ಜಕ್ಕುಲಿಸಿದಂತೆ ಗಟ್ಟಿಯಾಗಿ ನಕ್ಕುಬಿಟ್ಟನು. ನಕ್ಕು ಆ ರಜಕನು ಈ ವಸ್ತ್ರಗಳಾನ್ನು ಕಂಸದೇವನು ಉಡುತ್ತಾನೆ ಆತನ್ ಬೀಳಿಡೆಯುವರು ಉಡುತ್ತಾರೆ. ಅಲ್ಲದೆ ಎಡೆಯ ಕಡೆಯ ಬಡವರು ಯಾರು ಉಡುವಂತಿಲ್ಲ ಎಂದು ಸ್ಪಷ್ಟವಾಗಿ ಹೇಳಿದನು. ಅದಕ್ಕೆ ಮುಕುಂದನು ‘ಹೌದು ಹೌದು , ಇವನಂಥವರು ಉಡಲೇ ಬಾರದು ಎಂದುಕೊಂಡು ಮತ್ತೆ ಆಗ್ರಹಪಡಿಸಿದನು.

ಅದಕ್ಕೆ ಅಗಸನು ಮತ್ತೆ ಅರಸರು ಉಡುವ ಗರಿಮುರಿಯದ ಈ ವಸ್ತ್ರಗಳನ್ನು ಉಡಲೇಬೇಕೆಂದು ಬಯುಸಿದ ಅಣ್ಣನು ಮ್ಮುಕ್ಕಣ್ಣ ನಾಗಿರಬ್ವೇಕು, ಅಷ್ಟೇ ಆ ಮುಕ್ಕಣ್ಣನೂ ಈ ವಸ್ತ್ರಗಳು ಇ,ಂಥವರದೆಂದು ತಿಳಿದರೆ  ಉಡುವ ಧೈರ್ಯ ಮಾಡನು. ಅ ಧೈರ್ಯವಿದ್ದಿದ್ದರೆ ಅವನೇಕೆ ಚರ್ಮವನ್ನು ಉಡುತ್ತಿದ್ದ ಎಂದನು. ಉತ್ತರವಾಗಿ ಕೃಷ್ಣನು ಈ ಮಾತಿನ ಮಾಲೆಯನ್ನೇಕೆ ಬೆಳೆಸುತ್ತಿಯೆ ಇರಲಿ ಬಿಡು ಎಂದು ಹೇಳಿ ಆವನೊಡನೆ ಹೋರಾಡಲು ಕುತೂಹಲಿಯಾಗಿ ಅವನ ಕೈಯ ವಸ್ತ್ರವನ್ನೇ ಸೆಳೆದುಕೊಳ್ಳಲು ಮುಂದಾದನು.  ಆಗ ಆ ರಜಕನು ಈ ಮಹಾಪೌರುಷಶಾಲಿಯು ಈ ವಸ್ತ್ರಗಳನ್ನು ಇನ್ನು ಉಟ್ಟಿಲ್ಲದೆ ಹಟಬಿಡುವ ಹಾಗಿಲ್ಲ. ಇರಲಿ ಉಡಬೇಕು ಎನ್ನುವ ಈ ಛಲಗಾರನು ಈಗ ಉಟ್ಟಿರುವುದನ್ನೂ ಆವನ ದೇಸೆಕಾಸೆಗಳನ್ನೂ  ಮೊದಲು ಕಿತ್ತುಕೊಂಡು , ಆಮೇಲೆ ಇವನು ಕೇಳಿದ್ದನ್ನು ಇವನಿಗೆ ಉಡಿಸುತ್ತೆನೆ– ಎಂದು ಕೃಷ್ಣನ ಮೇಲೆ ಕೈಮಾಡಲು ಸಿಡ್ಡವಾದನು. ‘ಇವನು ಮುಟ್ಟಿದರೆ ಕಂಸದೇವನಾಣೆ ಎಂದನು. ಪ್ರತಿಯಾಗಿ  ಕೃಷ್ಣನು ನೀನು ಕೊಡದಿದ್ದರೆ ಕಂಸದೇವನಾಣೆ ಎಂದನು. ಅಗಸನಿಗೆ ರೇಗಿ ಅವನು ತೂಪರದ ಚಕ್ಕೆಯಂತೆ ಹಾರಿ ಕಿಡಿಕಿಡಿಯಾಗಿ  ಸಿಡಿದು “ ಇಂತಹ ತುಂಟನನ್ನು ನಾನೆಲ್ಲುಯೂ ಕಾಣೆ ಆಣೆಗೆ ಪ್ರತಿಯಾಗಿ ಆಣೆಯಿಡುತ್ತಾನೆ – ಎಂದು ತನ್ನಲ್ಲಿಯೇ ಹೇಳಿಕೊಂಡು “ ನಯ ಬಾಯ ಬಟ್ಟೆಯಾದರೆ ಬಟ್ಟೆಯುತ್ತ ಬಾ  –ಎಂದು ಗರ್ಜಿಸಿದನು. ಕೃಷ್ಣನ ಆ ಬಟ್ಟೆಗಳನ್ನು ತೆಗೆದು ಹಾಕಿ ಇಕೋ ಇವನು  ಉಡಬಲ್ಲೆಯಾದರೆ ಉಡು  ಈಗಲೂ ಹೇಳಿತ್ತೇನೆ : ಇವು ಅರಸರ ಮಡಿಬಟ್ಟೆಗಳು. ಇವನ್ನುಡುವೆನೆಂಬ ಧೀರರ ಕಾಲನ್ನು ಹಿಡಿದೆತ್ತಿ ಬಗೆದಿಕ್ಕಿಬಿಡಲು ಕಂಸದೇವನ ಮಡಿವಳನು ಹೊಸದಾಗಿ ಏನೂ ಕಲಿಯಬೇಕಾದ್ದಿಲ್ಲ್ ! ಎಂದು ಹೇಳಿ ದರ್ಪದಿಂದ ಮುಂದೆ ನಿಂತನು. ಕೃಷ್ಣನು ನಸುಗೋಪವನ್ನು ತಂದುಕೊಂಡು “ಇದು ನಿಜ ತಾನೆ? ಎಲ್ಲಿ ಹಾಗೆ ಒಗೆಯುವ ಕಯ್ಯಾವುದು ತೋರಿಸು ಎಂದು ಎಷ್ಟು ಮಾತ್ರ ಹೇಳಿ ಆಗಲೇ ಅವನ ಎರಡು ಕೈಗಳನ್ನೂ ಮುರಿದು ಹಾಕಿದನು. ‘ ಊರ ಸೀರೆಗಸಗಂ ತದೆವಡೆದಂ ಎನ್ನುವ ನಾಣ್ಣುಡಿ ಹಬ್ಬುವಂತಾಯಿತು. ಹೀಗೆ ಮುರಿದಿಕ್ಕಿ ನುಣ್ಣಗೆ ನೊಣೆದ ಹಾಗೆ ಆ ಎಲ್ಲಾ ಮಡಿವರ್ಗವನ್ನೂ ದೋಚಿಹಾಕಿ ಗೊಲ್ಲರಿಗೆಲ್ಲ ಉಡುವುದಕ್ಕೆ ಕೊಟ್ಟನು. ಅಗಸನ ಮಡುವನ್ನು ಹುಯ್ಯಲಿಡಿಸಿದ್ದಾಯಿತು. ಈಗ ಮುಂದೆ ಯ್ರನ್ನು ಹುಯ್ಯಲಿಡಿಸಬೇಕು ಎಂದು ಮತ್ತೆ ಪಯಣಿಸಿದನು. ಪುರುಷೊತ್ತಮನು  ಮಧುರಾನಗರದ

ಗೋಪುರವನ್ನು ಸಮೀಪಿಸಿ ಬರಲು ತಟ್ಟನೆ ಅವನಿಗೆದುರಿನಲ್ಲಿ ಒಂದು ಮದದನೆಯು ಮಹೋಗ್ರವಾಗಿ ಕೆರಳಿ ಧಾವಿಸಿ ಬಂದಿತು. ಮುಗಿಲು ಮುಟ್ಟುತ್ತಿದ್ದ ಕಪ್ಪಾದ ಮೈಕಟ್ಟು; ಸೂರ್ಯವನ್ನೇ ಇರಿದು ಬೆದರಿಸುವಂಥ ಕೋಡುಗಳು; ಬೆಟ್ಟದ ಬಿಳಲೆಂಬಂತೆ ತೂಗಾಡುವ ಸೊಂಡಿಲು ನೆಲದ ಮೇಲೆ ದೇಹದ ಭಾರವನ್ನು ಬಿಟ್ಟು ಪೊಡವಿಯೇ ಪಾತಾಳಕ್ಕೆ ಇಳಿಯುವಂತಾಗುತ್ತಿರಲು ಮೆಟ್ಟುವ ದೇಹದಾರ್ಢ್ಯ ; ಉರಿಯನ್ನುಗುಳುವಂತಹ ಕಣ್ಣುಗಲು– ಇವುಗಳಿಂದ ತನ್ನ ಬೀರವನ್ನು ಬಿತ್ತರಿಸುತ್ತ ಆ ಮದದಾನೆಯು ಮೇಲೆ ನುಗ್ಗಿ ಬಂತು . ಈಗಾಗಲೇ ಕೃಷ್ಣನು ನಿಗ್ರಹಿಸಿದ ಪೂತನಿ ಕಾಳಿಯನಾಗಶಕಟ ಅಶ್ವ ಗರ್ದಭ ಮೊದಲಾದ ಮಹೋಗ್ರವೈರಿವರ್ಗವೆಲ್ಲ  ಒಮ್ಮೆಯಾಗಿ ಮಹಾಗಜವಾಗಿ ಮತ್ತೊಮ್ಮೆ ಹರಿಗೆ ಮುನಿದು ಬಂದುವೆಂಬಂತೆ ಆ ಗಜವು ಧಾವಿಸಿಬಂತು . ಯುದ್ದದಲ್ಲಿ ಆನೆಗಳು ಇರಿದಡುವಂತೆ ಮದಗಜಗಳನ್ನೇ ಚಿಮ್ಮುವಂತೆ ಕುತ್ತಿ ಕೆಡವುತ್ತ ಆನೆ ಇರುವೆಗೆ ಮೊಗದಿರುಗಿಸುವ ನಿರ್ಲಕ್ಷ್ಯತೆಯಿಂದ ಅನುಗಜಗಳಿಂದತ್ತ ಮುಖತಿರುಗಿಸಿ ತನ್ನ  ಪಾಡಿಗೆ ತನ್ನಿರುತ್ತಿದ್ದ ಆ ಕರಿಯ ಮಹಶಕ್ತಿ ಅ ಮಹಾಗಜದ ಮಹಾಗತ್ರಕ್ಕೆ ಆಕಾಶದೆತ್ತರವು ಸಾಲದಾಗಿತ್ತು. ಅದು ಕೊಪಿಸಿದ್ದೇ ಆದರೆ ಒಟ್ಟಿಗೆ ಮೂರು ಲೋಕಗಳು ಕೊಡಿಯೂ ಅದರೆದುರು ನಿಲ್ಲಲಾಗುತ್ತಿರಲಿಲ್ಲ .

ಆ ಕೈಟಭನೆಂಬ ಕಟ್ಟನೆ ಮೊದಲೇ ತಾನು ರಾಕ್ಷಸನಾದ್ದರಿಂದ ಮನುಷ್ಯರನ್ನೇ ಕಡಿದೊಂಬುಗೊಂಡು ತನಗೆ ತೋಚಿದಂತೆ ಕೊಲೆಗೆಲಸವನ್ನು  ಮಾಡುತ್ತ ಬಿಟ್ಟ ಕಣ್ಣು ಬಿಗಿದ ಮೊಗ ಮನದ ಮುನಿಸು ಮೈಯ ವಕ್ರತೆ ಪ್ರತಿಮನದಲ್ಲಿ ಹೊತ್ತ ಹೆಣ, ಅಣಲಲ್ಲಿ ಆಡಿಸಿದ ಆನೆಯ ಅಡಗು ಸುರಿಯುವ ಮದಜಲ– ಇವುಗಳಿಂದ ಕೆರಳಿದ ಯಮನಂತೆ ಮಹೋಗ್ರವಾಗಿ ಕೆರಳಿ ನುಗ್ಗಿ ಬಂದಿತು. ಮುಂದೆ ನಡೆದು ಬರುತ್ತಿದ್ದ ಹರಿಕಾರರು ರಾಮ ಕೃಷ್ಣರನ್ನು 'ತೊಲಗು ತೊಲಗು ಎಂದು ಗಾಬರಿಯಿಂದ ಕೂಗಿಕೊಂಡರು. ಆಗ ಕೃಷ್ಣನು ' ಏನಯ್ಯಾ ಗೋಪರು ತಲೆಯಲ್ಲಿ ಕಣ್ಣಿದ್ದೂ ಎಲ್ಲಿ ಹೇಗೆ ದಾರಿ ನಡೆಯುವುದು ಎಂದು ಕಾಣರೇ? ದೂರ  ಸರಿಯಬೇಕೆಂದು ಹೇಳಬೇಕೇನು? ಯಾಕೆ  ನಿಮ್ಮ ಕಟ್ಟಾನೆಗೆ ನಡೆಯಲು ಸ್ಥಳ ಸಾಲದೆ ಇಕ್ಕಟ್ಟಯಿತೇನು? ಹೋಗಲಿ ಎದುರಿಗೆ ಆನೆಯು ಬರುವಂಥ ಶುಭಶಕುನವಾಗುವುದು ಎಲ್ಲರಿಗೂ  ಲಭ್ಯವೇ? ಎಂದು ಧೀರಶಾಂತತೆಯಿಂದ ಹೇಳಿದನು. ಆಗ ಹರಿಕಾರನು ಎಳಗೊಬ್ಬು ಕೊಬ್ಬಿ ನುಡಿಯುವ ಈ ಗೋವಳಿಗರ ಗ್ರಹಚಾರವನ್ನು ಬಿಡಿಸಿ ಆನೆಯು

ತಾನೆ ಇವರನ್ನು ತೊಲಗಿಸುತ್ತದೆ. ನಮಗೇಕೆ ಇದರ ಗೊಡವೆ – ಎಂದು ಸುಮ್ಮನಾದನು. ಅಷ್ಟರಲ್ಲಿ ಬೇಗಯೂ ಬಾಣವೂ ದೃಷ್ಟಿವಿಷವೂ ಸಿಧಿಯ ಮುಖವೂ ಮುಷ್ಟಿಯೂ ತಾನೇ ಆಗಿ ತನ್ನ ಮೇಲೇರಿ ಬಂದ ಮದದಾನೆಯ ಮೇಲೆ ಕೃಷ್ಣನು ಕೈಮಾಡಿ , ಆನೆಯ ಸೊಂಡಿಲ ಬಲವನ್ನು ತನ್ನ ಕೈಬಲದೊಂದಿಗೆ ಪ್ರತಿಯಾಗಿಟ್ಟು ತೋಗಿನೋಡುವೆನೆಂಬಂತೆ ಅದನ್ನೊತ್ತಿಹಿದಿದು ದ್ವಂದ್ವಯುದ್ಧ ಮಾಡಿದನು. ಆನೆಯ ಸೊಂಡಿಲ ಕಾಲಿನ ಕೊಂಬಿನ ಕುಂಭಸ್ಥಳದ ಎಡೆಗಳಲ್ಲಿ ಬೆಣ್ಣೆದೊಡೆದ ಬಟ್ಟೆನಂತೆ ನುಣುಚಿ ನುಸುಳಿ , ನೆರೆದು ನೋಡುವವರ ಕಣ್ಣು ತಣಿಯವಂತೆ ,ತನ್ನ ಮನಸ್ಸು ತಣಿಯುವಂತೆ, ಲೀಲೆಯಿಂದ ಲಕ್ಷವಿಧದಲಿ ಗಜಮಲ್ಲನೊಡನೆ ಪ್ರತಿಮಲ್ಲನಾದಶ್ರೀಕೃಷ್ಣನು ಮುಂದೆ ಚಾಣೂರ ಮಲ್ಲನೊಡನೆ ಮಲ್ಲಯುದ್ಧ ಮಾಡಲು ಸಾಮುಮಾಡುವನೆಂಬಂತೆ ಮಲ್ಲಕಾಳೆಗವಾಡಿ ಸಿಂಹನಾದ ಮಾಡಿದನು. ಒತ್ತಿದರೆ ಒತ್ತಿ, ಅಂಟಿದರೆ ಅಂಪಿ ಹೊರಳಿಸಿದರೆ ಹೊರಳಿಸಿ ಕೆರಳಿ ಮೇಲೆತ್ತಿದರೆ ತಾನೂ ಎತ್ತಿ ಕುತ್ತಿದರೆ ಕಿತ್ತದೆ ಕೊಂಬನ್ನೇ ತಳ್ಳಿ ಕುತ್ತಿ ಹರಿತವಾದ ಕತ್ತಿಯನ್ನು ಒರೆಯಿಂದ ಸೆಳೆಯುವ ಹಾಗೆ ಮುಖದಿಂದೀಚೆಗೆ ಅದನ್ನು ಸೆಳೆದುಬಿಟ್ಟನು. ಆನೆಯ ನೆತ್ತಿಯೇ ಹಿಸಿದುಹೋಗಿ ಮುತ್ತು ಎರಚಾಡಿತು. ಕಡೆಗೆ ಆ ಗಜವನ್ನು ಕೃಷ್ಣನು ಹೊಡೆದುರುಳಿಸಿಬಿಟ್ಟನು. ಕಮ್ಮಾರನು ತಯಾರಿಸಿದ ಬಾಣ ಅವನಿಗೇ ಮೃತ್ಯುವಾದಂತೆ ತನ್ನ ಕೊಂಬೇ ತನಗೆ ಘಾತಕವಾಗಿ ಮರಣೋನ್ಮುಖವಾಗಿ ಕುವಳಾಯಪೀಡವು ಕೆಳಗುರುಳಿತು. ಮತ್ತ ಗಜೇಂದ್ರದೊಡನೆ ಹೊಣರಿ ಹೋರಲು ಮದಜಲವಂಟಿದ ಆತನ ಅಂಗಯಷ್ಟಿಯ ಒಳ್ಳೆಯ ಕಸ್ತೂರಿಯ ಲೇಪನದಂತೆ ಕಾಣುತ್ತಿತ್ತು. ನೆತ್ತಿಯ ಸಿಂದೂರವು ಆತನ ಹಣೆಗೆ ಹತ್ತಿಕೊಂಡು ತಿಲಕದಂತೆ ಶೋಭಿಸುತ್ತಿತ್ತು. ಆನೆಯ ಕೊಂಬಿನ ಕೆಂಪು ಕಂಕುಳಲ್ಲಿ ಗುರುತು ಬಿದ್ದು ಚಿನ್ನದ ಪರಿಘದಂತೆ ತೋರುತ್ತಿತ್ತು. ಆ ಗಜಮಲ್ಲನೊಡನೆ ಹೋರಾಡಿದ್ದೇ ಮಲ್ಲವೇಷ ಧರಿಸಿದಂತೆ ಆಯಿತು. ಆ ಹೋರಾಟದಲ್ಲಿ ಗೆದ್ದು ಕೃಷ್ಣನು ಜೀವವಿದ್ದಂತೆಯೇ ಆ ಆನೆಯ ಹಿಂಗಾಲು ಹಿಡಿದು ಹಂದಿಯನ್ನೇಳೆದೊಯ್ಯವಂತೆ ಎಳೆದುಕೊಂಡು ಹೊರಟು , ಮಧುರೆಯನ್ನು ಸೇರಿ ಮೂರು ಲೋಕಗಳೂ ಒಂದೆಡೆಗೆ ಸೇರಿದಂತಿದ್ದ ಮಲ್ಲರೆಂಬಾನೆಗಳ ನಡುವೆ ತಂದು ಹಾಕಿದನು. ಅಲ್ಲದೆ, ವೇದಿಕೆಯ ಮೇಲಿದ್ದ ಕಂಸನನ್ನು ಉದ್ದೇಶಿಸಿ ಹಾಸ್ಯಗರ್ಭಿತವಾದ ಗಂಡಗರ್ವದಿಂದ ಹೀಗೆ ಹೇಳಿದನು: ದೇವ, ಅವಧರಿಸು , ಲೋಕದಲಿ ನಿನ್ನ

ಹಾಗೆ ಮೈಯರಿಯದ  ಅರಸರು ಯರಿದ್ದಾರೆ? ಇಂಥ ಮದಗಜವು ಕಾಡಲ್ಲಾಗಲ್ಲಿ ಕಂಭದಲ್ಲಾಗಲಿ ಎಲ್ಲದರೂ ಉಂಟೆ? ಮಹಾಬಲಾನ್ವಿತವಾದ  ಇಂಥ ಆನೆಯನ್ನು ಹೀಗೆ ಯಾರಾದರೂ ಉಪೇಕ್ಷಿಸುವರೇ ? ನೆಲದಲ್ಲಿ ಹೇಳುವ ಕೇಳುವರಿಲ್ಲದೆ ಈ ಆನೆ ಬಿದ್ದುಕೊಂಡಿತ್ತಲ್ಲ್. ಅದನ್ನು ನೋಡಲಾರದೆ ನಿನಗೆ ತೋರಿಸೋಣವೆಂದು ಅದನ್ನೀಗ ನಾನು ನಿನ್ನಲ್ಲಿಗೆ  ತಂಡಿದ್ದೇನೆ; ದೇವರಿಗೆ ಇದು ಸೇವೆ ಗಳವೋ ಗಾಳಿಯೋ ಸಪ್ತಮೋಗ್ರಮದವೋ ಕಾಷಾಗ್ನಿಯೋ ಕೂರಪಾಕಳಾವೋ ಪಾಪ ಇದಕ್ಕೆ ಏನಾಗಿದೆಯೋ , ವೈದ್ಯರನ್ನು ಕರೆದು ತೋರಿಸಬಾರದೇ ಕಂಸರಾಜ ಎಂದು ಹಾಸ್ಯೋಕ್ತಿಗಳನ್ನು ಆಡಿದನು . ಅಲ್ಲದೆ ಮಹಾಗಜದ ದಂತವನ್ನು ಎತ್ತಿತೊರಿಸುತ್ತ   ಇನ್ನೊಂದು ನಾನು ಆನೆಯನ್ನು ಎಳೆತರುವಾಗ ಈ ದಂತವು ತನ್ನ ಕೈಗೇ ಬಟ್ಟಿತು. ಇದನ್ನು ದೇವರು ನೋಡಿ ಭಂಡಾರದಲ್ಲಿ ಜೋಕೆ ಮಾಡುವುದು – ಎಂದು ಅದನ್ನು  ಅವನು ಮುಂದೆ ಈಡಾಡಿದನು. ಅಷ್ಟರಲ್ಲಿ  ಆ ಮಹಾಗಜನು ಸೊಂಡಿಲನ್ನೂ ಕಾಲುಗಳನ್ನೂ ಬಡಿದು ಪ್ರಾಣಬಿಟ್ಟಿತು. ಆಗ ಕೃಷ್ಣನು “ ಅಯ್ಯೋ ಈ ಆನೆ ಸತ್ತೇ ಹೋಯಿತು ಇನ್ನು ಈ ಆನೆಯನ್ನು ಅಡ್ಡದೆಗೆದಂತಿದ್ದ  ಚಣೂರ ಮುಷ್ಟಿಕ ಆದಿ ಸ್ಮಲ್ಲರಿಂದ ಇದನ್ನು ಎಳೆದು ಹಾಕಿಸಿಬಿಡಿ ಇವರೇನು ಹುರುಡಿನಿಂದ ಹೊತ್ತು ಎಳೆದುಹಾಕುತ್ತಾರೆ – ಎಂದನು. ಮಲ್ಲರೆಲ್ಲರ ಮುಖಗಳೂ ಸಪ್ಪಗಾದವು. ಇಷ್ಟರಿಂದ ಕಂಸನ ಗಂಡಗರ್ವವೂ ವಿಗುರ್ವಣೆಯೂ ತಮಗೆ ತಾವೆ  ಕಾರ್ಮುಗಿಲಂತೆ ಕರಗಿಹೋದವು. ಅವನು ವಿಷಣ್ಣಮನನಾಗಿ ಮುಂದಿನ ಮಲ್ಲಕಾಳೆಗಕ್ಕೆ ಕುಂಚವನ್ನು ಬೀಸಿದನು.

ಕೂಡಲೇ ಚಾಣೂರನು ಮುಂದೆ ಬಂದು ಕೃಷ್ಣನನ್ನು ಮೂದಲಿಸಿದನು. “ ಎಲೈ ಇತ್ತಿತ್ತ ಇದಿರಿಸಿದಿರಿಸು, ಪೌರುಷವನ್ನು ತೋರು ಮೈಗಲಿಯಾಗು ನಿನಗೆ ಉಸಿರು ಹತ್ತಿ ಬರುತ್ತಿರಬೇಕು ; ಚನ್ನಾಗಿ ಉಣ್ಣಲು ಮನೆಯುತ್ತ ಹೊರಡದೆ ಹೋರಾಡಲು ಸಿಟ್ಟಾಗಿ  ಬಂದೆ ; ಸತ್ತು ಮಣ್ಣಾಗಲೆಂದು ಈಗ ನನ್ನ ತೋಳಬಲೆಯನಲ್ಲಿ ಸಿಕ್ಕಿದೆ. ಇವತ್ತಿಗೆ ನಿನ್ನ ಕಥೆಯಾಯಿತು  ಎಂದು ವೀರಾವೇಷದ ಮಾತಾಡಿದನು.  ಅದಕ್ಕೆ  ಮುಕುಂದನು ಮುಗುಳ್ನಗೆ ನಗುತ್ತ  ‘ ಅಟ್ಟಿ ತಿನ್ನುವ ದೈವಕ್ಕೆ ಹರಸಿಕೊಂಡೆ ಎಂದು ಹೇಳಿ ,ಅವನೊದನೆ ಕಾದಾಡಲೂ  ಸಿದ್ದಾನಾಗಿ ಭುಜಾಸ್ಥಾಲನ ಮಾಡಿದನು ಆದನಿ ಮೂರು ಲೋಕಗಳನ್ನು ನಡುಡಿಸಿತು. ಉಭಯ ವ್ಯೂವಹಗಳ ಕಳವಳ ದ್ವನಿ ಮಲ್ಲರ ಭುಜಸ್ಥಾಲನ ದ್ವನಿ ನೃಪ

ಸಭೆಯ ಕೋಲಾಹಲ ಧ್ವನಿ ದೇವತೆಗಳ ದುಂದುಭಿಧ್ವನಿ , ಮಲ್ಲರಹರೆಯ ರೌದ್ರ್ರ ಧ್ವನ್ನಿ ಇವೆಲ್ಲ ಮೇಲಿಂದಮೇಲೆ ನಭವನ್ನು ದಿಗ್ದೆಸೆಗಳನ್ನುತುಂಬಿ ಬಿಟ್ಟಿತು. ಅಂಗೈತೋಳು ತೊಡೆ ಇವುಗಳನ್ನು ಸಂಘಟ್ಟಿಸುವುದು ,ಅಕ್ಕೈ ಕೈ ಮಿಲಾಯಿಸುವುದು. ಮುಷ್ಟಿಯೊದ್ದುವುದು, ಮಗ್ಗುಲಿಸುವುದು ನುಣುಚುವುದು, ಸೆಳೆದಾದುವುದು, ಪಕ್ಕಕ್ಕೆ ಸಾರುವುದು ಹೋರುವುದು ಇವುಗಳಿಂದ ಚಾಣೂರಕೃಷ್ಣರ ಹಸ್ತಯುದ್ಧವು ಆಕರ್ಷಣೆಯವಾಗಿತ್ತು. ಕೊನೆಗೆ ಮಾಸತ್ವದಿಂದ ಕೃಷ್ಣನು ಚಾಣೂರನನ್ನು ನೆಲಕಿಕ್ಕಿ ಮೆಟ್ಟಿದನು. ಇಂದರಿಂದ ಧಾತ್ರಿಯೇ ಪಾತಾಳಕ್ಕೆ ಇಳಿಯುವಹಾಗಾಯಿತು. ಆತನೂ ಬಿಡದೆ ಹರಿಯ ಕುತ್ತಿಗೆಯನ್ನಿರುಕಿದನು. ಒಬ್ಬೊಬ್ಬರನ್ನೂ ಅಖಾಡದಿಂದ ದೂರಕ್ಕೆಸೆದು ಹೋರಿ ತಮ್ಮ ಕಾಲೇಟಿಂದ ಧೋಳೆಬ್ಬಿಸಿದರು . ಬೆದರಿದಂತೆ ನಟಿಸಿ ಬೆನ್ನಿಕ್ಕಿದ ಕೃಷ್ಣನು ತನ್ನ ಮೇಲೆ ಹಾಯ್ದು ಬಂದ ಚಾಣೂರನನ್ನು ಮುಖಾಮುಖಿಯಾಗಿ ಮಾಡಿಕೊಂಡು ಆದಿವರಾಹನು ಭೂಮಿಯನ್ನು ಎತ್ತಿದಂತೆ , ಗರ್ಜಿಸಿ ಮೇಲೆತ್ತಿ ಬಿಟ್ಟನು . ಇಬ್ಬರು ಬಿದ್ದರೂ ; ಹೊರಳಿದರು; ಹೋರಿದರುಹಿಡಿಯಲು ಹೊಗಿ ಆಗದಾದರು ; ಕೆಳಕ್ಕೆ ಒತ್ತಿದರು; ಮತ್ತೆ ಎದ್ದರು; ನಿಡುಗೈಯನ್ನು ಬೇಡಿದರು; ನಿಡಿದರು; ಎಳೆದು ನೆಲಕ್ಕಿಕ್ಕಿದರು; ನೂಕಿದರು; ಒಮ್ಮೆ ಮೇಲೆಒಮ್ಮೆ ಅಡಿಯದರು; ತೆಕ್ಕೆಗೊಂಡು ಎದುರಾಳಿಗೆ ಗಾಯ ಮಾಡಲು ಮಿಡುಕದೆ ಅವಕಾಶ ಹುಡುಕಿದರು ತಾವುಹುಡುಕಿಮಾಡಿದ ಗಾಯಕ್ಕೆ ಮೈಗೊಟ್ಟರು; ಆದರೆ ಬಿಡದೇ ತಾವು ಎಡವಡೆದು ಗಾಯ ಮಾಡಿದರು ; ಮಿಂಚಿ (ಹಿಡಿತವನ್ನು ) ಬಿಡಿಸಿದರು. ಹಿಡಿಯಲು ಹೋದರೆ ಕೃಷ್ಣನ ತೋಳು ತೊಡೆಗಾಳು ತನ್ನ ಮುಷ್ಠಿಗೆದೊಡ್ಡವಾದವು ಎಂದೂ ತವಕಿಸಿ ಚಾಣೂರನು ಕೃಷ್ಣನ ನಡುವನ್ನು ಹಿಡಿದು ಮುರಿದು ಬಿಡಲು ಸಮಯ ನೋಡಿದನು. ಮತ್ತಿಯ ಮರವನ್ನೇ ಕಿತ್ತಿ ಮುರಾಗಿಗೂ ಚಾಣೂರನ ಮುಂಗೈಯ ರೋಮಗಳನ್ನು ಕೀಳುವುದು ಸಾಧ್ಯವಾಗದಾಯಿತು. ಕಾಳಿಯನನ್ನೇ ಹಿಡಿದವನಿಗೂ ಚಾಣೂರ ಕೊಟ್ಟ ಕೈಯನ್ನು ಹಿಡಿಯಲು ಸಾಧ್ಯವಾಗದಾಯಿತು. ಗೋವರ್ಧನ ಗಿರಿಯನ್ನೇ ಮೊದಲು ಎತ್ತಿ ಹಿಡಿದವನಿಗೂ ಚಾಣೂರನನ್ನು ಅಲುಗಾಡಿಸುವುದು ಕಷ್ಟವಾಯಿತು. ಎಂದ ಮೇಲೆ ಚಾಣೂರನು ಮಹಾಶಕ್ತನೇ ಆಗಿದ್ದನು. ಕೃಷ್ಣನು ಮೊದಲು ಮಾಡಿದ ಸಾಹಸಗಳನ್ನು ನೆನೆದು ಇಲ್ಲಿಯೂ ಹಾಗೆಯೇ ಎಂದು ಸುಲಭದಲ್ಲಿ ನಿಗ್ರಹಿಸಲು ಬಗೆದು ಮುಂಗೈಯ ಬಲದಲ್ಲಿ ಬೆದಕಿ ನೋಡಿದನು. ಅವನು ಅಸಾಧ್ಯನೂ ಅಭೇದ್ಯನೂ ಆದುದನ್ನು

ತಿಳಿದು" ಹೇಗೂ ನರರು ದೇವತೆಗಳೂ ಭೂಮೊಯಲ್ಲುಯೂ ಸ್ವರ್ಗದಲ್ಲಿಯೂ ನೆರೆದು ನೂಕುನುಗ್ಗಲಾಗಿ ನೋಡುತ್ತಿರುವುದು. ಈ ಒಂದು ದಿನ ಹೀಗೆ ; ನಾಳೆ ನೋಡಲು ಸಿಗುವುದೇನು? ಆದ್ದರಿ,ಂದ ಚನ್ನಾಗಿ ನೋಡಲಿ; ಅವರ ನೇತ್ರಾನಂದವನ್ನು ನಂದಿಸುವುದು ಉಚಿತವಲ್ಲ- ಎಂದು ವಿನೊದಕ್ಕೆ ಹೋರಾಡುತ್ತಲೇ ಇದ್ದನು. ಶತ್ರುವಿಗೆ ತನ್ನ ಸ್ವಸ್ವರೂಪ ಶಕ್ತಿ ಏನೆಂಬುದನ್ನು ತೋರಗೊಡದೆ ಒಂದು ಜಾವ ಹೋರಾಟವು ಬೇಳೆಯುವಂತೆ ಮಾಡಿದನು.

ಇದಾದಮೇಲೆ ಈ ಚಣೂರನನ್ನು ಇನ್ನೇಷ್ಟು ಕಾಲ ಹೀಗೆ ಮೇರೆದು ಮೇಲ್ಗೈಯಾಗಿ ವಿಬ್ರಂಭಿಸಲು ಅವಕಾಶ ಕೊಡಲಿ? ಎಂದು ಕೊಂಡು ವಿಶ್ವಂಭಾರನಾದ ಕೃಷ್ಣನು ಮಹತ್ತರವಾಗಿ ಸ್ವಶಕ್ತಿಯನ್ನು ವಿಜ್ರಂಭಿಸಿದನು. ತೀವ್ರವಾಗಿ ಆ ನಿಷ್ಠುರ ಚಾಣೂರನ ಭುಜಾದಂಡ ಪೃಷ್ಠದಲ್ಲಿ ನಾರಾಯಣನ ಭುಜಶಾಖಾರಣೀಯು ಮಥನಗೊಂಡು ಶಕ್ತಿರೂಪದ ತೇಜೋಗ್ನಿಯನ್ನು ಹುಟ್ಟಿಸಿತು. ಮೋಡದಲ್ಲಿ ಸಿಡಿಲು ಹುಟ್ಟುವಂತೆ ಜಲಧರ ಶ್ಯಾಮನಲ್ಲಿ ಸರ್ವಶಕ್ತಿಯೂ ಹುಟ್ಟಲಾಗಿ , ಹೋರಾಟಗೊಡಲೂ ತರಹರಿಸಿಕೊಳ್ಳಲೂ ಸಾಧ್ಯವಿಲ್ಲದೆ ಇಕ್ಕಿದ ಕೈಯನ್ನು ಕೀಳಲಾಗದೆ , ನೆರಳಿನೊಂದಿಗೆ ಹೊಣರುವಂತೆ ಹೊಣರಿ ಚಾಣೂರನು ಬಾಡಿ ಬಸವಳಿದು ಬಿದ್ದು ಹೋದನು ಹರಿಯು ಹೋರಾಡುತ್ತಿದ್ದರೂ ಅವನನ್ನು ಸ್ವಲ್ಪವೂ ಪ್ರತಿಭಟಿಸದೆ ಅವನು ಕೈಯ ಸೆಳೆತಕ್ಕೆ ಸೊಕ್ಕಿದ ಗಜೇಂದ್ರನ ಕೈಗೆ ಸಿಕ್ಕ ತೊಗಲು ಗೊಂಬೆಯಂತೆ ಸುಲಭವಾಗಿ ವಶನಾಗಿ ಹೋದನು. ಸೋತು ಸುಸ್ತಾಗಿ ಬಿದ್ದವನು ಹೋರಳಿದನು; ಕೈಕಾಲು ಬಡಿದನು; ಎದ್ದುಬ್ಬಪಟ್ಟನು ಸುಯ್ದನು; ಸುಯ್ಯದೆ ಮೇಲೆದ್ದು ಸ್ವಲ್ಪ ಬಡಬಡಿಸಿದನು; ಮತ್ತೆ ಉಸಿರುಡುಗಿ ಮೆತ್ತಗಾದನು; ಬೆವರಿದನು. ಮೈಹುಡಿಯಲ್ಲಿ ಹೊರಳಿತ್ತು; ಎದ್ದುನಿಲ್ಲಲು ಕಸು ಇರಲಿಲ್ಲ . ಇವು ಚಾಣೂರನ ಸೋಲನ್ನೂ ಹರಿಯ ಗೆಲವನ್ನೂ ತಾವೇ ಸೂಚಿಸುವುದಾಯಿತು. ಹೀಗೆ ನೆಲಕ್ಕೆ ಇಕ್ಕಿ ಕುತ್ತಿಗೆಗೆ ಹಾಕಿದ ಬಹುಕತ್ತರಿಯ ಪಟ್ಟಿನಿಂದ ಅವನು ಬಾಯಿಬಾಯಿ ಬಿಡುವಂತಗಲೂ, ಕೆರಳಿ ಹೊರಳಿ ಕೈಯಲ್ಲಾಗದೆ ಗಾಯಗೊಂಡ ಚಾಣೂರನನ್ನು ಕೃಷ್ಣನು ಕರುಣೆಸಿ ಮುರಿದಿಕ್ಕದೇ ಉಳಿಸಿದನು.

ಇದನ್ನು ನೋಡಿ ಕಂಸನೂ ಬೇಡನು ಹಂದಿಗೆರಗಿದ ಬೇಟೆನಾಯನ್ನು ಹೆಕ್ಕಳಿಸುವಂತೆ ಚಾಣೂರಮಲ್ಲನನ್ನು ಪ್ರೋತ್ಸಾಹಿಸಲು ಒಮ್ಮೆ ತನ್ನ ತೊಡೆಯನ್ನು ತಟ್ಟಿಕೊಂಡನು ಶರೀರದಲ್ಲಿ ಅಳಿದುಳಿದಿದ್ದ ಸರ್ವಶಕ್ತಿಯನ್ನೂ ಒಗ್ಗೂಡಿಸಿ ಚಾಣೂರನು ಕೃಷ್ಣನ ಮೇಲೆ ಬಿದ್ದು ಅಲಗಿನ ಗರುಡನು

ಅಪ್ಪಿದಂತದನು. ಉರಿ ಲೋಹವನ್ನು ಅಪ್ಪಿದಂತೆ ಕರಗಿ ಹಿಪ್ಪೆಯಾದನು. ಮುಷ್ಟಿಯನ್ನು ಹಿಡಿದ ಅಂಗೈ ಒಡೆಯಿತು. ಬಲವಾಗಿ ತಾಗಿ ಹೋರಾಡಿದ ಮೈಯೆಲ್ಲ ಮಾಂಸದ ಮುದ್ದೆಯಾಯಿತು. ಡೊಗರು ಬಿದ್ದಂತಾಗಿ ಅವನ ಕಕ್ಷವಕ್ಷಗಳ ಮೂಳೆಗಳು ಮುರಿದುವು , ಬೆರಲುಗಳು ಹರಿದುವು. ಇವೆಲ್ಲ ಶ್ರೀಕೃಷ್ಣನ ಶಕಿ ವಿಜ್ರಂಭಾಣದ ಪರಿಣಾಮದಿಂದಾಯಿತು. ಮಹಾಬ್ಧಿಯು ಮಸಗದಿದ್ದರೆ ತನ್ನ ನೆಲದಲ್ಲಿಯೇ ಮಿಸುಕದೆ ಪ್ರಶಾಂತವಾಗಿ ಇದ್ದು ಕೊಳ್ಳುತ್ತದೆ. ಲಯ ಕಾಲದಲ್ಲಿ ಮಸಗಿತ್ತೆಂದರೆ ಮೂರು ಲೋಕಗಳನ್ನೂ ಒಂದೇ ತುತ್ತಾಗಿ ನುಂಗಿ ಬಿಡುತ್ತದೆ. ಕೃಷ್ಣನ ಶಕ್ತಿ ಅಂತಹದು ನೆಲವೂ ಸಮುದ್ರವೂ ಒಂದೊಂದೂ ಸೇರಿ ಸಂಘಟಿಸುವ ಹಾಗಿದ್ದು ಕಡೆಯಲ್ಲಿ ನೆಲವನ್ನು ಸಮುದ್ರವು ಮುಳುಗಿಸಿವಂತೆ ಚಾಣೂರ ಮಲ್ಲನು ಮುರಮಥನನ್ನು ನಿಸ್ಸತ್ವನನ್ನಾಗಿ ಮಾಡಿಬಿಟ್ಟನು. ಕೌಶಲವು ಕಳೆಗೆಟ್ಟಿತು. ಅಳವು ಅಳವಳಿಯಿತು. ಬಲ್ಲುಮೇಲ್ವಾಯಿತು. ಪೌರುಷವು ಹೀಗೆ ತನ್ನ ಪೌರುಷವನ್ನು ತೋರಿ ಆಯಿತು. ' ಇನ್ನೇನು ಮಾಡಲಿ ಸಾಯುತ್ತಿದ್ದೇನೇ– ಎಂದು ಚಾಣೂರನು ಅಳಲಿಬಳಲಿದನು ಹಾಗೇ ಅವನನ್ನು ಬಳಲಿಸಿ ನೆಲಕ್ಕೆ ಕೆಡವಿ , ಅಪಮಾನಿಸಿ, ಕೃಷ್ಣನು ಕಂಸನ ಮನಸ್ಸಿಗೆ ಅಳುಕುಂಟಾಗುವಂತೆ ಮಾಡಿದನು.

ಚಾಣೂರನಿಗಾದ ಈ ಪಾಡು ಮುಷ್ಟಿಕನನ್ನು ಮುನಿಯಿಸಿತು. ಅವನು ಮುಷ್ಟಿಯನ್ನು ಬಿಗಿದು ಕೃಷ್ಣನ ಮೆಲೆ ನುಗ್ಗಿದನು. ಆಗ ಕೃಷ್ಣನು ತನ್ನ ಎರಡೂ ಕೈಗಳಲ್ಲಿಯೂ ಚಾಣೂರಮುಷ್ಟಿಕರ ತಲೆಗಳನ್ನು ಒತ್ತಿಹಿಡಿದು ಬೊಂಬೆಗಳನ್ನು ಆಡಿಸುವವನ ಹಾಗೆ ತಾಳೇಯ ಕಾಯಿಗಳನ್ನು ಒಂದಕ್ಕೊಂದು ತಾಟಿಸುವ ಹಾಗೆ ತಲೆಗೆ ತೆಲೆಯನು ಘಟ್ಟಿಸಿಬಿಟ್ಟನು. ಹಾಗೆ ತಾಟಿಸಿದಾಗ ಮಲ್ಲರಂಗದಲ್ಲಿ ಪೂವಲಿಗೆದರಿದಂತೆ. ಮಸ್ತಿಷ್ಕವು ಎಲ್ಲ ಕಡೆಗೂ ಎರಚಾಡಿತು. ಕುಂಕುಮರಸದ ಜೀಕರ್ೋಳವಿಯನ್ನು ಒತ್ತಿದಂತೆ ಮೂಗು ಬಾಯಿಗಳಿಂದ ಬಿಸಿ ರಕ್ತವು ಚಿಲ್ಲೆಂದು ಚಿಮ್ಮಿತು. ಚಾಣೂರ ಮುಷ್ಟಿಕರ ಹೆಣದ ಜೋಡಿಯನ್ನ್ನು ಎರಡೊಂದಾಗಿ ಹೆಣೆದು ಕೊಂಡದ್ದನ್ನು ಕೇರಳಿ ಧೀರೊದ್ಧತ ದುಂದುಭಿಧ್ವಾನ ಮಹೀಧರ ಮಹಾಕಾಳ, ಪ್ರಳಯಕಾಳ, ಕೋಳಾಹಳ,ತಾಳಜಂಘ, ತಳಪ್ರಹಾರಿ ವಜ್ರಮುಷ್ಟಿ ಮೊದಲಾದ ಮಲ್ಲರ ಗುಂಪು ಹಚ್ಚಿದ ಸಿಂಧೂರದಿಂದಲೂ ಬೀಸುವ ಬಾಲ ಗಚ್ಚೆಯಿಂದಲೂ ಕೂಡಿದವರಾಗಿ ಎಲ್ಲರೊಂದಾಗಿ ಅಬ್ಬರಿಸಿ ಹೋರಾಟಕ್ಕೆ ಕೃಷ್ಣನ ಮೇಲೆ ಹಾಯ್ದು ಮುತ್ತಿಕೊಂಡರು.

ಕೃಷ್ಣನು ಕಪಿಸೈನ್ಯವು ಮುತ್ತಿಕೊಂಡ ನೀಲ ಪರ್ವತದ ಹಾಗೆ ನಿಶ್ಚಲವಾಗಿದ್ದನು. ಹೀಗೆ ಮುಂದಿರುವ ಶೂಲವನ್ನು ಏರುವವರಂತೆ ಕೃಷ್ಣನ ಮೇಲೇರಿದ ಮಲ್ಲರ ಮೈಗಳೆಲ್ಲ ಮುರಿದು ನುಗ್ಗುನುಗ್ಗಾಗುವಹಾಗೆ ಕೃಷ್ಣನು ಮಲ್ಲಲಂಘನ ಮಾಡಿದನು. ಹಾಗೆ ಲಂಘಿಸಿ ಬುಗುರಿಯಂತೆ ತಿರುಗಲು ಮಲ್ಲರೆಲ್ಲರೂ ಎಂಟೂದಿಕ್ಕುಗಳಿಗೂ ಮದದಾನೆಗಳ ಬೆನ್ನಿಂದ ಉದುರಿಹೋಗುವಂತೆ , ಬೀಸಿ ಎಸೆಯಲ್ಪಟ್ಟು ಬಿದ್ದರು ಮಲ್ಲರೆಲ್ಲರು ಮಹಾಭುಜದಂಡಗಳಾನ್ನು ಎತ್ತಿಸುತ್ತಿ ಬರಲು ಹರಿಯೂ ಬಗೆಬಗೆಯ ಭಾಹುಚಾಲನ ಗತಿಯಲ್ಲಿ ಯಮನೇರಿದ ಕೋಣನನ್ನು ಅನುಕರಿಸಿದನು. ,ಅತ್ತೆ ಹಿಡಿದಂಟಿದ ಮಲ್ಲರಿಗೆ ' ಆನೆ ಮೆಟ್ಟಿದ್ದುದೇ ಸಂತೆಂಬಂತೆ ಕೃಷ್ಣನು ಯಾವೆಡೆಯನ್ನು ಹಿಡಿದೆಡೆಯೇ ಗಾಯವಾಗುತಿತ್ತು. ಬಳೆಯ ಹೇರನ್ನು ಆನೆ ಮೆಟ್ಟಿದ ಹಾಗೆ ಮಲ್ಲರ ಎಲುಬೆಲ್ಲ ನುಗ್ಗು ನುಗ್ಗಾಗಲು ಅವರನು ಕೃಷ್ಣನು ಬಡಿದೀಡಾಡಿ ಬಿಟ್ಟನು. ಆಗ ಅಗಸ್ತ್ಯನ ಮೇಲೆ ಕವಿದ ಕಡಲಂತೆ ಕೃಷ್ಣನ ಮೆಲೆ ಕವಿದ ಕಂಸನ ಚತುರಂಗ ಸೇನೆಯನು ಬಲದೇವ ವಸುದೇವರು ಕಂಡು ತಮ್ಮ ಬಲಕ್ಕೆ ಕೈವಿಸಿದರು. ಈ ಸೈನ್ಯವು ಕೂಡಲೇ ಕಂಸನ ಸೈನ್ಯವನ್ನು ಹೆಣವನ್ನಾಗಿ ಮಾಡಿ ನೆತ್ತರು ಗಡಲನ್ನು ಹರಿಸಿತು. ಇದನ್ನು ಕಂಡು ಕೃಷ್ಣನಿಗೆ ಮಹಾವ್ಯಥೆಯೂ ಮಹಾಕ್ರೋಧವು ಮಿತಿಮೀರಲು ಸಿಗ್ಗಾಗಿ ಸೈರಿಸಲಾರದೆ ಅವನು ಅಭಿನವ ನಾರಸಿಂಹಾಡಂವರದಿಂದ ಅದ್ಭೂತವು ಭಯಾನಕವು ಆದ ರೀತಿಯಲ್ಲಿ ಹಿರಣ್ಯ ಕಶಿಪುವನ್ನು ನರಸಿಂಹನು ಹಿಂದೆ ಇಕ್ಕಿ ಮೆಟ್ಟಿಕೊಂಡಂತೆ , ಕಲಿಕಂಸನನ್ನು ಹಿಡಿದು ಮೆಟ್ಟಿ , ತನ್ನ ನಖದಿಂದ ಕರುಳನ್ನು ತೋಡಿ ಹಿಸಿದು ಸೀಳಿ ಬೀಸಾಡಿದನು.

ಹೀಗೆ ಸೀಳಿ ಬೀಸಾಡಿದರೂ ಅದನ್ನೇನೂ ಲಕ್ಷಿಸದೆ ಗೊಳ್ಳೆಂದು ಅಬ್ಬರಿಸಿ ಮೈಮುರಿದೆದ್ದು ಗುರಾಣಿಯಿಂದ ಕರುಳನ್ನು ಸೂಸದಂತೆ ಒತ್ತಿಕೊಂಡು ಕತ್ತಿಯನ್ನೆತ್ತಿಕೊಂಡು , ಮೇಲೆ ಹಾಯ್ದು ಕಂಸನು ಕೃಷ್ಣನನ್ನು ಹೊಡೆಯ ಹೋದನು ಅವನ ಕಲಿತನಕ್ಕೆ ಕೃಷ್ಣನು ಆಶ್ಚರ್ಯಗೊಂಡು ಎಡಗೈಯಲ್ಲಿ ಕತ್ತಿಯನ್ನು ಹಿಡಿದು ತರಗೆಲೆಯನ್ನು ಒರಸುವಂತೆ ಅವನ ತಲೆಯನ್ನು ಒರೆಸಿಹಾಕಿ ಬಿಸಾಡಿದನು. ಬೀಳುಬೀಳೆಂದು ಕಂಸನನ್ನು ಎಡಗಾಲಲ್ಲಿ ರಾಜಪುತ್ರನಾದ ಕೃಷ್ಣನು ಒದೆಯಲು, ಕಾಲಿಗೆ ತೊಡರಿಕೊಂಡಂತೆ ಕಾಲೆಡೆಯಲ್ಲಿಯೂ ಕರುಳನ್ನು ಚೆಲ್ಲಿ ಬಿದ್ದಿದ್ದ ಕರಿಯ ದಡಿಗನಾದ ಕಂಸನು ಗೋಪಾಲ (ಕೃಷ್ಣ) ನಿಕ್ಕಿದ ಕಾಲ ತೊಡರಿನಲ್ಲಿ ಕೋದ ಜೋಲುವ ಗೊಂಬೆಯ ಹಾಗೆ ಕಾಣುತ್ತಿದ್ದನು.

ಲೋಕದಲ್ಲಿ ಒಬ್ಬ ದುಷ್ಟನು ಆದಷ್ಟು ಬೇಗ ಸತ್ತು ಮಾಡುವ ಉಪಕಾರವನ್ನು ಅಪ್ರತಿಮರಾದ ಸಜ್ಜನರು ಅಚಂದ್ರತಾರಕವಾಗಿ ಬದುಕಿದ್ದು ಮಾಡಲು ಸಮರ್ಥರಾಗುವರೇ ? ( ಕಂಸನು ಸತ್ತು ಲೋಕವು ನೆಮ್ಮದಿಯಿಂದ ಬದುಕುವಂತಾಯಿತು.)

ಹೀಗೆ ಮಲ್ಲಾ ಮಲ್ಲಿಯಾಗಿ ಹೋರಾಡಿದ ಮಲ್ಲರನ್ನೂ ಮೇಲೇರಿ ಬಂದ ಕಂಸನನ್ನೂ ಕೃಷ್ಣನು ಒಂದೇ ಕೈಯಲ್ಲಿ ಕೈಗೂಸನ್ನು ಕೆಳಕ್ಕೆ ಕುಕ್ಕುವಷ್ಟು ಸುಲಭವಾಗಿ ನೆಲಕ್ಕೆ ಕುಕ್ಕಿದನು. ದೇವತೆಗಳು ಪುಷ್ಪವೃಷ್ಟಿಯನು ಕರೆದರು ಮಧುಕೈಟಭರನ್ನು ನಿಗ್ರಹಿಸಿದವನೂ ಗೋವರ್ಧನ ಗಿರಿಯನ್ನು ಉದ್ಧರಿಸಿದವನೂ, ಚಾಣೂರಕಂಸರನ್ನು ಧ್ವಂಸಮಾಡಿದವನು ಆದ ಕೃಷ್ಣನು , ಶ್ರೀವೀರನಾರಾಯಣನು , ಕದನ ಕ್ರೀಡೆಯನ್ನಾಡಿ ನಿತ್ಯ ಜಯವನ್ನು ಪಡೆದನು.